# ಪರಶುರಾಮ ಫಿಲಿಷ

(ಸಾಮಾಜಿಕ ಕಾದಂಬರಿ)

:ಲೇಖಕಿ:

ಜಗ್ಗು ಪ್ರಿಯದರ್ಶಿನಿ

ಮಧುಗಿರಿ ಶಿವಣ್ಣ



## ಲೇಖಕಿ ಶ್ರೀಮತಿ ಜಗ್ಗು ಪ್ರಿಯದರ್ಶಿನಿಯವರು

ಈ ಲೇಖಕಿಯವರ ಪ್ರಕಟಿತ ಕೃತಿಗಳು : ಸ್ವಂತ ಮುದ್ರಣ

| | | |
|---|---|---|
| ಲಂಬಾಣಿ ಲಕ್ಕಿ | ಕಾದಂಬರಿ | **ಮೌನಗೀತೆ** ಹೆಸರಿನಲ್ಲಿ ಚಲನಚಿತ್ರವಾಗಿದೆ. |
| ಅಂತರಂಗದ ಅಲೆ | ಕಾದಂಬರಿ | |
| ಮಕ್ಕಳಿಗೆ ಮಧು | ನೀತಿಕಥೆಗಳು | ಕಾವ್ಯಾನಂದ ಪುರಸ್ಕಾರ ಪಡೆದಿದೆ. |
| ಕಂದರ ಕಾಮಧೇನು | ಮಕ್ಕಳ ಸಾಹಿತ್ಯ | |
| ಪರಿವರ್ತನೆ | ನಾಟಕ | |
| ನಾಗ - ಸಾಕಿ | ಮಕ್ಕಳ ಕಥೆ | |
| ಕಥಾಕುಸುಮಾಂಜಲಿ | ಕಥಾಸಂಗ್ರಹ | |
| ಚಂದ್ರ ಚಕೋರಿ | ಕಥೆ | ದೂರದರ್ಶನದಲ್ಲಿ ಧಾರಾವಾಹಿಯಾಗಿ ಪ್ರಸಾರವಾಗಿದೆ. |

ಡಿ|| ಜಗ್ಗು ಶಿಂಗ್ರೈಯ್ಯಂಗಾರ್ಯರ ಜೀವನ ಚರಿತ್ರೆ

| | |
|---|---|
| ಪರಶುರಾಮ ಫಲಕ | (ಸಾಮಾಜಿಕ) ಕಾದಂಬರಿ |

ಪ್ರಕಟನೆಗಾಗಿ ಇರುವ ನಾಟಕಗಳು :

ವರಸಾಮ್ಯ, ಅದೃಷ್ಟ, ಮಿತಸಂತಾನವೇ ಸುಖಸಂಸಾರ, ರಾಧಾಮಾಧವ,
ಬಂಧ ವಿಮೋಚನೆ ಮತ್ತು ಕವನಗಳು.

॥ ಜೈ ಭಾರತಮಾತೆ ॥

# ಪರಶುರಾಮ ಫಲಕ

**ಸಾಮಾಜಿಕ ಕಾದಂಬರಿ**

ಲೇಖಕಿ :

ಜಗ್ಗು ಪ್ರಿಯದರ್ಶಿನಿ

ಸಂಪಾದಕರು ಮತ್ತು ಪ್ರಕಾಶಕರು :

**ಜಗ್ಗು ಪ್ರಿಯದರ್ಶಿನಿ**

10 ನೇ ಅಡ್ಡರಸ್ತೆ, ಸೋಮೇಶ್ವರ ಬಡಾವಣೆ,

ತುಮಕೂರು–572 102.

ಮೊದಲ ಮುದ್ರಣ – ಮೇ 1996

ಹಕ್ಕುಗಳು : ಶ್ರೀಮತಿ ಜಗ್ಗು ಯದುಗಿರಿ

ಬೆಲೆ ರೂ 60-00

ಮುಖಪುಟ ವಿನ್ಯಾಸ :
ಶ್ರೀ ಮಧುಗಿರಿ ಶಿವಣ್ಣ

* ಪುಸ್ತಕಗಳು ದೊರೆಯುವ ಸ್ಥಳ *

ಶ್ರೀಮತಿ ರುಕ್ಮಿಣಿ ಗೋಪಾಲ್
ಯತಿರಾಜ ಕೃಪ
1 ನೇ ಮುಖ್ಯರಸ್ತೆ
ವಿಜಯನಗರ
ತುಮಕೂರು–572 102

ಶ್ರೀಮತಿ ಯದುಗಿರಿ
ನಂ. 4 ಒಂದನೇ ಅಡ್ಡರಸ್ತೆ
ಗ್ರೇಪ್ಸ್ ಗಾರ್ಡನ್ III ಬ್ಲಾಕ್
ತ್ಯಾಗರಾಜನಗರ.
ಬೆಂಗಳೂರು-560028

---

ಮುದ್ರಕರು :
ಮಾತಾ ಮುದ್ರಣ
“ ಜ್ಯೋತಿ ’ 10 ನೇ ಅಡ್ಡರಸ್ತೆ, ಸೋಮೇಶ್ವರಪುರಂ.
ತುಮಕೂರು–572 1 02.

# ಮುನ್ನುಡಿ

" ಪರಶುರಾಮಫಲಕ " ಕನ್ನಡಕ್ಕಾಗಿ ಗಣನೀಯ ಸೇವೆ ಸಲ್ಲಿಸಿದ ಹೆಸರಾಂತ ಲೇಖಕಿ ದಿವಂಗತ ಶ್ರೀಮತಿ ಜಗ್ಗು ಪ್ರಿಯದರ್ಶಿನಿ ಯವರ ಕಟ್ಟಕಡೆಯ ಕಾದಂಬರಿ. ಅವರ ಸೋದರಿ ಶ್ರೀಮತಿ ಜೆ. ಶಲ್ಲ ರವರು ತಮ್ಮಕ್ಕನವರ ಈ ಕಡೆಯ ಕಾದಂಬರಿಗೆ ನೀವೇ ಮುನ್ನುಡಿಯ ಮೂಲಕ ವಾಕ್ಯಭರತ ಹಾಡಬೇಕೆಂದು ಆಜ್ಞಾಪಿಸಿದ್ದರಿಂದ ಕನ್ನಡದ ಹಿರಿಯ ಬರಹಗಾರ್ತಿಯ ಬಗೆಗೆ ಈ ಮೂಲಕ ನನ್ನ ವಾಕ್ಯಾಂಜಲಿಯನ್ನ ರ್ಪಿಸುತ್ತಿದ್ದೇನೆ.

ಪ್ರೀತಿ ವಾತ್ಸಲ್ಯಗಳ ಎದುರು ಕ್ರೌರ್ಯ ಹೇಗೆ ಮಣಿ ಯುತ್ತದೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಸಾಕ್ಷ್ಯದೊರೆಯುತ್ತದೆ. ದಾನವ ಮಾನವನಾಗುವ ಮಹಾದೇವನಾಗುವ ಪರಿವರ್ತನೆಯ ಚಿತ್ರಣವನ್ನು ನಾವಿಲ್ಲಿ ಕಾಣುತ್ತೇವೆ. ದರೋಡೆಕೋರ ನಾಯಕ ದೇವಿಪ್ರಸಾದನ ಪಾಷಂಡ ಹೃದಯದಲ್ಲೂ ಪರಮಾತ್ಮನ ಅಂಶ ಅಡಗಿರುವುದನ್ನು ತೆರೆದು ತೋರಿ-ದಾಗ ನಮಗೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಕಥಾನಾಯಕ ಕೊಲೆಗಡುಕ ಕಾಳೀಪ್ರಸಾದ ಮತ್ತೆ ಪೂರ್ವಾಶ್ರಮದ ಧರ್ಮಪಾಲ ಪಾಟೀಲನಾಗುವ ತಿರುವು ನಮ್ಮೆಲ್ಲರ ಮೆಚ್ಚುಗೆ ಪಡೆಯುತ್ತದೆ.

" ಪರಶುರಾಮಫಲಕ " ವನ್ನು ಓದುವುದಕ್ಕೆ ಕೈಗೆತ್ತಿಕೊಂಡೆ ಬಿಡುವುದಕ್ಕೆ ಮನಸ್ಸೇ ಬರಲಿಲ್ಲ, ಸಾಮಾನ್ಯವಾಗಿ ರಾತ್ರಿ ಹೊತ್ತು ಬಹುಬೇಗ ಹಾಸಿಗೆ ಹುಡುಕುವ ನಾನು ಇಂದು ಓದಿಮುಗಿಸುವವರೆಗೂ ಕುರ್ಚಿಬಿಟ್ಟು ಕೆಳಗಿಳಿಯಲಿಲ್ಲ. ಕಾದಂಬರಿಯ ಪೂರ್ವಾರ್ಧದ ಕಥಾ ಸಂವಿಧಾನ ಕೌಶಲ್ಯ, ರಸಪೂರ್ಣ ಸಂಭಾಷಣೆ ತುಂಬಾ ಆಕರ್ಷಣೀಯವೂ ಸಿನೀಮೀಯವೂ ಆಗಿವೆ. ಘಟನೆಗಳ ಮೇಲೆ ಘಟನೆ, ಅವುಗಳ ಪೂರ್ವ ಸ್ಮರಣೆ ಪ್ರೀತಿ ಪಾತ್ರದ ಔಚಿತ್ಯವರಿತ ನಿಲವು ಇವು ನನಗೆ ಮೆಚ್ಚಾದುವು. ಉತ್ತರಾರ್ಧ ಕುತೂಹಲವನ್ನು ಬಯಲು ಮಾಡಿದರೂ ತನ್ನ ಶಿಲ್ಪ ಸೌಂದರ್ಯದಲ್ಲಿ ಸೊರಗಿಲ್ಲ, ಸೋತಿಲ್ಲ, ಸಿನಿಮಾ ತೆಗೆಯುವರಿಗಂತೂ ಇದು ಉತ್ತಮ ಆಹಾರವಾಗಬಲ್ಲುದು. ಒಟ್ಟಾರೆ ಈ ಕಾದಂಬರಿ ನನಗೆ ಖುಷಿ ಕೊಟ್ಟಿದೆ. ನನ್ನಂತೆ ಇತರರಿಗೂ ಆನಂದದ ಔತಣವಾಗಲಿ ಎಂದು ಆಶಿಸುತ್ತೇನೆ.

ರಾಗಿಣಿ ದಿ. 30-3-96 ( ಸಾ. ಶಿ. ಮರುಳಯ್ಯ )

# ಬಿನ್ನಹ

'ಪರಶುರಾಮ ಫಲಕ' ಸಾಮಾಜಿಕ ಕಾದಂಬರಿಯ ಲೇಖಕಿಯಾದ ಶ್ರೀಮತಿ ಜಗ್ಗು ಪ್ರಿಯದರ್ಶಿನಿ ಯವರು ಬರೆಯ ಬೇಕಾಗಿದ್ದ ಈ ಪುಟದಲ್ಲಿ ನಾವು ಬರೆಯ ಬೇಕಾಗಿ ಬಂದದ್ದು ದೈವ ಸಂಕಲ್ಪವೇ ಸರಿ.

ಕನ್ನಡ ಸಾಹಿತ್ಯಕ್ಕೆ ಕಡೆಯುಸಿರಿರುವವರೆಗೂ ತಮ್ಮ ಅಮೂಲ್ಯ ಕೊಡುಗೆಯನ್ನು ಕೊಟ್ಟು ಸಾಹಿತ್ಯ ಸೌಧವನ್ನು ಅಲಂಕರಿಸಿದ ಮಹಾ ಕಲಾತಪಸ್ವಿ, ಜನಪ್ರಿಯ ಲೇಖಕಿ ಶ್ರೀಮತಿ ಜಗ್ಗು ಪ್ರಿಯದರ್ಶಿನಿಯವರು ನಮ್ಮ ಹಿರಿಯ ಸೋದರಿ.

ಈ ಕಾದಂಬರಿಯನ್ನು ಪೂರ್ಣಗೊಳಿಸಿ, ಪುಸ್ತಕದ ಮುದ್ರಣ ಕೆಲಸವನ್ನೂ ಪ್ರಾರಂಭಿಸಿ. ಸುಮಾರು ನಲವತ್ತು ಪುಟಗಳಷ್ಟು ಅಚ್ಚಾದ ತಮ್ಮ ಕಾದಂಬರಿಯನ್ನು ಕಾಣುವುದು ಅವರಿಗೆ ಸಾಧ್ಯವಾಯಿತಷ್ಟೆ. ದಿನಾಂಕ 16–6–95 ರಂದು ಮಧ್ಯಾಹ್ನ ಮನೆಯ ಎದುರಿಗೆ ಇರುವ ವಹಾತಾ ಮುದ್ರಣದಲ್ಲಿ ಈ ಕಾದಂಬರಿಯ ಅಚ್ಚಾದ ಭಾಗವನ್ನು ವೀಕ್ಷಿಸಿ ಬಂದು ವಿಶ್ರಾಂತಿಗಾಗಿ ಮಲಗಿದ ಪುಣ್ಯಜೀವಿ ಮತ್ತೆ ಇಹ ಲೋಕಕ್ಕೆ ಮರಳಲೇ ಇಲ್ಲ.

ಉತ್ತಮ ಶಿಕ್ಷಕಿಯಾಗಿ ರಾಜ್ಯಪ್ರಶಸ್ತಿಗಳಿಸಿ, ಸಾಹಿತ್ಯ ಕ್ಷೇತ್ರದಲ್ಲೂ ಅನೇಕ ಗೌರವ–ಪುರಸ್ಕಾರಗಳನ್ನು ಪಡೆದು ಕಷ್ಟ ಕೋಟಲೆಗಳಿಗೆ ಇನಿತೂ ಮಣಿಯದೆ, ಎದುರಿಸುವ ಧೈರ್ಯ, ಸ್ಥೈರ್ಯ, ಉತ್ಸಾಹದ ಬುಗ್ಗೆಯಾಗಿ, ಆದರ್ಶ ಮಹಿಳೆಯಾಗಿ ಸಾರ್ಥಕ ಜೀವನ ನಡೆಸಿದ ಜಗ್ಗು ಪ್ರಿಯದರ್ಶಿನಿಯವರ, ಈ ಕಾದಂಬರಿಯೊಂದಿಗೇ ಅವರ ಲೇಖನಿ ಸ್ಥಗಿತಗೊಂಡಿದ್ದು ನಮ್ಮೆಲ್ಲರಿಗೂ ಅಪಾರ ವ್ಯಥೆಯನ್ನುಂಟುಮಾಡಿದೆ.

ಜಗ್ಗು ಪ್ರಿಯದರ್ಶಿನಿಯವರ ಕೃತಿಗಳೆಲ್ಲಾ ಸಾಮಾಜಿಕ ಕಳಕಳಿ-ಯಿಂದ ಕೂಡಿದ್ದು, ಸಮಾಜದ ಅನಿಷ್ಟಗಳನ್ನು ಎತ್ತಿ ತೋರಿಸುವುದಷ್ಟೇ ತಮ್ಮ ಲೇಖನಿಯ ಕೆಲಸವೆನ್ನದೆ, ಅವುಗಳನ್ನು ಬೇರುಸಹಿತ ಕಿತ್ತೆಸೆಯುವ ಮಾರ್ಗದರ್ಶನವನ್ನೂ ಮೂಡಿಸುವುದು ಅವರ ಕಾದಂಬರಿಗಳ ವೈಶಿಷ್ಟ್ಯವಾಗಿದೆ. ಲಂಬಾಣಿಲಕ್ಕಿ ಮತ್ತು ಅಂತರಂಗದ ಅಲೆ ಕಾದಂಬರಿಗಳಲ್ಲಿ ಹೆಣ್ಣಿನ ಮಾನಸಿಕ ತುಮುಲವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಲಂಬಾಣಿಲಕ್ಕಿ, 'ಮೌನಗೀತೆ' ಹೆಸರಿನಲ್ಲಿ ಯಶಸ್ವೀ ಚಲನಚಿತ್ರವಾಗಿದೆ. ಮಕ್ಕಳ ಸಾಹಿತ್ಯಕ್ಕೆ ಅವರು ಕೊಟ್ಟಿರುವ ಕೊಡುಗೆ ಅಪಾರ.

ಮೂರು ಕಾದಂಬರಿಗಳೂ ಸೇರಿದಂತೆ ಒಟ್ಟು ಒಂಭತ್ತು ಪುಸ್ತಕಗಳನ್ನು ಜಗ್ಗು ಪ್ರಿಯದರ್ಶಿನಿಯವರು ತಾವೇ ಸ್ವಂತ ಮುದ್ರಣ ಮಾಡಿಸಿದ್ದಾರೆ. ಕ್ರೌರ್ಯ, ಕಾಠಿಣ್ಯ, ಹಿಂಸೆಗಳೊಂದಿಗೆ ಬೆಳೆದ ಹೃದಯವೂ, ಪರಿಶುದ್ಧ ಪ್ರೇಮ ಸೇವೆ, ತ್ಯಾಗ ಮುಂತಾದ ಉದಾತ್ತ ಭಾವನೆಗಳ ಲೇಪನದಿಂದ ಮೃದು ಮಧುರ ಹೂವಾಗಿ ಅರಳಿ, ಸಮಾಜಕ್ಕೆ ಉಪಕಾರಿಯಾಗಬಲ್ಲದು ಎನ್ನುವುದನ್ನು **"ಪರಶುರಾಮ ಘಲಕ"** ಕಾದಂಬರಿ ಪ್ರತಿಬಿಂಬಿಸುತ್ತದೆ, ಈ ಕಾದಂಬರಿಯನ್ನು ಅಭಿಮಾನಿಗಳೆಲ್ಲರೂ ಓದಿ, ಮನಃಪೂರ್ವಕವಾಗಿ ಆನಂದಿಸಿದರೆ, ಅದೇ ಆ ಹಿರಿಯ ಸಾಹಿತಿಯ ಆತ್ಮಕ್ಕೆ ಸಲ್ಲುವ ಗೌರವವಾಗುತ್ತದೆ. ಮತ್ತು ನಮ್ಮಗಳ ಪ್ರಯತ್ನವೂ ಸಾರ್ಥಕ-ವಾಗುತ್ತದೆ.

ಹಿರಿಯರಾದ ಶ್ರೀಯುತ ಜಿ. ನಾರಾಯಣರವರು, ಈ ಪುಸ್ತಕ ಪ್ರಕಟವಾಗುವ ಸಂದರ್ಭದಲ್ಲಿ ಅನೇಕ ಉತ್ತಮ ಸಲಹೆಗಳನ್ನು ನೀಡಿ, ಆತ್ಮೀಯತೆಯಿಂದ ಮಾರ್ಗದರ್ಶನ ಮಾಡಿದ್ದಾರೆ. ಇದಕ್ಕಾಗಿ ಶ್ರೀಯುತ ಜಿ. ನಾರಾಯಣ ರವರಿಗೆ ಚಿರಋಣಿಗಳಾಗಿದ್ದೇವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಡಾ|| ಸಾ. ಶಿ. ಮರುಳಯ್ಯನವರನ್ನು ಕಂಡು, ಪುಸ್ತಕಕ್ಕೆ ಮುನ್ನುಡಿ ಬರೆಯಲು ಕೇಳಿಕೊಂಡಾಗ ಅವರು ತೋರಿದ ಹೃದಯ ಶ್ರೀಮಂತಿಕೆ ನಮ್ಮನ್ನು ಮೂಕ ವಿಸ್ಮಿತರನ್ನಾಗಿ ಮಾಡಿತು. ಬಿಡುವಿಲ್ಲದ ಅವರ ಕಾರ್ಯಭಾರದ

ನಡುವೆಯೂ ಕಾದಂಬರಿಯನ್ನು ಓದಿ, ಸ್ವಲ್ಪವೂ ವಿಳಂಬವಿಲ್ಲದೆ ಮುನ್ನುಡಿಯನ್ನು ಸಿದ್ಧಪಡಿಸಿಕೊಟ್ಟದ್ದು, ಅವರ ಸೌಜನ್ಯತೆ ಮತ್ತು ಸಹೃದಯತೆಯನ್ನು ಸ್ಪಷ್ಟಪಡಿಸುತ್ತದೆ, ಇದಕ್ಕಾಗಿ ಅವರಿಗೆ ನಮ್ಮ ಗೌರವಪೂರ್ಣ ಕೃತಜ್ಞತೆಗಳು.

ತುಮಕೂರು ಮಾತಾ ಮುದ್ರಣದ ಮಾಲೀಕರಾದ ಶ್ರೀಯುತ ಶ್ರೀನಿವಾಸಮೂರ್ತಿಗಳು ಮತ್ತು ಶ್ರೀಮತಿ ವೇದಮಾತಾರವರು ಹಾಗೂ ಸಿಬ್ಬಂದಿ ವರ್ಗದವರು, ಈ ಕಾದಂಬರಿಯ ಮುದ್ರಣ ಕಾರ್ಯವನ್ನು ನಮ್ಮಗಳಷ್ಟೇ ಪ್ರೀತ್ಯಾದರದಿಂದ ಮುಂದುವರೆಸಿ ಅಂದವಾಗಿ ಮುದ್ರಿಸಿ ಕೊಟ್ಟಿದ್ದಾರೆ. ಆಕರ್ಷಕ ರಕ್ಷಾ ಕವಚವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಇವರುಗಳಿಗೆ ನಮ್ಮ ಧನ್ಯವಾದಗಳು.

ಈ ಪುಸ್ತಕದ ಮುದ್ರಣ ಕಾರ್ಯವನ್ನು ಪೂರ್ಣಗೊಳಿಸುವುದರ ಮೂಲಕ ಸೋದರಿ ಜಗ್ಗು ಪ್ರಿಯದರ್ಶಿನಿಯವರ ಅಂತಿಮ ಇಚ್ಛೆಯನ್ನು ಸಲ್ಲಿಸಿದ್ದೇವೆ-ಎಂಬ ನಂಬಿಕೆಯಿಂದ ಅವರಿಗೆ ನಮ್ಮ ಭಕ್ತಿಪೂರ್ವಕ ನಮನವನ್ನು ಅರ್ಪಿಸುತ್ತೇವೆ.

ದಿ|| ಜಗ್ಗು ಪ್ರಿಯದರ್ಶಿನಿಯವರ
ಸೋದರ ಸೋದರಿಯರು

ದಿನಾಂಕ 15-4-96

# ON THE ACCATION OF
## Chinnakka's Birth Day

Joyest day is To day
We gather here with Gay
With wish that we would say
On the 60th Birth Day

In honour of our great sister.
Her lustre and splendour may foster,
We pray for her noble elite
Offering a Toast of Delight.

"Glittering Gold" is her name,
Her nature is true to the same,
She Ranks among the laurates in fame,
Adoring the holy Family Domain.

Her life is full of sacri fice,
Dedicated services are to Edifice.
Her selfless deed magnifies.
And so say no word will suffice.

She continues the noble Heritage,
But unlucky days she spent in
young-age
Facing odds and Anomolies with courage.
Yet keeping the freternity in storage.

Endowed with balance of comprehension.
She treats all with out Discrimination,
Moral motto is her calculation
No wonder she has no self possession

Born as the dawn of the family
A personification of courage nobility
She pledged to bring as up surely
A challenge she accomplished easily.

Brilliant and bright though not much educated
Shrewd and sharp, clever and quick witted
Her speech and pen quite Articulated
Here her talents are not Exaggerated.

To her parents Chinnakka is a Fortune.
To her sisters she is an Inspiration
To all children motherly Incornation
To every one an abode of pasification.

Blessed are we to have her as sister.
May we inherit Her virtues for ever,
At this opportune we pray with vigour,
For Chinnakka's glee gay and cheer.

*Kamala Sampalli*
Retd Principal
State Awardee and writer
Bangalore

# ನಮ್ಮ ಅಕ್ಕ

ಹಿರಿಯಕ್ಕ ಮನೆಗಾಗಿ, ಸಿರಿದೇವಿ ನಮಗಾಗಿ,
ಅವರೆ ನಮ್ಮೆಲ್ಲರ ದಾರಿ ದೀವಿಗೆಯಾಗಿ,
ಜೀವನದ ಜಂಜಾಟದಲಿ ಸ್ಥಿತ ಪ್ರಜ್ಞರಾಗಿ,
ದುಡಿದರು ಸದಾ ತ್ಯಾಗಮಯಿಯಾಗಿ ॥

ಅವರ ಜೀವನದ ಕಹಿ ನಮಗೊಂದು ತಿಳಿದಿಲ್ಲ,
ಅವರನುಭವಿಸಿದ ನೋವ ಆ ದೇವನೊಬ್ಬನೆ ಬಲ್ಲ,
ಕೊನೆಗಾದರೂ ದೊರಕಿತಲ್ಲ ಆ ಬೇವುಂಡ ಮನಸಿಗೆ ಬೆಲ್ಲ,
ಅದನು ಕರುಣಿಸಿದ ಆ ದೇವವನು ಅವರು ಮರೆತಿಲ್ಲ ॥

ಧೈರ್ಯದಲಿ ನಮ್ಮಕ್ಕ ಕಿತ್ತೂರ ಚೆನ್ನಮ್ಮ,
ಧ್ಯೇಯ ಸಾಧನೆಯಲಿ ರೆಡ್ಡಿ ಮಲ್ಲಮ್ಮ,
ಕೃತಿ ಕಾವ್ಯ ರಚನೆಯಲಿ ಸಂಚಿಯಾ ಹೊನ್ನಮ್ಮ,
ಅಪೂರ್ವ ವ್ಯಕ್ತಿ ನಮ್ಮ ಈ ಚೆನ್ನಮ್ಮ ॥

ನಮ್ಮ ಸಂಸಾರದ ನಾವೆಯಲಿ ನಾವಿರುವೆವು ಒಂಭತ್ತು,
ವೃದ್ಧ ಮಾತಾ ಪಿತೃಗಳೇ ನಮ್ಮ ಸಂಪತ್ತು,
ಒಂದು ಕಾಲಕೆ ನಾವೆ ಬಿರುಗಾಳಿಗೆ ಸಿಲುಕಿತ್ತು,
ಅಕ್ಕ ಅಂಬಿಗರಾದರು ತಪ್ಪಿಸಲು ಆ ವಿಪತ್ತು ॥

ಅಕ್ಕನಿಲ್ಲದ ಮನೆಯು ಚುಕ್ಕಿ ತಪ್ಪಿದ ದೋಣಿ,
ಅವರೆ ನಮ್ಮಗಳ ಪಾಲಿನ ಬಾಳ ಏಣಿ,
ಅವರ ಮಾತೆಲ್ಲ ನಮಗೆ ವೇದವಾಣಿ,
ಇದಕೆಲ್ಲ ಕಾರಣ ಅವರ ನಕ್ಷತ್ರ ರೋಹಿಣಿ ॥

ಆಳಾಗಿ ಅರಸಾಗಿ, ಗಂಡಾಗಿ ಹೆಣ್ಣಾಗಿ,
ಮಮತೆಯಾ ತಾಯಾಗಿ, ವಾತ್ಸಲ್ಯ ಪಿತೃವಾಗಿ,
ಮಡಿದರು ನಮ್ಮಗಳ ಸುಖ ಬಾಳ್ವೆಗಾಗಿ,
ನಾವೇನ ಮಾಡೇವು ಅವರ ತ್ಯಾಗಕ್ಕಾಗಿ ||

ಶ್ರೀರಾಮ ಜಯರಾಮ ಜಯ ಜಯ ರಾಮ,
ಎಂಬ ತಾರಕ ಮಂತ್ರ ಅವರಿಗತಿ ಪ್ರೇಮ,
ಇಹ-ಪರಕೆ ಸಾಧನವು ಈ ರಾಮ ನಾಮ,
ಎಂದು ಮಾಡುವರು ಪೂಜೆಯಲಿ ಬಲುನೇಮ ||

ತಾಯೊಡಲ ಋಣವನ್ನು ತೀರಿಸಿದ ಮಹತಾಯಿ,
ಇತರರಾ ಕಷ್ಟಕೆ ಮರುಗುವ ದಯಾಮಯಿ,
ಸರಿ ಎಂದು ತೋರಿದುದ ಸಾಧಿಸುವ ವಾಜ್ಮಯಿ;
ಜಗ್ಗು ವಂಶದಲಿ ಶೋಭಿಸುವ ಜ್ಯೋತಿರ್ಮಯಿ

ಜೆ. ಶೆಲ್ಲ ಎಂ. ಎ
ರೀಡರ್, ಚರಿತ್ರೆ ವಿಭಾಗ
ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

(ಸೋದರಿ ಜಗ್ಗು ಪ್ರಿಯದರ್ಶಿನಿಯವರಿಗೆ ಸ್ಮರಣ ಕುಸುಮಾರ್ಪಣೆ)

# ಸೋದರಿಗೆ ನಮನ

ನಿಮ್ಮನಗಲಿದ ನಾವ್ ಇಂದು
ದಿಕ್ಸೂಚಿ ಕಳೆದ ನಾವೆಗಳು,
ನಿಮ್ಮ ವಿಯೋಗ ನಮಗಿಂದು
ಧ್ವನಿಸಲಾಗದ ಶಬ್ದಗಳು।
ಪ್ರಿಯ ಸೋದರಿ, ನಿಮ್ಮ ತೆರಪ ತುಂಬಬಹರಾರು ?

ಪುನೀತ ಜಗ್ಗು ವಂಶದ
ಪುಣ್ಯ ಪುರುಷ ಶಿಂಗರಾರ್ಯ,
ಸಾಧ್ವೀಮಣಿ ವೇಂಗಡಮ್ಮ
ಇವರೀರ್ವರ ಸುಕೃತ ಫಲ ನೀವು.
ಅಷ್ಟ ಪುತ್ರಿಯರಲಿ ಜೇಷ್ಠೆಯಾಗಿ
ಮಂದಾ ಕುಡಿಯೊಂದಕೆ ಉಸಿರಾಗಿ
ಸಲಹಿ ಪೋಷಿಸಿದ ಮಹಾತ್ಮ ಸ್ವರೂಪಿ ನೀವು।
ಪ್ರಿಯ ಸೋದರಿ, ನಿಮ್ಮ ತೆರಪ ತುಂಬಬಹರಾರು ?

ಧೈರ್ಯದಲಿ ಧೀರೆ, ಬುದ್ಧಿಯಲಿ ಚತುರೆ,
ವಿದ್ಯೆಯಲಿ ವಾಣಿ, ಛಲದಲ್ಲಿ ಕಿತ್ತೂರ ರಾಣಿ,
ಇಂತು ಬೆಳೆದ ಬಾಲೆಗೆ ಎದುರಾಯ್ತು ಕ್ರೂರ ಜಗತ್ತೊಂದು.
ನೀವುಂಡ ಕಷ್ಟಗಳಿಗೆ ಕೊನೆಯುಂಟೆ !
ಎಂತು ಸಹಿಸಿದಿರಿ ನೀವಿನಿತು ಕಷ್ಟಗಳ !

ಮಧುಚಂದ್ರದಾ ಬಾಳ್ವೆ ಕನಸಾಯ್ತು.
ಎಂದೆಂದೂ ಕರಗದ ಕಾರ್ಮೋಡದಲಿ ಮುಳುಗಿತು.
ವಿಧಿ ಅಟ್ಟಹಾಸದಾ ಜೊತೆಗೆ ಕ್ರೂರ ಸಮಾಜದ ಬೆಸುಗೆ.
ಕತ್ತಲೆಯಲಿ ಮುಳುಗಿದ ಜೀವನ ಮಾರ್ಗವೆಲ್ಲಿಗೆ!
ಪ್ರಿಯ ಸೋದರಿ, ಎಂತು ಸಹಿಸಿದಿರಿ ನೀವಿನಿತು ಕಷ್ಟಗಳ?

ಕತ್ತಲೆಯಲಿ ಕರಗದೆ, ವಿಪತ್ತಿಗಂಜದೆ,
ಸ್ವಸ್ಫೂರ್ತಿಯಿಂ ಧಾವಿಸಿದಿರಿ ಬೆಳಗಿನೆಡೆಗೆ,
ವಿದ್ಯಾದಾನ, ಸಾಹಿತ್ಯ ಸೇವೆಗೆ ಮುಡುಪಾಯ್ತು,
ಜೀವನ, ಶೋಷಿತ ಸ್ತ್ರೀಯರಿಗೆ ದೀಪ್ತಿಯಾಯ್ತು !
ಪ್ರಿಯ ಸೋದರಿ, ನಿಮ್ಮ ತೆರವ ತುಂಬಬಹರಾರು ?

ಹೆಣ್ಣು ತನ್ನಿರವ ತಾ ಕಾಯ್ದುಕೊಳ್ಳಲಿಬೇಕು,
ಘಾತಕ ಶಕ್ತಿಯನೆದುರಿಸಲು ಚೈತನ್ಯವಿರಬೇಕು,
ವಿಧಿ-ವಿಡಂಬನೆಗಳಲಿ ಸೋಲುಣ್ಣದಿರ ಬೇಕು.
ಆತ್ಮ ಸ್ಥೈರ್ಯದಿ ಬೆಳೆದು ಮೇಲೇರಬೇಕು–,
ಇದೇ ನಿಮ್ಮ ಜೀವನದ ಧ್ಯೇಯ ಮಂತ್ರ,
ಇದೇ ನಮಗೆಲ್ಲ ಸೂತ್ರವಾಯ್ತು, ದೀಕ್ಷೆಯಾಯ್ತು,
ಅಂತೆಯೇ ನಮ್ಮೆಲ್ಲರ ಜೀವನ ಹಗುರಾಯ್ತು !
ಪ್ರಿಯ ಸೋದರಿ, ನಿಮ್ಮ ತೆರವ ತುಂಬಬಹರಾರು ?

ದೀಪ ತಾ ಉರಿದು ಬೆಳಕ ನೀವಂತೆ,
ಗಂಧ ತಾ ಸವೆದು ಪರಿಮಳವ ನೀವಂತೆ,
ವೃಕ್ಷ ತಾ ಬೆಳೆದು ಫಲವ ನೀಡುವಂತೆ,
ತಪನದಲಿ ತಪ್ತ, ತಪನೀಯ (ಚಿನ್ನ) ನೀವು !
ದುಃಖ ದುಮ್ಮಾನಗಳಿಗೆ ಬಾಗಲಿಲ್ಲ,
ಹಮ್ಮು ಹೆಮ್ಮೆಯ ಬಿಟ್ಟು ಬಾಳಲಿಲ್ಲ !
ಪ್ರಿಯ ಸೋದರಿ, ನಿಮ್ಮ ತೆರವ ತುಂಬಬಹರಾರು ?

ಕಾರ್ಯಸಿದ್ಧಿಗೆ ಮತ್ತೊಂದು ಹೆಸರು ನೀವು,
ಸೇವೆಯೇ ಸಾಧುವೆಂದು, ಸೇವ್ಯರಾಗಲೇ ಇಲ್ಲ ನೀವು,
ಪ್ರಶಸ್ತಿಗಳ ಸರಮಾಲೆ ಪಡೆದು ಮಾನ್ಯರಾದಿರಿ ನೀವು,
ರಾಮ ರಾಮಾ ಎಂದೊರಲುತ್ತ ಅಮರರಾದಿರಿ ನೀವು.
" ಅರ್ಪಣೆ " ಯ ಬಿನ್ನಹಕೆ ಒಲಿದು ಮೆಚ್ಚಿದ ರಾಮ.
ತನ್ನ ಆತ್ಮೀಯ ಸ್ವರ್ಣ ಪುಷ್ಪವಿದೆಂದೆತ್ತಿಕೊಂಡ !

ಧನ್ಯ ಜೀವಿತವು, ಧನ್ಯ ಬಾಳ್ವೆ ಇದು, ಧನ್ಯರಾದಿರಿ ನೀವು,
ಆದರೆ, ಪ್ರಿಯ ಸೋದರಿ, ನಿಮ್ಮ ತೆರಪ ತುಂಬಬಹರಾರು ?

ರುಕ್ಮಿಣಿ ಗೋಪಾಲ್
ಜಿಲ್ಲಾ ಪ್ರಶಸ್ತಿ ವಿಜೇತ ಶಿಕ್ಷಕಿ,
ತುಮಕೂರು,

ನಮ್ಮ ಭಾರತ ದೇಶವು ಭೌಗೋಳಿಕ ರೀತ್ಯಾ ಅನೇಕ ವಿಧವಾಗಿ ಪ್ರಕೃತಿ ಸೌಲಭ್ಯಗಳಿಂದ ಕೂಡಿದೆ.

ಕಾಡು, ಬೆಟ್ಟ, ನದೀನದಗಳು, ಸಮುದ್ರತೀರ ಇವುಗಳೆಲ್ಲಾ ಕಾಲಾಂತರದಿಂದಲೂ ಪ್ರಕೃತಿದತ್ತವಾದುದು. ಅವುಗಳಲ್ಲಿ ವಿಂಧ್ಯಾವಳೀ ಪರ್ವತ ಶ್ರೇಣಿ ಒಂದು. ಕಣಿವೆ, ಕಂದರಗಳಿಂದ ಕೂಡಿರುವ, ವಿಂಧ್ಯ ಪರ್ವತದ ತಪ್ಪಲು ಘೋರವಾದ ದಟ್ಟ ಕಾಡಾಗಿದೆ. ವಿಂಧ್ಯಾರಣ್ಯ ಎಂದೇ ಪ್ರಸಿದ್ಧಿಯಾಗಿದೆ.

ಪರ್ವತದ ಸಾಲುಸಾಲು ಮಾಲೆಯಂತೆ ಮುಗಿಲು ಮುಟ್ಟುತ್ತಿವೆ. ನೆಲದಿಂದ ಮುಗಿಲವರೆಗೂ ದಟ್ಟವಾಗಿ ಬೆಳೆದ ಹಸಿರು ಕಾಡು, ಮಧ್ಯೆ ಅಲ್ಲಲ್ಲಿ ಬಂಡೆಗಳ ತಗ್ಗು ದಿಣ್ಣೆ ಬೆಳ್ಳಿಯ ಗೆರೆಗಳನ್ನು ಎಳೆದಂತೆ ಸಣ್ಣ-ಸಣ್ಣ ನೀರಿನ ಝರಿಗಳು ಅಲ್ಲಲ್ಲಿ ಜಿನುಗುತ್ತಿವೆ.

ಬೃಹದಾಕಾರದ ಮರಗಳು ಸ್ವೇಚ್ಛೆಯಾಗಿ ಬೆಳೆದು ಕೊಂಬೆಗಳು ಪಸರಿಸಲು ಸ್ಥಳಸಾಲದೇ ಒಂದಕ್ಕೊಂದು ತೆಕ್ಕೆ ಹಾಕಿಕೊಂಡಂತಿದೆ. ಅಂತಹ ದಟ್ಟ ಮರಗಳಿಗೆ ಕೋಮಲ ಲತೆಗಳು ಬಳಸಿ ಸುತ್ತಿಕೊಂಡಿವೆ.

ನಿಬಿಡವಾದ ಆ ಕಾಡು ಹಗಲಿನಲ್ಲಿಯೂ ಸೂರ್ಯನ ಕಿರಣವನ್ನೂ ಒಳಕ್ಕೆ ತೂರಗೊಡುತ್ತಿಲ್ಲ. ಅಲ್ಲಿ ಹಗಲೋ ರಾತ್ರಿಯೋ ಎಂಬ ವ್ಯತ್ಯಾಸ ತಿಳಿಯುತ್ತಿಲ್ಲ.

ಗಾಳಿಗೆ ಉದುರಿದ ಎಲೆಗಳಮೇಲೆ ಹಾವು, ಹುಳು ಹುಪ್ಪಟೆಗಳು ಹರಿದಾಡುವ ಸರ-ಸರ ಶಬ್ದ ಆ ಭೀಕರ ಮೌನವನ್ನು ಭೇದಿಸಿಕೊಂಡು ಬರುತ್ತಿತ್ತು. ಜೀರ್ ಜೀರ್ ಎನ್ನುವ ಜೀರುಂಡೆಗಳ ಜೇಂಕಾರ, ಕೊಂಬೆಗೆ ಕೊಂಬೆ ಮಸೆಯುವ ಮಹಾ ಭಯಂಕರ ಕರ್ಕಶ ಕೂಗು ಯಾರಿಗಾದರೂ ಎದೆ ನಡುಗುವಂತಹ ಸನ್ನಿವೇಶ. ಪ್ರೇತ-ಭೂತಗಳ ನಿವಾಸ ಸ್ಥಳವೇ ಇರಬಹುದೇನೋ ? ಎನ್ನುವ ಹಾಗಿತ್ತು ಆ ಕತ್ತಲೆಯ ಕಾಡು.

ಪ್ರಕೃತಿಯ ರುದ್ರ ರಮಣೀಯತೆ ಇಲ್ಲಿ ಪ್ರತಿಬಿಂಬಿಸಿತ್ತು. ಜನ ಸಂಚಾರಕ್ಕೆ ಯೋಗ್ಯವಲ್ಲದ ಈ ಘೋರ ಅರಣ್ಯವೂ ಕೂಡ ಕೆಲವರಿಗೆ ಆಶ್ರಯದಾತವಾಗಿತ್ತು ಎಂದರೆ ಆಶ್ಚರ್ಯವಲ್ಲವೇ ?

ಆ ನಿಬಿಡಾರಣ್ಯದಲ್ಲಿ ಕ್ರೂರ ಮೃಗಗಳ ಘರ್ಜನೆ, ಚಿಲಿ-ಮಿಲಿ ಗುಟ್ಟುವ ಪಕ್ಷಿಗಳ ಕಲರವವೂ ಪ್ರಕೃತಿ ಅವುಗಳಿಗೆ ಕೊಡುಗೆಯಾಗಿ ಕೊಟ್ಟಿದ್ದಳು.

ಅಂತಹ ಭಯಂಕರ ಮೃಗಗಳಿಗೂ ಭಯಪಡದ ದರೋಡೆಕೋರರ ಒಂದು ಗುಂಪು ಆ ಗುಪ್ತ ಸ್ಥಾನವನ್ನು ತನ್ನ ಬಿಡಾರ ಮಾಡಿಕೊಂಡಿದೆ. ಆ ಇಕ್ಕಟ್ಟಾದ ಬಂಡೆಗಳ ಸಂದು ಕೆಲವು ಗುಹೆಗಳನ್ನು ನಿರ್ಮಿಸಿದೆ. ಕೆಲ ವಂತೂ ಮುಂಭಾಗ ಸಣ್ಣ ಬಿಲದಂತಿದ್ದರೆ ಒಳಕ್ಕೆ ಹೋಗುತ್ತಾ ವಿಶಾಲ ವಾಗಿರುತ್ತದೆ.

ಅಂತಹ ಗುಹೆಗಳೇ ದರೋಡೆಕೋರರ ಗುಪ್ತಸ್ಥಳ. ಈ ದರೋಡೆ ಯವರು ಎನ್ನುವ ಗುಂಪು ಹಿಂದಿನ ಕಾಲದಿಂದಲೂ ಇದ್ದದ್ದೇ. ಈಗ ಮಾತ್ರ ಹುಟ್ಟಿಕೊಂಡದ್ದಲ್ಲ.

ಹಿಂದೆ ಪೂರ್ವೀಕರು ಚಿನ್ನ-ಬೆಳ್ಳಿ ತಮ್ಮಲ್ಲಿ ಇಟ್ಟುಕೊಳ್ಳುವುದಕ್ಕೆ ಭಯ ಪಟ್ಟು, ನೆಲದಲ್ಲಿ ಹೂತಿಡುವುದೋ ಅಥವಾ ಒಂದು ಗಂಟು ಕಟ್ಟಿ ತಮ್ಮ ಹಿತ್ತಲ ಬಾವಿಯಲ್ಲಿ ಹಾಕುವುದೋ ಮಾಡುತ್ತಿದ್ದರು.

ಆಗಲೂ ಸಹ ಕೊಳ್ಳೆಗಾರರು ಎಂದು ಗುಂಪು ಗುಂಪಾಗಿ ಬಂದು ಲೂಟಿ ಹೊಡೆದುಕೊಂಡು ಹೋಗುತ್ತಿದ್ದರು.

ಅದೇರೀತಿ ಒಂದು ಗುಂಪಿನವರು ದರೋಡೆಕೋರರಲ್ಲಿ ಪ್ರಸಿದ್ಧರಾದ ವರು. ವಿಂಧ್ಯಪರ್ವತದ ಬಂಡೆಯು ಒಂದು ಕಡೆ ಬಿರುಕು ಬಿಟ್ಟು ಸೀಳಾ ಗಿತ್ತು. ಅದರಲ್ಲಿ ಒಬ್ಬ ಮನುಷ್ಯ ಮಾತ್ರ ತೂರಬಹುದು ಅದರಿಂದ ತೂರಿ ಒಳಕ್ಕೆ 5-6 ಮಾರು ದೂರ ಹೋದರೆ ಒಂದು ವಿಶಾಲ ಪ್ರಾಂಗಣ. ಮೇಲಿನ ಬಂಡೆಗಳ ಸಣ್ಣ ಸಣ್ಣ ಬಿರುಕುಗಳಿಂದ ತೂರಿಬರುವ ಸೂರ್ಯನ ಕಿರಣ ಆ ವಿಶಾಲ ಪ್ರದೇಶಕ್ಕೆ ಬೆಳಕನ್ನು ನೀಡಿತ್ತು.

ಆ ಬೆಳಕಿನ ಪ್ರಕಾಶದಲ್ಲಿ ಆ ಪ್ರದೇಶದಲ್ಲಿನ ವಸ್ತುಗಳು ಚೆನ್ನಾಗಿ ಕಾಣುತ್ತಿದ್ದವು, ಬಂಡೆಯನ್ನು ಕೊರೆದು ಕಂಬಗಳನ್ನು ನಿರ್ಮಿಸಲಾಗಿತ್ತು. ಆ ಸಭಾಂಗಣದ ನುಣುಪಾದ ಬಂಡೆಯ ಗೋಡೆ ವಿವಿಧ ಶಿಲ್ಪಕಲೆಯಿಂದ ನಿರ್ಮಿಸಲಾಗಿತ್ತು.

ಅಲ್ಲಲ್ಲಿ ಗೋಡೆಯ ಒತ್ತಿಗೆ ಚಿನ್ನದ ಕುಸುರಿ ತೋರಣಗಳನ್ನು ಕಟ್ಟಲಾಗಿತ್ತು. ಆ ವಿಶಾಲ ಸಭಾಂಗಣದ ನೆಲಕ್ಕೆ ಮೆತ್ತನ್ನೆ ಮಖಮಲ್ಲಿನ ಹಾಸು ಹಾಸಲಾಗಿತ್ತು.

ಇಂತಹ ವೈಭವದ ಗುಪ್ತ ಗುಹೆಗೆ ಅಧಿದೇವತೆ ಯಾರಿರಬಹುದು ಎಂದು ಆಶ್ಚರ್ಯವಾಗುತ್ತದಲ್ಲವೇ ? ಆಳುವ ರಾಜಾಧಿರಾಜರ ವೈಭವಕ್ಕಿಂತಲೂ ಕೊರತೆಯಿಲ್ಲದ ಪ್ರಚಂಡ ಧೀರ, ವಿಂದ್ಯಾವಳಿಯ ರಾಜ, ಕಾಳೀ ಪ್ರಸಾದ. ಈ ರೀತಿಯ ಅಧಿಕಾರ ಅವರಿಗೆ ವಂಶಪಾರಂಪರ್ಯವಾಗಿ ಬಂದದ್ದು. ಕಾಳೀಪ್ರಸಾದನ ಅಪ್ಪ ದೇವೀಪ್ರಸಾದ.

ಇವರು ಹೇಗೆ ದರೋಡೆಕಾರರಾದರೆಂದರೆ ಕಾಳೀಪ್ರಸಾದನ ಅಪ್ಪ ಅವನಿಗೆ ತರಬೇತಿ ಕೊಟ್ಟ. ಅವನಿಗೆ ಅವರಪ್ಪ ಹೇಳಿಕೊಟ್ಟ. ಹೀಗೆ ಅವರಿಗೆ ಪರಂಪರೆಯಿಂದ ಬಂದ ಕಸುಬು ಇದು.

ಇವರು ಕಾಡು ಪ್ರಾಣಿಗಳಿಗೂ ಹೆದರುವವರಲ್ಲ. ಬೇಟೆಯಾಡುವುದರಲ್ಲಿ ನಿಸ್ಸೀಮರು. ಹಾಗೆ ಬೇಟೆಯಾಡಿದ ಹುಲಿ, ಸಿಂಹ, ಚಿರತೆ ಇವುಗಳ ತಲೆ ಬುರುಡೆಗಳು ಗುಹೆಯ ಮೇಲ್ಛಾವಣಿಯಲ್ಲಿ ತೂಗಾಡುತ್ತಿವೆ. ಇಂತಹ ವೀರೋಚಿತ ಸ್ಥಳದ ರಾಜ ದೇವೀಪ್ರಸಾದ. ಅವನ ಮಗ ಕಾಳೀಪ್ರಸಾದ, ಅವರ ಅನುಯಾಯಿಗಳನ್ನೂ ಸಹ ಬಹಳ ಕಟ್ಟುನಿಟ್ಟಾಗಿ ಆಳುತ್ತಿದ್ದರು.

ಯಾರು ತಪ್ಪು ಮಾಡಿದರೂ ಅಂತಹವನನ್ನು ಜೀವ ಸಹಿತ ಉಳಿಸುತ್ತಿರಲಿಲ್ಲ. ಹಾಗೆ ಮರಣ ಶಿಕ್ಷೆಯಾದವರ ಅಸ್ಥಿ ಪಂಜರಗಳು ಗುಹೆಯ ಒಳಗೆ ಅನೇಕಕಡೆ ತೂಗಾಡುತ್ತಿದ್ದವು.

ತಮ್ಮ ಗುಂಪಿನವರು ಈ ರೀತಿಯ ದೃಶ್ಯವನ್ನು ನೋಡಿ ತಾವು ಎಂದೂ ತಪ್ಪು ಮಾಡಬಾರದೆಂದು ಭಯಪಡುತ್ತಿದ್ದರು.

ದೇವೀಪ್ರಸಾದ ಇಂತಹ ಗುಪ್ತ ಗುಹೆಯಲ್ಲಿ ಆಗಾಗ ಸಭೆ ನಡೆಸಿ ತನ್ನ ಅನುಯಾಯಿಗಳನ್ನೆಲ್ಲಾ ಕಲೆಹಾಕಿ ಅವರಿಗೆ ಇಂತಿಂತಹ ಕೆಲಸ ವೆಂದು ಒಪ್ಪಿಸಿ ಎಚ್ಚರಿಕೆ ನೀಡುತ್ತಿದ್ದ.

ಅಂದಿನ ಸಭೆಗೆ ಎಲ್ಲಾ ಸಿದ್ಧವಾಯಿತು. ಒಂದು ಸಂಜ್ಞೆಯ ಪ್ರಕಾರ ಎಲ್ಲಾ ಅನುಯಾಯಿಗಳೂ ಆ ಬಂಡೆಯ ಬಿರುಕಿನಿಂದ ಒಬ್ಬೊಬ್ಬರೇ ತೂರಿ ಸಭಾಂಗಣಕ್ಕೆ ಬಂದರು. ಎಲ್ಲರೂ ಅವರವರ ಸ್ಥಳ ದಲ್ಲಿ ನಿಶ್ಶಬ್ದವಾಗಿ ಕೈಕಟ್ಟಿ ನಿಂತರು.

ಒಂದು ವಿಧವಾದ ಕೊಂಬಿನ ಶಬ್ದ ಗುಹೆಯೊಳಗೆ ಮೊಳಗಿತು. ಅದರ ಜೊತೆಗೇ ಉಘೇ-ಉಘೇ ಕಾಡಿನ ರಾಜ ದೇವೀಪ್ರಸಾದನಿಗೆ ಜೈ, ಎಂಬ ಜಯ ಘೋಷ ಕೇಳಿಸಿತು.

ಹಿಂದೆಯೇ ಚಿನ್ನದ ಗರಿಗಳ ಕಿರೀಟವನ್ನು ಧರಿಸಿ, ಬೆಲೆ ಬಾಳುವ ರತ್ನ ಕವಚವನ್ನು ತೊಟ್ಟ ಕಟ್ಟುಮಸ್ತಾದ ಧೀರ ದೇವೀಪ್ರಸಾದ ಕೈಯಲ್ಲಿ ಕತ್ತಿಯನ್ನು ಹಿಡಿದು ಸಭಾಂಗಣಕ್ಕೆ ಬಂದ.

ಅವನ ಹಿಂದು ಮುಂದು ನಾಲ್ಕು ಜನ ಕಟ್ಟುಮಸ್ತಾದ ಕಾಡು ಬೇಡರು ಕತ್ತಿ ಹಿಡಿದು ಬರುತ್ತಿದ್ದರು. ಗುಹೆಯ ಅಧಿದೇವತೆ ದೇವೀ ಪ್ರಸಾದನು ಸಭಾ ಮಂಟಪಕ್ಕೆ ಬಂದು ಎತ್ತರದ ಪೀಠದ ಮೇಲೆ ಕುಳಿತ. ಅವನ ಮಗ ಕಾಳೀ ಪ್ರಸಾದನು ಸಹ ವೀರೋಚಿತವಾದ ಹುಲಿಯ ಚರ್ಮವನ್ನು ಎದೆಯ ಭಾಗದಲ್ಲಿ ಹೊದ್ದು, ತಲೆಗೆ ನವಿಲುಗರಿ ಕಿರೀಟ ವನ್ನಿಟ್ಟು ಅಪೂರ್ವ ಶೋಭೆಯಿಂದ ತಂದೆಯ ಪಕ್ಕ ಕುಳಿತ.

ವೀರರಾದ ಕಾಡು ಬೇಡರು ತಮ್ಮ ಯಜಮಾನನಿಗೆ ನಮ್ರತೆಯಿಂದ ತಲೆಬಗ್ಗಿ ಗೌರವ ಸೂಚಿಸಿದರು. ದೇವೀಪ್ರಸಾದ ಮೂರು ಸಲ ಚಪ್ಪಾಳೆ ತಟ್ಟಿದ. ಆ ಶಬ್ದ ಗುಹೆಯ ಹೊರಗೂ ಒಳಗೂ ಪ್ರತಿಧ್ವನಿಸಿತು.

ಕೂಡಲೇ ಎಲ್ಲೆಲ್ಲಿ ಅಡಗಿದ್ದರೋ ಕಾಡಿನ ಬೇಡ ಯೋಧರು ಒಬ್ಬೊಬ್ಬರಾಗಿ ನುಸುಳಿ ಬಂಡೆಯ ಸೀಳು ಮಾರ್ಗದಿಂದ ಒಳಗಿನ ಸಭಾಂಗಣಕ್ಕೆ ಬರತೊಡಗಿದರು. ನಂತರ ಗುಹೆಯ ಸಣ್ಣ ಮಾರ್ಗವನ್ನು ದೊಡ್ಡ ಬಂಡೆಯಿಂದ ಮುಚ್ಚಿಬಿಟ್ಟರು.

ಸಾಲಾಗಿ ನಿಂತ ಪ್ರತಿಯೊಬ್ಬ ಬೇಡ ವೀರನೂ, ಎಡಗೈಯಿಂದ ಬಾಯನ್ನು ಮುಚ್ಚಿಕೊಂಡು ಬಲಗೈಯಿಂದ ತಮ್ಮ ಕತ್ತಿಯನ್ನು ಮೇಲೆ ಎತ್ತಿ ತಲೆಯನ್ನು ಬಗ್ಗಿಸಿ ತಮ್ಮ ಧಣಿಗೆ ಗೌರವ ಸೂಚಿಸಿದರು.

ಅಷ್ಟು ಜನ ತುಂಬಿದ್ದರೂ ಸಭಾಂಗಣ ಶಿಸ್ತಿನಿಂದ ನಿಶ್ಶಬ್ದವಾಗಿದ್ದಿತು. ದೇವೀಪ್ರಸಾದ ಎದ್ದು ನಿಂತು ತನ್ನ ಸೊಂಟದಲ್ಲಿದ್ದ ಕತ್ತಿಯನ್ನು ಒಂದು ಸಲ ಝಳಪಿಸಿ ಹಾಗೆಯೇ ನಿಂತು "ವೀರ ಬೇಡ ಬಂಧುಗಳೇ, ಸಭೆಗೆ ಎಲ್ಲರೂ ಹಾಜರಾಗಿ ಬಂದಿದ್ದೀರಾ"? ಎಂದ.

ಎಲ್ಲರೂ ಒಟ್ಟಿಗೆ ಅಹುದು ಒಡೆಯಾ, –ಎಂದರು. ಪ್ರತಿಯೊಬ್ಬರೂ ಸಾಲಾಗಿ ನಿಮ್ಮ ಹೆಸರನ್ನು ಹೇಳಿ ಹಾಜರಿ ತಿಳಿಸಿ, ಎಂದು ಹೇಳಿ ದೇವೀಪ್ರಸಾದ ಗದ್ದಿಗೆಯಿಂದ ಕುಳಿತ.

ಮೊದಲನೆಯ ಸಾಲಿನಿಂದ ಒಬ್ಬ ವೀರ ವೇದಿಕೆಯ ಬಳಿ ಹೋಗಿ ತಲೆಬಾಗಿ ನಾನು ಪ್ರಭವ, ಎಂದು ಹೇಳಿ ಹಿಂದೆ ಸರಿದ,

ಎರಡನೆಯವನು ಅದೇ ರೀತಿ "ವಿಭವ" ಎಂದ. ಹೀಗೆಯೇ ಇನ್ನೊಬ್ಬ ಶುಕ್ಲ, ಪ್ರಮೋದೂತ, ಪ್ರಜೋತ್ಪತ್ತಿ, ಆಂಗೀರಸ, ಭಾವ, ಯುವ, ಧಾತೃ, ಈಶ್ವರ, ಬಹುಧಾನ್ಯ, ಪ್ರಮಾಥಿ, ಅಲ್ಲಿಯವರೆಗೂ ಸಾಲಾಗಿ ತಮ್ಮ ತಮ್ಮ ಹೆಸರು ಹೇಳಿದರು. ಅಲ್ಲಿಗೆ ಕಡೆಯಾಗಿ ನಿಲ್ಲಿಸಿದರು.

ದೇವೀಪ್ರಸಾದ ಕೋಪದಿಂದ–ಏಕ್ರೋ! ವಿಕ್ರಮ–ವಿಷು ಎಲ್ಲಿ? ಎಂದು ಘರ್ಜಿಸಿದ, ಎಲ್ಲರೂ ಭಯದಿಂದ ಮೌನವಾದರು.

ಏಕೆ ಸುಮ್ಮನಾದಿರಿ? ಬಾಯಿಬಿಡಿಸಬೇಕೋ; ಎಂದು ಗುಡುಗಿದ. ದಣಿ, ಕ್ಷಮಿಸಬೇಕು ಪಟ್ಟಣಕ್ಕೆ ದರೋಡೆಗೆ ಹೋದವರು ಅವರಿಬ್ಬರು ಬಂದಿಲ್ಲ. ಏನಾದರೂ ಅಪಾಯವಾಗಿದೆಯೋ? ಎಂದು ಭಯವಾಗಿದೆ. ಎಂದು ಒಬ್ಬ ಧೈರ್ಯಮಾಡಿ ಹೇಳಿದ.

ದೇವೀಪ್ರಸಾದನ ಮೈ ಆದ್ಯಂತ ನಡುಗಿತು, ಹಾಂ....ಏನೆಂದಿರಿ? ಮತ್ತೆ ಇಬ್ಬರು ಹೋದರೇ? ಎಷ್ಟು ದಿನವಾಯಿತು?

ಮೂರುದಿನವಾಯಿತು ಒಡೆಯಾ ;
ಹಾಗಾದರೆ ಗತಿಯೇನು ? ಪಟ್ಟಣದ ಜನ ಅವರ ಬಾಯ್ ಬಿಡಿಸಿದರೆ ಎಂತಹ ಗಂಡಾಂತರ ?

ಒಡೆಯಾ ನಮ್ಮ ಜನ ಪ್ರಾಣಕೊಡುವರೇ ಹೊರತು ಇಲ್ಲಿಯ ವಿಷಯ ಬಾಯ್ ಬಿಡುವುದಿಲ್ಲ, ಕಾಳಿದೇವಿಯಾಣೆ ಒಡೆಯಾ !
ಇರಲಿ ಇದುವರೆಗೆ ಹಿಂದೆ ಹೋದವರ ಪತ್ತೆಯನ್ನು ಮಾಡಲೂ ನಿಮ್ಮ ಕೈಲಿ ಆಗಲಿಲ್ಲ, ಅಂದಮೇಲೆ ನಿಮಗೆ ಸರಿಯಾದ ಶಿಕ್ಷೆಯಾಗಬೇಕು.... ಎಂದು ರೋಷದಿಂದ ಕೂಗಾಡಿದ ದೇವೀಪ್ರಸಾದ.

ಶಿಕ್ಷೆ ಎಂದರೆ ಹೇಗೆ? ಎಂದು ಆ ಬೇಡರಿಗೆ ಗೊತ್ತು. ಮರಕ್ಕೆ ಕಟ್ಟಿಹಾಕಿ ಕಾದ ಕಬ್ಬಿಣದ ಸಲಾಕೆಗಳಿಂದ ಮೈಯ್ಯೆಲ್ಲಾ ಬರೆ ಎಳೆಯುವುದು. ಆ ಚಿತ್ರಹಿಂಸೆ ನೆನೆಸಿಕೊಂಡರೇ ಭಯದಿಂದ ನಡುಕಬರುತ್ತಿತ್ತು. ಎಲ್ಲರೂ ಉಸಿರು ಬಿಗಿ ಹಿಡಿದು ಮೌನವಾಗಿದ್ದರು.

ದೇವೀಪ್ರಸಾದ ಪಕ್ಕದಲ್ಲಿದ್ದ ಮಗನ ಕಡೆ ತಿರುಗಿ ಲೋ ಕಾಳಿ.... ನಿನಗೆ ಈ ವಿಷಯವೆಲ್ಲಾ ತಿಳಿಯದೇನೋ ?

ಅಪ್ಪಾ ; ನಾನು ಈಗ ಇಪ್ಪತ್ತು ದಿನಗಳಿಂದ ಈ ತಂಗು ತಾಣಕ್ಕೆ ಬರಲೇಇಲ್ಲ. ನಮ್ಮ ದಳದವರನ್ನು ಭೇಟಿಮಾಡಲೂ ಆಗಲಿಲ್ಲ ಹಡಗು ದರೋಡೆಗೆ ಹೋಗಿದ್ದೆ. ಇದೋ ಆ ಪೆಟ್ಟಿಗೆಗಳು ಇವೆಲ್ಲಾ ವಿದೇಶೀ ಸಾಮಾನುಗಳು ಎಂದು ಬೆಲೆ ಬಾಳುವ ಚಿನ್ನದ ಬಿಸ್ಕಿಟ್ ತುಂಬಿದ್ದ ಪೆಟ್ಟಿಗೆಯನ್ನು ತೋರಿಸಿದ.

ಅಲ್ಲಿ ನಿಂತಿದ್ದ ಕಾಡು ಬೇಡರು ಅದನ್ನು ನೋಡಿ ಬೆರಗಾದರು. ಆದರೆ ಒಂದು ಮಾತೂ ಆಡಲಿಲ್ಲ.

ದೇವೀಪ್ರಸಾದ– ದರ್ಪದಿಂದ ನೋಡಿದಿರಾ ! ಹೇಡಿಗಳಾ ! ಕಾಳೀ ಒಬ್ಬ ಎಷ್ಟೊಂದು ಐಶ್ವರ್ಯ ಲೂಟಿಮಾಡಿದ್ದಾನೆ. ನೀವು ಒಬ್ಬೊಬ್ಬರೂ ಹೀಗೆ ತಯಾರಾಗಬೇಕು, ಸರಿ–ಸರಿ.

ಏ – ದಳನಾಯಕಾ ! ವೀರಬಾಹು-ನಮ್ಮ ಗುಂಪಿನ ಜನ ಎಷ್ಟು ಕಮ್ಮಿಯಾಗಿದ್ದಾರೆ ? ತಿಳಿದಿದೆಯೇ ?

ವೀರಬಾಹು ಬಾಯಿಮೇಲೆ ಕೈ ಅಡ್ಡ ಇಟ್ಟು-ಗೊತ್ತು ಒಡೆಯಾ! ವಿಕ್ರಮ-ವಿಷ್ಣು ಅಲ್ಲದೆ-ನಂದನ, ವಿಜಯ-ತಾರಣ-ಈ ಮೂವರು ಕಾಡಿನಲ್ಲಿಯೇ ಬೇಟೆ ಹುಡುಕುತ್ತಿದ್ದರು. ಅವರನ್ನು ಹುಲಿಯೋ ಚಿರತೆಯೋ ಕೊಂದಿರಬಹುದು-ವಿಜಯನ ತಲೆಯ ಕೆಂಪು ಪಾಗು ಮತ್ತು ಒಂದು ಕೈ ಮೂಳೆ ಮಾತ್ರ ಕಂದಕದ ಬಳಿ ಸಿಕ್ಕಿತು, ಎಂದು ಹೇಳಿ ತಲೆ ಬಗ್ಗಿಸಿ ನಿಂತ.

ಸರಿ. ಕೂಡಲೇ ನನಗೇಕೆ ತಿಳಿಸಲಿಲ್ಲ?

ನೀವು ಐದುದಿನದಿಂದ ಇರಲಿಲ್ಲ ಒಡೆಯಾ! ಹೊರವಲಯ ಹೋಗಿದ್ದಿರಿ ಇದೋ ಕೈ ಮೂಳೆ-ತಲೆಯ ಪಾಗು, ಎಂದು ಮುಂದಿಟ್ಟ ದಳನಾಯಕ.

ದೇವೀಪ್ರಸಾದ ಕೋಪದಿಂದ ತನ್ನ ಕೈಲಿದ್ದ ಕೋಲನ್ನು ನೆಲಕ್ಕೆ ಬಡಿದು ಹೋ........ನಾಶ-ನಾಶವಾಯಿತು. ಈಗ ಆ ತೆರವಾದ ಐದು ಜನರ ಜಾಗ ತುಂಬಬೇಕು. ಸರಿಯಾದವರನ್ನು ಆರಿಸಿ.

ಅಪ್ಪಣೆ ದಣೀ-ಈಗ ಸಧ್ಯದಲ್ಲಿ ನಂಬಿಕಸ್ಥರಾದ ನಮ್ಮ ಗುಂಪೇ ಸಾಕು. ದಣೀ-ಹೊಸಬರು ಬೇಡ. ಇನ್ನು ಕೆಲವೇ ತಿಂಗಳು ತರಪೇತಿ ಕೊಟ್ಟರೆ ನಮ್ಮ ಜೊತೆಗೇ ಬೆಳೆದಿರುವ ಎ|| ದಳದ ವೀರರು ತಯಾರಾ ಗುತ್ತಾರೆ. ಪುಟ್ಟಮಕ್ಕಳಾಗಿದ್ದಾಗಿನಿಂದಲೂ ನಮ್ಮ ಶಿಬಿರದಲ್ಲಿಯೇ ತಯಾರಾದವರು ಅವರು, ಎಂದು ದಳನಾಯಕ ವಿನಯದಿಂದ ಹೇಳಿದ.

ಅವನ ಮಾತಿಗೆ ಬೆಂಬಲಿಸಿ ಕಾಳಿಪ್ರಸಾದ ಹೌದು; ಅಪ್ಪಾಜೀ; ಘೋರ, ಮಾರ, ಹನುಮ, ಭೀಮ ಅನ್ನುವ ನಾಲ್ಕು ಜನ ಯುವಕರು ಚೆನ್ನಾಗಿ ತಯಾರಾಗಿದ್ದಾರೆ ನಮ್ಮ ಜೊತೆಯಲ್ಲಿ ದರೋಡೆಗೆ ಆಗಾಗ ಬರು ತ್ತಾರೆ ಆದರೆ ಅವರನ್ನು ಕರೆತಂದು ನಿಮ್ಮೆದುರಿಗೆ ವೀರ ದೀಕ್ಷೆ ಕೊಡ ಬೇಕಾಗಿದೆ ದೇವಿಯ ಎದುರು ಅವರ ರಕ್ತ ಚೆಲ್ಲಿ ಪ್ರಮಾಣ ಮಾಡಬೇಕಾಗಿದೆ ಎಂದ.

ಕಾಳಿಯ ಮಾತು ಕೇಳಿ ದೇವೀಪ್ರಸಾದ ಸ್ವಲ್ಪ ಸಮಾಧಾನ ಹೊಂದಿದ. ವೀರಯೋಧರೇ; ಹುಷಾರು. ಇನ್ನು ನಾಲ್ಕು ಮಕ್ಕಳನ್ನು ನೀವು ಅಪ ಹರಿಸಿ ತರಬೇಕು. 3 ವರ್ಷಕ್ಕಿಂತ ಒಳಪಟ್ಟ ಮಕ್ಕಳನ್ನು ಆರಿಸಿ ತನ್ನಿ

ಸುಳುವು ಸಿಗದಂತೆ ಆ ಮಕ್ಕಳನ್ನು ಚೆನ್ನಾಗಿ ಕಾಪಾಡಿ ತರಬೇತಿ ಕೊಡ ಬೇಕು. ಹುಷಾರ್ ಎಂದು ಎದ್ದು ನಿಂತು ಕತ್ತಿಯನ್ನು ಝಳಪಿಸಿ

ಲೋ ಕಾಳೀಪ್ರಸಾದ ನೀನು ದೋಚಿಕೊಂಡು ಬಂದಿರುವ ಚಿನ್ನದ ನಾಣ್ಯಗಳನ್ನು ಇವರೆಲ್ಲರಿಗೂ ಒಂದೊಂದು ಹಿಡಿ ಕೊಡು ಎಂದ,

ಕಾಳೀಪ್ರಸಾದ ಹಾಗೆಯೇ ಎಲ್ಲರಿಗೂ ಚಿನ್ನದ ನಾಣ್ಯವನ್ನು ಕೊಟ್ಟ. ಎಲ್ಲರೂ ಒಟ್ಟಿಗೆ ಜೈ.... ದೇವೀಪ್ರಸಾದನಿಗೆ–ಕಾಳೀಪ್ರಸಾದನಿಗೆ ಎಂದು ಪ್ರತಿಯೊಬ್ಬರೂ ತಮ್ಮ ತಮ್ಮ ಆಯುಧ ಬಿಲ್ಲು ಬಾಣಗಳನ್ನು ತನ್ನ ಒಡೆ ಯನ ಪಾದಕ್ಕೆ ಮುಟ್ಟಿಸಿ ಪ್ರತಿಜ್ಞೆ ಮಾಡಿದರು.

ದುರ್ಗಾದೇವಿಯ ಪಾದದಾಣೆ ಪ್ರಾಣ ಹೋದರೂ ನಮ್ಮ ದಣಿ ದೇವೀಪ್ರಸಾದನಿಗೆ ದ್ರೋಹ ಬಗೆಯುವುದಿಲ್ಲ ಎಂದು.

ಅಲ್ಲಿಗೆ ಸಭೆ ಮುಕ್ತಾಯವಾಯಿತು ಜಯಘೋಷದೊಡನೆ ಕಾಡಿನ ಆ ವೀರರು ಗುಹೆಯ ಹೊರಗೆ ಬಂದು ಕಣ್ಮರೆಯಾದರು.

ಅಗತ್ಯ ಬಿದ್ದಾಗ ದೇವೀಪ್ರಸಾದ ಆಗಾಗ ಈ ರೀತಿಯ ಸಭೆ ನಡೆಸುತ್ತಿದ್ದ. ನಂತರ ಅವರವರ ಕೆಲಸದಲ್ಲಿ ಅವರವರು ಚೆಲ್ಲಾಪಿಲ್ಲಿಯಾಗಿ ಹೋಗುತ್ತಿದ್ದರು. ಎಲ್ಲಿ ಹೋದರೂ ಮತ್ತೆ ಆ ದಟ್ಟ ಕಾಡಿನ ಸಂದಿ ಗೊಂದಿಯಲ್ಲಿ ಅವರ ವಾಸಸ್ಥಾನಕ್ಕೆ ಹಿಂದಿರುಗಿ ಬಂದು ಸೇರುತ್ತಿದ್ದರು.

ಅವರ ಗುಂಪಿನಲ್ಲಿ ಪ್ರಾಮಾಣಿಕತೆಯೇ ಪ್ರಾಧಾನ್ಯ. ಕಾಳೀದೇವಿಯ ಮುಂದೆ ಪ್ರತಿಜ್ಞೆ ಮಾಡಿದರೆ ಆಯಿತು ಪ್ರಾಣ ಹೋದರೂ ತಮ್ಮ ಸುಳಿ ವನ್ನು ತಿಳಿಸಕೂಡದು.

ತಪ್ಪಿದರೆ ಕಠಿಣ ಶಿಕ್ಷೆ ಒಡೆಯನಿಂದ ತಪ್ಪಿದ್ದಲ್ಲ. ಎಲ್ಲೀ ತಪ್ಪಿಸಿಕೊಂಡು ಹೋಗಲು ಅವಕಾಶವಿಲ್ಲ ಬಾಲ್ಯದಲ್ಲಿಯೇ ದೇವೀಪ್ರಸಾದನ ಗುಂಪಿನಲ್ಲಿ ಬೆಳೆದು ದರೋಡೆಕಾರರಾದವರು ಇವರೆಲ್ಲ.

ಕಠಿಣಶಿಕ್ಷೆ ಎಂದರೆ ಮರಕ್ಕೆ ಕಟ್ಟಿ ಮುಳ್ಳು ಕೋಲಿನಿಂದ ಬಡಿದು ಉಪ್ಪು ಎರಚುವುದು. ಮರುದಿನ ಅವನು ಆ ಶಿಕ್ಷೆ ಎಲ್ಲರೆದುರಿಗೆ ಅನು ಭವಿಸಬೇಕು. ಬೇರೆಯವರು ತಪ್ಪು ಮಾಡಲು ಹೆದರುವಂತೆ ಮಾಡುವ ಪಾಠವಿದು.

ಕಾಳೀಪ್ರಸಾದನ ಅಪ್ಪ ಡೇವೀಪ್ರಸಾದನೇ ಎಲ್ಲರಿಗೂ ನಾಯಕ.

ತಪ್ಪು ಮಾಡಿದರೆ ಎಷ್ಟು ಶಿಕ್ಷೆಯೋ ಅಷ್ಟೇ ಪ್ರೀತಿಯಿಂದ ತನ್ನ ಅನುಯಾಯಿಗಳನ್ನು ನೋಡಿಕೊಳ್ಳುತ್ತಿದ್ದ. ದರೋಡೆಮಾಡಿ ತಂದ ಹಣವನ್ನೂ ಒಡವೆಗಳನ್ನೂ ಯಾವುದೇ ವಸ್ತುಗಳನ್ನೂ ಎಲ್ಲರಿಗೂ ಸಮೃದ್ಧವಾಗಿ ಹಂಚುತ್ತಿದ್ದನು.

ಇವರ ಕುಟುಂಬಗಳು ಬೇರೆ ಬೇರೆ ಊರಿನಲ್ಲಿದ್ದು ಆಗಾಗ ವೇಶ ಬದಲಾಯಿಸಿಕೊಂಡು ಹೋಗಿ ಬರುತ್ತಿದ್ದರು.

ಮಿಕ್ಕದಿನಗಳಲ್ಲಿ ಆ ಘೋರಾರಣ್ಯದ ಬಂಡೆಗಳ ಮಧ್ಯೆ ಮಧ್ಯೆ ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದರು.

ಯಾರಿಗೂ ಪತ್ತೆ ಹಚ್ಚಲು ಸಾಧ್ಯವಿಲ್ಲದಂತಹ ಗುಹೆಯ ಪಾತಾಳದಲ್ಲಿ ದೇವೀಪ್ರಸಾದನು ಅಪಾರ ನಿಧಿಯನ್ನು ಸಂಗ್ರಹಿಸಿಟ್ಟಿದ್ದ.

ಈ ದರೋಡೆಕೋರರು ದರೋಡೆಗೆ ಲೂಟಿಗೆ ಹೊರಟರೆ ನಿರ್ದಯಿಗಳು. ಮಕ್ಕಳು ಮುದುಕರು ಎಂಬ ದಯೆ ದಾಕ್ಷಿಣ್ಯವಿಲ್ಲದೆ ಬಾಗಿಲು ಒಡೆದು ಮನೆ ಲೂಟಿಮಾಡಿ ಸೂರೆ ಹೊಡೆದುಕೊಂಡು ಬರುತ್ತಿದ್ದರು.

ಊರೊಳಗೆ ದರೋಡೆಗೆ ಹೋಗದ ದಿನ ದಾರಿ ದರೋಡೆಗೆ ಎತ್ತಿದ ಕೈ ಇವರು. ಪ್ರಯಾಣಿಕರನ್ನು ಅಡ್ಡಗಟ್ಟಿ ಬೆದರಿಸಿ ದೋಚಿ ಕಾಡಿನಲ್ಲಿ ಮರೆಯಾಗುತ್ತಿದ್ದರು.

ಇವರ ಗುಂಪನ್ನು ಹಿಡಿಯುವುದಂತೂ ಯಾರಿಂದಲೂ ಸಾಧ್ಯವಿಲ್ಲವಾಗಿತ್ತು. ಆಗಿನ ಕಾಲ ಪೋಲೀಸ್ ಇಲಾಖೆ ಸಿಬ್ಬಂದಿಯು ಅಷ್ಟಾಗಿ ಇರಲಿಲ್ಲವಾದ್ದರಿಂದ ದರೋಡೆಕೋರರ ಪ್ರಾಬಲ್ಯ ಹೆಚ್ಚಾಗಿತ್ತು.

ದೇವೀಪ್ರಸಾದ ಕಾಳೀಪ್ರಸಾದನನ್ನು ಮಗುವಿಂದ ತಾನೇ ಸಾಕಿ ಅವನನ್ನು ದಷ್ಟಪುಷ್ಟವಾಗಿ ಬೆಳೆಸಿದ್ದ. ಮಗನೆಂಬ ಪ್ರೀತಿ ಅಪಾರವಾಗಿದ್ದ ಕಾರಣ ಕಾಳಿಪ್ರಸಾದನಿಗೆ ಏನೊಂದು ತೊಂದರೆಯಾದರೂ ಸಹಿಸಲಾರ. ಅವನಿಗೆ ವೀರ ಯೋಧನಂತೆ ಎಲ್ಲಾ ವಿಧ ತರಪೇತಿ ಕೊಟ್ಟು ಧೀರ ಶೂರನಂತೆ ಬೆಳೆಸಿದ್ದ.

ಕುದುರೆ ಸವಾರಿ, ಬಿಲ್ಲಿನಗುರಿ, ಕತ್ತಿವರಸೆ, ಸಿಕ್ಕಿಬಿದ್ದಾಗ ತಪ್ಪಿಸಿಕೊಳ್ಳುವ ಜಾಣ್ಮೆ, ಎಲ್ಲಾ ಅಭ್ಯಾಸಮಾಡಿದ್ದ. ದರೋಡೆಗೆ ಹೋಗುವಾಗ ಕಾಳಿಯನ್ನೂ ಜೊತೆ ಜೊತೆಯಾಗಿ ಕರೆದುಕೊಂಡು ಹೋಗಿ ಧೈರ್ಯ ತುಂಬಿದ್ದ.

ಕಾಳೀಪ್ರಸಾದನಿಗೆ ಭಯವೆಂಬುದೇ ಗೊತ್ತಿಲ್ಲ. ಇತ್ತೀಚೆಗೆ ದೇವಿ ಪ್ರಸಾದ ಮಗನನ್ನೇ ಯಜಮಾನನ್ನಾಗಿ ಮಾಡಿದ್ದ.

ಕಾಳೀಪ್ರಸಾದ ತಂದೆಯ ಮಾತಿಗೆ ಸರಿ ಅಪ್ಪಾ, ನಾನು ನಿನ್ನ ಮಗ ನಲ್ಲವೆ ; ಭಯವೆಂಬ ಹೆಸರು ನನ್ನ ಬಳಿ ಸುಳಿಯುವುದಿಲ್ಲ ಎಂದ. ನಿಜ, ಕಾಳೀಪ್ರಸಾದ ಯೌವ್ವನ ತುಂಬಿ ತುಳುಕುವ ಕಟ್ಟಾಮುಟ್ಟಾ ಯುವಕ ಇಪ್ಪತ್ತನಾಲ್ಕು ವರ್ಷದ ಹರೆಯ, ಆರಡಿ ಎತ್ತರದ ಆಳು, ನೀಳ ಬಾಹು, ಹುರಿ ಮಾಡಿದ ಸಣ್ಣ ಮೀಸೆ ಒತ್ತಾಗಿ ಬೆಳೆದ ಕಪೋಲ ಕೇಶಗಳ ಮಧ್ಯೆ ಗುಲಾಬಿ ಬಣ್ಣದ ಆ ಮುಖ, ಕರೀ ಮೋಡಗಳ ಮಧ್ಯೆ ಚಂದ್ರ ಮೂಡಿ ಬಂದಂತೆ ಎತ್ತಿ ಕಾಣುತ್ತಿತ್ತು.

ರಾಜಠೀವಿಯ ನಡಿಗೆ ಒಬ್ಬ ವೀರ ಯೋಧನಂತೆ ಕಾಣುತ್ತಿದ್ದ. ದೇವೀಪ್ರಸಾದ ಈ ಮಗನನ್ನು ಬೆಳಸಿದ ರೀತಿಯೇ ಅಪ್ರತಿಮ ಪರಾಕ್ರಮಿ ಯಾಗಿ.

ದರೋಡೆ ಯುವಕರಿಗೆ ತನ್ನ ಮಗನೇ ಲೀಡರ್, ತನ್ನ ಮಗ ತನ್ನನ್ನು ಮೀರಿಸಿದ ದರೋಡೆ ನಾಯಕನಾಗಬಲ್ಲ. ಆದರೆ ಅವನು ಹೆಣ್ಣಿನ ಬಲೆಗೆ ಬೀಳದಂತೆ ಅವನನ್ನು ಎಚ್ಚರಿಸಬೇಕು ಎಂದು ಆಗಾಗ ಯೋಚಿಸು ತ್ತಿದ್ದ ದೇವೀಪ್ರಸಾದ.

ತನ್ನನ್ನೇ ಎವೆಯಿಕ್ಕದೆ ನೋಡುತ್ತಾ ಮಾತು ನಿಲ್ಲಿಸಿ ಸುಮ್ಮನೆ ಕುಳಿತ ತಂದೆಯನ್ನು ನೋಡಿ ಕಾಳೀಪ್ರಸಾದ ಅಪ್ಪಾ ಏಕೆ ಸುಮ್ಮನಾದೆ ? ಏನೋ ಹೇಳಬೇಕೆಂದಿದ್ದೆಯಲ್ಲಾ ಹೇಳು ಅಂದ.

ಕಾಳೀ ನನ್ನನ್ನು ತುಂಬಾ ಪ್ರೀತಿಸುತ್ತಿಯಾ ? ಎಂದು ಮಗನ ಎರಡು ಕೈಯ್ಯನ್ನು ತನ್ನ ಕೈಗೆ ತೆಗೆದುಕೊಂಡು ಹೇಳಿದ.

ಅಪ್ಪಾ ! ಇದೇನು ? ಎಂದೂ ಇಲ್ಲದಷ್ಟು ಮೃದುವಾಗಿದೆ ನಿಮ್ಮ ಮಾತು. ನಾನು ನಿಮ್ಮನ್ನಲ್ಲದೆ ಇನ್ಯಾರನ್ನು ಪ್ರೀತಿಸಲಿ?

ನಾನು ಹೇಳುವ ಮಾತನ್ನು ಕೇಳಿದ ಮೇಲೆಯೂ ಪ್ರೀತಿಸುತ್ತೀಯಾ ಮಗನೇ ?

ಓಹೋ....ಸತ್ಯವಾಗಿ, ನ ನ್ನ ನ್ನು ಇಲ್ಲೇ ಕತ್ತರಿಸುತ್ತೇನೆ ಎಂದು ನೀನು ಹೇಳಿದರೂ, ಅದು ನನಗೆ ಪ್ರೀತಿಯೇ ಅಪ್ಪ.

ಕಾಳೀ ನಾನು ಮಾಡಿದ ದರೋಡೆ ಕೊಳ್ಳೆಗಳಲ್ಲಿ ಕೊಲೆಯೇ ಹೆಚ್ಚು ಎಷ್ಟು ಸಂಸಾರಗಳು ನೊಂದು ಬೆಂದು ನಾಶವಾಗಿದೆಯೋ ?

ಆದರೆ, ಈ ಕಸುಬಿನಲ್ಲಿ ತೊಡಗಿದಮೇಲೆ ನಮ್ಮ ಹೃದಯದಲ್ಲಿ ದಯೆ ಮತ್ತು ಕರುಣೆ ಎಂಬ ದ್ರವವೇ ಇರುವುದಿಲ್ಲ.

ಗಂಡನ ಎದುರಿಗೆ ಹೆಂಡತಿಯ ಕೊಲೆ, ಹೆಣ್ಣು ಕಣ್ಣೀರಿಟ್ಟು ಬೇಡಿ ಕೊಂಡರೂ ಗಂಡನ ಕೊಲೆ, ಮಕ್ಕಳು–ಮುದುಕರು ಎನ್ನದೆ ಸಾಯಿಸುವುದು ಹೀಗೆಯೇ ನನ್ನ ಆಯಸ್ಸಿನಲ್ಲಿ 40 ವರ್ಷಗಳು ಕಳೆದಿರಬಹುದು.

ನನ್ನ ಅಪ್ಪ ಹೇಳುತ್ತಿದ್ದುದು ನನಗೆ ಲೋ ದೇವೀಪ್ರಸಾದ ದೊಡ್ಡ ವರು ಯಾರನ್ನೂ ನಮ್ಮ ಗುಂಪಿಗೆ ಸೇರಿಸಿಕೊಳ್ಳಬೇಡ, ನಾನು ಮಕ್ಕಳನ್ನೇ ಅಪಹರಿಸಿ ತಂದು ಸಾಕಿ ತರಪೇತಿ ಕೊಟ್ಟಿದ್ದೇನೆ, ಇನ್ನು ಸಾಕು, ಇನ್ನು ಹೆಚ್ಚು ಜನ ನಮಗೆ ಬೇಡ, ಎಂದು ಹೇಳುತ್ತಿದ್ದ. ಅವನು ಎಂದೂ ದೊಡ್ಡವರನ್ನು ತನ್ನ ಗುಂಪಿಗೆ ಸೇರಿಸಿಕೊಂಡವನೇ ಅಲ್ಲ.

ಕಾಳೀಪ್ರಸಾದನ ತಂದೆ ಅವನಿಗೆ ಉಪದೇಶ ಕೊಟ್ಟು ಪ್ರತಿಜ್ಞೆ ಮಾಡಿಸಿದ್ದೇ ಹೀಗೆ

ಒಂದು ದಿನ ಮಗನನ್ನು ಕರೆದು ನನ್ನ ಹಿಂದೆ ಸದ್ದಿಲ್ಲದೆ ಬಾ ಮಗಾ,, ಎಂದು ಕರೆದ. ಕಾಳೀಪ್ರಸಾದ ತಂದೆಯ ಮಾತಿಗೆ ಚಾಚೂ ಎದುರಾಡುವನಲ್ಲ.

ದೇವೀಪ್ರಸಾದನ ಹಿಂದೆಯೇ ಹೋದ. ವಿಂಧ್ಯಾವಳೀ ದಟ್ಟ ಕಾಡಿನ ಮಧ್ಯೆ ಇದ್ದ ಪರ್ವತದ ಗುಹೆಯ ಒಳಕ್ಕೆ ತೂರಿ ಇಬ್ಬರೂ ಒಳಕ್ಕೆ ಹೋಗಿ ಗುಹೆಯ ಬಾಗಿಲಿಗೆ ಬಂಡೆಯನ್ನು ಮುಚ್ಚಿ ಒಳಕ್ಕೆ ಹೋದರು.

ಒಳಗೆ ಸ್ವಲ್ಪದೂರ ಬಗ್ಗಿ ನಡೆದರೆ ಎರಡು ಕವಲು ದಾರಿ ಸಿಗುತ್ತದೆ. ಒಂದು ದೊಡ್ಡ ಸಭಾ ಪ್ರಾಂಗಣದ ಕಡೆಗೆ, ಇನ್ನೊಂದು ಕಿರಿದಾದ ಇಕ್ಕಟ್ಟಾದ ಕಂದಕಕ್ಕೆ–

ಕಂದಕದ ಕಡೆಗೆ ಮಗನನ್ನೂ ಕರೆದುಕೊಂಡು ದೇವೀಪ್ರಸಾದ ನಡೆದ.

ಕಾಳೀಪ್ರಸಾದ ಗುಹೆಯನ್ನು ಅನೇಕ ಬಾರಿ ಪ್ರವೇಶಿಸಿದ್ದರೂ, ಈ ದಾರಿಯು ಅವನಿಗೆ ಗೊತ್ತಿರಲಿಲ್ಲ, ಅವನೇ ಏನು ಯಾವ ಅನುಯಾಯಿಗಳಿಗೂ ಗೊತ್ತಿರಲಿಲ್ಲ.

ಆ ಇಕ್ಕಟ್ಟಾದ ದಾರಿಯು ಕತ್ತಲಿನಿಂದ ಕ ವಿ ಚಿ ತ್ತು ಕಣ್ಣು ಬಿಟ್ಟಿದ್ದರೂ ಒಂದೇ, ಕಣ್ಣು ಮುಚ್ಚಿದ್ದರೂ ಒಂದೇ ಏನೂ ಕಾಣುತ್ತಿರಲಿಲ್ಲ.

ಇಂತಹ ಕಗ್ಗತ್ತಲಿನಲ್ಲಿ ದೇವೀಪ್ರಸಾದ ಮಗನ ಕೈಹಿಡಿದು ಸಲೀಸಾಗಿ ಮುಂದೆ ನಡೆದ. ಆ ನಿಶ್ಶಬ್ದತೆಯ ವಾತಾವರಣದಲ್ಲಿ ಇವರ ಉಸಿರಾಟವೂ ಕೂಡ ಢಾಣಾ–ಢಂಗಾಗಿ ಕೇಳಿಸುತ್ತಿತ್ತು,

ದೇವೀಪ್ರಸಾದ ನಡೆಯುತ್ತಾ ಹೆಜ್ಜೆಯನ್ನು ಲೆಕ್ಕ ಮಾಡಿಕೊಳ್ಳುತ್ತಿದ್ದ. ಮುನ್ನೂರು ಹೆಜ್ಜೆ ಮುಗಿದ ಕೂಡಲೇ ಅಲ್ಲೇ ನಿಂತು ಮಗನಿಗೆ ಕೇಳಿದ ಲೋ ಕಾಳೀ; ....ನಾವು ಈಗ ಇಕ್ಕಟ್ಟಿನ ಹಾದಿಯಲ್ಲಿ ಎಷ್ಟು ದೂರ ಬಂದಿದ್ದೇವೆ ? ಎಂದು ಕೇಳಿದ.

ಈ ರೀತಿಯ ಲೆಕ್ಕಾಚಾರ ಕಾಳೀಪ್ರಸಾದನಿಗೇನೂ ಹೊಸದಲ್ಲ. ಒಂದು ಜಾಗದ ಗುರುತನ್ನು ತಿಳಿಸಬೇಕಾದರೆ ಅವರುಗಳು ಹೆಜ್ಜೆಯ ಅಳತೆಯಿಂದಲೇ ತಿಳಿಸುತ್ತಿದ್ದರು.

ತಂದೆ ಕೇಳಿದ ಕೂಡಲೇ ಕಾಳೀಪ್ರಸಾದ ಮುನ್ನೂರು ಹೆಜ್ಜೆ ಬಂದಿದ್ದೇವೆ ಅಪ್ಪಾ : ಎಂದ.

ಭೇಷ್ ಮಗನೇ ; ಎಂದು ಮಗನ ಬೆನ್ನು ತಟ್ಟಿ, ಈಗ ಎಡಕ್ಕೆ ತಿರುಗು, ಈ ದಾರಿ ಜ್ಞಾಪಕವಿರಲಿ,, ಎಂದು ಹೇಳಿ, ಮಗನ ಕೈಹಿಡಿದು ಮುಂದೆ ನಡೆದ. ಸುಮಾರು ನಲವತ್ತು ಹೆಜ್ಜೆ ನಡೆದ ನಂತರ ಪ್ರಕಾಶವಾದ ಬೆಳಕು ಕಾಣಿಸಿತು.

ಆ ಬೆಳಕು ಬಿರುಕು ಬಿಟ್ಟ ಬಂಡೆಯಿಂದ ಸೂರ್ಯನ ಕಿರಣ ನೇರ ತೂರಿ ಬಂದಿತ್ತು, ಅದು ಒಂದು ಇಕ್ಕಟ್ಟಾದ ಬಂಡೆಯ ಗುಹೆ, ಅಲ್ಲಿ ಒಂದು ಕಾಳಿಯ ಕಂಚಿನ ವಿಗ್ರಹ ನೆಲದ ಮೇಲೆ ಇತ್ತು. ದೇವೀಪ್ರಸಾದ ಮಗನನ್ನು ವಿಗ್ರಹದ ಬಳಿ ಕೂರಿಸಿ ಕೈ ಮುಗಿಸಿದ.

ನಂತರ ವಿಗ್ರಹವನ್ನು ಕಣ್ಣಿಗೊತ್ತಿಕೊಂಡು ಬಲಗಡೆಗೆ ಮೂರು ಸುತ್ತು ವಿಗ್ರಹವನ್ನು ತಿರುಗಿಸಿದ, ಕಾಳಿವಿಗ್ರಹ ಪಕ್ಕಕ್ಕೆ ಸರಿದು ಕೆಳಗೆ ಇಳಿಯುವ ಜಾಗವಾಯಿತು.

ಲೋ....ಕಾಳೀಪ್ರಸಾದ–ಈಗ ನಾನು ಮಾಡಿದ್ದೆಲ್ಲಾ ನೋಡಿದೆಯಾ? ಎಂದು ದೇವೀಪ್ರಸಾದ ಕೇಳಿದ.

ಹೌದು ಅಪ್ಪಾ! ತಿಳಿಯಿತು, ಎಂದ,

ಎರಡೇ ಮೆಟ್ಟಿಲು ಕೆಳಗೆ ಇಳಿ, ನಾನು ಮೇಲೆಯೇ ಇರುತ್ತೇನೆ ಅಂದ ತಂದೆ.

ಕಾಳೀಪ್ರಸಾದನ ಎದೆ ಏಕೋ ಧಡ–ಧಡನೆ ಹೊಡೆದುಕೊಂಡಿತು. ಇದೇನು? ತನ್ನ ಅಪ್ಪ ತನ್ನನ್ನು ಒಂಟಿಯಾಗಿ ಕರೆದುಕೊಂಡು ಬಂದು ಈ ಗುಹೆಯೊಳಗೆ ತಳ್ಳಿ ಕಾಳಿಗೆ ಬಲಿ ಕೊಡುತ್ತಾನೋ ಏನೋ? ಎಂದು ಭಯವಾಯಿತು.

ಆದರೆ ಅಪ್ಪನ ಆಜ್ಞೆಯನ್ನು ಪಾಲಿಸಲೇಬೇಕು, ಎರಡು ಮೆಟ್ಟಿಲು ಕೆಳಗಿಳಿದ ಕಾಳೀಪ್ರಸಾದ. ಮೇಲಿನ ಬೆಳಕು ಸ್ವಲ್ಪ ಕತ್ತಲೆಯನ್ನು ದೂರ ಮಾಡಿತ್ತು.

ಕಾಳೀಪ್ರಸಾದ ಕೆಳಗಿಳಿದಕೂಡಲೇ ಕಣ್ಣು ಕೋರೈಸುವಂತಹ ಝಗ ಝಗಿಸುವ ವಜ್ರ–ವೈಢೂರ್ಯ ಕೆತ್ತನೆಯ ಒಡವೆ, ಕೆಂಪು ರತ್ನಗಳಿಂದ ಕೂಡಿ ಒಂದು ಮೂಲೆಯಲ್ಲಿ ರಾಶಿಯಾಗಿ ಬಿದ್ದಿರುವುದು ಕಂಡಿತು.

ಕಾಳೀಪ್ರಸಾದ ಸುಮ್ಮನೆ ನೋಡುತ್ತಾ ಚಕಿತನಾದ ಬೇರೆ ಎಲ್ಲಾ ಅನುಯಾಯಿಗಳ ಕಣ್ಣು ತಪ್ಪಿಸಿ ತನ್ನ ತಂದೆ ಎಷ್ಟೊಂದು ನಿಧಿಯನ್ನು ಸಂಗ್ರಹಿಸಿಟ್ಟಿದ್ದಾನೆ? ಎಂಬ ಆಶ್ಚರ್ಯವೂ ಆಯಿತು.

ಕಾಳೀ ನೋಡಿದೆಯಾ ? ಅದರಲ್ಲಿ ನಿನಗೆ ಏನು ಬೇಕೋ ತೆಗೆದುಕೋ ಅಂದ ತಂದೆ.

ಕಾಳೀಪ್ರಸಾದ ಮೆಟ್ಟಿಲು ಹತ್ತಿ ಮೇಲೆಬಂದು ತನ್ನ ತಂದೆಯನ್ನು ಆಲಂಗಿಸಿ, ಅಪ್ಪಾ ಇಷ್ಟು ನಿಧಿಯನ್ನು ಹೇಗೆ ಸಂಗ್ರಹಿಸಿದೆ ? ನಮ್ಮ ಜೊತೆ ಯವರಿಗೂ ಬೇಕಾದಷ್ಟು ಕೊಟ್ಟು ಹೇಗೆ ಇಷ್ಟನ್ನು ಕೂಡಿಹಾಕಿದೆ ಅಪ್ಪಾ.

ಕಾಳೀ ನೀನು ಇದರಲ್ಲಿ ಏನೂ ತೆಗೆದುಕೊಳ್ಳಲಿಲ್ಲವಲ್ಲಾ ? ಎಂದು ಮಗನ ಬೆನ್ನು ತಟ್ಟಿದ.

ಇಲ್ಲಪ್ಪಾ ನನಗೇನೂ ಬೇಡ, ನಿನ್ನ ಪ್ರೀತಿಯೇ ಸಾಕು ಅಂದ ಕಾಳಿ.

ಸರಿ ನಡಿ, ಮುಚ್ಚಿ ಹೋಗೋಣ ಎಂದು ಹೇಳಿ ದೇವೀಪ್ರಸಾದ ಕಾಳಿ ವಿಗ್ರಹವನ್ನು ಎಡಕ್ಕೆ ಮೂರು ಸುತ್ತು ತಿರುಗಿಸಿದ. ಒಬ್ಬರು ಮಾತ್ರ ಒಳಕ್ಕೆ ಹೋಗುವಂತಿದ್ದ ಆ ಬಿಲದ ಬಾಯಿ ಮುಚ್ಚಿಕೊಂಡಿತು.

ಹುಂ....ಹೋಗೋಣ ಬಾ. ಎಂದು ಬಂದ ದಾರಿಯಲ್ಲೇ ನಡೆದು ಹೊರಕ್ಕೆ ಬಂದರು ಮತ್ತೆ ಹೊರದ್ವಾರದ ಬಂಡೆಯ ಬಾಯನ್ನು ಮುಚ್ಚಿ ಆ ದಟ್ಟ ಬೃಹತ್ ಕಾಡಿನಲ್ಲಿ ಪುತಗಳ ಸಂದಿಯಲ್ಲಿ ತಂದೆ ಮಗ ಮರೆ ಯಾದರು.

ಆ ಉಬ್ಬು ತಗ್ಗುಗಳ ಸಂದಿಯಲ್ಲಿ ತಿಳಿನೀರಿನ ಸಣ್ಣ ಝರಿಯೊಂದು ಹರಿದು ಕೆಳಗಿನ ಪಾತಾಳದಲ್ಲೆಲ್ಲೋ ಲೀನವಾಗುತ್ತಿತ್ತು.

ತಂದೆ ಮಗ ಇಬ್ಬರೂ ಹರಿಯುವ ನೀರಿನ ಮಧ್ಯೆ ಎತ್ತರದ ಬಂಡೆ ಯೊಂದರ ಮೇಲೆ ಕುಳಿತು ಬೊಗಸೆಯಿಂದ ನೀರು ತುಂಬಿ ಕುಡಿದು ದಣಿವಾರಿಸಿಕೊಂಡರು.

ಕಾಳೀ ಇವತ್ತು ನಿನಗೆ ನನ್ನ ಮನಸ್ಸಿನಲ್ಲಿ ಹತ್ತಿಕ್ಕಿರುವ ವಿಷಯ ವನ್ನೆಲ್ಲ ಹೇಳಬೇಕೆಂದಿದ್ದೇನೆ. ನಮ್ಮ ಗುಂಪಿನವರಿಗೆ ಬಿಡುವು ಕೊಟ್ಟಿರುವುದ ರಿಂದ ಅವರೆಲ್ಲಾ ಅವರವರ ಊರುಗಳಿಗೆ ಹೋಗಿದ್ದಾರೆ ಎಂದ ದೇವೀ ಪ್ರಸಾದ

ಕಾಳೀಪ್ರಸಾದ ಕುತೂಹಲದಿಂದ ಏನು ಹೇಳಪ್ಪ ! ನಿನ್ನ ಮನಸ್ಸಿ ನಲ್ಲಿ ಏನಿದ್ದರೂ ನಾನು ನಡೆಸಿಕೊಡುತ್ತೇನೆ ಅಂದ.

ನೋಡು ಕಾಳೀ ! ಈ ದರೋಡೆ ಕಸುಬು ನಮ್ಮ ಬೆನ್ನ ಹಿಂದಿನ ಮೃತ್ಯು ಎಂದು ತಿಳಿದುಕೋ. ಎಂದು ಬೇಕಾದರೂ ನಮ್ಮನ್ನು ಹಿಡಿಯ ಬಹುದು ಪೋಲೀಸ್ ಇಲಾಖೆ ಅಥವಾ ಯಾರಾದರೂ ಗುಂಡಿಟ್ಟು ಕೊಲ್ಲ ಬಹುದು.

ಆದರೆ ನಾವು ಜೀವಕ್ಕೆ ಜೋತು ಬಿದ್ದ ಅಂಜುಬುರುಕರಲ್ಲ. ನಮ್ಮ ರಕ್ತ ಬಿಸಿರಕ್ತ ನಿನಗೆ ತಿಳಿದಂತೆ ನಮ್ಮ ಗುಂಪಿನಲ್ಲಿ ಯಾವನು ಹೇಡಿ ಯಾದರೂ ಅವನನ್ನು ಜೀವದಿಂದ ಉಳಿಸುವುದಿಲ್ಲ.

ಮರಕ್ಕೆ ನೇಣುಹಾಕಿ ಅಲ್ಲೇ ಹೂತುಬಿಡುತ್ತೇನೆ ಅಂದ. ಕಾಳೀ ಪ್ರಸಾದನಿಗೆ ಅಪ್ಪನ ಸ್ವಭಾವ ಗೊತ್ತು.

ಒಂದು ಸಲ ಶಿವ, ಎನ್ನುವ ತಮ್ಮ ಜೊತೆಯುವ, ರಾತ್ರಿ ಒಂದು ದಿನ ಇನ್ನಿಬ್ಬರ ಜೊತೆ ಒಂದು ಮನೆ ದರೋಡೆಮಾಡಿ ಸಿಕ್ಕಿದಷ್ಟು ಹಣವನ್ನು ದೋಚಿ, ತಮ್ಮ ನಾಯಕನ ಬಳಿ ಬರದೆ ತಲೆ ತಪ್ಪಿಸಿ ಕೊಂಡು ಹೋದ.

ದೇವಿಪ್ರಸಾದನಿಗೆ ವಿಷಯ ತಿಳಿದಕೂಡಲೇ ವೇಷ ಮರೆಸಿಕೊಂಡು, ಎಲ್ಲಾ ಕಡೆ ಸುತ್ತಿ ಅವನನ್ನು ಪತ್ತೆಹಚ್ಚಿ ಗುಹೆಯ ಬಳಿ ಕರೆತಂದ.

ಶಿವನಿಗೆ ಇನ್ನು ತನ್ನ ಕತೆ ಮುಗಿಯಿತೆಂದೇ ಗಡ–ಗಡನೆ ನಡುಗಿದ. ಕಾಡಿನ ಮಧ್ಯೆ ಮಿಕ್ಕ ಎಲ್ಲಾ ತಮ್ಮ ಗುಂಪಿನವರ ಸಭೆ ಸೇರಿಸಿ ದೇವೀಪ್ರಸಾದ ಶಿವನನ್ನು ಒಂದು ಮರಕ್ಕೆ ನೇಣುಹಾಕಿದ, ಮಿಕ್ಕೆಲ್ಲರಿಗೂ ಎಚ್ಚರಿಕೆಕೊಟ್ಟ.

ನಮ್ಮ ಗುಂಪಿನ ಎಲ್ಲರೂ ಪ್ರಾಮಾಣಿಕರಾಗಿ ಯಜಮಾನನಿಗೆ ವಿಧೇಯರಾಗಿದ್ದವರೇ, ಈಗ ನಿನ್ನ ವಯಸ್ಸಿನ ಯುವಕರು, ಕಟ್ಟಾಳುಗ ಳನ್ನೂ ನಾನೇ ಮಕ್ಕಳಿಂದ ಸಾಕಿ ತರಪೇತಿ ಕೊಟ್ಟಿರುವುದು.

ಈ ದಟ್ಟಕಾಡಿನಿಂದ ಸುಮಾರು 70–80 ಮೈಲಿ ದಾಟಿ ಹೋದರೆ ನಾಗಪುರ್ ಹತ್ತಿರ ಸಿಂಧುಪುರ್ ಎಂಬ ಒಂದು ಹಳ್ಳಿ. ಆ ಹಳ್ಳಿಯ ಪ್ರಮೋದಪಾಟೀಲ್, ಎಂಬ ಯುವಕ ಮಿಲ್ಟ್ರಿಗೆ ಸೇರಿದ್ದ. ಅವನಿಗೆ ಮದುವೆಯಾಗಿತ್ತು. ದೃಢಕಾಯನಾದ ಎತ್ತರದ ಮನುಷ್ಯ.

ಅವನ ಹೆಂಡತಿಯೂ ಸಹ ರೂಪವತಿ, ಅವನ ತಂದೆ–ತಾಯಿಯರು ಹತ್ತಿರದ ತಮ್ಮ ಮಗಳ ಮನೆಗೆ ಹೋಗಿ ಬರುವುದಾಗಿ ಸೊಸೆಗೆ ಹೇಳಿ ಹೋಗಿದ್ದರು.

ನನಗೆ ಸುಮಾರಾಗಿ ಇವರ ಮನೆಯ ಸಮಾಚಾರ ತಿಳಿದಿತ್ತು. ಪ್ರಮೋದನ ಹೆಂಡತಿ ಮೂರು ತಿಂಗಳ ಬಾಣಂತಿ, ಗಂಡುಮಗು. ಪ್ರಮೋದ ತನ್ನ ಹೆಂಡತಿ, ತನ್ನ ಮೊದಲನೆಯ ಮಗುವನ್ನು ನೋಡಲು ಮಿಲ್ಟ್ರಿ ಆಫೀಸರಿಂದ ಅಪ್ಪಣೆ ಪಡೆದು ಬಂದಿದ್ದ.

ಈ ವಿಷಯ ನನಗೆ ತಿಳಿಯಿತು. ಆ ದಿನ, ನಾನು ಒಳ್ಳೆ ಸಭ್ಯಸ್ಥ ದೊಡ್ಡ ಮನುಷ್ಯನಂತೆ ಬೆಲೆ ಬಾಳುವ ಉಡುಪನ್ನು ಧರಿಸಿ, ಒಂದು ಬುಟ್ಟಿತುಂಬ ಹಣ್ಣು, ಸಿಹಿ, ದೂದ್‌ಫೇಡ, ಎಲ್ಲಾ ತುಂಬಿಕೊಂಡು ಅವರ ಮನೆಗೆ ಮಧ್ಯಾಹ್ನ ಹೋದೆ.

ಗಂಡ ಹೆಂಡತಿ ಆದರಿಸಿ ಬರಮಾಡಿಕೊಂಡರು. ನಾನು ಪ್ರಮೋದ ನೊಂದಿಗೆ ಹೇಳಿದೆ–

"ನನ್ನ ತಮ್ಮ ಬಾಲಾಜಿಭಟ್" ಎನ್ನುವವನು ಮಿಲ್ಟ್ರಿಗೆ ಸೇರಿದ್ದಾನೆ. ಆದರೆ ಅವನಿಂದ ಒಂದು ಸಮಾಚಾರ ಪತ್ರವೂ ನಮಗೆ ಬಂದಿಲ್ಲ. ನಿಮ್ಮ ಪಡೆಯ ಯೋಧರಲ್ಲಿ ಏನಾದರೂ ಅವನ ಪತ್ತೆಯಾದರೆ ದಯವಿಟ್ಟು ಅವನಿಗೆ ತಿಳಿಸಿ, ನಿಮ್ಮ ಅಣ್ಣ ನಿನಗಾಗಿ ಕೊರಗುತ್ತಿದ್ದಾರೆ, ಕಾಗದಬರಿ ಎಂದು ತಿಳಿಸುವಿರಾ ? ಎಂದೆ

ಪ್ರಮೋದ ಪಾಪ; ಹಾಗೇನು ? ನಾನು ವಿಚಾರಿಸುತ್ತೇನೆ ಅಂದ, ಹಣ್ಣಿನ ಬುಟ್ಟಿಯನ್ನು ಅವರಿಗೆ ಕೊಟ್ಟೆ. ಆದರೆ ನನ್ನ ಕ್ರೂರ ದೃಷ್ಟಿ ಮನೆಯನ್ನೆಲ್ಲಾ ತಪಾಸಣೆ ಮಾಡುತ್ತಿತ್ತು.

ಅವನಿಂದ ವಿಷಯವನ್ನು ಸಂಗ್ರಹಿಸಿದೆ ಅವನು ಇನ್ನು ಒಂದುವಾರ ಇದ್ದು ಹೋಗುವುದಾಗಿಯೂ, ಮಿಲ್ಟ್ರಿಯ ತನ್ನ ಆರು ತಿಂಗಳ ಸಂಬಳ ವನ್ನೂ ಮನೆಯ ಸಂಸಾರಕ್ಕೆ ಕೊಟ್ಟು ಹೋಗಲು ಬಂದುದಾಗಿಯೂ ಅವನ ತಂದೆ-ತಾಯಿ ನಾಳೆ ಬರುವರೆಂದೂ ಹೇಳಿದ.

ಸರಿ ನಾನು ಬರುತ್ತೇನೆ ಎಂದು ಹೊರಟು ಬಂದೆ. ಆದೇದಿನ ರಾತ್ರಿ ನನ್ನ ಜೊತೆಗೆ ಇನ್ನಿಬ್ಬರನ್ನು ಮಾತ್ರ ಕರೆದುಕೊಂಡು ಅವರ ಮನೆಯ ಹಿಂದಿನ ಬಾಗಿಲಿನಿಂದ ಒಳಕ್ಕೆ ನುಗ್ಗಿದೆವು. ಗಂಡ ಹೆಂಡತಿ ಆರಾಮವಾಗಿ ಮಂಚದಮೇಲೆ ಮಲಗಿದ್ದರು.

ಕಾಳೀ ! ಆಗ ನಾನು ಬಹಳ ಕಟುಕನಾಗಿದ್ದೆ. ದಯೆ ಎಂಬುದೇ ಸುಳಿಯಲಿಲ್ಲ. ಗಂಡಹೆಂಡಿರ ಬಾಯಿಗೆ ಬಟ್ಟೆ ತುರುಕಿ ಸದ್ದಿಲ್ಲದಂತೆ ಮಾಡಿದೆ. ಆದರೆ ಅವನು ಕ್ಷತ್ರಿಯನಾದ್ದರಿಂದ ಬಹಳ ಧೈರ್ಯಶಾಲಿ, ಥಟ್ಟನೆ ಎದ್ದು ಒಂದು ಕಬ್ಬಿಣದ ರಾಡನ್ನು ಕೈಗೆತ್ತಿಕೊಂಡು ನನ್ನನ್ನು ಹೊಡೆಯಲು ಬಂದ, ಇನ್ನು ನನಗೆ ಅಪಾಯವೆಂದು ತಿಳಿದು ನನ್ನ ಸೊಂಟದಲ್ಲಿದ್ದ ಬಾಕನ್ನು ಎಳೆದು ಗುರಿಯಿಟ್ಟು ಅವನ ಕಡೆ ಎಸೆದೆ. ಅದು ಸರಿಯಾಗಿ ಅವನ ಎದೆಯಲ್ಲಿ ನಾಟಿಕೊಂಡಿತು.

ರಭಸದಿಂದ ನನಗೆ ಹೊಡೆಯಬೇಕೆಂದಿದ್ದ ಕಬ್ಬಿಣದ ರಾಡಿನ ಏಟು ಗಾಬರಿಯಿಂದ ಇದೆಲ್ಲಾ ನೋಡುತ್ತಿದ್ದ ಅವನ ಹೆಂಡತಿಯ ತಲೆಬುರುಡೆಗೆ ಬಿದ್ದು ಚಿಲ್ಲನೆ ರಕ್ತ ಕೋಡಿ ಹರಿಯಿತು.

ಬಾಕು ಎದೆಗೆ ನಾಟಿದ್ದರಿಂದ ಪ್ರಮೋದ ಒದ್ದಾಡಿ ಪ್ರಾಣಬಿಟ್ಟ. ಅವನ ಹೆಂಡತಿ ಪ್ರಾಣಸಂಕಟದಿಂದ ಒದ್ದಾಡುತ್ತಿದ್ದಳು. ಅವಳು ಅಂಥಾ ಸಂಕಟದಲ್ಲಿಯೂ ಮೆಲ್ಲನೆ ಸರಿದು ಬಂದು ನನ್ನ ಕಾಲನ್ನು ಭದ್ರವಾಗಿ ಹಿಡಿದುಕೊಂಡಳು. ಬಾಯಿ ಬಟ್ಟೆ ತೆಗೆಯುವಂತೆ ಸನ್ನೆ ಮಾಡಿದಳು.

ನಾನು ಅವಳ ಬಾಯಿಗೆ ತುರುಕಿದ್ದ ಬಟ್ಟೆಯನ್ನು ತೆಗೆದೆ. ಅವಳು ನನ್ನನ್ನು ಅಣ್ಣಾ ಎಂದು ಕರೆದಳು.

ಆಹಾ !...ಇದೆಂತಹ ಕರುಳು ಕತ್ತರಿಸುವ ಕರೆ ? ಅಣ್ಣಾ ಅಯ್ಯೋ ಈ ಕೊಲೆಗಡುಕ ಅಣ್ಣನೇ ? ಎಂದು ಒಂದು ನಿಮಿಷ ತಲ್ಲಣಿಸಿದೆ. ನಂತರ ಅವಳು ತೊಟ್ಟಿಲಲ್ಲಿ ಮಲಗಿದ್ದ ಮಗುವಿನ ಕಡೆ ಬೆಟ್ಟುಮಾಡಿ ತೋರಿಸಿದಳು. ಎತ್ತಿಕೊಳ್ಳುವಂತೆ ಬೇಡಿದಳು.

ನಾನು ಮಗುವನ್ನು ಕೈಗೆತ್ತಿಕೊಂಡೆ. ಅಬ್ಬ ಅದೆಂತಹ ಚನ್ನದ ಪುತ್ಥಳಿ ? ದಷ್ಟ ಪುಷ್ಟವಾದ ಮುದ್ದು ಮಗು,

ನಾನು ಮುಖಕ್ಕೆ ಕರಿಯ ಮುಖವಾಡವನ್ನು ಹಾಕಿದ್ದೆ. ಅಂತಹ ಭಯಂಕರ ಮುಖವನ್ನು ನೋಡಿಯೂ ಮಗು ಭಯಪಟ್ಟು ಅಳದೆ ತನ್ನ ಹವಳ ತುಟಿಯ ಬಾಯನ್ನು ತೆರೆದು ಪಕ್ಕನೆ ನಕ್ಕಿತು.

ನಂತರ ಅವಳು ಕ್ಷೀಣ ಧ್ವನಿಯಲ್ಲಿ ಅಣ್ಣಾ, ಮಗುವನ್ನು ಕೊಲ್ಲ ಬೇಡ. ನಿನ್ನ ಮಗುವೆಂದು ಸಾಕು. ಎಂದು ನಡುಗುವ ಕೈಯಿಂದ ಮಗು ವಿನ ಕೈಯನ್ನು ನನ್ನ ಕೈಲಿಟ್ಟು ಪ್ರಾಣ ಬಿಟ್ಟಳು.

ಕಾಳೀ ! ನಾನು ಎಷ್ಟೋ ಕೊಲೆಗಳನ್ನು ಮಾಡಿದ್ದೆ. ಆದರೆ ಏಕೋ ಆವತ್ತಿನ ಆ ದೃಶ್ಯ ನನ್ನ ಮನಸ್ಸನ್ನು ಕಲಕಿಬಿಟ್ಟಿತು.

ಆ ಹೆಣ್ಣು ನನ್ನನ್ನು ಅಣ್ಣಾ ಎಂದು ಕರೆದದ್ದು ಇಂದಿಗೂ ಕಿವಿ ಯಲ್ಲಿ ಮೊಳಗುತ್ತಿದೆ. ನನ್ನ ಜೊತೆಯವರು ಹೊರಗಡೆಯೇ ಕಾವಲಿದ್ದರು. ಅಲ್ಪ ಸ್ವಲ್ಪ ದೋಚಿದ ಹಣ ಒಡವೆಗಳನ್ನು ಅವರ ಕೈಲಿ ಕೊಟ್ಟು ನೀವು ಹೋಗಿ ಎಂದು ಹೇಳಿದೆ.

ನಾನು ಮಗುವನ್ನು ಮಾತ್ರ ಜೋಪಾನವಾಗಿ ಎತ್ತಿಕೊಂಡು ನಮ್ಮ ಊರೊಳಗಿನ ಮನೆಯೊಳಕ್ಕೆ ಹೊರಟುಹೋದೆ. ಆಗೆಲ್ಲಾ ನಾವು ಕುದುರೆ ಗಳನ್ನೇ ಉಪಯೋಗಿಸುತ್ತಿದ್ದೆವು. ಕುದುರೆಯನ್ನು ಊರಿಂದ ದೂರ ನಿಲ್ಲಿಸಿ ಕೊಳ್ಳುತ್ತಿದ್ದೆವು. ಈಗಂತೂ ಕಾರುಗಳಿವೆ.

ಆ ಮನೆಯಲ್ಲಿ ಎಲ್ಲಾ ಸೌಕರ್ಯಗಳೂ ಇದ್ದುವು, ಮಗುವಿಗೆ ಹಾಲು ತಯಾರಿಸಿ ಕುಡಿಸಿದೆ. ಮೂರು ತಿಂಗಳ ಮಗು, ಹೊಟ್ಟೆ ತುಂಬಿದ ಕೂಡಲೇ ಹಾಯಾಗಿ ಮಲಗಿತು,

ಚಂದ್ರಬಿಂಬದ ಮುಖದಂತಿರುವ ಆ ಮಗುವನ್ನು ನೋಡುತ್ತಾ ಇದ್ದಂತೆ ಅದರಮೇಲೆ ನನಗೆ ಏನೋ ಒಂದು ವಿಧವಾದ ಪ್ರೇಮ ಉಂಟಾಯಿತು. ಅದರ ತಾಯಿ ನನ್ನನ್ನು ಅಣ್ಣಾ! ಎಂದು ಕರೆದದ್ದು, ಆ ಕೊಲೆ, ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಮಾಡಿತು.

ಅಂದಿನಿಂದ ನಾನು ನಿರ್ಧರಿಸಿದೆ–ಛೆ.......ಇನ್ನು ದರೋಡೆಮಾಡಿ ದರೂ ಕೊಲೆ ಮಾಡಬಾರದೆಂದು.

ಈ ಮಗುವಿಗೆ ಒಬ್ಬ ತಾಯಿಯನ್ನು ತಲಾಷ್ ಮಾಡಲು ಬೆಳಗ್ಗೆ ಎದ್ದ ಕೂಡಲೇ ಉಡುಪು ಬದಲಾಯಿಸಿಕೊಂಡು ಹೊರಟೆ.

ಸುಮಾರು ಸುತ್ತಾಡಿದೆ, ನಮ್ಮ ದಗಾಕೋರರ ರಹಸ್ಯಕ್ಕೆ ಹೊಂದಿಕೊಂಡು ಯಾವ ಹೆಣ್ಣು ಬಂದು ತಾಯಿಯಾಗಬಲ್ಲಳು? ಹಾಗೆಯೇ ಸುತ್ತಾಡಿಕೊಂಡು ಅಲ್ಲಿಯೇ ಹತ್ತಿರ ಸಿಕ್ಕಿದ ಒಂದು ಆಸ್ಪತ್ರೆಯೊಳಕ್ಕೆ ನುಗ್ಗಿದೆ.

ಅದು ಸುಮಾರಾಗಿ ದೊಡ್ಡದಾದ ಹೆರಿಗೆ ಆಸ್ಪತ್ರೆ. ಇಲ್ಲಿ ಒಂದು ಛಾನ್ಸ್ ನೋಡೋಣ ಎನ್ನಿಸಿತು. ನಾನು ಬಹಳ ದೊಡ್ಡ ಮನುಷ್ಯನಿರಬಹುದೆಂದು ಅಲ್ಲಿಯ ವಾರ್ಡ್ ನರ್ಸ್, ಆಯಾ ಎಲ್ಲರೂ ಸರಿದು ನನಗೆ ಒಳಗೆ ಹೋಗಲು ಅವಕಾಶ ಕೊಟ್ಟರು.

ನಾನು ಒಳಗೆ ಹೋದೆ ಅದೇ ವಾರ್ಡಿನ 6 ನೇ ನಂ. ಬೆಡ್‌ನ ಬಾಣಂತಿಯನ್ನು ಒಬ್ಬ ನರ್ಸ್ ಗದರುತ್ತಿದ್ದಳು.

"ನೋಡು ಇವತ್ತು ನೀನು ಮನೆಗೆ ಹೋಗಲೇಬೇಕು, ನಿನ್ನ ಮಗುವೂ ಸತ್ತು ಹೋಯಿತು, ನೀನು ಆರೋಗ್ಯವಾಗಿದ್ದೀಯಾ. ಬೇರೆ ಹೆರಿಗೆಯಾದವರಿಗೆ ಬೆಡ್ ಬೇಕು, ನೀನು ಮನೆಗೆ ಹೋಗುವಂತೆ ಡಾಕ್ಟರಮ್ಮ ಹೇಳಿ ಹೋಗಿದ್ದಾರೆ" ಎಂದು ಹೇಳುತ್ತಿದ್ದಳು.

ಆದರೆ ಆ ಬಾಣಂತಿ-ನಿಮ್ಮ ದಮ್ಮಯ್ಯ....ಅಮ್ಮ- ನನಗೆ ಯಾರೂ ದಿಕ್ಕಿಲ್ಲ ಅನಾಥೆ. ನನಗೆ ಹತ್ತುದಿನ ಕಳೆಯುವವರೆಗೆ ಅವಕಾಶಕೊಡಿ. ಇಲ್ಲಿ ಹೊಟ್ಟೆಗೆ ಅಷ್ಟು ಊಟ ಸಿಕ್ಕುತ್ತಿದೆ. ನಾನು ಆಚೆ ಹೋದರೆ ಭಿಕ್ಷೆ ಬೇಡಬೇಕು. ಇನ್ನೊಂದು ನಾಲ್ಕುದಿನ ಇರುವುದಕ್ಕೆ ಅವಕಾಶ ಕೊಡಿ, ನಿಮ್ಮ ಕಾಲಿಗೆ ಬೀಳ್ತೀನಿ,, ಎಂದು ಅಂಗಲಾಚುತ್ತಿದ್ದಳು.

ಆ ನರ್ಸ್, ಸಾಧ್ಯವಿಲ್ಲ, ಎಂದು ಗದರುತ್ತಿದ್ದಳು. ಈ ದೃಶ್ಯವನ್ನು ನೋಡುತ್ತಾ ಅಲ್ಲಿಯೇ ನಿಂತುಕೊಂಡೆ-ನನ್ನನ್ನು ನೋಡಿದ ಕೂಡಲೇ ಆ ನರ್ಸ್ ಭಯ, ಭಕ್ತಿಯಿಂದ ಸರಿದು ಈ ಕಂಗಾಲಿಗಳೇ ಹೀಗೆ ಸಾರ್, ದಿಕ್ಕು ದಿವಾಣ ಇಲ್ಲದೇ ಇಲ್ಲಿ ಬಂದು ನಮ್ಮ ಪ್ರಾಣ ತಿಂತಾರೆ ಅಂದಳು.

ನಾನು ನೇರ ಬಾಣಂತಿಯನ್ನೇ ಕೇಳಿದೆ, ಏನಮ್ಮಾ! ನಿನಗೆ ಯಾರೂ ಸಂಬಂಧೀಕರಿಲ್ಲವೇ? ನಿನ್ನ ಗಂಡ ಎಲ್ಲಿ? ಎಂದು ಕೇಳಿದೆ,

ಅವಳು ತಲೆ ತಗ್ಗಿಸಿ ಕಣ್ಣೀರಿಡುತ್ತಾ; ಸ್ವಾಮಿ-ನಾನು ಭಿಕ್ಷೆಬೇಡಿ ಕೊಂಡು ಯಾವುದೋ ಒಂದು ಛತ್ರ ಚಾವಡೀಲಿ ಮಲಗುತ್ತಿದ್ದೆ. ಯಾವನೋ ಪಾಪಿ ರಾತ್ರಿ ಕತ್ತಲೆಯಲ್ಲಿ ನನ್ನ ಶೀಲ ಕೆಡಿಸಿ ಪರಾರಿಯಾದ. ಆ ಪಾಪಿಯ ಪಿಂಡವೇ ಬೆಳೆದು ಸತ್ತಿತು. ಮತ್ತೆ ನನಗೆ ಯಾರೂ ದಿಕ್ಕಿಲ್ಲ ಎಂದು ಅತ್ತಳು.

ನನಗೆ ಬೇಕಾದ ಮಿಕ-ಸಿಕ್ಕಿದಂತಾಯಿತು. ನಾನು ಅವಳನ್ನು ಕೇಳಿದೆ. "ನೋಡು ನಮ್ಮ ಮನೆಗೆ ಒಬ್ಬಳು ಕೆಲಸದವಳು ಬೇಕಾಗಿದ್ದಾಳೆ. ನೀನು ಈಗೇನೂ 1 ತಿಂಗಳು ಕೆಲಸ ಮಾಡಬೇಡ. ಆಮೇಲೆ ಮಾಡಬಹುದು. ನಮ್ಮ ಮನೆಗೆ ಬರುತ್ತೀಯಾ? ಎಂದು ಕೇಳಿದೆ.

ಅವಳು ಸಂತೋಷದಿಂದ ಒಪ್ಪಿದಳು, "ನರ್ಸ್ ನಮ್ಮ ರಿಜಿಸ್ಟರ್‌ನಲ್ಲಿ ನಿಮ್ಮ ಪೂರ್ತಿ ಅಡ್ರೆಸ್ ಬರೆದು ಕರೆದುಕೊಂಡು ಹೋಗಿ" ಎಂದು ನನಗೆ ಹೇಳಿದಳು.

ನಾನು ಯಾವುದೋ ಊರಿನ ಸುಳ್ಳು ಅಡ್ರೆಸ್ ಹೆಸರು ಬರೆದು ಅವಳನ್ನು ಜೊತೆಯಲ್ಲಿ ಕರೆದುಕೊಂಡು ಆಸ್ಪತ್ರೆಯಿಂದ ಹೊರಗೆ ಬಂದೆ.

ಅಲ್ಲಿದ್ದ ಒಂದು ಜಟಕಾ ಗೊತ್ತುಮಾಡಿ ಊರಿಂದ ಹೊರಕ್ಕೆ ಬಂದಕೂಡಲೇ ಅವಳನ್ನು ಇಳಿಯುವಂತೆ ಹೇಳಿದೆ. ಜಟಕಾದವನಿಗೆ ದುಡ್ಡುಕೊಟ್ಟು ಕಳುಹಿಸಿಬಿಟ್ಟೆ.

ಸ್ವಲ್ಪದೂರ ಅವಳನ್ನೂ ನಡೆಸಿಕೊಂಡು ಬಂದು ಅಲ್ಲಿಯೇ ಕಟ್ಟಿದ್ದ ನಮ್ಮ ಕುದುರೆಯೇರಿ ಅವಳನ್ನು ಬೆನ್ನಿಗೆ ಕಟ್ಟಿಕೊಂಡು ಮನೆ ಬಂದು ಸೇರಿದ್ದಾಯಿತು.

ಮನೆಯಲ್ಲಿ ಯಾರೂ ಇಲ್ಲದ್ದು ನೋಡಿ ಅವಳು ಹೆದರಿದಳು ನೋಡು ನಿನ್ನನ್ನು ನಾನು ಏನೂ ಮಾಡೋಲ್ಲ. ನೀನು ಮಾತ್ರ ನನ್ನಿಂದ ತಪ್ಪಿಸಿಕೊಂಡು ಹೋಗುವ ಬುದ್ದಿವಂತಿಕೆ ಮಾಡಬೇಡ. ನಿನ್ನ ಹೆಸರೇನು? ಅಂದೆ.

ಅವಳು ಭಯದಿಂದ–ಪಾರ್ವತಿ ಅಂದಳು.

ಏಯ್ ಪಾರ್ವತೀ ! ಬಾ ಇಲ್ಲಿ. ನೋಡು ಆ ಹಾಸಿಗೆಯಲ್ಲಿ ಮಲಗಿರುವ ಮಗುವನ್ನು ಎತ್ತಿಕೋ ಅಂದೆ.

ಮಗು ಕಣ್ಣು ಬಿಟ್ಟು ಆಟ ಆಡುತ್ತಿತ್ತು. ಅವಳು ಭಯದಿಂದ ನಡುಗುವ ಕೈಗಳಿಂದ ಮಗುವನ್ನು ಎತ್ತಿಕೊಂಡಳು. ನಾನು ಗದರುವ ಧ್ವನಿಯಲ್ಲಿ–ಹುಂ.... ಮಗುವಿಗೆ ಹಾಲು ಕುಡಿಸು, ಎಂದೆ.

ಅವಳ ಮಗು ಸತ್ತು ಮೂರು ದಿನ ಆಗಿತ್ತು. ಎದೆ ಹಾಲು ಕಟ್ಟಿಕೊಂಡು ಬಾಧೆ ಪಡುತ್ತಿದ್ದಳು. ಒಂದು ಕಡೆ ಕುಳಿತು ಮಗುವಿಗೆ ಹಾಲು ಕುಡಿಸತೊಡಗಿದಳು. ಮಗುವಿಗೆ ಹೊಟ್ಟೆ ತುಂಬಿತು.

ಏಯ್, ಪಾರ್ವತಿ ! ನೋಡು ಇವತ್ತಿನಿಂದ ಈ ಮಗು ನಿನ್ನದು ಇದನ್ನು ಪ್ರೀತಿಯಿಂದ ಸಾಕಬೇಕು. ಅದಕ್ಕೆ ಸ್ವಲ್ಪ ತೊಂದರೆಯಾದರೂ ನಿನ್ನನ್ನು ಜೀವಸಹಿತ ಬಿಡುವುದಿಲ್ಲ. ನಿನಗೆ ಬೇಕಾದ್ದು ಊಟ–ತಿಂಡಿ ಬಟ್ಟೆ ಎಲ್ಲಾ ಸಮೃದ್ಧಿಯಾಗಿ ಕೊಡುತ್ತೇನೆ. ಆದರೆ ನೀನು ಈ ಮನೆ ಯಿಂದ ಆಚೆಗೆ ಹೋಗುವಂತಿಲ್ಲ. ನೀನು ಕೂಗಿಕೊಂಡರೂ ಯಾರೂ ಕೇಳುವವರಿಲ್ಲ ಜೋಕೆ.

ಮಗು ಜೋಪಾನ, ಎಂದು ಹೇಳಿ ಹೊರಗೆ ಬಂದು ಬಾಗಿಲನ್ನು ಭದ್ರಪಡಿಸಿ ಬೀಗ ಹಾಕಿ ಹೊರಟುಬಿಟ್ಟೆ.

ಪಾರ್ವತಿಗೆ ಬೇರೆ ದಾರಿಯೇ ಇಲ್ಲದ್ದರಿಂದ ಆ ಒಂಟಿ ಮನೆಯಲ್ಲಿ ವಾಸಮಾಡಿಕೊಂಡು ಮಗುವಿನ ಪಾಲನೆಯಲ್ಲಿ ಕಾಲ ಕಳೆಯುತ್ತಿದ್ದಳು. ದಿನಕ್ರಮೇಣ ಅವಳಿಗೆ ಮಗುವಿನ ಮೇಲೆ ಅಪಾರ ಮಮತೆ ಮೂಡಿತು.

ಮಗು ದಷ್ಟಪುಷ್ಟವಾಗಿ ಬೆಳೆಯಿತು. ನನಗೆ ಬಿಡುವು ಸಿಕ್ಕಿದಾಗ ಲೆಲ್ಲಾ, ಆ ಮನೆಗೆ ಹೋಗಿ ಮಗುವನ್ನು ನೋಡಿ ಎತ್ತಿ ಆಡಿಸಿ ಸಂತೋಷಪಡುತ್ತಿದ್ದೆ. ಪಾರ್ವತಿ ನಿಯತ್ತುವಂತೆ, ಆಶ್ರಯಕೊಟ್ಟ ನನ್ನ ಭಾಗದ ದೇವರು ನೀವು, ಎಂದು ನನ್ನಲ್ಲಿ ಭಯ ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದಳು.

ಅವಳಿಗೆ ಊಟ ತಿಂಡಿ ಬಟ್ಟೆ ಏನಕ್ಕೂ ನಾನು ಕೊರತೆ ಮಾಡಿರಲಿಲ್ಲ. ಕಾಳೀ ! ....ನನ್ನದೊಂದು ನಿಯತ್ತು, ಎಂದೂ ನಾನು ಯಾವ ಹೆಣ್ಣಿನ ಶೀಲವನ್ನೂ ಕೆಡಿಸಿದವನಲ್ಲ. ಹೆಣ್ಣಿನ ಪಾಶಕ್ಕೆ ಬಿದ್ದವನೂ ಅಲ್ಲ.

ಪಾರ್ವತಿಯ ನಡವಳಿಕೆಯಿಂದ ಅವಳಲ್ಲಿ ನನಗೆ ಗೌರವ ಭಾವ ವಿದ್ದಿತು. ಅವಳು ಸದರವಾಗಿ ನನ್ನನ್ನು ಎಂದೂ ಮಾತಾಡಿಸುತ್ತಿರಲಿಲ್ಲ. ಎಲ್ಲಿಂದ ಬರುತ್ತೀ ? ಏನು ಮಾಡುತ್ತೀ ? ಎಂದು ಒಂದು ಸಲವಾದರೂ ಕೇಳಿದವಳಲ್ಲ. ನಾನು ಹೋದಾಗ ಮಗುವನ್ನು ನನ್ನ ಕೈಲಿಕೊಟ್ಟು ನೋಡು ರಾಜಾ, ಅಪ್ಪಾ ಬಂದಿದಾರೆ, ಅಪ್ಪಾ ಅನ್ನು, ಎಂದು ಹೇಳಿ ಕೊಟ್ಟು ತಾನು ಒಂದು ಕಡೆ ಕೈಕಟ್ಟಿ, ನಾನು ಮಗುವನ್ನು ಪ್ರೀತಿ ಮಾಡುವುದನ್ನು ನೋಡುತ್ತಾ ನಿಂತಿರುತ್ತಿದ್ದಳು.

ಮಗುವು ಚೆನ್ನಾಗಿ ಬೆಳೆದು ವರ್ಷ ಆಗಿರಬಹುದು. ಅದರ ಹುಟ್ಟಿದ ಹಬ್ಬ ಎಂದಾಗುತ್ತೆ ? ಎಂದು ನನಗೇನು ಗೊತ್ತು ?

ಪುಟ್ಟ ಪುಟ್ಟ ಹೆಜ್ಜೆಯಿಡುತ್ತಾ ತೊದಲು ಮಾತಾಡುತ್ತಾ ಆ ಮನೆ ಅಷ್ಟರಲ್ಲೇ ಸೀಮಿತವಾಗಿ ಬೆಳೆಯಿತು, ಹೊರಗಿನ ಪ್ರಪಂಚದ ಪರಿಚಯವನ್ನೇ ಕಾಣದು.

ನಾನು ನನ್ನ ದರೋಡೆ, ಲೂಟಿ, ಸಂಪಾದನೆಯನ್ನು ಮುಂದುವರಿಸುತ್ತಲೇ ಇದ್ದೆ. ಒಂದು ಸಲ ಒಂದು ವಾರ ನನಗೆ ಮಗುವನ್ನೂ ಪಾರ್ವತಿಯನ್ನೂ ನೋಡಲು ಆಗಲೇ ಇಲ್ಲ.

ಒಂದು ವಾರದ ನಂತರ ಹೋದೆ. ಪಾರ್ವತಿಯು ಹಾಸಿಗೆಯಲ್ಲಿ ಮಲಗಿದ್ದಳು. ಮಗುವು ಅವಳ ಬಳಿ ಕುಳಿತು ಅಮ್ಮಾ ! ಏಳು ಊಟ ಮಾಡೋಣ, ಎನ್ನುತ್ತಿತ್ತು. ಪಾರ್ವತಿಯು ಏಳಲಾರದೆ ಮೆಲ್ಲಗೆ ಎದ್ದು ಕುಳಿತಳು. ನನ್ನನ್ನು ಕಂಡಕೂಡಲೇ ಅವಳಿಗೆ ದುಃಖ ಒತ್ತರಿಸಿಬಂತು.

ಅಳುತ್ತಾ : ದಣೀ....ಸದ್ಯ ಬಂದಿರಲ್ಲಾ ! ಮೊದಲು ಮಗುವನ್ನು ನೋಡಿ, ಅದಕ್ಕೆ ಊಟಕೊಡಿ. ಈವತ್ತು ನೀವು ಬರದಿದ್ದರೆ ಮಗುವಿನ ಗತಿಯೇನು ? ಎಂದು ಬಹಳ ಯೋಚಿಸುತ್ತಿದ್ದೆ.

ನಾನು ಗಾಬರಿಯಿಂದ ಏಕೆ ಪಾರ್ವತಿ ಏನಾಯಿತು ನಿನಗೆ ಎಂದೆ.

ಏನಾಯಿತೋ ಗೊತ್ತಿಲ್ಲ. ಒಂದುವಾರದಿಂದ ವಿಪರೀತ ಜ್ವರ.ಏಳು ವುದಕ್ಕೇ ಆಗುತ್ತಿಲ್ಲ. ಕಷ್ಟಪಟ್ಟು ಮಗುವಿಗೋಸ್ಕರ ಏನಾದರೂ ಸ್ವಲ್ಪ ಬೇಯಿಸಿ ಇಡುತ್ತಿದ್ದೆ. ಮಗು ತಾನೇ ತೆಗೆದು ತಿಂದು ಮಲಗುತ್ತಿತ್ತು. ಅಮ್ಮಾ....ಅಮ್ಮಾ....ಎಂದು ನನ್ನ ಹಾಸಿಗೆಯ ಬಳಿಯೇ ಕುಳಿತಿರುತ್ತಿತ್ತು ನನ್ನ ಕಂದ! ಎಷ್ಟು ನೊಂದಿತೋ! ಎಂದು ಹೇಳಿ ಕಣ್ಣಲ್ಲಿ ನೀರು ಹಾಕಿದಳು.

ಮಗುವಿನ ಮೇಲೆ ಪಾರ್ವತಿಗಿದ್ದ ಪ್ರೀತಿಯನ್ನು ನೋಡಿ ನನ್ನಂಥ ಕಠಿಣ ಹೃದಯದವನೂ ಕರಗಿ ಹೋದೆ.

ಮಗು ನನ್ನನ್ನು ತಬ್ಬಿ ಅಪ್ಪಾ; ನೀನು ಇನ್ನು ಎಲ್ಲಿಯೂ ಹೋಗ ಬೇಡ ಎಂದು ಒಂದೊಂದೇ ಮಾತು ಮುದ್ದಾಗಿ ಹೇಳಿತು.

ಒಳಗೆ ಅಡಿಗೆಮನೆ. ಮಗುವನ್ನು ಎತ್ತಿಕೊಂಡು ಒಳಗೆ ಹೋಗಿ ನೋಡಿದೆ. ಪಾರ್ವತಿ ಅನ್ನ ಮಾಡಿ ಮುಚ್ಚಿಟ್ಟಿದ್ದಳು. ತುಪ್ಪ ಹಾಕಿ ಕಲಸಿ ಮಗುವಿಗೆ ಕೊಟ್ಟೆ. ತುಂಬಾ ಹಸಿವಾಗಿತ್ತು. ಗಬಗಬನೆ ತಿಂದಿತು.

ಆಮೇಲೆ ಪಾರ್ವತಿಯ ಬಳಿ ಬಂದು ಅನ್ನ ಕಲಸಿ ಕೊಡಲೆ ಪಾರ್ವತಿ! ಎಂದು ಕೇಳಿದೆ. ಪಾರ್ವತಿ ಮಾತಾಡಲಿಲ್ಲ. ಜ್ಞಾನತಪ್ಪಿ ಬಿದ್ದಿ ದ್ದಳು.

ತಕ್ಷಣ ತಣ್ಣೀರು ತಂದು ಮುಖಕ್ಕೆ ಸವರಿ, ಬಾಯಿಗೆ ಸ್ವಲ್ಪವೇ ಹಾಕಿದೆ. ಕಣ್ಣು ತೆರೆದಳು. ಅವಳಿಗೆ ಉಸಿರಾಡುವುದೇ ಕಷ್ಟವಾಗಿತ್ತು.

ಪಾರ್ವತೀ ನಿನ್ನನ್ನು ಹೇಗಾದರೂ ಕರೆದುಕೊಂಡು ಹೋಗಿ ಊರೊಳ ಗಿನ ಆಸ್ಪತ್ರೆಯ ಡಾಕ್ಟರಿಗೆ ತೋರಿಸಿ ಔಷಧ ಕೊಡಿಸುತ್ತೇನೆ, ಮೆಲ್ಲಗೆ ಏಳು ತ್ತೀಯಾ? ಸ್ವಲ್ಪ ದೂರ ನನ್ನ ಬೆನ್ನ ಮೇಲೆ ಎತ್ತಿಕೊಂಡು ಹೋಗುತ್ತೇನೆ ಎಂದೆ.

ಪಾರ್ವತಿ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ನನ್ನತ್ತ ಕೈಮುಗಿದು ಬೇಡ ಬೇಡ ಎಂದು ಸನ್ನೆ ಮಾಡಿದಳು.

ಮಗು ಅಮ್ಮಾ-ಅಮ್ಮಾ; ಎಂದು ಅವಳ ಮೈಯ್ಯನ್ನೆಲ್ಲಾ ಮುಟ್ಟಿ ಮುಟ್ಟಿ ನವಂತು.

ಅಬ್ಬಾ ; ಇದು ಯಾವ ಜನ್ಮದ ಋಣಾನುಬಂಧ ? ಈ ತಾಯಿ ಮಗುವಿನ ಅನನ್ಯ ಪ್ರೇಮವು ನನ್ನ ಕಣ್ಣಲ್ಲಿ ನೀರು ತರಿಸಿತು.

ಮಗುವಿನ ಕೈಯ್ಯನ್ನು ಹಿಡಿದು ನನ್ನ ಕೈಯ್ಯಲ್ಲಿಟ್ಟು ಚೆನ್ನಾಗಿ ಸಾಕು ನನ್ನ ರಾಜನನ್ನ, ಎಂದು ತೊದಲಿದಳು. ನಾನು ಲೋಟದಲ್ಲಿದ್ದ ನೀರನ್ನು ಮಗುವಿನ ಕೈಯಿಂದ ಅವಳ ಬಾಯಿಗೆ ಹಾಕಿಸಿದೆ. ಎರಡು ಗುಟುಕು ಕುಡಿದು ತಲೆಯನ್ನು ಪಕ್ಕಕ್ಕೆ ವಾಲಿಸಿದಳು. ಪಾರ್ವತಿಯ ಪ್ರಾಣ ಪಕ್ಷಿ ಹಾರಿಹೋಯಿತು.

ಈಗ ನನಗೆ ದಿಕ್ಕೇ ತೋಚದಾಯಿತು. ಮಗುವಿನ ಹೆತ್ತತಾಯಿ, ಸಾಕುತಾಯಿ, ಇಬ್ಬರೂ ಪ್ರಾಣಬಿಡುವ ಸಮಯದಲ್ಲಿ ಮಗುವನ್ನು ನನ್ನ ಕೈಲಿಟ್ಟು ಚೆನ್ನಾಗಿ ಸಾಕು, ಎಂದು ಹೇಳಿ ಸತ್ತರು.

ಈಗ ಮಗುವನ್ನು ಹೇಗೆ ಸಾಕಲಿ ? ಪಾರ್ವತಿಯಂತಹ ನಿಯತ್ತು ಹೆಣ್ಣು ಅಪರೂಪ, ಮೊದಲು ಪಾರ್ವತಿಯ ದೇಹ ಸಂಸ್ಕಾರವಾಗಬೇಕು. ಅವಳು ಪುಣ್ಯವಂತೆ, ಎಂದು ನನ್ನ ಮನಸ್ಸು ತಲ್ಲಣಿಸಿತು.

ನಾನು ಹೇಳುತ್ತಿದ್ದುದನ್ನೆಲ್ಲಾ ತದೇಕವಾಗಿ ಕೇಳುತ್ತಿದ್ದ. ಕಾಳಿ ಅಪ್ಪಾ ; ನಿಜವಾಗಿಯೂ ಆ ಮಗು ಎಂಥಾ ಅದೃಷ್ಟಹೀನ ಅಪ್ಪಾ ! ಆ ಸಾಕು ತಾಯಿಯಾದರೂ ಕಡೆತನಕ ಇರಬಾರದೇ ? ಹುಂ, ಆಮೇಲೆ ಆ ಮಗುವನ್ನು ಹೇಗೆ ಸಾಕಿದೆ ಅಪ್ಪಾ ! ಎಂದ.

ಕಾಳೀ ಕತೆ ಇನ್ನೂ ಇದೆ ಕೇಳು. ಆ ಮನೆ ಸುತ್ತ ಒಂದು ಕೋಟೆ ಇದ್ದಂತೆ. ಎತ್ತರದ ಗೋಡೆ, ಬೇಕಾದಷ್ಟು ವಿಶಾಲ ಆವರಣ ಇತ್ತು. ಒಂದು ಕಡೆ ಹಾರೆಯಿಂದ ಗುಂಡಿ ತೆಗೆದೆ. ಪಾರ್ವತಿಗೆ ಹೂವನ್ನು ಹಾಕಿ ಕೈ ಮುಗಿದೆ. ಅವಳನ್ನು ಎತ್ತಿಕೊಂಡು ಹೋಗಿ ಅಂತಿಮ ಸಂಸ್ಕಾರ ಮಾಡಿ ಗುಂಡಿ ಮುಚ್ಚಿ ಬಂದೆ.

ಮಗು ನನ್ನ ಹಿಂದೆ–ಮುಂದೆ ಅಪ್ಪಾ ! ಅಪ್ಪಾ ! ಎಂದು ಓಡಾಡುತ್ತಿತ್ತು. ಕಾಳೀ ! ಆ ಮನೆ ಊರಿಂದ ಆಚೆ ಬಹುದೂರ ಒಂಟಿಮನೆ. ಅದು ಯಾವಕಾಲದ್ದೋ ಪಾಳೆಗಾರರ ಮನೆ ಇರಬೇಕು. ಬಹಳ ವಿಶಾಲ

ವಾದ ಮನೆ, ಅನೇಕ ಕೊಠಡಿಗಳು, ಬೆಲೆ ಬಾಳುವ ಪೀಠಗಳು ಸಂಸಾರಕ್ಕೆ ಬೇಕಾಗುವ ಸಕಲ ಸಾಮಗ್ರಿಗಳೂ ಅದರಲ್ಲಿದ್ದವು.

ಆದರೆ ಅಲ್ಲಿಗೆ ಮನುಷ್ಯರು ಯಾರೂ ಸುಳಿಯುತ್ತಿರಲಿಲ್ಲ, ಸುಮಾರು ಪಾಳುಬಿದ್ದ ಮನೆಯೆಂದೇ ಹೇಳಬೇಕು. ಅದು ದೆವ್ವದ ಮನೆಯೆಂದೂ ಅಲ್ಲಿಗೆ ಹೋದವರು ಯಾರೂ ಬದುಕುವುದಿಲ್ಲವೆಂದೂ ಜನರು ಮಾತಾಡಿ ಕೊಳ್ಳುತ್ತಿದ್ದರು.

ಒಂದು ಸಲ ನಾವು ದರೋಡೆ ಮಾಡಿ ಹಣವನ್ನು ದೋಚಿಕೊಂಡು ಬಂದಾಗ ಅಡ್ಡದಾರಿ ಹಿಡಿದು ಸಂದಿ ಗೊಂದಿ ಸುತ್ತಿ ಈ ಮನೆಯ ಬಳಿ ಬಂದೆವು.

ಕೋಟೆಯ ಒಳಗೆ ಹೋಗಿ ನೋಡಿದೆವು. ಮನೆಯ ಬಾಗಿಲು ವಿಶಾಲವಾಗಿ ತೆಗೆದಿದ್ದುದು ಆ ಕತ್ತಲಲ್ಲಿಯೂ ಕಾಣಿಸಿತು. ನಿಶ್ಶಬ್ದತೆ, ಇಲ್ಲಿಯೂ ಒಂದು ದರೋಡೆ ಮಾಡಬಹುದೆಂದು ಒಳನುಗ್ಗಿದೆವು. ನಾನು ಮತ್ತು ವಿಶ್ವಘೋರ ಇಬ್ಬರೇ ಬಂದಿದ್ದು. ಆ ವಿಶಾಲ ಭವನ ಅಂಧಕಾರ ಲೋಕವಾಗಿತ್ತು ಜನದ ಸುಳಿವೂ ಇರಲಿಲ್ಲ.

ಲೋ....ಘೋರ!....ನಾವು ರಾತ್ರಿ ಇಲ್ಲಿಯೇ ತಂಗಿರೋಣ, ಬೆಳಗ್ಗೆ ಈ ಮನೆಯನ್ನು ಶೋಧಿಸಿ ಹೋಗೋಣ,, ಎಂದೆ.

ಘೋರ ಒಪ್ಪಿದ ನಾನು ಅವನು ಸುಖವಾಗಿ ಸುಪ್ಪತ್ತಿಗೆ ಮೇಲೆ ನಿರ್ಭಯವಾಗಿ ಮಲಗಿದೆವು.

ಬೆಳಗ್ಗೆ ಎದ್ದು ನೋಡಿದಾಗ ಅದೊಂದು ನಿರ್ಜನ ವೈಭವೋಪೇತ ಸ್ವರ್ಗ, ಸುತ್ತಲೂ ಬಹುದೂರ ದಟ್ಟ ಕಾಡು, ನನಗೆ ಬಲು ಖುಷಿಯಾಯಿತು. ಘೋರಾ : ಲೇಯ್, ಇವತ್ತಿನಿಂದ ಇದು ನಮ್ಮ ಗುಪ್ತಸ್ಥಾನ, ನನಗೆ–ನಿನಗೆ ವಿನಃ ಮತ್ತೆ ಯಾರಿಗೂ ಈ ಜಾಗ ತಿಳಿದಿರಬಾರದು, ನಮ್ಮ ಗುಂಪಿಗೆ ಯಾರಿಗೂ ಹೇಳಬೇಡ ಎಂದೆ, ಘೋರ ತನ್ನ ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿದ ಆಗಲಿ ಎಂದು.

ಕಾಳೀ ಆವತ್ತಿನಿಂದ ಈ ಮನೆಯ ವೈಭೋಗವೆಲ್ಲಾ ನಮ್ಮದೇ. ಇದು ನಮ್ಮ ಬಹಳ ರಕ್ಷಣೆಯ ಜಾಗ,

ಕಾಳಿಗೆ ಬಹಳ ತವಕ.

ಅಪ್ಪಾ! ಏನೇನೋ ಹೇಳುತ್ತಿದ್ದೀ. ನನಗೆ ಆ ಮಗುವಿನ ವಿಷಯ ಬೇಗ ತಿಳಿಸು ಅಪ್ಪಾ! ಪಾರ್ವತಿ ಸತ್ತ ಮೇಲೆ ಆ ಮಗು ಏನಾಯಿತು? ಯಾರು ಅದನ್ನು ಸಾಕಿದರು ಹೇಳಪ್ಪಾ! ಎಂದು ಕೇಳಿದ.

ಅದೇ ನಿನಗೆ ಹೇಳುತ್ತಾ ಇದ್ದೀನಿ ಕಾಳೀ. ಆ ಮಗುವನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋದೆ. ಈಗ ನಮ್ಮ ವಿಂದ್ಯಾವಳೀ ಕಾಡಿನ ಮಧ್ಯೆ, ಬಂಡೆಯ ಗುಹೆಯಿದೆಯಲ್ಲಾ ಅದರ ಸುತ್ತಮುತ್ತ ಬಂಡೆಯ ಸಂದಿಗಳಲ್ಲಿ ತರಬೇತಿ ಹೊಂದಿದ ನಮ್ಮ ಜೊತೆಗಾರರು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿದ್ದರು.

ನಾನು ಸಹ ಅಂತಹ, ಬಂಡೆಯ ಸಂದಿಯಲ್ಲಿ ವಾಸವಾಗಿದ್ದೆ. ಅಲ್ಲಿ ವಾಸವಾಗಿದ್ದವರೆಲ್ಲರೂ ಕಾಡು ಬೇಡರು. ಆದರೂ ನಮ್ಮಿಂದ ತರಬೇತಿ ಪಡೆದವರು ಬೇಟೆಯಾಡುವುದು. ಬಿಲ್ಲುಬಾಣ, ಗುರಿ ಹೊಡೆಯುವುದು, ಕತ್ತಿ, ಕೋಲುವರಸೆ ಎಲ್ಲದರಲ್ಲಿಯೂ ಅವರು ಗಟ್ಟಿಗರು ಮತ್ತು ದರೋಡೆಕೋರರು.

ನಾವು ಒಂದು ಶಬ್ದದ ಸೂಚನೆ ಕೊಟ್ಟಕೂಡಲೇ ಎಲ್ಲಿದ್ದವರು ಅಲ್ಲಲ್ಲಿಂದ ಬಂದು ಒಂದುಕಡೆ ಸೇರುತ್ತಿದ್ದರು. ನಾನು ಮಗುವನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರೆಲ್ಲರನ್ನೂ ಸಭೆ ಕೂಡಿಸಿದೆ.

ಕಾಳೀ ನನ್ನ ಮಾತಿಗೆ ಅವರು ಯಾರೂ ದೂಸರಾ ಹೇಳುವವರಲ್ಲ, ನಾನು ಮಗುವಿಗೆ ಚೆನ್ನಾಗಿ ಅಲಂಕರಿಸಿ ತಲೆಗೆ ರೇಷ್ಮೆ ಜರಿಯ ಮಗುಟವನ್ನು ಶಿರಪಾಕು ಕಟ್ಟಿ ನನ್ನ ತೊಡೆಯಮೇಲೆ ಕೂರಿಸಿಕೊಂಡು ಒಂದು ಬಂಡೆಯಮೇಲೆ ಕುಳಿತೆ.

ಅವರೆಲ್ಲರನ್ನು ಕುರಿತು ನನ್ನ ಬಂಧುಗಳೇ! ಪ್ರಾಣ ಸ್ನೇಹಿತರೇ! ಇವನು ನನ್ನ ಮಗ, ಇವನ ಪಾಲನೆ ಪೋಷಣೆ ನಿಮಗೆಲ್ಲರಿಗೂ ಸೇರಿದ್ದು, ಇವನಿಗೆ ಎಲ್ಲಾ ವಿಧವಾದ ವೀರೋಚಿತ ಸಾಹಸ ವಿದ್ಯೆಗಳನ್ನು ನೀವು ಕಲಿಸಬೇಕು, ಇವನು ನಿಮ್ಮ ನಾಯಕನೆಂದು ತಿಳಿದು ಗೌರವ

ದಿಂದ ನಡೆದುಕೊಳ್ಳಬೇಕು, ನಾನೂ ಸಹ ಆಗಾಗ ಇವನಿಗೆ ಗುರಿ ಹೊಡೆಯುವುದು, ಕತ್ತಿ ವರಸೆ, ಕುದುರೆ ಸವಾರಿ, ಎಲ್ಲಾ ಹೇಳಿಕೊಡು ತ್ತೇನೆ. ಅವನಿಗೆ ಊಟ ತಿಂಡಿ ಯಾವುದರಲ್ಲಿಯೂ ಕೊರತೆಯಾಗಬಾರದು, ತಿಳಿಯಿತೇ ? ಎಂದು ಹೇಳಿದೆ. ಅವರಿಗೆ ಮಗುವನ್ನು ನೋಡಿ ಖುಷಿ ಯಾಯಿತು. ಎಲ್ಲರೂ ಒಟ್ಟಿಗೆ ಹರ್ಷೋದ್ಗಾರಮಾಡಿ, ಜೈ ಎಂದರು. ಅದರಂತೆ, ಅವರೆಲ್ಲಾ ಪ್ರಾಮಾಣಿಕರು. ಮಗು ಅವರ ರಕ್ಷಣೆ, ದಕ್ಷ ಕಂಪೇತಿಯಲ್ಲಿ ವೀರ ಬಾಲಕನಾಗಿ ಬೆಳೆದ.

ಅವನು ಯಾರು ಗೊತ್ತೇ ?........

ದೇವೀಪ್ರಸಾದ ಹರಿಯುವ ನೀರಿನ ಝುಳು–ಝುಳು ಶಬ್ದವನ್ನು ಆಲಿಸುತ್ತಾ ಮಂಡಿ, ಮೊಳಕಾಲ ಮೇಲೆ ತಲೆಯನ್ನಿಟ್ಟು ಸ್ವಲ್ಪ ಹೊತ್ತು ಸುಮ್ಮನೆ ಕುಳಿತು ಒಂದು ನಿಟ್ಟುಸಿರು ಬಿಟ್ಟ.

ಕಾಳಿ ಗಾಬರಿಯಿಂದ ಯಾಕಪ್ಪಾ ! ಆ ಮಗು ಸತ್ತುಹೋಯಿತೇ ? ಎಂದು ಕೇಳಿದ.

ಇಲ್ಲ ಕಾಳೀ, ಆ ಮಗುವನ್ನು ಸಾತ್ವಿಕನಾಗಿ ಬೆಳಸಿದ್ದರೆ ಚೆನ್ನಾಗಿತ್ತು. ಅವನನ್ನೂ ದರೋಡೆಕೋರನಾಗಿ ಮಾಡಿದೆ, ಅದೇ ನನ್ನ ಕೊರಗು.

ಹಾಗಾದರೆ ನೀನು ಬೆಳಸಿದ ದರೋಡೆಕೋರ ಅದು ಯಾರಪ್ಪಾ ? ಎಂದು ಕಾಳೀ ಕುತೂಹಲದಿಂದ ಅಪ್ಪನ ಮುಖವನ್ನೇ ನೋಡುತ್ತಿದ್ದ.

ದೇವೀಪ್ರಸಾದ ಕಾಳಿಯನ್ನು ಅಪ್ಪಿಕೊಂಡು ಬೇರೆಯಾರೂ ಅಲ್ಲ. ಕಾಳೀ, ಆ ಮಗು, ನೀನೇ....ಎಂದು ಹೇಳಿ ಕಾಳಿಯ ಪ್ರತಿಕ್ರಿಯೆ ಏನಾಗ ಬಹುದೆಂದು ನಿರೀಕ್ಷಿಸಿದ.

ಕಾಳೀಪ್ರಸಾದ ಸಖೇದಾಶ್ಚರ್ಯದಿಂದ ಹೌದಾ ! ಅಪ್ಪಾ ನನ್ನನ್ನು ಹೆತ್ತ ತಂದೆ–ತಾಯಿಯರನ್ನು ಕೊಲೆ ಮಾಡಿ, ನನ್ನನ್ನೂ ಕೊಲೆಗಾರ ನನ್ನಾಗಿ ಮಾಡಿದೆಯಾ ? ಪಾಪಿ ; ನಿನ್ನನ್ನು ಅಪ್ಪಾಎಂದು ಕರೆಯಲ್ಲು ಮನಸ್ಸು ಒಗ್ಗುತ್ತಿಲ್ಲ. ನೀನೇ ನನ್ನ ನಿಜವಾದ ತಂದೆ ಎಂದು ಭಾವಿ ಸಿದ್ದೆ, ಹಾಗೆಯೇ ತಿಳಿದಿದ್ದುದೇ ನೆಮ್ಮದಿಯಾಗಿತ್ತು.

ಒಳ್ಳೆಯ ಕುಟುಂಬದಲ್ಲಿ ಹುಟ್ಟಿಯೂ ನಾನು ಹೀಗೆ ದರೋಡೆಕೋರ ಕೊಲೆಗಾರನಾದೆನಲ್ಲಾ ; ವಿಧಿನಿಯಮ, ಎಂದು ಕಾಳೀಪ್ರಸಾದ ಗೋಳಾಡಿದ.

ನೋಡು ಕಾಳೀ ಮನುಷ್ಯನಿಗೆ ಹುಟ್ಟಿಗಿಂತ ಬೆಳೆದ ವಾತಾವರಣ ಅವನನ್ನು ರೂಪಿಸುತ್ತದೆ. ನಿನಗೆ ನಾನೇನೂ ದ್ರೋಹ ಮಾಡಿಲ್ಲ. ನನ್ನ ಸರ್ವಸ್ವವನ್ನೂ ನಿನಗೇ ಕೊಟ್ಟಿದ್ದೇನೆ. ನಿನಗಾಗಿ ಕೂಡಿಟ್ಟ ನಿಧಿಯನ್ನೇ ನಿನಗೆ ತೋರಿಸಿದ್ದೇನೆ. ನಿನ್ನನ್ನು ಪ್ರೀತಿಸಿದಷ್ಟು ಮತ್ತೆ ಯಾರನ್ನೂ ನಾನು ಪ್ರೀತಿಸಲಿಲ್ಲ. ಕಾಳೀ ನೀನು ನನ್ನನ್ನು ನಿಕೃಷ್ಟಮಾಡಿದರೆ ಖಂಡಿತಾ ನಾನು ಬದುಕಿರಲಾರೆ ಕಾಳೀ ನೀನೆಲ್ಲಿ ನನ್ನನ್ನು ದ್ವೇಷಿಸಿಬಿಡುತ್ತೀಯೋ ಎಂದು ಇದುವರೆಗೂ ನಿನ್ನ ಹುಟ್ಟಿನ ರಹಸ್ಯವನ್ನು ಬಚ್ಚಿಟ್ಟಿದ್ದೆ. ಇಂದೇಕೋ ನನಗೆ ಎಲ್ಲಾ ನಿನಗೆ ಹೇಳಿಬಿಡಬೇಕೆನ್ನಿಸಿತು ಕಾಳೀ....ಹೇಳಿದ್ದೇನೆ, ನಿನ್ನ ಇಷ್ಟ ಬಂದಂತೆ ಮಾಡು.

ಎಂದು ಹೇಳಿ ದೇವೀಪ್ರಸಾದ ತಾನು ಕುಳಿತಿದ್ದ ಬಂಡೆಯಿಂದ ಸ್ವಲ್ಪ ದೂರ ಹೋಗಿ ಸುಮ್ಮನೆ ಹರಿಯುವ ನೀರು ನೋಡುತ್ತಾ ಕುಳಿತುಬಿಟ್ಟ.

ಕಾಳಿಯೂ ಸ್ವಲ್ಪಹೊತ್ತು ಏನೂ ತೋಚದೆ ತಳಮಳಿಸಿದ. ಅವನಿಗೆ ತನ್ನ ಜನ್ಮವೃತ್ತಾಂತ ಇದ್ದಕ್ಕಿದ್ದಂತೆ ತಿಳಿದುದು, ಭೋರ್ಗರೆದು ಹರಿಯುತ್ತಿದ್ದ ನದಿಗೆ ಅಡ್ಡತಡೆ ಹಾಕಿದಂತಾಯಿತು.

ಅವನು ಜನ್ಮತಃ ಸಾತ್ವಿಕ, ಸುಸಂಸ್ಕೃತಿಯ ಛಾಯೆ ಅವನಲ್ಲಿತ್ತು. ಆದರೆ ಬೆಳೆಸಿದ ರೀತಿ, ಬೆಳೆದ ವಾತಾವರಣ ಕಠೋರತೆಯನ್ನು ತುಂಬುತ್ತಾ ಬಂತು. ಆದರೆ ಅವನ ಹುಟ್ಟುಗುಣ, ಸುಪ್ತವಾಗಿದ್ದ ಧಾರ್ಮಿಕ ಪ್ರಜ್ಞೆ ಅವನನ್ನು ಎಚ್ಚರಿಸಿ ಯೋಚಿಸುವಂತೆ ಮಾಡಿತ್ತು.

ತಾನು ಮಾಡಿದ ದರೋಡೆ, ಸುಲಿಗೆ, ಕೊಲೆ ಅನೇಕ ಸಂಸಾರವನ್ನು ಮುಳುಗಿಸಿದ್ದು, ನೊಂದವರ ಆಕ್ರಂದನ, ಇವನ್ನೆಲ್ಲಾ ನೆನೆಸಿಕೊಂಡು ಪಶ್ಚಾತ್ತಾಪದಲ್ಲಿ ಬೆಂದುಹೋದ ಕಾಳೀಪ್ರಸಾದ.

ಆದರೆ ತನ್ನ ಜೀವನ ಪಥ ಬಹುದೂರ ದರೋಡೆಕೋರನಾಗಿ ಮುಂದುವರಿದುಬಿಟ್ಟದೆ, ದೇವೀಪ್ರಸಾದ ತಾನೇ ತನಗೇನು ಅನ್ಯಾಯ ಮಾಡಿದ್ದಾನೆ. ಅನಾಥನಾದ ನನ್ನನ್ನು ತಂದು ಪ್ರೀತಿಯಿಂದಲೇ ಸಾಕಿದ, ಸಾಹಸ ವಿದ್ಯೆಯನ್ನು ಕಲಿಸಿದ, ಅವನು ಕಷ್ಟಪಟ್ಟುಗಳಿಸಿದ ಅಪಾರ

ನಿಧಿಗೆ ನನ್ನನ್ನೇ ಒಡೆಯನಾಗಿ ಮಾಡಿದ, ಅವನ ಪ್ರೀತಿಯನ್ನು ತೋರೆದರೆ ನನಗೆ ಮತ್ತೆ ಇನ್ಯಾರಿದ್ದಾರೆ ? ಎಂದು ಸ್ಥೂಲನಾಗಿ ಯೋಚಿಸಿದ ಕಾಳೀಪ್ರಸಾದ.

ಆ ಸಾಕು ತಂದೆಯ ವಾತ್ಸಲ್ಯಕ್ಕೆ ನಾನು ಮುಳ್ಳಾಗಬಾರದು, ಎಂದು ದೇವೀಪ್ರಸಾದ ಕುಳಿತಿದ್ದ ಬಂಡೆಯ ಬಳಿಗೆ ನಿಧಾನವಾಗಿ ಹೆಜ್ಜೆ ಹಾಕುತ್ತಾ ಹೋದ.

ದೇವೀಪ್ರಸಾದ ಎದ್ದು ನಿಂತು ಬಾ ಮಗನೇ ನಿನ್ನ ಮನಸ್ಸಿನ ತಳ–ಮಳ ನನಗೆ ಗೊತ್ತು. ಈ ಪಾಪಿಯನ್ನು ನೀನು ಕ್ಷಮಿಸಲಾರೆ. ಬಾ ಇದೋ ಈ ಕಠಾರಿಯಿಂದ ನನ್ನ ಎದೆಗೆ ಇರಿದು ನನ್ನನ್ನು ತೀರಿಸಿಬಿಡು, ಎಂದು ತನ್ನ ಸೊಂಟದಲ್ಲಿ ಸಿಕ್ಕಿಸಿದ್ದ ಕಠಾರಿಯನ್ನು ತೆಗೆದು ಮಗನಿಗೆ ನೀಡಲು ಮುಂದೆ ಬಂದ.

ಕಾಳೀ....ಅಪ್ಪಾ ! ಎಂದು ಆರ್ತನಾಗಿ ಕೂಗುತ್ತಾ, ಅಪ್ಪನ ಕೈಯಿಂದ ಕಠಾರಿಯನ್ನು ಕಿತ್ತು ಕೆಳಗೆ ಎಸೆದು, ಎರಡು ಕೈಗಳಿಂದಲೂ ಅವನನ್ನು ಬಾಚಿ ತಬ್ಬಿದ.

ದೇವೀಪ್ರಸಾದನು ಮಗನನ್ನು ಅಪ್ಪಿ ಆನಂದಬಾಷ್ಪ ಸುರಿಸಿದ.

ದರೋಡೆಕೋರ, ಕೊಲೆಗಡುಕರಲ್ಲಿಯೂ ಈ ರೀತಿಯ ಅಪೂರ್ವ ವಾತ್ಸಲ್ಯ ಸಮಾಗಮವನ್ನು ನೋಡಲು ಅಲ್ಲಿ ಯಾರೂ ಇಲ್ಲದಿದ್ದರೂ ಪ್ರಕೃತಿಮಾತೆ, ಶೀತಲ ನದೀ ಪ್ರವಾಹ, ಹಚ್ಚ–ಹಸುರಿನ ಗಿಡ–ಮರಗಳು ಬಣ್ಣ–ಬಣ್ಣದ ಹೂಬಳ್ಳಿಗಳು ವಿಶಾಲ ಗಗನ, ಭೂಮಂಡಲ, ಎಲ್ಲವೂ ಸಾಕ್ಷಿಯಾಗಿ, ಕೊಲೆಗಡುಕರಲ್ಲಿಯೂ, ಹೃದಯ, ಪ್ರೀತಿ, ವಾತ್ಸಲ್ಯ, ಎಂಬುದು ಇದೆ ಎಂದು ಮೂಕ ಸಾಕ್ಷಿಯಾಗಿ ನೋಡಿ ಸಂತಸಪಟ್ಟುವೋ, ಎಂಬಂತಿತ್ತು ನಿಶ್ಶಬ್ದ ವಾತಾವರಣ.

ಕಾಳಿಯು ತಂದೆಯ ಕಾಲು ಮುಟ್ಟಿ ಕಣ್ಣಿಗೆ ಒತ್ತಿಕೊಂಡು, ಅಪ್ಪಾ ! ನಿನ್ನ ಪ್ರೀತಿಯ ಋಣವನ್ನು ನಾನು ತೀರಿಸಲಾರೆ, ಅಪ್ಪಾ! ಆದರೆ ನನ್ನದೊಂದು ಬೇಡಿಕೆ, ಅದನ್ನು ನಡೆಸಿಕೊಡುವೆಯಾ ? ಅಂದ.

ಹೇಳು ಮಗನೇ ನಿನಗೋಸ್ಕರ ನಾನು ಏನು ಮಾಡಲೂ ಸಿದ್ಧ ಅಂದ.

ಅಪ್ಪಾ ! ನಾನು ಹುಟ್ಟಿದ ಊರು, ಮತ್ತು ಮನೆಯನ್ನು ಒಂದು ಬಾರಿ ತೋರಿಸು, ನನ್ನ ಅಜ್ಜ-ಅಜ್ಜಿಯನ್ನಾದರೂ ಒಂದು ಬಾರಿ ನೋಡುತ್ತೀನೆ ಅಪ್ಪಾ ! ಅಂದ.

ಕಾಳೀ....ರಕ್ತವಾಂಛಲ್ಯ ಅನ್ನುವುದು ಇದೇ ನೋಡು. ನಿನಗೆ ಈಗ 25 ವರ್ಷ ಪ್ರಾಯ, ಅಂದರೆ ಆ ದರೋಡೆ ನಡೆದು ನಿನ್ನ ಅಪ್ಪ-ಅಮ್ಮ ಸತ್ತು ಇಪ್ಪತ್ತೈದು ವರ್ಷಗಳೇ ಆಯಿತು. ನಿನ್ನ ಅಜ್ಜ ಅಜ್ಜಿ ಆಗಲೇ ಮುದುಕರಾಗಿದ್ದರು. ಮಗ-ಸೊಸೆ ಮೊಮ್ಮಗ, ಎಲ್ಲರನ್ನೂ ಕಳೆದುಕೊಂಡ ದುಃಖದಲ್ಲಿ ಕೊರಗಿ ಅವರೂ ಒಂದೆರಡು ವರ್ಷದೊಳಗಾಗಿ ಸತ್ತು ಹೋದರು, ನಾನು ವಿಚಾರಿಸುತ್ತಿದ್ದೆ. ಆ ಮನೆಗೆ ಯಾರೂ ವಾಸಕ್ಕೆ ಬರದೇ ಹಾಗೆಯೇ ಪಾಳುಬಿದ್ದು ಹೋಯಿತಂತೆ, ಎಂದು ದೇವೀಪ್ರಸಾದ ವ್ಯಾಕುಲದಿಂದ ಹೇಳಿ, ಕಾಳೀ ಈಗ ನೀನು ಆತ್ತಕಡೆ ಯೋಚನೆಮಾಡಿ ಪ್ರಯೋಜನವಿಲ್ಲ, ನಿನ್ನ ಸಮಾಧಾನ ಸಂತೋಷವಿದ್ದರೀತಿ ನೀನು ಜೀವನ ನಡೆಸು, ನಾನು ನಿನಗೆ ಹೀಗೆಯೇ ಬದುಕು ಎಂದು ಹೇಳುವುದಿಲ್ಲ ಎಂದ,

ಮತ್ತೆ ಕಾಳೀಪ್ರಸಾದನ ಮನಸ್ಸು ವ್ಯಥಿತವಾಯಿತು, ಅಪ್ಪಾ ! ಹಾಗಾದರೆ ನಮ್ಮ ಹೆತ್ತವರ ಮನೆ ಪೂರಾ ನಿರ್ಮೂಲವಾಗಿ ಹೇಳ ಹೆಸರಿಲ್ಲದಂತಾಯಿತೇ ? ಎಂದು ದುಃಖಿಸಿದ,

ದೇವೀಪ್ರಸಾದನಿಗೆ ಆಶ್ಚರ್ಯವಾಯಿತು, ಕಾಳೀ ಮನಸ್ಸು ಹೆತ್ತವರ ಬಗೆಗೆ ಇಷ್ಟರಮಟ್ಟಿಗೆ ಆಕರ್ಷಿಸಬಹುದೆಂದು ನೆನೆಸಿರಲಿಲ್ಲ. ಎಷ್ಟೇ ಮಮತೆ ಯಿಂದ ಸಾಕಿದರೂ ಹೆತ್ತವರ ಪಾಶ ಹೇಗೆ ಸೆಳೆಯುತ್ತದೆ. ಕಾಳಿ ಒಂದು ಬಾರಿಯಾದರೂ ತಂದೆ ತಾಯಿಯನ್ನು ನೋಡಿಲ್ಲ ಆದರೆ ಅವನಲ್ಲಿ ಪ್ರವಹಿಸುವ ರಕ್ತ ಅವರ ಗುಣಗಳನ್ನು ಹೊತ್ತು ಬಂದಿರುತ್ತದೆ, ಎಂದು ಯೋಚಿಸಿದ.

ಕಾಳಿಯ ತಲೆಯನ್ನು ಪ್ರೀತಿಯಿಂದ ನೇವರಿಸುತ್ತಾ ನೋಡು ಕಾಳಿ ! ನೀನು ಇಷ್ಟು ವ್ಯಥೆ ಪಡುವ ಕಾರಣವಿಲ್ಲ ಅವರ ವಂಶದ ಕುಡಿಯಾಗಿ ನೀನೇ ಉಳಿದಿದ್ದೀ....ನೀನು ಸಂಸಾರಿಯಾಗಿ ಮಕ್ಕಳನ್ನು ಪಡೆದು ವಂಶವನ್ನು ಬೆಳೆಸು ಎಂದ.

ಅಪ್ಪಾ ! ಈಗ ನನಗೆ ಒಂದೂ ತೋಚುತ್ತಿಲ್ಲ ನೀನು ಬೆಳೆಸಿದ ರೀತಿ, ನಾನು ಭಯ,, ಎಂಬುದನ್ನೇ ಕಾಣೆ, ಎಲ್ಲಿ-ಅಂದರೆ ಅಲ್ಲಿ ನುಗ್ಗಿ ಲೂಟಿಮಾಡಿ ಕೊಳ್ಳೆಹೊಡೆದು ಒಡವೆ ಹಣ ದೋಚಿಕೊಂಡು ಬರುತ್ತಿದ್ದೆ, ಅಡ್ಡಿ ಬಂದವರನ್ನು ನಿರ್ದಾಕ್ಷಿಣ್ಯವಾಗಿ ಕೊಲೆ ಮಾಡುತ್ತಿದ್ದೆ.

ಅಪ್ಪಾ; ನನ್ನ ಹೆತ್ತವರು ನಮ್ಮಂತಹ ದರೋಡೆ ಕೋರರಿಂದ ಅಸು ನೀಗಿದರು, ಎಂದು ತಿಳಿದ ಮೇಲೆ ನಮ್ಮಿಂದ ನೊಂದ ಕುಟುಂಬಗಳು ಎಷ್ಟು ಅನಾಥವಾಗಿವೆಯೋ ? ಈ ರಾಶಿ ಹಣದಿಂದ ನಾವು ನೆಮ್ಮದಿ ಯಾಗಿದ್ದೇವೆಯೇನಪ್ಪಾ ! ಗಳಿಗೆ ಗಳಿಗೆಗೂ ಜೀವಭಯ. ಈ ಸಂಪಾದನೆ ಯಿಂದ ಪಾಪವೋ ? ಪುಣ್ಯವೋ ? ಆ ವಿಚಾರ ನನಗೆ ಗೊತ್ತಿಲ್ಲ ಆದರೆ ನನ್ನ ಮನಸ್ಸು ಮಾತ್ರ ಈ ಘೋರ ಕೃತ್ಯಕ್ಕೆ ಒಪ್ಪುತ್ತಿಲ್ಲ. ಅಪ್ಪಾ ! ಒಪ್ಪುತ್ತಿಲ್ಲ.

ಕೆಲವೇ ಕ್ಷಣದಲ್ಲಿ ಕಾಳಿಯ ಮನಸ್ಸು ಪರಿವರ್ತನೆಗೊಂಡಿದ್ದು ದೇವೀ ಪ್ರಸಾದನಿಗೆ ಅತೀವ ಆಶ್ಚರ್ಯವಾಯಿತು; ತನ್ನ ಜೊತೆಯಲ್ಲಿ ಮಗನೊಬ್ಬ ನನ್ನೇ ಕರೆದುಕೊಂಡು ಬಂದು ವಿಷಯವನ್ನು ತಿಳಿಸುವ ಮುಂಚೆಯೇ ಏನೋ ಬಂದು ತೀರ್ಮಾನಕ್ಕೆ ಬಂದೇ ಮಗನಿಗೆ ಎಲ್ಲವನ್ನೂ ಹೇಳಿದ.

ಈಗ ಮಗನ ಮನಸ್ಸು ಹೇಯ ಕೃತ್ಯಗಳಿಂದ ದೂರವಿರಲು ಬಯಸುತ್ತದೆ ಎಂದು ತಿಳಿದ ಮೇಲೆ ಇನ್ನು ಅವನಿಗೆ ಬಲವಂತವಾಗಿ ದರೋಡೆ ಮಾಡು ಎಂದು ಹೇಳುವುದರಿಂದ ಪ್ರಯೋಜನವಿಲ್ಲ ತನ್ನ ಕಡೆಯ ತೀರ್ಮಾನವನ್ನು ಹೇಳಿ ತನ್ನ ಕತೆಯನ್ನು ಮುಗಿಸುವುದೊಂದೇ ದಾರಿ.

ಎಂದು ದೇವೀಪ್ರಸಾದ, ಮಗೂ, ! ಕಾಳೀ-ನಿನ್ನನ್ನು ನಾನು ಎಷ್ಟು ಪ್ರೀತಿಯಿಂದ ಬೆಳೆಸಿದೆನೋ, ಅಷ್ಟೇ ನಿನಗೆ ಒಳ್ಳೆಯದನ್ನೂ ಹಾರೈಸುತ್ತೇನೆ, ನಾನು ನಿನಗೆ ತೋರಿಸಿರುವ ನಿಧಿಯು ಯಾರಿಗೂ ಗೊತ್ತಿಲ್ಲ. ನೀನು ಅದನ್ನು ತೆಗೆದುಕೊಂಡು ನಿನಗೆ ಇಷ್ಟಬಂದ ರೀತಿಯಲ್ಲಿ ಸುಖವಾಗಿ ಬದುಕು. ನನ್ನನ್ನು ಪಾಪಿಯೆಂದು ದೂಷಿಸಬೇಡ. ನನ್ನ ಪಾಪಕ್ಕೆ ನಾನೇ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ ಕಾಳೀ....ಇದೋ ನೋಡು....

ಎಂದು ಹೇಳುತ್ತಿದ್ದಂತೆಯೇ ಎತ್ತರದ ಬಂಡೆಯ ಮೇಲೆ ಕುಳಿತಿದ್ದ ದೇವೀಪ್ರಸಾದ ಅಲ್ಲಿಂದ ಒಂದೇ ಹಾರಿಗೆ ಆಳವಾದ ಪ್ರಪಾತಕ್ಕೆ ಬಿದ್ದ, ಅವನು ಬಿದ್ದ ಏಟಿಗೆ ಆಳದಲ್ಲಿದ್ದ ಬಂಡೆಗೆ ತಲೆ ಬುರುಡೆ ತಗಲಿ ರಕ್ತದ ಕೋಡಿ ಹರಿಯಿತು.

ಕಾಳೀಪ್ರಸಾದ ಗಾಬರಿಯಿಂದ ಹೋ !!! ಅಪ್ಪಾ ! ಎಂದು ಕೂಗಿ ಕೊಳ್ಳುತ್ತಾ ಬಗ್ಗಿ ನೋಡಿದಾಗ ರಕ್ತ ಬೆರೆತ ಕೆಂಪು ಪ್ರವಾಹ ಧ ಬ– ಧ ಬ ನೆ–ಮುಂದೆ ಹರಿದು ಹೋಗುತ್ತಾ ಇತ್ತು.

ಕಾಳಿಯು ಅಪ್ಪಾ ! ಹಿಗೇಕೆ ಮಾಡಿದೆ ? ಎಂದು ತಲೆ ತಲೆ ಚಚ್ಚಿಕೊಂಡು ಅತ್ತ.

* * * *

ಕಾಳೀಪ್ರಸಾದನಿಗೆ ಮುಂದೆ ಏನು ಮಾಡಬೇಕೆಂದು ತೋಚಲಿಲ್ಲ. ಬಂಡೆಯ ಗುಹೆಯ ಬಳಿಗೂ ಹೋಗಲಿಲ್ಲ. ತನ್ನ ಜೊತೆಗಾರರನ್ನೂ ನೋಡಲಿಲ್ಲ.

ಬೊಗಸೆ ನೀರು ಕುಡಿದು ಆ ದಟ್ಟ ಕಾಡಿನ ಮಧ್ಯೆ ಅಲೆಯುತ್ತಾ ಮೂರು ನಾಲ್ಕು ದಿನಗಳನ್ನು ಕಳೆದ.

ಇವನ ಜೊತೆಗಾರರಿಗೆ ಬಹಳ ಯೋಚನೆಯಾಯಿತು, ದೇವೀಪ್ರಸಾದ ನಾಗಲಿ, ಕಾಳೀಪ್ರಸಾದನಾಗಲಿ, ಇಬ್ಬರೂ ಪತ್ತೆಯಿಲ್ಲ. ಊರು, ಕಾಡು ಎಲ್ಲಾ ಹುಡುಕಾಡಿನರು, ಕಡೆಗೆ ಇವನಿರುವ ಜಾಗ ಪತ್ತೆಯಾಗಿ ಇವನ ಬಳಿ ಬಂದರು.

ಲೋ ಕಾಳೀ ಯಾಕೋ ಹೀಗೆ ಮಾಡಿ ಬಿಟ್ಟೆ, ಮೂರು ದಿನ ದಿಂದ ಎಲ್ಲಿ ಹೋಗಿದ್ದೆ ? ಒಬ್ಬನೇ ಯಾವ ಕಡೆ ದರೋಡೆ ಮಾಡಿದೆ ? ನೀನಿಲ್ಲದೆ ನಾವು ಯಾವ ಕೆಲಸವನ್ನೂ ಮಾಡುವುದಿಲ್ಲವೆಂಬು ನಿನಗೆ ಗೊತ್ತು,

ಎಂದು ಅವನ ಆಪ್ತ ಗೆಳೆಯರು ಅವನನ್ನು ಒಂದೇಸಮ ಪ್ರಶ್ನೆ ಕೇಳಿದರು. ಕಾಳಿ ಅವರೊಂದಿಗೆ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮುಖವನ್ನು ಕೆಳಗೆ ಮಾಡಿ ಬಿಕ್ಕಿ ಬಿಕ್ಕಿ ಅತ್ತ.

ಅವನ ಜೊತೆಯವರಿಗೆ ಆಶ್ಚರ್ಯವಾಯಿತು. ಕಾಳಿ ಎಂದೂ ಹೀಗೆ ಅತ್ತವನಲ್ಲ. ಅವನ ಬಳಿ ಕುಳಿತು ಅವರು ಏನಾಯಿತೊ ಕಾಳೀ ಎಂದರು.

ಕಾಳಿ ಅವರ ಕೈಯನ್ನು ಹಿಡಿದುಕೊಂಡು, ಹನುಮಾ, ನಮ್ಮ ಅಪ್ಪ ಮಡುವಿಗೆ ಬಿದ್ದು ಸತ್ತು ಹೋದ ಕಣ್ರೋ.... ಇನ್ನು ಯಾರು ದಿಕ್ಕು ನನಗೆ ? ಎಂದು ಗೋಳಾಡಿದ.

ಅವರು ಗಾಬರಿಯಿಂದ ಹಾಂ !! ದೇವೀಪ್ರಸಾದ ಸತ್ತುಹೋದನೇ ಅಯ್ಯೋ ! ನಮ್ಮ ಒಡೆಯ, ನಮ್ಮನ್ನು ಮಕ್ಕಳಂತೆಯೇ ಸಾಕಿದ, ಆದರೆ ನಿನ್ನ ಮೇಲೆ ಅಪಾರ ಪ್ರೀತಿಯನ್ನಿಟ್ಟಿದ್ದ. ಅಯ್ಯೋ ಅದೇಕೆ ಹಾಗೆ ಪ್ರಾಣ ಕಳೆದುಕೊಂಡ ಎಂದು ಕೇಳಿದರು. ಅವರೆಲ್ಲರೂ ಕಾಳೀಪ್ರಸಾದ, ದೇವೀ-ಪ್ರಸಾದನ ಸ್ವಂತ ಮಗನೆಂದೇ ತಿಳಿದಿದ್ದರು.

ಅವನು ಸಾಯುವುದಕ್ಕೆ ಸ್ವಲ್ಪ ಮುಂಚೆ ಕಾಳೀ ! ನಾನು ಮಾಡಿದ ದರೋಡೆ ಕೊಲೆಗೆ ನೋಡು ಇದೇ ಪ್ರಾಯಶ್ಚಿತ್ತ ಎಂದು ಹೇಳಿಕೊಂಡೇ ನೀರಿಗೆ ಧುಮುಕಿಬಿಟ್ಟ ಎಂದು ಹೇಳಿದ.

ಹೋಗಲಿ ಬಾ ಕಾಳೀ ಮನೆಗೆ ಹೋಗೋಣ ದೇವೀಪ್ರಸಾದ ಇಲ್ಲದ ಮೇಲೆ ನೀನೇ ನಮ್ಮ ಒಡೆಯ ಎಂದು ಅವರು ಕರೆದರು.

ಈಗ ನೀವು ನಡೆಯಿರಿ, ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿ, ಎಂದು ಹೇಳಿ ಅವರನ್ನೆಲ್ಲಾ ವಾಪಸ್ಸು ಕಳುಹಿಸಿಬಿಟ್ಟ ಕಾಳಿ.

ನಂತರ ತಾನೊಬ್ಬನೇ ನಿಧಿಯಿದ್ದ ಗುಹೆಗೆ ಹೋಗಿ ಬೇಕಾದಷ್ಟು ಹಣ ಒಡವೆಗಳನ್ನು ತೆಗೆದುಕೊಂಡು ನಂತರ ತನ್ನ ಜೊತೆಯ ದರೋಡೆ ಕೋರರನ್ನೆಲ್ಲಾ ಕರೆದು ಸಭೆ ಸೇರಿಸಿದ.

ಅವರಿಗೆಲ್ಲಾ ಬೇಕಾದಷ್ಟು ನಿಧಿಯನ್ನು ಹಣವನ್ನು ಹಂಚಿಕೊಟ್ಟ, ವ್ಯಸನದಿಂದ ಕುಳಿತ ಕಾಳಿಯನ್ನು ಅವರೆಲ್ಲರೂ ಯಾಕೋ, ಕಾಳಿ ! ನಾವೇನು ನಿನ್ನನ್ನು ಹಣ ಕೇಳಿದೆವೇ ? ನೀನು ಹೇಳಿದ ಕೆಲಸವನ್ನು ತಪ್ಪದೆ ಮಾಡುತ್ತೇವೆ, ಏನು ಮಾಡಬೇಕು ಹೇಳು, ಎಂದರು.

ನನ್ನ ಗೆಳೆಯರೇ ನೀವೆಲ್ಲರೂ ನಿಯತ್ತುವಂತರು, ಪ್ರಾಮಾಣಿಕರು. ಬಾಲ್ಯದಿಂದ ನನ್ನ ಒಡನಾಡಿಗಳು, ಗೊತ್ತು ನನಗೆ. ನನ್ನ ಮನಸ್ಸು ಒಂದು ಹದಕ್ಕೆ ಬರುವವರೆಗೂ ನಾನು ಎಲ್ಲಾದರೂ ಸುತ್ತಿಕೊಂಡು ಬರುತ್ತೇನೆ.

ನೀವು ಮಾತ್ರ ನನ್ನನ್ನು ಹುಡಕಬೇಡಿ. ಎಲ್ಲಿಯೂ ದರೋಡೆಗೆ ಹೋಗಬೇಡಿ ನಿಮ್ಮ ನಿಮ್ಮ ಮನೆಯಲ್ಲಿ ಸುಖವಾಗಿರಿ, ಎಂದು ಹೇಳಿದವನೇ ಕಾಳೀ ಪ್ರಸಾದ ಅಲ್ಲಿಂದ ಹೊರಟುಬಿಟ್ಟ.

ಕಾಳೀಪ್ರಸಾದನ ಮನಸ್ಸು ತನ್ನ ಜನ್ಮಭೂಮಿಯನ್ನು ಕಾಣಲು ತಲ್ಲಣಿಸಿತು. ತನ್ನ ತಂದೆ ದೇವೀಪ್ರಸಾದ ಹೇಳಿದ ಊರಿನ ಹೆಸರು ಮಾತ್ರ ಜ್ಞಾಪಕದಲ್ಲಿತ್ತು. ಸಿಂಧೂಪುರ್

ಹೌದು, ಸಿಂಧೂಪುರ್, ನೋಡಿ ಬರಲೇಬೇಕು. ಸಭ್ಯಸ್ಥ ಗೃಹಸ್ಥನಂತೆ ಬೆಲೆಬಾಳುವ ಉಡುಪನ್ನು ಧರಿಸಿ ಹೊರಟುಬಿಟ್ಟ. ಸಿಂಧೂಪುರವನ್ನೇನೋ ತಲಪಿದ್ದಾಯಿತು, ಆದರೆ ತಾನು ಹುಟ್ಟಿದ ಮನೆಯನ್ನೆಲ್ಲಿ ಹುಡುಕುವುದು ?

ತಂದೆಯ ಹೆಸರು ಪ್ರಮೋದ್‌ಪಾಟೀಲ್ ಎಂದಲ್ಲವೇ ? ದೇವೀ-ಪ್ರಸಾದ ಹೇಳಿದ್ದು, ಆದರೆ 25 ವರ್ಷ ಹಿಂದಿನ ವಿಷಯವನ್ನು ತಿಳಿಸುವವರು ಯಾರು ? ಎಂದು ಹಾಗೆಯೇ ಸುತ್ತಾಡಿಕೊಂಡು ಊರಿನಲ್ಲಿ ತಿರುಗಾಡಿದ.

ಊರು ಅಂಥಾ ಏನು ಹಳ್ಳಿಯಲ್ಲ, ದೊಡ್ಡಪಟ್ಟಣವೂ ಅಲ್ಲ. ಕೆಲವು ಕಾರ್ಖಾನೆಗಳಿದ್ದುದರಿಂದ ಕಾರ್ಮಿಕರ ಕಾಲೋನಿ ಇತ್ತು, ವ್ಯಾಪಾರ ಮಳಿಗೆಗಳು ಇದ್ದುದರಿಂದ, ವ್ಯಾಪಾರ ಸ್ಥಳವೂ ಆಗಿದ್ದಿತು, ಊರಿಗೆ ಹತ್ತಿರವಾಗಿ ಒಂದು ನದೀ ಹರಿಯುತ್ತಿದ್ದ ಕಾರಣ, ಭತ್ತ, ಗೋಧಿಯ ಗದ್ದೆ ಬಯಲು ಹಚ್ಚ ಹಸುರಾಗಿ ಕಣ್ ಮನ ತಣಿಸುತ್ತಿತ್ತು.

ಈ ಪ್ರದೇಶಗಳನ್ನೆಲ್ಲಾ ಸುತ್ತಾಡಿ ಅಲ್ಲಲ್ಲೇ ವಿಚಾರಿಸಿದ, ಮಿಲ್ಟ್ರಿಗೆ ಸೇರಿದ್ದ ಪ್ರಮೋದ್ ಪಾಟೀಲ್ ಎಂಬವರು ಇದ್ದರಲ್ಲಾ ಅವರ ಮನೆ ಎಲ್ಲಿ ? ಎಂದು ಅನೇಕರನ್ನು ಕೇಳಿದ.

ಕಡೆಗೆ ಒಬ್ಬ ವಯಸ್ಸಾದ ಮುದುಕಿ ಮನೆಯ ಮುಂದೆ ಪಡಸಾಲೆಯಲ್ಲಿ ಕುಳಿತಿದ್ದಿತು. ಕಾಳೀಪ್ರಸಾದ, ಹಿಂದಿನ ಕಾಲದ ಇಂತಹ ಮುದುಕರಿಗೆ ಹೆಚ್ಚುವಿಷಯ ತಿಳಿದಿರುತ್ತದೆ ಕೇಳಿನೋಡೋಣ, ಎಂದು ಅಜ್ಜೀ ಈ ಊರಲ್ಲಿ ಹಿಂದೆ ಪ್ರಮೋದ ಎನ್ನುವವರೊಬ್ಬರು ಮಿಲ್ಟ್ರಿಗೆ ಸೇರಿದ್ದರಂತೆ ಅವರ ಮನೆಯವರು ನಿಮಗೆ ಗೊತ್ತೇ ಅಜ್ಜೀ ?.... ಎಂದು ಕೇಳಿದ.

ಕಣ್ಣಿನ ಬೆಳಕಿಗೆ ಕೈ ಅಡ್ಡ ಹಿಡಿದು ಯಾರಪ್ಪಾ! ನೀನೂ? ಎಂದು ಕೇಳಿತು.

ಅಜ್ಜೀ ನಮ್ಮ ತಂದೆಯೂ ಅವರೂ ತುಂಬಾ ಸ್ನೇಹಿತರಂತೆ. ನಮ್ಮ ತಂದೆಯೂ ಮಿಲ್ಟ್ರಿಗೆ ಸೇರಿಬಿಟ್ಟಿದ್ದರು, ಅವರು ಬಂದಾಗಲೆಲ್ಲ. ಪ್ರಮೋದ ನನ್ನ ಪ್ರಾಣಸ್ನೇಹಿತ, ಎಂದು ಈ ಊರಿನ ಹೆಸರು ಹೇಳುತ್ತಲೇ ಇದ್ದರು. ಅದಕ್ಕಾಗಿ ಇಲ್ಲಿ ವಿಚಾರಿಸೋಣ ಎಂದು ಬಂದೆ ಅಜ್ಜೀ? ಅವರ ಮನೆ ಎಲ್ಲಿದೆ?

ಅಯ್ಯೋ!....ಮಗೂ, ಇಷ್ಟು ವರ್ಷಗಳ ಮೇಲೆ ಬಂದು ವಿಚಾರಿಸುತ್ತಿದ್ದೀಯಲ್ಲಾ, ಅವನ ಕತೆಯೆಲ್ಲಾ ಮುಗಿದು ಹೋಯಿತು ಕಂದಾ! ನಿನ್ನ ಹೆಸರೇನಪ್ಪಾ?

ನನ್ನ ಹೆಸರು ಕಾಳೀಪ್ರಸಾದ ಅಜ್ಜೀ ಆ ಪ್ರಮೋದ ಅನ್ನುವವರು ನಿಮಗೆ ಗೊತ್ತೇ? ಅಜ್ಜೀ? ಎಂದು ಕೇಳಿದ ಕೂಡಲೇ ಆ ಅಜ್ಜಿ ಗೊಳೋ ಎಂದು ಅಳಲು ಶುರು ಮಾಡಿತು. ನಂತರ ಅಳುತ್ತಲೇ "ಗೊತ್ತೇ ಎಂದು ಕೇಳುತ್ತೀಯಾ? ಮಗೂ....ಅವನು ನನ್ನ ಬೆನ್ನಲ್ಲಿ ಬಿದ್ದ ತಮ್ಮ ಕಣಪ್ಪಾ! ಅವನನ್ನು ಎತ್ತಿಸಾಕಿದ ಅವನ ಅಕ್ಕಕಣಪ್ಪಾನಾನು, ಪಾಪೀಪ್ಪಾ ನಾನು ಪಾಪಿ.

ಯಾಕೆ ಅಜ್ಜಿ....ಅವರು ಮಿಲ್ಟ್ರಿಯಲ್ಲಿ ಸತ್ತುಹೋದರೇ? ಎಂದ. ಅಯ್ಯೋ! ಮಿಲ್ಟ್ರಿಯಲ್ಲಿ ಸತ್ತಿದ್ದರೂ ಇಷ್ಟು ಸಂಕಟವಾಗುತ್ತಿರಲಿಲ್ಲ. ಮಗೂ ಪಾಪಿಗಳು, ದರೋಡೆಕೋರರಿಂದ ಕೊಲೆಯಾದ, ಅಯ್ಯೋ! ಪ್ರಮೋದ ಅಂದರೆ ಹೇಗಿದ್ದ ಒಳ್ಳೆ ದೇವೇಂದ್ರನಂತಿದ್ದ ಎಂದು ಹೇಳುತ್ತಾ ಬಿಕ್ಕಿ-ಬಿಕ್ಕಿ ಅತ್ತಳು ಅಜ್ಜಿ.

❋ ❋ ❋ ❋

ಕಾಳೀಪ್ರಸಾದನಿಗೆ ಬಹಳ ಖುಷಿಯಾಯಿತು. ನಾನು ಹುಡುಕಿ ಬಂದಿದ್ದಕ್ಕೂ ಒಂದು ನೆಲೆ ಸಿಕ್ಕಿದಂತಾಯಿತು. ಎಂದುಕೊಂಡು ಎಷ್ಟು ವರ್ಷವಾಯಿತು ಅಜ್ಜೀ ಅವರ ಕೊಲೆಯಾಗಿ?

ಸುಮಾರು 25 ವರ್ಷವಾಯಿತಪ್ಪಾ, ಆ ಪಾಪಿ ! ದರೋಡೆಕೋರರು ಏನೇ ಬೇಕಾದರೂ ಐಶ್ವರ್ಯವನ್ನೆಲ್ಲಾ ದೋಚಿಕೊಂಡು ಹೋಗಿದ್ದರೂ ನನಗೆ ಸಂಕಟವಾಗುತ್ತಿರಲಿಲ್ಲ. ಆ ಕ್ರೂರಿಗಳು ಅವನ ಹೆಂಡತಿಯನ್ನೂ ಸಾಯಿಸಿ ಮೂರುತಿಂಗಳ ಮುದ್ದು ಮಗು ಅದನ್ನೂ ಕೊಂಡು ಎಲ್ಲಿ ಬಿಸಾಕಿ ಹೋದರೋ ? ಪಾಪಿಗಳು ನಮ್ಮ ಅಪ್ಪನ ವಂಶವನ್ನೇ ಹೇಳ ಹೆಸರಿಲ್ಲದಂತೆ ಮಾಡಿದರು.

ಆ ಅಜ್ಜಿಯ ದುಃಖ ನೋಡಿ ಕಾಳಿ ಇದರಂತೆಯೇ ಎಷ್ಟು ಸಂಸಾರ ಗಳು ನೊಂದಿದೆಯೋ ? ನಮ್ಮಿಂದ ಎಂದು ಸಂಕಟಪಟ್ಟ. ಅಜ್ಜೀ ಮತ್ತೆ ಅವರ ಮನೆಯವರು ಇನ್ಯಾರಿದ್ದಾರೆ ಅಜ್ಜೀ ಅಂದ.

ನೀನ್ಯಾರಪ್ಪಾ ! ಇಷ್ಟು ಆತ್ಮೀಯತೆಯಿಂದ ಮಾತಾಡಿಸುತ್ತೀ.... ಬಾ ಒಳಕ್ಕೆ ಬಂದು ಕೂತ್ಕೋ....ಎಲ್ಲಾ ಹೇಳ್ತೀನಿ ಎಂದು ಹೇಳಿ ಒಳಕ್ಕೆ ಕರೆದು ಒಂದು ಕುರ್ಚಿಯ ಮೇಲೆ ಕೂರಿಸಿತು.

ಕಾಳಿಯೂ ಸುಸ್ತಾಗಿದ್ದ. ಒಳಗೆ ಹೋಗಿ ಕುಳಿತ ನಂತರ ಅಜ್ಜೀ ಒಂದು ಲೋಟ ನೀರು ಕೊಡು ಎಂದು ಕೇಳಿದ.

ಅದಕ್ಕೇನಪ್ಪಾ ! ಕೊಡ್ತೀನಿ ಎಂದು ನೀರು ತಂದುಕೊಟ್ಟಳು. ಗಟ-ಗಟನೆ ಕುಡಿದ. ಆ ವಾತ್ಸಲ್ಯ ತುಂಬಿದ ನೀರು ಅವನಿಗೆ ಅಮೃತಕ್ಕೆ ಸಮಾನವಾಗಿ ಹಿತವೆನಿಸಿತು.

ಕೇಳಪ್ಪಾ ಕುಮಾರ ಮಗ-ಸೊಸೆ-ಮೊಮ್ಮಗ ಎಲ್ಲರೂ ಸತ್ತುಹೋದ ರೆಂಬ ದುಃಖದಲ್ಲಿ ನಮ್ಮ ತಂದೆ ತಾಯಿಯೂ ಒಂದು ವರ್ಷದೊಳಗಾಗಿ ಸತ್ತುಹೋದರು.

ನನ್ನನ್ನು ಇದೇ ಹತ್ತಿರದ ಊರಿಗೆ ಕೊಟ್ಟಿದ್ದರು. ನನ್ನ ಯಜಮಾನರು ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದರು. ಅವರು ಈ ರೀತಿ ಕೊಲೆ, ದರೋಡೆ ಕೋರರನ್ನು ಹಿಡಿಯಲು ಸರ್ವ ಸಾಹಸ ಮಾಡುತ್ತಿದ್ದರು. ಒಂದು ಸಲ ಅವರನ್ನು ಅಟ್ಟಿಸಿಕೊಂಡು ಹೋದಾಗ ಆ ದರೋಡೆಕೋರರ ಗುಂಡಿಗೆ ಇವರೂ ಬಲಿಯಾದರು.

ಆ ಪಾಪಿಗಳನ್ನು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲಪ್ಪಾ! ನೋಡು, ನಾನು, ಅಪ್ಪ, ಅಮ್ಮ-ತಮ್ಮ-ಗಂಡ ಎಲ್ಲರನ್ನೂ ಕಳೆದುಕೊಂಡು ಅನಾಥಳಾದೆ. ಇದೇ ನಮ್ಮ ಅಪ್ಪ ಅಮ್ಮನ ಮನೆ.ಪ್ರಮೋದ ಈ ಮನೆಯಲ್ಲಿಯೇ ಕೊಲೆಯಾದುದು. ಎಷ್ಟೋ ದಿನ ಜನಗಳು ಈ ಮನೆಯ ಬಳಿಯೂ, ಸುಳಿಯುತ್ತಿರಲಿಲ್ಲ. ದರೋಡೆ ಮನೆ ಅಂತನೇ ಹೆಸರಿಟ್ಟು ಬಿಟ್ಟಿದ್ದರು.

ಕಡೆಗೆ ನನಗೆ ದಿಕ್ಕಿಲ್ಲದಾಗ ಇದೇ ಮನೆಗೆ ಬಂದು ನೆಲೆಸಿದೆ. ಆ ಪಾಪಿಗಳು ಆ ನನ್ನ ತಮ್ಮನ ಮಗು ಒಂದನ್ನಾದರೂ ಬಿಟ್ಟುಹೋಗಿದ್ದರೆ ಆ ಕುಡಿಯನ್ನು ನೋಡಿಕೊಂಡಾದರೂ ನನ್ನ ಅಪ್ಪ-ಅಮ್ಮ ಜೀವದಿಂದ ಇರುತ್ತಿದ್ದರೋ ಏನೋ? ಎಂದು ಅತ್ತಳು ಅಜ್ಜಿ.

ಕಾಳಿಗೆ ತನ್ನ ಸಂಸಾರದ ಕತೆಯೆಲ್ಲಾ ತಿಳಿದಂತಾಯಿತು. ಇದೇ ತನ್ನ ತಂದೆಯ ಮನೆ ತನ್ನ ಮನೆಯೇ ಎನ್ನುವಷ್ಟು ಸಂತೋಷವಾಯಿತು ಅಜ್ಜಿಯನ್ನು ಸಮಾಧಾನ ಮಾಡುತ್ತಾ "ಅಜ್ಜೀ" ಇನ್ನು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ನನ್ನನ್ನು ನಿಮ್ಮ ಮಗನೆಂದೇ ತಿಳಿಯಿರಿ, ನಾನು ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದ.

ಅಯ್ಯೋ! ಮಗೂ ನನಗೆ ಮಕ್ಕಳೂ ಇಲ್ಲ ಮರಿಯೂ ಇಲ್ಲ, ನನ್ನ ತಮ್ಮನ ಮಗು ಈಗ ಇದ್ದಿದ್ದರೆ ಅವನಿಗೂ 25 ವರ್ಷ, ಸುಮಾರು ನಿನ್ನಷ್ಟೇ ಇರುತ್ತಿದ್ದ, ಅವನಾದರೂ ನನ್ನ ಭಾಗಕ್ಕೆ ಇಲ್ಲದಂತಾದ ಎಂದಳು.

ಅಜ್ಜೀ ಆ ಮಗು ಇದ್ದಿದ್ದರೆ, ಎಂದು ವ್ಯಸನಪಡಬೇಡಿ, ನಾನೇ ಅವನಂತೆ ಎಂದು ತಿಳಿಯಿರಿ, ಎಂದು ಹೇಳಿ ಎದ್ದ ಕಾಳೀಪ್ರಸಾದ.

ಅಜ್ಜಿ ಅವನನ್ನು ಇರು ಮಗೂ; ಊಟಮಾಡಿಕೊಂಡು ಹೋಗು ಏನೋ! ಒಂದಿಷ್ಟು ಸೊಪ್ಪು ಬೇಸಿ ಅನ್ನ ಮಾಡಿದ್ದೇನಪ್ಪಾ! ಅದನ್ನೇ ಉಂಡು ಹೋಗು ಎಂದಳು.

ಇಲ್ಲಾ ಅಜ್ಜೀ! ನನಗೆ ತುಂಬಾ ಕೆಲಸ ಇದೆ. ನಾನು ಮತ್ತೆ ಬರುತ್ತೇನೆ. ಎಂದು ಹೇಳಿ ಹೊರಟುಬಿಟ್ಟ.

ಕಾಳೀಪ್ರಸಾದನು ಇಂದಿನಿಂದ ಹೊಸ ಮನುಷ್ಯನೇ ಆದ. ಅವನಿಗೆ ಆ ಮನೆಯ ವಾಂಛಲ್ಯ ಅವನ ನೆತ್ತಿಯಲ್ಲಿ ಊರಿತು.

ಕೂತಲ್ಲಿ ನಿಂತಲ್ಲಿ ಯೋಚಿಸತೊಡಗಿದ. ಅವನ ಬಳಿ, ಹಣಕಾಸಿಗೆ ಕೊರತೆಯಿರಲಿಲ್ಲ. ಯಾವಾಗಲೂ ಜೋತೆಯಲ್ಲಿ ಸಾವಿರಾರು ರೂಪಾಯಿಗಳು ಇರುತ್ತಿದ್ದವು.

ಮಾರನೆಯ ದಿನ ಪೇಟೆಗೆ ಹೋಗಿ ಅಡಿಗೆಗೆ ಬೇಕಾಗುವ ದಿನಸಿ, ಧಾನ್ಯ, ಹಣ್ಣು, ತರಕಾರಿ ಮೊದಲಾಗಿ ವಿಶಿಷ್ಟ ಸಾಮಾನುಗಳನ್ನೂ ಹೇರಿಕೊಂಡು ಅಜ್ಜಿಯ ಮನೆಗೆ ಬಂದ, ಬಾಗಿಲು ತೆಗೆದು ಅಜ್ಜಿ ನೋಡಿದಾಗ ಅವಳಿಗೆ ಆಶ್ಚರ್ಯ.

ಬಾ ಮಗೂ....ಅದೇಕೋ ನೋಡು–ನೀನು ನೆನ್ನೆ ಹೊರಟು ಹೋದಾಗಿನಿಂದ ಪುನಃ ಬರುತ್ತೀಯೋ ಇಲ್ಲವೋ ? ಮತ್ತೆ ನಿನ್ನನ್ನು ನೋಡುತ್ತೇನೆಯೇ ? ಎಂದು ಬಾಗಿಲಲ್ಲೇ ಕುಳಿತು ನೋಡುತ್ತಿದ್ದೆ ಅಪ್ಪಾ! ಇದ್ಯಾವ ಜನ್ಮದ ಋಣಾನುಬಂಧವೋ ? ಕಾಣೆ ಮಗೂ....ಬಾಪ್ಪ ಕೂತ್ಕೋ....ಎಂದು ತನ್ನ ಆನಂದವನ್ನು ಹತ್ತಿಕ್ಕಲಾರದೆ ಬಡ–ಬಡಿಸಿದಳು.

ತಕೋ ಅಜ್ಜೀ ಸಾಮಾನು ? ನಿನಗೆ ಏನು ಬೇಕೋ ನನಗೆ ಗೊತ್ತಿಲ್ಲ. ನೀನು ಹೇಳಿದ್ದನ್ನು ತಂದುಕೊಡುತ್ತೇನೆ ಅಂದ,

ಅಜ್ಜಿಯ ಸಂತೋಷಕ್ಕೆ ಪಾರವೇ ಇಲ್ಲ: ಇದೇನೋ ಅಪ್ಪಾ ! ನನ್ನ ತಮ್ಮ ಪ್ರಮೋದ, ಅಕ್ಕಾ–ಅಕ್ಕಾ ಅಂತ ನನಗಾಗಿ ಏನು ಬೇಕಾದರೂ ಮಾಡುತ್ತಿದ್ದ, ಅವನಂತೆಯೇ ನೀನು ಅಜ್ಜೀ....ಎಂದು ಎಷ್ಟು ಪ್ರೀತಿಯಿಂದ ಕರೆಯುತ್ತೀಯೋ ಮಗೂ, ನನಗೇನೂ ಬೇಡಾಪ್ಪಾ ನೀನು ಬರುತ್ತಿದ್ದರೆ ಸಾಕು. ಬಾಪ್ಪ ಈವತ್ತಾದರೂ ಊಟಮಾಡು.

ಇಲ್ಲಾ ಅಜ್ಜೀ ! ಇವತ್ತು ಬೇಡ, ಆಮೇಲೆ ದಿನಾ ಇಲ್ಲೇ ಊಟ ಮಾಡುತ್ತೇನೆ ಅಜ್ಜೀ ! ನಾನು ಬರುವುದು ಕೆಲವು ದಿನ ತಡವಾದರೆ ಯೋಚಿಸಬೇಡ, ನನಗೆ ಬೇರೆ ಬೇರೆ ಕೆಲಸ ಇರುತ್ತೆ, ಎಂದು ಹೇಳಿ ಕಾಳೀಪ್ರಸಾದ ಅಲ್ಲಿಂದ ಹೊರಟ.

ಊರಿಂದ ಹೊರಗೆ ಹೋದಮೇಲೆ ಕಾಳೀಪ್ರಸಾದ ಸಂದಿ-ಗೊಂದಿಯಲ್ಲಿ ನುಸುಳಿ ಕಾಡಿನ ದಾರಿ ಹಿಡಿದು ಕುದುರೆಯೇರಿ ತನ್ನ ಗುಹೆಯತ್ತ ನಡೆದ.

ಅಲ್ಲಿ ತನ್ನ ಅನುಯಾಯಿಗಳು ಯಾರಿದ್ದಾರೋ ತಿಳಿಯಲು ಒಂದು ವಿಧವಾದ ಸೂಚನೆ ಶಬ್ದ ಮಾಡಿದ, ಕೆಲವರು ಕಾಡು ಬೇಡರು ಓಡೋಡಿ ಬಂದು ತಮ್ಮ ದಣಿಯ ಬಳಿ ಸೇರಿದರು.

ಕೇವಲ 5–6 ಜನ ಮಾತ್ರ ಬಂದರು. ಏನು ಕಾಳೀ ನಿನ್ನನ್ನು ಕಾಣದೆ ನಾವು ಕಂಗಾಲಾದೆವು ಮುಂದೆ ಏನು ಮಾಡಬೇಕೆಂದೇ ನಮಗೆ ತೋಚಲಿಲ್ಲ. ಇದುವರೆಗೂ ನಾವು ಒಂದು ದರೋಡೆಯನ್ನೂ ಮಾಡಲಿಲ್ಲ, ಎಂದು ಹೇಳಿ ಕೈಕಟ್ಟಿ ನಿಂತರು.

ಹನುಮ, ರುದ್ರ, ಏನ್ರೋ ಮಿಕ್ಕ ಎಲ್ಲರೂ ಎಲ್ಲಿ ? ನೀವು ನಾಲ್ಕೈದು ಜನ ಮಾತ್ರ ಬಂದಿದ್ದೀರಾ ? ಎಂದು ಕಾಳಿ ಕೇಳಿದ,

ಅವರೆಲ್ಲಾ ಮತ್ತೆ ಬರುವಂತೆ ಕಾಣಲಿಲ್ಲ. ಕಾಳೀ, ದೇವೀಪ್ರಸಾದ ಸತ್ತು ಹೋದಮೇಲೆ ನಾವು ಇನ್ನು ಇಲ್ಲಿ ಇರಲಾರೆವು. ಅವನು ನಮ್ಮನ್ನು ಮಕ್ಕಳಂತೆಯೇ ಸಾಕಿದ್ದ ಯಾವಾಗಲೂ ನಮ್ಮ ರಕ್ಷಣೆ ಮಾಡುತ್ತಿದ್ದ, ಇನ್ನು ನಮ್ಮ ಜೀವನೋಪಾಯ ನಾವು ನೋಡಿಕೊಳ್ಳುತ್ತೇವೆ. ಇಲ್ಲಿಂದ ದೂರ ಹೋಗುವುದೆಂದು ತೀರ್ಮಾನಿಸಿದ್ದೇವೆ, ಕಾಳಿ ಬಂದರೆ ಹೇಳಿ ಬಿಡಿ, ಎಂದು ಹೊರಟು ಹೋದರು ಎಂದರು.

ಕಾಳಿಯು ಒಂದು ನಿಟ್ಟುಸಿರು ಬಿಟ್ಟು ಹೋಗುವವರೆಲ್ಲಾ ಹೋಗಲಿ, ನೀವು ನನ್ನ ಜೊತೆಯಲ್ಲಿ ಇರುವುದಕ್ಕೆ ಇಷ್ಟಪಟ್ಟರೆ ನಾನು ಹೇಳಿದಂತೆ ಕೇಳಬೇಕು ಎಂದ.

ಅವರುಗಳು ವಿಧೇಯತೆಯಿಂದ ಅಲ್ಲಾ ಕಾಳೀ ನಾವು ಎಂದು ನಿನ್ನ ಮಾತನ್ನು ಮೀರಿ ನಡೆದಿದ್ದೇವೆ ? ಈಗಲೂ ನಿನ್ನ ಜೊತೆಗೆ ನಾವಿದ್ದೇವೆ, ಏನು ಮಾಡಬೇಕು ಹೇಳು ಎಂದರು.

ಕಾಳಿಗೆ ಅವರಲ್ಲಿ ತುಂಬಾ ನಂಬಿಕೆ, ಸರಿ ಹಾಗಾದರೆ ನೀವು ನಾನು ಹೇಳುವವರೆಗೂ ದರೋಡೆಗೆ ಹೋಗಬೇಡಿ. ತೆಗೆದುಕೊಳ್ಳಿ, ಈ ಹಣ. ನೀವು ನಾಲ್ಕು ಜನ ಹನುಮ, ರುದ್ರ, ಜುಂಜ, ಬೀರ, ಇಷ್ಟು ಜನ ನನಗೆ ಸಾಕು. ನಾನು ಹೇಳಿದಂತೆ ಕೇಳಬೇಕು. ನನ್ನನ್ನು ಎಲ್ಲಿಯೂ ಹುಡುಕ

ಬೇಡಿ, ಇದೇ ಪೌರ್ಣಿಮೆ, ಇನ್ನು 15 ದಿನಕ್ಕೆ ಸರಿಯಾಗಿ ರಾತ್ರಿ 11 ಗಂಟೆಗೆ ಇದೇ ಜಾಗದಲ್ಲಿ ಸೇರೋಣ, ಅದುವರೆಗೂ ನೀವು ಎಲ್ಲಾದರೂ ಇರಿ, ಎಂದು ಹೇಳಿ ಅವರನ್ನು ಕಳುಹಿಸಿಬಿಟ್ಟ.

ಅವರು ಯಾರೂ ಇಲ್ಲದಾಗ ತಾನೊಬ್ಬನೇ ಬಂಡೆಯ ಗುಹೆಯೊಳಗೆ ಹೋಗಿ ತನ್ನ ತಂದೆ ತೋರಿಸಿದ್ದ ನಿಧಿಯಲ್ಲಿ ಅವನಿಗೆ ಬೇಕಾದಷ್ಟು ತೆಗೆದುಕೊಂಡು ಅಲ್ಲಿಂದ ಹೊರಟುಬಿಟ್ಟ.

ಒಂದು ವಾರವಾದರೂ ಈ ಹುಡುಗ ಬರಲಿಲ್ಲವಲ್ಲಾ !....ಇವನು ಎಲ್ಲಿರುತ್ತಾನೆ ? ಎಂದು ತಿಳಿದುಕೊಳ್ಳಲಿಲ್ಲವಲ್ಲಾ ! ನನ್ನ ಬುದ್ಧಿಗೆ ಏನು ಹೇಳಲಿ ? ಎಂದು ಅಜ್ಜಿ ಅವನ ನಿರೀಕ್ಷಣೆಯಲ್ಲಿಯೇ ಇದ್ದಳು. ಇದ್ದಕ್ಕಿದ್ದಂತೆ ಕಾಳಿ ಬಂದದ್ದು ನೋಡಿ ಅವಳಿಗೆ ಸಮಾಧಾನವಾಯಿತು. ಏನಪ್ಪಾ ! ಮಗೂ....ನೀನು ಎಲ್ಲಿರುತ್ತೀಯೋ ಏನೋ....ನಂಗಂತೂ ಗೊತ್ತಿಲ್ಲ, ನೀನು ಬರದಿದ್ದರೆ ನಿನಗೇನು ಅಪಾಯವಾಯಿತೋ ಎಂದು ನನ್ನ ಜೀವ ಹೊಡೆದುಕೊಳ್ಳುತ್ತಿತ್ತು.

ಬಾಗಿಲಿನಿಂದ ಒಳಕ್ಕೆ ಕಾಲಿಡುತ್ತಿದ್ದಂತೆಯೇ ಅಜ್ಜಿಯ ಆತ್ಮೀಯ ಪ್ರೀತಿಗೆ ಕಾಳಿ ಬೆರಗಾದ. ತಾಯಿಯ ಪ್ರೀತಿಯನ್ನೇ ಕಾಣದ ನನಗೆ ಇವಳು ಯಾವ ಜನ್ಮದ ತಾಯಿಯೋ ? ಏನೋ ?–ಎಂದುಕೊಂಡು ಅಜ್ಜೀ.... ನೀನು ಚೆನ್ನಾಗಿದ್ದೀಯಾ ?

ಅಯ್ಯೋ ! ಬಿಡು ಮಗೂ ನನ್ನ ಚೆನ್ನವೇನು ? ಇನ್ನೇನು ಬಿದ್ದು ಹೋಗುವ ಮರ, ನನ್ನ ಕಡೆಗಾಲಕ್ಕೆ ದಿಕ್ಕಿಲ್ಲದ ನನಗೆ ದೇವರೇ ನಿನ್ನಂತಹ ಒಬ್ಬ ಮೊಮ್ಮಗನನ್ನು ಕೊಟ್ಟಿದಾನೆ, ಅನ್ನಿಸುತ್ತೆ, ನೀನು ಬರದಿದ್ದರೆ ಮತ್ತೆ ನಾನು ಅನಾಥಳಾಗುತ್ತೇನೆ.

ಕಾಳೀಪ್ರಸಾದನಿಗಂತೂ ಈರೀತಿಯ ಮಾತು–ಮಮತೆ ಏನೋ ಒಂದು ಅಪೂರ್ವ ಲೋಕದಲ್ಲಿದ್ದೇನೋ ಎನ್ನಿಸಿತು. ಇದೇನು ನನ್ನ 25 ವರ್ಷಗಳ ಬಾಳ್ವೆಯ ಕಠೋರ, ಕಠಿನ, ಕ್ರೂರ ಸ್ವಭಾವವನ್ನೇ ಈ ಮುದುಕಿಯ ಮಮತೆಯ ಮಾತು ಬದಲಾಯಿಸಿ ಬಿಟ್ಟಿತಲ್ಲಾ.

ಅದೆಂತಹ ಕರುಳಿನ ಕರೆ? ಈಗ ನನ್ನ ಮುಂದಿನ ಭವಿಷ್ಯ? ಈ ಒಂದು ಪ್ರೀತಿ ಮಮತೆಗೆ ಹೊಂದಿಕೊಳ್ಳಲು ಸಾಧ್ಯವೇ? ದರೋಡೆಕೋರ ಕಸುಬಿನಲ್ಲಿ ಬಹಳ ದೂರ ಮುಂದುವರೆದಾಗಿ ಬಿಟ್ಟಿತು.

ಈಗ ಸಾಧು ಸ್ವಭಾವ, ಹೇಗೆ ಬಂದೀತು ? ಕರುಣೆ–ದಯೆ, ಎಂಬ ಪದವನ್ನು ನಮ್ಮ ಅಪ್ಪ ದೇವಿಪ್ರಸಾದ ನನಗೆ ಹೇಳಿಕೊಡಲೇ ಇಲ್ಲ.

ಛೆ....ಅವನೆಲ್ಲಿ ಅಪ್ಪ? ಏನೇ ಆದರೂ ರಕ್ತಗತವಾಗಿ ಬಂದಿರತಕ್ಕ ನನ್ನ ಹುಟ್ಟಿಸಿದ ಜನ್ಮದಾತ–ಅಪ್ಪನ ಗುಣವೇ ನನಗೆ ಬರಲು ಸಾಧ್ಯವಿದೆ.

ಈ ಅಜ್ಜಿ ಹೇಗಿದ್ದರೂ ನಮ್ಮ ಅಪ್ಪ–ಅಮ್ಮನ ವಿಚಾರವನ್ನೆಲ್ಲಾ ತಿಳಿದವಳು. ಇವಳಿಂದಲೇ ಎಲ್ಲಾ ತಿಳಿಯಬೇಕು. ಎಂದು ಏನೇನೋ ಯೋಚಿಸುತ್ತಾ ನಿಂತಕಡೆಯಲ್ಲೇ ನಿಂತಿದ್ದ.

ಅಜ್ಜಿಗೆ ಏನೂ ತೋಚದಂತಾಯಿತು. ಏಕೆ ಇವನು. ಹೊರಗೇ ನಿಂತು ಏನೋ ಯೋಚಿಸುತ್ತಿದ್ದಾನಲ್ಲ, ಈ ಸುತ್ತ ಮುತ್ತ ಜನರು ಈ ಹುಡುಗನಿಗೆ ಏನಾದರೂ ಹೇಳಿಕೊಟ್ಟರೋ? ಏನೋ? ಈ ಮನೆ ದರೋಡೆ ಮನೆ ಈ ಮನೆಗೆ ಯಾರೂ ಹೋಗುವುದಿಲ, ಎಂದು ಹೇಳಿ ಕೊಟ್ಟಿದ್ದಾರೋ? ಮತ್ತೆ ಏನು ಯೋಚಿಸುತ್ತಾ ಅಲ್ಲಿಯೇ ನಿಂತ?

ಎಂದು ಕಳವಳಿಸುತ್ತಾ ಅಜ್ಜಿ ಯಾಕಪ್ಪಾ ಮಗೂ! ಅಲ್ಲಿಯೇ ನಿಂತುಬಿಟ್ಟೆ ಒಳಕ್ಕೆ ಬಾ! ನಿನಗಾಗಿ ಕಾದು ಕುಳಿತಿದ್ದೆ. ಯಾರೇ ಏನೇ ಹೇಳಿದರೂ ಈ ಅಜ್ಜಿಯನ್ನು ಮಾತ್ರ ಕೈಬಿಡಬೇಡಪ್ಪಾ! ಎಂದು ಹೇಳುತ್ತಾ ಕಣ್ಣೀರು ಹಾಕಿದಳು.

ಕಾಳೀಪ್ರಸಾದನ ಹೃದಯ ಕರಗಿತು. ಒಳಕ್ಕೆ ಹೋಗಿ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಅಜ್ಜೀ! ಯಾಕೆ ಇಷ್ಟೊಂದು ದುಃಖ? ನಾನು ಬಂದಿದ್ದೇನಲ್ಲಾ! ಇನ್ನು ನಿನಗೆ ಯಾವ ಕೊರತೆಯೂ ಇಲ್ಲ ಎಂದು ಸಮಾಧಾನ ಹೇಳಿದ.

ಅಜ್ಜಿಗೆ ಸ್ವರ್ಗದ ಬಾಗಿಲೇ ತೆಗೆದಷ್ಟು ಖುಷಿಯಾಯಿತು. ಸರಿ ಮಗೂ....ಈ ಊರಿನ ಜನ ಕೇಡಿಗಳು ನೋಡು ನೀನು ಹೊಸಬ ಬಂದಿದ್ದೀಯ ಜನ ಈ ಮನೆಗೆ ಏನೇನೋ ಹೆಸರಿಟ್ಟಿದ್ದಾರೆ ದರೋಡೆ

ಕೊಲೆ ಮನೆ, ದೆವ್ವದ ಮನೆ ಎಂದೆಲ್ಲಾ ಹೇಳುತ್ತಾರೆ ಮಗೂ ನೀನು ಅದೆಲ್ಲಾ ನಂಬಬೇಡ.

ನನ್ನ ತಮ್ಮ ದೇವರಂಥಾ ಮನುಷ್ಯ. ಅವನು ಸತ್ತು ಸ್ವರ್ಗ ದಲ್ಲಿದಾನಪ್ಪಾ ! ಅದೇನೂ ಭಯಪಡಬೇಡ. ಏನೋ ಯೋಚನೆ ಮಾಡುತ್ತಾ ನಿಂತೆಯಲ್ಲಾ ಯಾರಾದರೂ ಈ ಮನೆಗೆ ಹೋಗಬೇಡಾ ಎಂದು ಹೇಳಿ ಕೊಟ್ಟರೋ ಎಂದು ನನಗೆ ತುಂಬಾ ಚಿಂತೆಯಾಯಿತು ಮಗೂ.

ಅಜ್ಜೀ ! ನನಗೆ ಭಯ ಅಂದರೆ ಏನೂ ಅನ್ನೋದೇ ಗೊತ್ತಿಲ್ಲ. ನಡು ಕಾಡಿನಲ್ಲಿ ಬಿಟ್ಟರೂ ಧೈರ್ಯವಾಗಿ ಬರುತ್ತೇನೆ. ಯಾರು ಏನು ಹೇಳಿದರೂ ಈ ಮನೆಗೆ ಬರುವುವಕ್ಕೆ ಹೆದರುವುದಿಲ್ಲ ಬಂದೇ ಬರುತ್ತೇನೆ.

ಮಗೂ ನನ್ನ ಕಂದಾ ! ನೀನು ನನ್ನ ಕರುಳಿನ ಕುಡಿಯೋ ! ಅನ್ನುವಂತಹ ಆತ್ಮೀಯ ಪ್ರೀತಿ ನಿನ್ನ ಮೇಲೆ. ಜೋಪಾನ ಕುಮಾರಾ, ಯಾವ ಅಪಾಯಕ್ಕೂ ಸಿಕ್ಕಿಕೊಳ್ಳಬೇಡ ಇಲ್ಲೇ ಊಟ ಮಾಡಿ ಇಲ್ಲೇ ಇರು ಇನ್ನು ಮೇಲೆ. ಎಂದು ಅಜ್ಜಿ ತನ್ನ ಪ್ರೀತಿಯನ್ನು ಹತ್ತಿಕ್ಕಲಾರದೆ ಕಾಳಿಯ ಬೆನ್ನು ನೇವರಿಸಿದಳು. ಇರು ಮಗು ಹಾಲು ಕಾಸಿ ತರುತ್ತೇನೆ ಎಂದು ಒಳಗೆ ಹೋದಳು–ತಕ್ಷಣ ಕಾಳಿಯ ಎದೆ ಧಡಕ್ ಎಂದಿತು, ಹೀಗೆ ಯಾರಾದರೂ ನನ್ನ ಹತ್ತಿರ ಬಂದು ನನ್ನನ್ನು ಮುಟ್ಟಿದ್ದರೆ ಅವರನ್ನು ಎರಡು ತುಂಡಾಗಿ ಕತ್ತರಿಸುತ್ತಿದ್ದೆನಲ್ಲಾ ! ಈಗಲೂ ಈ ಮುದುಕಿಯನ್ನು ಹೊಸಕಿ ಹಾಕುವುದು ಎಷ್ಟರಲ್ಲಿದೆ ? ನರಘಾತುಕನಾದ ನಾನು ಈ ಮುದುಕಿಯ ಮಮತೆಯಲ್ಲಿ ಕರಗಿ ಹೋಗುತ್ತಿದ್ದೇನೆ.

ನನ್ನ ಕ್ರೂರ ಸ್ವಭಾವ ಎಂದು ಭುಗಿಲ್ ಎಂದು ಮೇಲೆ ಏಳು ವುದೋ ! ನನಗೇ ಗೊತ್ತಿಲ್ಲ. ನಾನು ಬೆಳೆದ ವಾತಾವರಣ ನಿರ್ದಯೆ, ಕೊಲೆ–ಲೂಟಿ– ಇಂತಹ ಸ್ವಭಾವವನ್ನು ಹತ್ತಿಕ್ಕಿ ಸಾಧು ಸ್ವಭಾವವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದು ನನಗೆ ಬಹಳ ಕಷ್ಟವಾಗಿದೆ ಯಲ್ಲಾ ! ಆ ರೀತಿ ಹೇಡಿಯಾಗಿ ಬಾಳುವುದು ನನ್ನ ಮನಸ್ಸಿಗೆ ವಿರೋಧ ವಾದುದು. ಆದರೆ ? ಆ ದರೋಡೆ[illegible]

ಮನಸ್ಸಿಗೆ ನೆಮ್ಮದಿಯಿಲ್ಲ. ನಾನು ಈ ಮನೆಯ ವಂಶದ ಕುಡಿ ನನ್ನಿಂದ ಈ ಮನೆ ಬೆಳಗಬೇಕು ಎಂದು ತೀರ್ಮಾನಿಸಿದ ಕಾಳೀಪ್ರಸಾದ.

ಅಜ್ಜಿ ಒಳಗಿಂದ ಬಿಸಿ ಬಿಸಿ ಹಾಲು ತಂದು ಕೊಡುತ್ತಾ ನಿನ್ನನ್ನು ಎಷ್ಟು ಹೊತ್ತು ಕೂರಿಸಿ ಬಿಟ್ಟೆ, ತಕೋ ಬಿಸಿಯಾಗಿ ಹಾಲು ಕುಡಿ. ಈವತ್ತು ಚೆನ್ನಾಗಿ ಅಡಿಗೆ ಮಾಡುತ್ತೇನೆ ಇಲ್ಲೇ ಊಟಕ್ಕೆ ಬಾಪ್ಪಾ.

ಹಾಲನ್ನು ಕುಡಿಯುತ್ತಾ ಕಾಳಿಯ ಮನಸ್ಸು ಮತ್ತೂ ದೃಢ ಪಟ್ಟಿತು. ಹೃದಯ ಹಗುರವಾಯಿತು. ತಾಯಿಯ ಪ್ರೀತಿಯನ್ನು ಕಾಣದ ನನಗೆ ಇಂಥಾ ಮಾತೃ ಹೃದಯದ ಪ್ರೀತಿ ಬೇಕು, ಎಂದುಕೊಂಡ.

ಅಜ್ಜೀ ಹಾಲು ಅಮೃತವಾಗಿತು ಇಷ್ಟೇ ಸಾಕು ನೀನು ಅಡಿಗೆ ಕೆಲಸ ಅಂತ ಏನೂ ನನಗಾಗಿ ಮಾಡಬೇಡ, ಎಂದು ಎದ್ದು ನಿಂತು ಹೊರಡಲು ಸಿದ್ಧನಾದ.

ಅಜ್ಜಿಗಂತೂ ತುಂಬಾ ವ್ಯಸನವಾಯಿತು. ಕುಮಾರಾ ! ಈದಿನ ನನಗಾಗಿ ಊಟಮಾಡಿ ಹೋಗು ಇನ್ನು ಯಾವಾಗ ಬರುತ್ತೀಯೋ ? ಏನೋ ? ಎಂದು ಗೋಗರೆದಳು,

ಆ ಕರುಳಿನ ಕರೆಯನ್ನು ತಳ್ಳಿಹಾಕಲಾರದೇ ಕಾಳೀಪ್ರಸಾದ ಆಯಿತುಬಿಡು ಅಜ್ಜೀ ! ನಾನು ಹೊರಗಡೆ ಸ್ವಲ್ಪ ಹೋಗಿ ಬರುತ್ತೇನೆ. ಅಡಿಗೆ ಮಾಡು ಊಟಮಾಡುತ್ತೇನೆ ಅಂದ.

* * * *

ಅಜ್ಜಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ನೋಡು ಮಗೂ ! ಏನೂ ಸಂಕೋಚ ಇಟ್ಟುಕೊಳ್ಳಬೇಡ. ನೀನೇ ಆವತ್ತು ಬೇಕಾದಷ್ಟು ಸಾಮಾನು ತಂದುಕೊಟ್ಟಿದ್ದೀ ಇದು ನಿನ್ನ ಮನೆಯೇ ಎಂದು ತಿಳಿದುಕೋ, ಬೇಗ ಬಂದುಬಿಡಪ್ಪಾ, ಎಂದು ಅಕ್ಕರೆಯಿಂದ ಹೇಳಿದಳು.

ಕಾಳಿ ಮನಸ್ಸಿನಲ್ಲಿಯೇ ಅಂದುಕೊಂಡ, ಹೌದು ಇದು ನನ್ನ ಮನೆಯೇ, ಅಜ್ಜೀ ನೋಡು ಮರತೇಬಿಟ್ಟೆ ಚಳಿಕಾಲ ಅಂತ ನಿನಗಾಗಿ ಇದೋ ಕಂಬಳಿ–ದುಪ್ಪಟಿ, ತಂದಿದೀನಿ ತಕೋ ಹೊದ್ದುಕೋ, ಎಂದು ಬ್ಯಾಗಿನಿಂದ ತೆಗೆದುಕೊಟ್ಟ.

ಕುಮಾರಾ ! ನನ್ನ ಮೇಲೆ ನಿನಗೇಕೆ ಇಷ್ಟು ದಯೆ ಇದುವರೆಗೂ ಒಂಟಿ ಜೀವ ಕಾಲಕಳೆಯುತ್ತಿದ್ದೆ. ನನ್ನವರು ಅಂತ ಯಾರೂ ಇಲ್ಲ, ಈ ಊರಿನ ಜನ ಒಬ್ಬರೂ ಈ ಮನೆಗೆ ಸುಳಿಯುತ್ತಿರಲಿಲ್ಲ. ನೀನು ನನ್ನ ಭಾಗದ ದೇವರೇ ಆಗಿದ್ದೀಪ್ಪಾ ; ನೂರು ಕಾಲ ಸುಖವಾಗಿ ಬದುಕು ಮಗೂ-ಎಂದು ಹೃದಯ ತುಂಬಿ ಹೇಳಿದಳು.

ಇನ್ನು ಕಾಳೀಪ್ರಸಾದ ಹೊರಟುನಿಂತ. ಮಗೂ ನಿನ್ನ ಹೆಸರೇ ಮರೆತೆ, ಏನಂದೆ ? ಕಾಳೀಪ್ರಸಾದ, ಅಜ್ಜಿ ಎಂದು ಹಿಂತಿರುಗಿ ಹೇಳಿ ಹೊರಟು ಬಿಟ್ಟ-ಅಜ್ಜಿ ಅವನನ್ನು ಕುಮಾರಾ ! ಎಂದೇ ಕರೆಯುತ್ತಿದ್ದಳು.

ಅಜ್ಜಿ ಮುಂಬಾಗಿಲಿಗೆ ಬಂದು ನಿಂತು ನೋಡಿದಳು. ಅವನು ನಡೆದು ಹೋಗುವ ಠೀವಿ, ಆ ನಿಲುವಿಗೆ ತಕ್ಕ ಮೈಕಟ್ಟು, ಬೆಲೆಬಾಳುವ ಉಡುಪು, ನಡಿಗೆಯ ರೀತಿ–ಇವನ್ನು ನೋಡುತ್ತಾ ಒಂದು ನಿಟ್ಟುಸಿರು ಆ ಹೆಣ್ಣಿನಿಂದ ಹೊರಬಂತು. ಮೆಲ್ಲನೆ ಅಂದುಕೊಳ್ಳುತ್ತಾ, ಹುಂ ನನ್ನ ತಮ್ಮ ಪ್ರಮೋದ್ ಪಾಟೀಲ್ ಈ ವಯಸ್ಸಿನಲ್ಲಿ ಹೀಗೇ ಇದ್ದ ಎಂದುಕೊಂಡು ಒಳಕ್ಕೆ ಹೋದಳು.

ಅಜ್ಜಿಗೆ ಸಂಭ್ರಮ, ಆ ಹುಡುಗ ಊಟಕ್ಕೆ ಬರುತ್ತಾನೆ, ಒಳ್ಳೆ ಅಡಿಗೆ ಮಾಡಬೇಕು. ಎಂದು ಅಡಿಗೆಗೆ ಸಿದ್ಧ ಮಾಡಿದಳು.

ಹಾಗೇ ಯೋಚಿಸುತ್ತಾ ಅಯ್ಯೋ ! ನನ್ನ ಬುದ್ಧಿಗೆ ಏನು ಮಂಕು ಬಡಿಯಿತು ? ಏನಪ್ಪಾ ! ನಿನಗೆ ಮದುವೆಯಾಗಿದೆಯೇ ? ಎಲ್ಲಿದ್ದೀ ? ಎಂದುಕೂಡಾ ಕೇಳಲಿಲ್ಲ.

ಪ್ರಾಯದ ಹುಡುಗ–ರೂಪವಂತ, ಮದುವೆ ಆಗಿರಬಹುದು ಎಂದು ಕೊಂಡು, ಕೆಲಸ ಮುಂದುವರಿಸಿದಳು.

ಕಾಳೀಪ್ರಸಾದನಿಗೆ ಅನೇಕ ಯೋಚನೆಗಳು, ತನ್ನ ಯೋಚನೆಯಲ್ಲಿ ತನ್ನ ನಂಬಿಕಸ್ತರಾದ ಆ ನಾಲ್ಕು ಜನ ಅನುಯಾಯಿಗಳನ್ನು ಜೊತೆಯಲ್ಲಿ ಸೇರಿಸಿಕೊಳ್ಳಬೇಕು ಅವರಿಗೆ ನಾನಿರುವ ಸ್ಥಳವನ್ನೇ ಹೇಳಿಲ್ಲ, ಎಂದು ಯೋಚಿಸುತ್ತಾ ಸಿಂಧೂಪುರದ ರೀತಿ ರಿವಾಜನ್ನೂ ಊರಿನ ಬೌಂಡ್ರಿಯನ್ನೂ ತಿಳಿದುಕೊಳ್ಳಲು ಊರೆಲ್ಲಾ ಸುತ್ತಾಡಿದ. ಒಂದು ಹೋಟೆಲಿಗೆ ಬಂದು ಚಹಾ ಕುಡಿಯಲು ಕುಳಿತುಕೊಂಡ.

ಚಹಾ ತಂದ ಹುಡುಗ ತಟ್ಟೆಯಲ್ಲಿ ಲೋಟಗಳನ್ನು ಇಟ್ಟುಕೊಂಡು ತರುತ್ತಿದ್ದ. ಕೈ ಜಾರಿ ತಟ್ಟೆ ಕೆಳಗೆ ಬಿತ್ತು.

ಎಲ್ಲಾ ಗಾಜಿನ ಲೋಟಗಳೂ ಒಡೆದು ಹೋದುವು. ಹೋಟೆಲ್ ಯಜಮಾನ ಕೋಪದಿಂದ ಬಂದ, ಹುಡುಗನ ತಲೆಮೇಲೆ ಪಟ್ ಪಟ್ ಎಂದು ಬಡಿದು ಬದ್ಮಾಷ್, ಅಷ್ಟು ಲೋಟ-ಟೀ ಎಲ್ಲಾ ಹೋಯಿತಲ್ಲೋ.... ಯಾರು-ನಿಮ್ಮಪ್ಪ ಕೊಡುತ್ತಾನೇನೋ ಕತ್ತೆ. ಎಂದು ಹುಡುಗನ ಬೆನ್ನು-ಕಪಾಳಕ್ಕೆ ಹೊಡೆಯುತ್ತಲೇ ಇದ್ದ. ಹುಡುಗ ಉಸಿರೆತ್ತದೆ ಒಡೆದ ಗಾಜುಗಳನ್ನು ಆರಿಸುತ್ತಿತ್ತು.

ಕಾಳೀಪ್ರಸಾದ ಬಿಡಿ-ಬಿಡಿ ಹೊಡೆಯಬೇಡಿ ಹುಡುಗನ್ನ, ಅಂದ. ಕರುಣೆಯ ಛಾಯೆ ಸ್ವಲ್ಪ ಮೂಡುತ್ತಿತ್ತು ಅವನಿಗೆ. ಹೋಟೆಲ್ ಮಾಲೀಕ ಕಾಳೀಪ್ರಸಾದನನ್ನು ನೋಡಿ ಯಾರೋ ದೊಡ್ಡಮನುಷ್ಯರು, ತನಗೇನಾದರೂ ತೊಂದರೆಯಾದೀತೆಂದು ಹುಡುಗನನ್ನು ಬಿಟ್ಟು.

ಅಲ್ಲಸ್ವಾಮಿ ! ಇವನು ತಂದೆ–ತಾಯಿ ದಿಕ್ಕು ಇಲ್ಲದ ಹುಡುಗ, ನಾನು ಏನೋ ದಯೆ ಮಾಡಿ ನಮ್ಮ ಹೋಟೆಲ್‌ನಲ್ಲಿ ಇಟ್ಟುಕೊಂಡು ಊಟ ತಿಂಡಿ ಕೊಟ್ಟೆ. ಇವನು ಮಾಡುವ ಕೆಲಸ ನೋಡಿದಿರಾ ನಮಗೆ ಎಷ್ಟು ನಷ್ಟ ಎಂದ.

ಕೂಡಲೇ ಕಾಳೀಪ್ರಸಾದ ತನ್ನ ಜೇಬಿನಿಂದ ಒಂದು ನೂರು ರೂಪಾಯಿ ತೆಗೆದು ಕೊಟ್ಟು ಮಾಲೀಕರೇ ಆ ಲೋಟಗಳು ಟೀ ಬೆಲೆ ಎಷ್ಟೋ ತೆಗೆದುಕೊಂಡು ಬಾಕಿ ಕೊಡಿ ಎಂದ.

ಹೋಟೆಲ್ ಮಾಲೀಕನಿಗೆ ಜಂಘಾಬಲವೇ ಉಡುಗಿ ಹೋಯಿತು. ಇವನು ಯಾರೋ ದೊಡ್ಡ ಅಧಿಕಾರಿಯಂತೆ ಕಾಣುತ್ತಾನೆ. ಇನ್ನು ಪೋಲೀಸು ಕೇಸು-ಎಂದೆಲ್ಲಾ ಮಾಡಿದರೆ ನನ್ನ ಗತಿಯೇನು ?

ಅಂದುಕೊಂಡು. ಇರಲಿ ಬಿಡಿ ಸ್ವಾಮಿ ಇಂತಹ ನಷ್ಟ ನಮಗೆ ಹುಡುಗರಿಂದ ಆಗುತ್ತಲೇ ಇವೆ ಅಂದ.

ಇಲ್ಲ ತೆಗೆದುಕೊಳ್ಳಿ, ಈ ಹುಡುಗನನ್ನು ನಾನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ, ಹೇಗಿದ್ದರೂ ಅನಾಥ ಎಂದಿರಿ, ಎಂದು

ಹುಡುಗನ ಕೈ ಹಿಡಿದು ಬರುತ್ತೀಯೇನೋ ನನ್ನ ಜೊತೆ ? ಎಂದು ಕೇಳಿದ ಕಾಳೀಪ್ರಸಾದ.

ಹುಡುಗ ಏನೂ ಹೇಳಲಾರದೇ ಬಿಕ್ಕಳಿಸಿ ಅಳುತ್ತಿತ್ತು.

ಆಗ ಹೋಟೆಲ್ ಮಾಲೀಕ ಹುಡುಗನನ್ನು ಬಿಟ್ಟುಕೊಡುವನೇ ? ಹಗಲೂ-ರಾತ್ರಿ ಚಾಕರಿ ಮಾಡುತ್ತಿದ್ದ ಹುಡುಗ.

ಇಲ್ಲ ಸಾರ್ ಅವನು ನಮ್ಮ ಹೋಟೆಲ್‌ನಲ್ಲಿ ಒಗ್ಗಿಬಿಟ್ಟಿದ್ದಾನೆ. ಇಲ್ಲಿ ಬಿಟ್ಟು ಬರುವುದಿಲ್ಲ ಅಂದ.

ಹೌದು-ಹೌದು ಅವನೇಕೆ ಬಿಡುವುದಿಲ್ಲ, ನೀವು ಅವನನ್ನು ಬಿಡುವುದಿಲ್ಲ ಅಷ್ಟೆ. ಇದೋ ತೆಗೆದುಕೊಳ್ಳಿ ಈ ಹಣ, ಹುಡುಗನನ್ನು ನಾನು ಕರೆದುಕೊಂಡು ಹೋಗುತ್ತೇನೆ. ಎಂದದ್ದೇ ಕಾಳೀಪ್ರಸಾದ ಹೋಟೆಲ್ ಮಾಲೀಕರಿಗೆ 500 ರೂಪಾಯಿ ಕೊಟ್ಟು ಬಾರೋ ನನ್ನ ಜೊತೆ, ಎಂದು ಹುಡುಗನ ಕೈ ಹಿಡಿದು ಕರೆದುಕೊಂಡು ನಡದೇಬಿಟ್ಟ.

ನಿನ್ನ ಹೆಸರೇನೋ ? ಏಟಿನ ನೋವಿನಿಂದ ಬಿಕ್ಕಳಿಸುತ್ತಾ, ಹೋಟೆಲ್ ಯಜಮಾನ್ರು ನನ್ನ ವೆಂಕಮುಂಕಾ ಎಂದು ಕರೆಯುತ್ತಿದ್ದರು ಎಂದ ಆ ಹುಡುಗ.

ಸರಿ-ಇರಲಿ ನಾನು ಹೇಳಿದಹಾಗೆ ಕೇಳ್ತಿಯಾ ?

ಹೂಂ ಎಂದು ತಲೆಯಾಡಿಸಿದ ವೆಂಕ.

ಆ ಹುಡುಗನನ್ನು ಕರೆದುಕೊಂಡು ಅಜ್ಜಿಯ ಮನೆಗೆ ಬಂದ ಕಾಳೀ ಪ್ರಸಾದ. ಇದೆಲ್ಲಾ ರಗಳೆ ಆಗುವ ಹೊತ್ತಿಗೆ ಸ್ವಲ್ಪ ಹೊತ್ತು ಮೀರಿತು. ಅಜ್ಜಿ ಬಾಗಿಲಲ್ಲೇ ಕುಳಿತು ನಿರೀಕ್ಷಿಸುತ್ತಿದ್ದಳು.

ಇವನನ್ನು ಕಂಡದ್ದೇ ಸಧ್ಯ ಬಂದೆಯಪ್ಪಾ ! ನಾನು ಪಾಪಿ, ಮನೆಗೆ ಬಂದ ಅತಿಥಿಗೆ ಊಟ ಇಡುತ್ತೇನೋ ಇಲ್ಲವೋ ಎಂದುಕೊಂಡಿದ್ದೆ.

ಅಜ್ಜೀ ಒಬ್ಬರಿಗೆ ಇಬ್ಬರು ಅತಿಥಿಗಳು ಬಂದಿದ್ದೇವೆ ಧಾರಾಳವಾಗಿ ಬಡಿಸು ಎಂದ.

ಇದ್ಯಾರೋ ಮಗು ಈ ಹುಡುಗಾ ?

ಆಮೇಲೆ ಹೇಳ್ತೀನಿ ಈಗ ಒಂದು ಚೊಂಬು ನೀರುಕೊಡು ಆ ಹುಡುಗ ಕೈಕಾಲು ಮುಖ ತೊಳೆದುಕೊಳ್ಳಲಿ ಅಂದ.

ಹಜಾರದಲ್ಲಿ ಎರಡು ತಟ್ಟೆ ಹಾಕಿ ಹುಡುಗನಿಗೂ ಕಾಳೀಪ್ರಸಾದನಿಗೂ ಬಡಿಸಿದಳು ಅಜ್ಜಿ.

ಕಾಳೀಪ್ರಸಾದ ಇಂತಹ ರುಚಿಕರವಾದ ಬಗೆಬಗೆಯ ಅಡುಗೆಯನ್ನು ಎಲ್ಲಿ ತಿಂದಿರಬೇಕು? ಸಿಕ್ಕಿಸಿಕ್ಕಿದಕಡೆ ಏನೋ ಒಂದು ಹೊಟ್ಟೆ ತುಂಬಿಸಿ ಕೊಳ್ಳುವುದು ಅಷ್ಟೆ.

ಅವನು ಸಾಕುಸಾಕೆಂದರೂ ಅಜ್ಜಿ ಪ್ರೀತಿಯಿಂದ ತೃಪ್ತಿಯಾಗಿ ಬಡಿಸಿದಳು.

ಊಟ ತುಂಬಾ ಚೆನ್ನಾಗಿತ್ತು ಅಜ್ಜಿ ನನಗೋಸ್ಕರ ಯಾಕೆ ಇಷ್ಟೆಲ್ಲಾ ಕಷ್ಟಪಟ್ಟು ಮಾಡಿದೆ?

ಅದಿರಲಿ ಕುಮಾರ? ನಿನಗೆ ಮದುವೆಯಾಗಿದೆಯೇ? ನೀನು ಎಲ್ಲಿ ವಾಸ ಮಾಡುತ್ತೀ? ಈ ಹುಡುಗ ಯಾರು? ಎಂದು ಒಂದೇ ಸಮ ಪ್ರಶ್ನೆ ಕೇಳಿದಳು.

ಅಜ್ಜೀ ನೀನು ಊಟ ಮಾಡು ಎಲ್ಲಾ ಹೇಳುತ್ತೇನೆ ಆಮೇಲೆ. ನಾನು ಈಗ ಮಾಡುವುದಿಲ್ಲ. ಮೊದಲು ನಿನ್ನ ವಿಚಾರ ಹೇಳು. ಎಂದು ಕುಳಿತು ಬಿಟ್ಟಳು ಮುದುಕಿ.

ಲೋ! ವೆಂಕಾ–ನೀನು ತಟ್ಟೆ ತೊಳೆದು ನೆಲವೆಲ್ಲಾ ಒರಸಿ ಕ್ಲೀನ್ ಮಾಡೋ. ಎಂದು ಹುಡುಗನಿಗೆ ಹೇಳಿ ಕುರ್ಚಿಯಲ್ಲಿ ಕುಳಿತ ಕಾಳೀ ಪ್ರಸಾದ.

❈ ❈ ❈ ❈

ಅಜ್ಜಿ ಅವನ ಹತ್ತಿರ ಕುಳಿತು ಮಗೂ, ಈ ಹುಡುಗ ಯಾರಪ್ಪಾ, ಅವನೇಕೆ ಅದೆಲ್ಲಾ ಮಾಡಬೇಕು? ನಾನು ಮಾಡಿಕೊಳ್ಳುತ್ತೇನೆ ಅಂದಳು.

ಅಜ್ಜೀ....ಇನ್ನುಮೇಲೆ ನೀನು ಏನೂ ಕೆಲಸವನ್ನೂ ಮಾಡಬೇಡ. ಈ ಹುಡುಗ ಇನ್ನು ಇಲ್ಲೇ ಇರುತ್ತಾನೆ. ನೀನು ಹೇಳಿದ ಕೆಲಸವನ್ನೆಲ್ಲಾ ಮಾಡುತ್ತಾನೆ. ಹೊರಗೆ ಅಂಗಡಿಯಿಂದ ಸಾಮಾನೂ ತಂದುಕೊಡುತ್ತಾನೆ.

ಅಯ್ಯೋ ! ಕುಮಾರ ಬೇಡ–ಬೇಡ ನನಗ್ಯಾಕಪ್ಪಾ ಆಳು–ಕಾಳು. ನಿನ್ನ ಮನೆಗೆ ಇಟ್ಟುಕೋ, ನಿನ್ನ ಮನೆಯಲ್ಲಿ ಯಾರು–ಯಾರು ಇದಾರಪ್ಪಾ ?

ಅಯ್ಯೋ....ಅಜ್ಜೀ ನಾನೊಬ್ಬ ಪರದೇಶಿ. ನನಗೆ ಅಪ್ಪ–ಅಮ್ಮ ಯಾರೂ ಇಲ್ಲ. ನನಗೆ ಮದುವೆಯೂ ಆಗಿಲ್ಲ ಮನೆಯೂ ಇಲ್ಲ ಹೀಗೆ ಎಲ್ಲೀ ಅಂದ್ರೆ ಅಲ್ಲಿ ತಿರುಗುತ್ತಾ ಇರುತ್ತೀನೆ ಅಂದ.

ಮತ್ತೆ ನನ್ನ ಮನೆಗೆ ಹೇಗೆ ಬಂದಿಯೋ ಮಗೂ–

ಅದೇ ಅಜ್ಜೀ....ಋಣಾನುಬಂಧ ಅನ್ನೋದು. ನಮ್ಮ ತಂದೆ ನಿಮ್ಮ ತಮ್ಮನ ಸ್ನೇಹಿತರಂತೆ. ಅವರು ಹೇಳುತ್ತಲೇ ಇದ್ದರು. ಪ್ರಮೋದ ಪಾಟೀಲ್ ನನ್ನ ಪ್ರಾಣ ಸ್ನೇಹಿತ ಎಂದು. ನಮ್ಮ ತಂದೆಯೂ ಸತ್ತುಹೋದದು

ಒಂದು ಸಲ ನೋಡೋಣ ನಮ್ಮ ತಂದೆ ಸ್ನೇಹಿತರನ್ನು ಅಂತ ಬಂದೆ. ಅವರ ಕೊಲೆಯಾದ ವಿಚಾರ ಈಗ ನಿಮ್ಮಿಂದ ತಿಳಿಯಿತು.

ಹೋಗಲಿ ಬಿಡು ಮಗು....ನಿನಗೂ ಯಾರೂ ಇಲ್ಲ ನನಗೂ ದಿಕ್ಕಿಲ್ಲ ಇನ್ನು ಎಲ್ಲಿಯೂ ಅಲೆಯಬೇಡ ಇಲ್ಲೇ ಇರಪ್ಪಾ....ಎಂದು ಸಂತೋಷದಿಂದ ಹೇಳಿದಳು ಅಜ್ಜಿ.

ನಾನು ಒಂದೇಕಡೆ ಇರುವವನಲ್ಲ ಅಜ್ಜೀ. ನನಗೆ ನೂರೆಂಟು ಕೆಲಸ, ಬಂದು ಹೋಗುತ್ತೀನೆ. ನಿನಗೆ ಏನು ತೊಂದರೆ ಇದ್ದರೂ ನನಗೆ ಹೇಳು.

ನನಗೇನು ತೊಂದರೆ ಇಲ್ಲಪ್ಪಾ, ನೀನು ಆಗಾಗ ಬರುತ್ತಿರುತ್ತೀಯಲ್ಲಾ ! ಅದಕ್ಕೆ ಇತ್ತಕಡೆಯೇ ಸುಳಿಯದ ಜನ ಈಗ ನನ್ನನ್ನು ಮಾತಾಡಿಸಿ ಕೇಳುತ್ತಾರೆ. ಏನು ಪದ್ಮಕ್ಕಾ ನಿಮ್ಮನೆಗೆ ಯಾರೋ ದೊಡ್ಡ ಮನುಷ್ಯ ಯುವಕ ಬರುತ್ತಿದಾನಲ್ಲ ! ಯಾರು ಪದ್ಮಕ್ಕಾ ?

ಎಂದು ನೀನು ಬಂದು ಹೋಗುವಾಗ ಬಗ್ಗಿ ಬಗ್ಗಿ ನೋಡುತ್ತಾರೆ ಸಧ್ಯ ..... ಕಾಳೀಪ್ರಸಾದ.

ಮಾತು ತಡೆದು ಸಧ್ಯ ಏನಜ್ಜೀ ? ನನಗೆ ಭಯವಾ ? ಏನೂ ಭಯ ಪಡಬೇಡ, ನನ್ನ ತಮ್ಮನ ಸ್ನೇಹಿತನ ಮಗ ಎಂದು ಹೇಳು.

ಕಾಳೀಪ್ರಸಾದ ಮನೆಯ ಸುತ್ತಾ ಕಣ್ಣಾಡಿಸಿ ನೋಡಿದ. ಇವರು ಕುಳಿತಿದ್ದ ಒಂದು ವರಾಂಡ, ಅದಕ್ಕೆ ಸೇರಿದಂತೆ ಒಂದು ಕೊಠಡಿ, ಆ ಕೊಠಡಿಯನ್ನೇ ಅಜ್ಜಿ ಅಡಿಗೆ ಮನೆ ಮಾಡಿಕೊಂಡು ಅಷ್ಟರಲ್ಲೇ ತನ್ನ ವಾಸಕ್ಕೆ ಇಟ್ಟುಕೊಂಡಿದ್ದಳು. ಆ ವರಾಂಡದಿಂದ ಒಳಕ್ಕೆ ಹೋಗುವಂತೆ ಒಂದು ದೊಡ್ಡ ಬಾಗಿಲು. ಅದು ತೇಗದ ಮರದ ಚಿತ್ರ ಕೆಲಸ ಮಾಡಿದ ಸೊಗಸಾದ ಬಾಗಿಲು. ಅದಕ್ಕೆ ಬೀಗ ಹಾಕಿ ಭದ್ರವಾಗಿ ಮುಚ್ಚಿತ್ತು.

ಕಾಳೀಪ್ರಸಾದ ಅತ್ತ ನಿಗಾಇಟ್ಟು ನೋಡಿದ. ಈ ಮನೆ ಒಳಗಡೆ ಹೇಗಿರಬಹುದೆಂದು ಅವನಿಗೆ ಕುತೂಹಲವಾಯಿತು.

"ಅಜ್ಜೀ ! ಈ ದೊಡ್ಡ ಬಾಗಿಲನ್ನೇಕೆ ಮುಚ್ಚಿದ್ದೀರಿ" ? "ಅಯ್ಯೋ.... ಅದರ ಸುದ್ದಿ ಬಿಡಪ್ಪಾ, ನನ್ನ ವಾಸಕ್ಕೆ ಇದಕ್ಕಿಂತ ಬೇಕೇ ?"

ಅಲ್ಲಾ ಅಜ್ಜೀ ನಾನೊಂದು ಸಲ ಒಳಗೆ ನೋಡಬಹುದೇ ? ಅಂತ.

ಕುಮಾರಾ ! ಆ ಬಾಗಿಲು ಮುಚ್ಚಿ ಇಪ್ಪತ್ತು ವರ್ಷಗಳೇ ಆದುವು. ನನ್ನ ತಮ್ಮ ಸತ್ತ ಎರಡೇ ವರ್ಷಗಳಲ್ಲಿ ನಮ್ಮ ಅಪ್ಪ–ಅಮ್ಮ ಇಬ್ಬರೂ ಸತ್ತುಹೋದರು.

ಹಾಗಾದರೆ ನಿಮ್ಮ ಅಪ್ಪ–ಅಮ್ಮ ಇಲ್ಲಿಯೇ ವಾಸವಾಗಿದ್ದರೇ ?
ಹೌದು ಮಗೂ ಅವರು ಹೋದಮೇಲೆ ಯಾರೂ ವಾಸವಾಗಿರಲಿಲ್ಲ. ನಾನೂ ಹೀಗಾಗಿ ನನಗೆ ಯಾರೂ ದಿಕ್ಕಿಲ್ಲದಾಗ ನಮ್ಮ ಅಪ್ಪನ ಮನೆ ಎಂದು ಇಲ್ಲಿ ಬಂದು ಸೇರಿದೆ.

ಸರಿ–ಬಾಗಿಲು ತೆಗಿ ಅಜ್ಜೀ. ಒಂದು ಸಲ ನಾನು ಒಳಗೆ ಹೋಗಿ ನೋಡುತ್ತೇನೆ.

ಬೇಡ–ಬೇಡ ಕುಮಾರಾ ! ಆ ಬಾಗಿಲದೊಳಕ್ಕೆ ಯಾರೂ ಹೋಗುವುದಿಲ್ಲ- ಕೊಲೆಯಾದ ಮನೆ ಎಂದು ಹೆದರುತ್ತಾರೆ. ಅಯ್ಯೋ ! ಅಜ್ಜಿ ನನಗೆ ಹೆದರಿಕೆ ಅನ್ನುವುದೇ ಇಲ್ಲ. ಬೀಗ ತೆಗೆ ನಾನು ಹೋಗಿ ನೋಡುತ್ತೇನೆ ಎಂದು ಹಠ ಹಿಡಿದ ಕಾಳೀಪ್ರಸಾದ. ಜೋಪಾನವಾಗಿ ಬೀರುವಿನಲ್ಲಿ ಇಟ್ಟಿದ್ದ ಬೀಗದಕೈ ತಂದು ಕಾಳೀಪ್ರಸಾದನ ಕೈಗೆಕೊಟ್ಟಳು. ಎಷ್ಟೋ ದಿನಗಳಿಂದ ಹಾಕಿದ್ದ ಬೀಗ ತುಕ್ಕು ಹಿಡಿದು ಬಿಗಿಯಾಗಿತ್ತು. ದರೋಡೆ

ಕೋರಂಗೆ ಬೀಗ ಒಡೆಯುವುದು ಹೇಳಿಕೊಡಬೇಕೇ ? ಬೀಗದ ಕೈ ತಂದು ಬಲವಾಗಿ ತಿರುಗಿಸಿದ, ಬೀಗ ತೆಗೆದುಕೊಂಡಿತು. ದೊಡ್ಡದಾದ ಒಂದೇ ಬಾಗಿಲು. ಹಿಂದಕ್ಕೆ ತಳ್ಳಿದ ಕೂಡಲೇ ಕಿ....ರ್....ಎಂದು ಶಬ್ದಮಾಡುತ್ತಾ ತೆರೆಯಿತು. ಮನೆಯ ತುಂಬಾ ಧೂಳು, ಜೇಡಬಲೆ ತುಂಬಿತ್ತು. ಕಿಟಕಿ ಬಾಗಿಲು ಮುಚ್ಚಿದ್ದರಿಂದ ಏನೂ ಕಾಣಿಸದೆ ಅ....ಬೋ....ಎಂದು ಕತ್ತಲೆ ತುಂಬಿತ್ತು. ಕಾಳೀಪ್ರಸಾದ ಎಷ್ಟೋ ಕಗ್ಗತ್ತಲೆ ಮನೆಗೆ ನುಗ್ಗಿ ದರೋಡೆ ಮಾಡಿದ್ದ. ಆದರೆ ಕತ್ತಲೆ ಕವಿದಿದ್ದ ಆ ಮನೆಯೊಳಗೆ ಹೆಜ್ಜೆ ಇಟ್ಟ ಕೂಡಲೇ ಜೀವ ಝುಗ್ ಎಂದಿತು.

❋ ❋ ❋ ❋

ಕಣ್ಣು ಬಿಟ್ಟಿದ್ದರೂ ಏನೂ ಕಾಣಿಸಲಿಲ್ಲ. ಅಜ್ಜೀ ಈ ಮನೆಗೆ ಕಿಟಕಿಗಳಿವೆಯೋ ?

ಇದೆ ಕಣಪ್ಪಾ ! ದೊಡ್ಡ ದೊಡ್ಡ ಕಿಟಕಿಗಳಿವೆ. ಎಲ್ಲಾ ಮುಚ್ಚಿವೆ. ಈ ಕತ್ತಲು ಕಾಡಿನಲ್ಲಿ ಏನು ನೋಡುತ್ತೀ ಬಾ....ಕುಮಾರಾ ಬಾಗಿಲು ಹಾಕಿ ಬೀಗ ಹಾಕಿಬಿಡು. ಎಂದು ಹೊರಗೆ ನಿಂತು ಹೇಳಿದಳು ಅಜ್ಜಿ.

ಧೈರ್ಯವಾಗಿರು ಅಜ್ಜೀ, ನಾನು ನೋಡುತ್ತೇನೆ. ಎಲ್ಲಿ ? ಒಂದು ದೀಪ ಹಚ್ಚಿಕೊಡು ಅಂದ. ಹಗಲಲ್ಲೇ ಕತ್ತಲು ಕವಿದಿತ್ತು. ಅಜ್ಜಿ ಏನೋ ಯೋಚನೆಯಿಂದ ದೀಪ ಹಚ್ಚಿತಂದು ಏನೋಪ್ಪಾ ನಿನ್ನಿಷ್ಟ ತಗೋ. ದೀಪವನ್ನು ಹಿಡಿದು ಒಳಕ್ಕೆ ಹೋದ ಕಾಳೀಪ್ರಸಾದ. ವಿಶಾಲವಾದ ಮನೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆ ಹಾಲಿನಲ್ಲಿ ಹೋಗಬೇಕಾದರೆ ಕಾಳೀಪ್ರಸಾದನ ಲೆಕ್ಕದ ಪ್ರಕಾರ ನೂರು ಹೆಜ್ಜೆ ಹೋಗಬೇಕಾಗಿತ್ತು. ದೀಪದ ಬೆಳಕಿನಲ್ಲಿ ಕಿಟಕಿಗಳು ಎಲ್ಲಿವೆ ? ಗೋಡೆ ಎಲ್ಲಿ ? ಎಂದು ನೋಡಿಕೊಂಡು ಭದ್ರವಾಗಿ ಮುಚ್ಚಿದ ಕಿಟಕಿ ಬಾಗಿಲುಗಳನ್ನು ಬಲವಾಗಿ ಎಳೆದು ತೆಗೆದ ಅಜ್ಜಿಗೆ ಆಶ್ಚರ್ಯ–ಭಯ–ಒಟ್ಟಿಗೆ ಆಯಿತು. ಕುಮಾರಾ ! ಏನು ಧೈರ್ಯವಪ್ಪಾ ನಿನಗೆ. ಈ ಮನೆ ಬೆಳಕು ಕಂಡು ಎಷ್ಟೋ ವರ್ಷಗಳಾಯಿತಪ್ಪಾ. ಬಾಗಿಲ ಹೊರಗೇ ನಿಂತು ಬಗ್ಗಿ ನೋಡಿದಳು.

ಅಜ್ಜೀ ಇದು ನಿಮ್ಮ ಮನೆಯೇ ಅಲ್ಲವೇ ? ಭಯ ಯಾಕೆ ? ಒಳಗೆ ಬಾ....ಎಂದ.

ಹೌದು ಕುಮಾರಾ–ನಾನು ಅಡಿ ಕುಣಿದು ಕುಪ್ಪಳಿಸಿ ಬೆಳೆದ ಮನೆ ಇದಪ್ಪಾ ! ಅಬ್ಬ !....ಎಷ್ಟು ಸುಂದರವಾದ ಕಟ್ಟಡ. ದೊಡ್ಡ ದೊಡ್ಡ ಅಲಮಾರುಗಳು ಗೋಡೆಗಳಲ್ಲಿ ಕಂಡಿತು. ಕಾಳೀಪ್ರಸಾದ ಆ ಅಲಮಾರುಗಳ ಮೇಲೆ ಮುಚ್ಚಿದ್ದ ಧೂಳನ್ನು ಕೈಯಿಂದ ಒಂದು ಸಲ ಒರೆಸಿದ. ಥಂಗಾದ. ಅಬ್ಬ ! ಎಂತಹ ಸುಂದರ ಕೆತ್ತನೆಯ ಕೆಲಸ. ದಂತದಿಂದ ಅಲಂಕರಿಸಿದ ಚೌಕಟ್ಟು–ಬಾಗಿಲುಗಳು. ಅಜ್ಜೀ ಆಶ್ಚರ್ಯ. ಈ ಮನೆಯ ಯಜಮಾನರು ಇನ್ನೆಂತಹ ಧನಿಕರಿರಬಹುದು.

ಹೌದು ಕುಮಾರಾ-ಇನ್ನೂ ಆ ಮಧ್ಯದ ಬಾಗಿಲನ್ನು ತೆಗಿ, ಅಲ್ಲಿಯೂ ದೊಡ್ಡ ಹಜಾರ ಇದೆ.

ಬಾಗಿಲು ಕಾಣದಂತೆ ಜೇಡರ ಬಲೆ ಕಟ್ಟಿತ್ತು. ಕಾಳೀಪ್ರಸಾದ ಲೋ–ಯಂಕಾ ! ಇಲ್ಲಿ ಬಾರೋ ಎಂದು ಕರೆದ. ವರಾಂಡದಲ್ಲಿ ಕುಳಿತಿದ್ದ ವೆಂಕ ಓಡಿ ಬಂದು ಏನು ದಣೀ ? ಅಂದ. ಅಲ್ಲಿರೋ ಪರಕೆ ತೆಗೆದು ಕೊಂಡು ಬಾರೋ.

ನೋಡು, ಅಲ್ಲಿರೋ ಧೂಳು ಜೇಡರ ಬಲೆ ಎಲ್ಲಾ ತೆಗಿ ಅಂದ.... ನೋಡಿದರೆ ಅದೂ ಸಹ ಬೆಲೆಬಾಳುವ ಕೆತ್ತನೆ ಕೆಲಸದ ಬಾಗಿಲು. ಅದಕ್ಕೆ ಹಿತ್ತಾಳೆಯ ಹೊಳಪಿನ ಚೌಕಟ್ಟು ಚಿಲಕ ಹಾಕಿತ್ತು. ಅದನ್ನು ಸುಲಭ ವಾಗಿ ತೆಗೆದ ಕಾಳೀಪ್ರಸಾದ. ದೊಡ್ಡ ಹಜಾರ–ಕಂಬ ಸಾಲು ತೊಟ್ಟಿ, ಆ ಹಜಾರದ ನಾಲ್ಕು ಗೋಡೆಗಳಲ್ಲಿಯೂ ಎರಡೆರಡು ಕೊಠಡಿಗಳು. ಬೆಲೆ ಬಾಳುವ ಪೀಠೋಪಕರಣದಿಂದ ತುಂಬಿತ್ತು. ಹಾಗೆಯೇ ಅಡಿಗೆ ಮನೆ–ದೊಡ್ಡದಾದ ಊಟದ ಮನೆ ಇದೆಲ್ಲವೂ ಇತ್ತು. ನೋಡಿ ಕಾಳೀಪ್ರಸಾದನಿಗೆ ತನ್ನ ಬದುಕಿನ ಹಿಂದಿನ ಚಿತ್ರ ಮನಸ್ಸಿನ ಮೇಲೆ ಮೂಡಿ ಬಂತು. ಛೆ....ನಮ್ಮ ದರೋಡೆ ಬದುಕಿನಲ್ಲಿ ರಾಶಿಗಟ್ಟಲೆ ಹಣ ಸಂಪಾದಿಸಿದರೂ ಆ ಕಾಡಿನ ಮಧ್ಯೆ ಬಂಡೆ ಸಂದಿಗಳಲ್ಲಿ ಅವಿತು ವಾಸ. ಅದೆಂತಹ ಬದುಕು ? ಒಂದು ಸುಂದರವಾದ ಮನೆಯಲ್ಲಿ ವಾಸಮಾಡುವ ಅದೃಷ್ಟವೂ ಇರಲಿಲ್ಲ. ಇಂಥಾ ಮನೆಯ ಮಗನಾಗಿ ವಿಧಿ ನನ್ನನ್ನು ಹೇಗೆ ಕೊಂಡೊಯ್ದಿತು ! ಎಂದು ಹಾಗೆಯೇ ನಿಂತ.

ಏನಪ್ಪಾ ! ಯೋಚನೆ ಮಾಡುತ್ತೀ ! ಈ ಮನೆಯಲ್ಲಿರುವ ಸಾಮಾನು ನೋಡಿ ಆಶ್ಚರ್ಯ ಪಡುತ್ತೀಯಾ ? ಹೌದು ಅಜ್ಜಿ....ಎಂತಹ ಬೆಲೆ ಬಾಳುವ ಸಾಮಾನುಗಳು ಉಪಯೋಗಿಸದೆ ಹಾಗೆಯೇ ಬಿದ್ದಿವೆಯಲ್ಲಾ ! ಎಂದು. ಯಾಕೆ ? ಎಂದು ಯೋಚಿಸಿದೆ

ಮಗೂ....ಕುಮಾರಾ ? ನೀನೇನೋ ನನ್ನ ಆತ್ಮೀಯನಂತೆಯೇ ನನ ಗನ್ನಿಸುತ್ತೆ. ನಿನಗೆ ಎಲ್ಲಾ ಹೇಳಬೇಕು ಎನಿಸುತ್ತೆ.

ಈ ಮನೆಯ ವಿಷಯವೇ ಒಂದು ಚರಿತ್ರೆ ಕಣಪ್ಪಾ : ಹೇಳುತ್ತೇನೆ ಯಾವಾಗಲಾದರೂ, ಬಾಪ್ಪಾ ಹೊರಕ್ಕೆ. ಧೂಳಿನಲ್ಲಿರಬೇಡ ಎಂದು ಕರೆದಳು ಅಜ್ಜಿ. ಆಹಾ!....ಇದೆಂತಹ ಮಮತೆ ? ನನ್ನೇನು ಜೋಪಾನ ಮಾಡುತ್ತೆ ಈ ಅಜ್ಜೀ....ಅಂದುಕೊಂಡ ಕಾಳೀಪ್ರಸಾದ. ಯಂಕ–ದಣೀ ! ಈ ಮನೆಯೆಲ್ಲಾ ಗುಡಿಸಲೇ ! ಎಂದ. ಈಗ ಬೇಡ ತಾಳು. ನಿನ್ನೊಬ್ಬನ ಕೈಲಿ ಆಗುವುದಿಲ್ಲ–ಬಾ–ಎಂದು ಹೊರಕ್ಕೆ ಬಂದು ಮೊದಲಿನಂತೆ ಬೀಗ ಹಾಕಿ ಅಜ್ಜಿಯ ಕೈಗೆ ಬೀಗದ ಕೈಕೊಟ್ಟ. ಲೋ....ಯಂಕ ! ಇನ್ನು ಮೇಲೆ ನೀನು ಈ ಮನೆಯಲ್ಲೇ ಇರಬೇಕು. ಅಜ್ಜಿ ಹೇಳಿದ ಕೆಲಸ ಮಾಡುತ್ತಾ ನೆಮ್ಮದಿಯಾಗಿರು, ಹೋಟಲಿನಲ್ಲಿ ಒದೆ ತಿನ್ನುತ್ತಿದ್ದೆಯಲ್ಲಾ ಇಲ್ಲಿ ಅಂತಹ ದೇನೂ ಇಲ್ಲ. ಇಲ್ಲಿಂದ ತಪ್ಪಿಸಿಕೊಂಡು ಹೋದಗೆ ನೀನು ಎಲ್ಲಿದ್ದರೂ ಬಿಡುವುದಿಲ್ಲ. ಕಾಲು ಕತ್ತರಿಸಿ ಕಾಡಿನಲ್ಲಿ ಎಸೀತೀನಿ ಜೋಪಾನ ಅಂದ. ವೆಂಕ ವಿಧೇಯನಾಗಿ ಆಗಲಿ ದಣಿ ಎಂದು ಕೈಕಟ್ಟಿ ನಿಂತ. ಸರಿ ಎಂದು ಒಂದೂ ಮಾತಾಡದೆ ಧಡ ಧಡನೆ ಹೊರಟುಬಿಟ್ಟ.

ಕಾಳೀಪ್ರಸಾದನ ತಲೆ ಗೊಂದಲದ ಆಗರವಾಗಿತ್ತು. ಈ ಮನೆ ನಮ್ಮ ಪೂರ್ವಿಕರದೆಂದ ಮೇಲೆ ಅವರ ಚರಿತ್ರೆ ಏನಿರಬಹುದು ? ಈ ವಂಶಕ್ಕೆ ಅರ್ಹನೇ ನಾನು ? ಕಾಳೀಪ್ರಸಾದ ! ಕೊಲೆಗಡುಕ ನೀನು ಎಂಬ ಸುತ್ತು ಘೋಷ ನನ್ನ ಕಿವಿಯಲ್ಲಿ ಢಣಾ–ಢಂಗಾಗಿ ಮೊಳಗುತ್ತಿದೆ. ಅದನ್ನು ಮರೆಯ ಲಾಗುತ್ತಿಲ್ಲ ಎಂದು ನಾನಾ ಯೋಚನೆಯಿಂದ ಊರಿಂದ ಆಚೆ ಹೋಗಿ ಕಣ್ಮರೆಯಾದ.

❋ ❋ ❋ ❋

ಇತ್ತ ಅಜ್ಜಿಗೂ ಒಂದು ವಿಧ ಯೋಚನೆ, ಅನುಮಾನ! ಇದೇನು? ಈ ಯುವಕ ಹೀಗೆ ಮನೆಯೆಲ್ಲಾ ಶೋಧಿಸುತ್ತಿದ್ದಾನೆ? ಈ ಮನೆಯ ಆಸ್ತಿಯೆಲ್ಲಾ ಹೊಡೆದುಕೊಳ್ಳುವ ಮೋಸಗಾರನೋ? ಒಂದೂ ತಿಳಿಯುತ್ತಿಲ್ಲವಲ್ಲಾ! ನನ್ನ ಪಾಡಿಗೆ ನಾನಿದ್ದೆ. ಎಲ್ಲಿಂದಲೋ ಬಂದು ಬಹಳ ಆತ್ಮೀಯತೆಯನ್ನು ನಟಿಸುತ್ತಿದ್ದಾನಲ್ಲಾ? ಇದೆಲ್ಲಾ ಮೋಸವೇ ಇರಬಹುದು. ಈ ಹುಡುಗನನ್ನು ಬೇರೆ ನನಗೆ ಕಾವಲಾಗಿಟ್ಟನಲ್ಲಾ! ಎಂದು ಯೋಚಿಸುತ್ತಾ ಭಯಭೀತಳಾದಳು ಮುದುಕಿ. ಕಡೆಗೆ ಲೋ ವೆಂಕಾ! ನಿನ್ನನ್ನು ಕರೆದುಕೊಂಡು ಬಂದವನು ಯಾರೋ? ಎಂದು ಕೇಳಿದಳು. ಯಾರು ಅಂತ ನನಗೂ ಗೊತ್ತಿಲ್ಲ ಅಜ್ಜಿ, ಹೋಟೇಲೊಂದರಲ್ಲಿ ಕೆಲಸದಲ್ಲಿದ್ದೆ ಅವತ್ತು ತಟ್ಟೆ ಎತ್ತಿಹಾಕಿ ಲೋಟ ಎಲ್ಲಾ ಒಡೆದುಬಿಟ್ಟೆ ಈ ನಮ್ಮ ದಣಿ ಹೋಟೆಲಿಗೆ ಕಾಫಿಗೆ ಬಂದಿದ್ದರು. ನಮ್ಮ ಸಾಹುಕಾರ ನನ್ನನ್ನು ತುಂಬಾ ಹೊಡೆಯುತ್ತಿದ್ದರು. ಅದನ್ನು ನೋಡಲಾರದೆ ಇವರೇ ಲೋಟ-ಟೀ ದುಡ್ಡೆಲ್ಲಾ ಕೊಟ್ಟು ಹೊಡೆಯುದಂತೆ ತಡೆದರು. ಅಜ್ಜೀ ತುಂಬಾ ಒಳ್ಳೆಯವರು ಇವರು........ಆ ಹೋಟೆಲಿನ ಯಜಮಾನರಿಗೆ ಎಷ್ಟೋ ದುಡ್ಡು ಕೊಟ್ಟು ನನ್ನನ್ನು ಅಲ್ಲಿಂದ ಕರೆ ತಂದರು ಅಜ್ಜೀ ನನ್ನ ಭಾಗಕ್ಕೆ ದೇವರೇ ಇವರು.

ಹುಡುಗನ ಮಾತನ್ನು ಕೇಳಿ ಅಜ್ಜಿ ಸ್ವಲ್ಪ ಸಮಾಧಾನ ಪಟ್ಟುಕೊಂಡಳು. ಒಬ್ಬಳೇ ಇದ್ದು ಬೇಜಾರಾಗಿದೆ ಹುಡುಗ ಕೆಲಸ ಕಾರ್ಯ ಮಾಡಿಕೊಂಡು ಜೊತೆಗೆ ಇರುತ್ತಾನೆ-ಇದ್ದುಕೊಂಡು ಹೋಗಲಿ, ಎಂದುಕೊಂಡಳು, ಹೀಗೆಯೇ ಒಂದುವಾರ ಕಳೆಯಿತು ಕಾಳೀಪ್ರಸಾದ ಬರಲಿಲ್ಲ. ಆಗ ಅಜ್ಜಿಗೆ ಏನೋ ತಳ-ಮಳ ಏನೋ ಚಿಂತೆ, ಆ ಯುವಕ ಏಕೆ ಬರಲಿಲ್ಲ? ಅವನು ಇರುವ ಜಾಗವನ್ನೂ ಸರಿಯಾಗಿ ಹೇಳಲಿಲ್ಲ-ಹೋಗಲಿ, ಅಂದರೆ ನನಗೇಕೋ ಅವನ ಮೇಲೆ ಮಮತೆ. ನನಗೆ ಬೇಕಾದ ಸೌಕರ್ಯವನ್ನೆಲ್ಲಾ ಮಾಡಿಕೊಟ್ಟ. ನನಗೆ ಕೈಲಾಗುವುದಿಲ್ಲವೆಂದು ಈ ಹುಡುಗನನ್ನು ಕೆಲಸಕ್ಕೆ ಇಟ್ಟ. ನನಗೇನೂ ಮೋಸ ಮಾಡಿಲ್ಲ ಅವನು. ಏಕೋ ಬರಲಿಲ್ಲವಲ್ಲಾ! ಎಂದು ವೆಂಕನ ಕೈಲಿ ದಿನಕ್ಕೆ ಹತ್ತು ಸಲವಾದರೂ ಹೇಳುತ್ತಲೇ ಇದ್ದಳು.

ಕುಸಲ ಕಾಳೀಪ್ರಸಾದ ತನ್ನ ಪರ್ವತದ ಬಂಡೆಯ ಸಂದಿಗೆ ಹೋಗಿ ನಿಧಿ ಇಟ್ಟಿದ್ದ ಸ್ಥಳದಿಂದ ನಗ ನಾಣ್ಯಗಳನ್ನು ಬೇಕಾದಷ್ಟು ತೆಗೆದುಕೊಂಡು ತನ್ನ ಅನುಯಾಯಿಗಳನ್ನು ಬರಮಾಡಿಕೊಂಡ. ಅವನ ನಂಬಿಕಸ್ತರಾದ ನಾಲ್ಕು ಜನ ಬಂದು ಸೇರಿದರು. ಅವರಿಗೆಲ್ಲಾ ಬೇಕಾದಷ್ಟು ಹಣಕೊಟ್ಟು ನಂತರ ಇನ್ನು ನೀವು ಕಾಡಿನ ಮಧ್ಯೆ ವಾಸ ಮಾಡಬೇಡಿ· ಇನ್ನು ಅಪಾಯವಿದೆ. ನಿಮ್ಮನ್ನು ರಕ್ಷಿಸುವವರು ಯಾರೂ ಇಲ್ಲ ಇನ್ನು ಮುಂದೆ ನಾನಿರುವ ಸ್ಥಳ ಒಂದು ಊರು. ಅಲ್ಲಿಗೆ ಹನುಮ ಒಬ್ಬನನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ನಿಮ್ಮ ಅಗತ್ಯ ಬಿದ್ದಾಗ ಹನುಮನನ್ನು ಕ ಳು ಹಿ ಸಿ ಕರೆಸಿಕೊಳ್ಳುತ್ತೇನೆ. ನೀವು ಹಿಂದಿನಂತೆಯೇ ಪ್ರಾಮಾಣಿಕರಾಗಿರಬೇಕು. ಬನ್ನೀ ಕಾಳೀಮಾತೆಯ ಮುಂದೆ ಪ್ರಮಾಣ ಮಾಡಿ, ಎಂದ ಕಾಳೀಪ್ರಸಾದ.

ಆ ನಾಲ್ವರು ಅನುಯಾಯಿಗಳೂ ವಿಧೇಯತೆಯಿಂದ ಕಾಳೀಪ್ರಸಾದನ ಪಾದ ಮುಟ್ಟಿ ಕಣ್ಣಿಗೊತ್ತಿಕೊಂಡು. ಧಣೀ ನಾವು ನಿಮ್ಮ ಅನ್ನ ಉಂಡು ಬೆಳೆದವರು. ನಿಮಗೆ ಎಂದೂ ದ್ರೋಹ ಬಗೆಯುವುದಿಲ್ಲ. ಕಾಳೀಮಾತೆ ಮುಂದೆ ಪ್ರಮಾಣ ಮಾಡುತ್ತೇವೆ ಎಂದು ಆ ದಟ್ಟವಾದ ಮರಗಳ ಮಧ್ಯೆ ಬಂಡೆಯೊಂದರ ಸಂದಿಯಲ್ಲಿ ಕಾಳೀ ವಿಗ್ರಹದ ಬಳಿ ಬಂದರು. ಅಲ್ಲೇ ಹರಿಯುತ್ತಿದ್ದ ನೀರನ್ನು ತಂದು ಕಾಳೀಗೆ ಅಭಿಷೇಕ ಮಾಡಿದರು, ನಂತರ ಕಾಡು ಹೂಗಳಿಂದ ಪೂಜೆಮಾಡಿದರು. ನಂತರ ನಾಲ್ಕು ಜನರೂ ತಮ್ಮ ಹೆಬ್ಬೆಟ್ಟನ್ನು ಕತ್ತಿಯಿಂದ ಗೀರಿ ಹರಿಯುವ ರಕ್ತವನ್ನು ಕಾಳೀದೇವಿಯ ಹಸ್ತದ ಮೇಲೆ ಸುರಿದರು. ಸರಿ ನಾನು ಹೇಳಿಕೊಡುವಂತೆ ಹೇಳಿ ಇನ್ನೆಂದೂ ದರೋಡೆ ಮಾಡುವುದಿಲ್ಲ—ಯಾರನ್ನೂ ಕೊಲೆ ಮಾಡುವುದಿಲ್ಲ, ಎಂದು ಕಾಳಿದೇವಿಯ ಪಾದ ಮುಟ್ಟಿ ಪ್ರಮಾಣ ಮಾಡಿ, ಎಂದ ಕಾಳೀಪ್ರಸಾದ. ಅವರು ನಾಲ್ಕೂ ಜನರೂ ಹಾಗೆಯೇ ಮಾಡಿದರು. ಇದೇನು ಕಾಳೀಪ್ರಸಾದ ಹೀಗೇಕೆ ಮಾಡಿದ ಮುಂದೆ ನಮ್ಮ ಪಾಡೇನು ? ಎಂದು ಸುಮ್ಮನೆ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಆದರೆ ಉಸಿರೆತ್ತಲಿಲ್ಲ.

ಕಾಳೀಪ್ರಸಾದ ತಾನೇ ಹೇಳಿದ –ನಿಮ್ಮ ಜೀವನಕ್ಕೆ ಏನು ಗತಿ ? ಎಂದು ಯೋಚಿಸುತ್ತೀರಿ ಅಲ್ಲವೇ ? ನಾನು ನಿಮ್ಮ ಕೈ ಬಿಡುವುದಿಲ್ಲ. ಸ್ವಲ್ಪದಿನವಾದ ಮೇಲೆ ನಿಮಗೆ ಉದ್ಯೋಗ ಕೊಡುತ್ತೇನೆ. ಅದುವರೆಗೆ ಎಲ್ಲಿಯೂ ದರೋಡೆ ಮಾಡಿ ಸಿಕ್ಕಿಹಾಕಿಕೊಳ್ಳಬೇಡಿ ನಮ್ಮ ಸುಳಿವೂ ಸಿಕ್ಕ ದಂತೆ ಜೋಪಾನವಾಗಿರಿ ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟುಬಿಟ್ಟ. ಹನುಮ ಧಣೀ ನಾನು ಬರಲೇ ? ಎಂದ ಈಗ ಬೇಡ ನಾನು ಕರೆಸಿ ಕೊಳ್ಳುತ್ತೇನೆ. ನಿಮ್ಮ ಹೆಂಡತಿ ಮಕ್ಕಳ ಜೊತೆಯಲ್ಲಿರಿ.

ಕಾಳೀಪ್ರಸಾದ ಹೊರಟುಹೋದಮೇಲೆ ಆ ನಾಲ್ವರು ಅನುಯಾಯಿ ಗಳೂ "ಹುಂ ಇದೇನು ವಿಚಿತ್ರವೋ ? ಕಾಳೀಪ್ರಸಾದನಿಗೆ ಏನಾಗಿದೆ ? ದೇವೀಪ್ರಸಾದ ಹೋದಮೇಲೆ ಏನೋ ಒಂದು ವಿಧವಾಗಿ ಬಿಟ್ಟನಲ್ಲಾ ಕಾಳಿ" ಎಂದು ಹೇಳಿಕೊಳ್ಳುತ್ತಾ ಅವರವರ ವಾಸಸ್ಥಾನಕ್ಕೆ ಹೊರಟು ಹೋದರು. ಕಾಳೀಪ್ರಸಾದ ತಾನು ತಂದ ನಿಧಿಯನ್ನು ಯಾವರೀತಿ ಜೋಪಾನ ಮಾಡಬೇಕೋ ಹಾಗೆ ಮಾಡಿ ಸಿಂಧೂಪುರ್‌ಗೆ ಬಂದ. ಅವನಿಗೆ ಊಟ ತಿಂಡಿ ಸರಿಯಾಗಿ ಇರಲಿಲ್ಲ. ಅಜ್ಜಿಮನೆಗೆ ಹೋಗಿ ಯಾವಾಗ ಊಟಮಾಡೇನೋ ಅನ್ನಿಸಿಬಿಟ್ಟಿತ್ತು. ಕುದುರೆ ಏರಿ ನಾಗಾಲೋಟದಿಂದ ಬಂದ, ಅಜ್ಜಿ ಮನೆ ಬಾಗಿಲಿಗೆ ಬಂದಾಗ ಆ ಬೀದಿಯವರು ಬಗ್ಗಿ ಬಗ್ಗಿ ನೋಡುವವರೇ ! ಯಾವಸರದಾರ ಇವನು ? ಕುದುರೆಯಿಂದಿಳಿದ ಕಾಳೀ–ಪ್ರಸಾದನನ್ನು ನೋಡಿ ಅಜ್ಜಿಗೆ ಸಂತೋಷ-ಆಶ್ಚರ್ಯ ಎರಡೂ ಆಯಿತು. ಬಾಪ್ಪ ಕುಮಾರ ಎಲ್ಲಿ ಹೊರಟು ಹೋಗಿದ್ದೆ ? ಇದೇನಪ್ಪಾ ನಿನಗೆ ಕುದುರೆ ಸವಾರಿಯೂ ಬರುತ್ತದೆಯೇ ? ಎಂದೆಲ್ಲಾ ಕಾತುರದಿಂದ ಕೇಳಿ ದಳು ಎಲ್ಲಾ ಬರುತ್ತೆ ಅಜ್ಜೀ ? ನನಗೆ ತುಂಬಾ ಹಸಿವು ಊಟಹಾಕು ಎಂದು ಮನೆಯ ಮಕ್ಕಳು ಕೇಳುವಂತೆ ಕೇಳಿದ.

ಅಯ್ಯೋ ! ಮಗು ನೀನು ಬರುವುದು ನನಗೇನು ಗೊತ್ತು ? ರೊಟ್ಟಿ ಮಾಡಿದ್ದೆ ಆ ಹುಡುಗನಿಗೂ ಕೊಟ್ಟು ನಾನೂ ತಿಂದೆ, ಇನ್ನೂ ಎರಡು ರೊಟ್ಟಿ ಇದೆ, ಬಾ ಒಳಕ್ಕೆ ತಿನ್ನು ಎಂದು ಅಜ್ಜಿ ಒಳಕ್ಕೆ ಹೋಗಿ ಟೀ

ಕಾಸಿದಳು. ಕುದುರೆಯನ್ನು ಅಲ್ಲೇ ಕಟ್ಟಿ ಹಾಕಿ ಒಳಗೆ ಹೋದ. ಅಜ್ಜಿ ರೊಟ್ಟಿ ಟೀ ಕೊಟ್ಟು ಇದನ್ನು ತಿನ್ನುತ್ತಾ ಇರು ಕುಮಾರಾ........ಬೇಗ ಅಡಿಗೆ ಮಾಡಿಬಿಡುತ್ತೇನೆ ಎಂದು ಹೇಳಿ ಅಡಿಗೆ ಪ್ರಾರಂಭಿಸಿದಳು. ಅಜ್ಜೀ! ಹುಡುಗ ಏನನ್ನುತ್ತಾನೆ. ನಿನಗೆ ಒಪ್ಪಿಗೆಯಾಗುವಂತೆ ಇದಾನೆಯೇ? ಎಂದ ಹೌ-ಕಣಪ್ಪಾ ಒಳ್ಳೆಯ ಹುಡುಗ, ಆದೇನೋ ಸರಿ ನಿನ್ನ ವಿಚಾರ ಏನೂ ತಿಳಿಯದೆ ನಾನು ಕಂಗಾಲಾಗುತ್ತೇನೆ ಮಗೂ.

ಏನೂ ಯೋಚಿಸಬೇಡ ಅಜ್ಜೀ ಸಮಯ ಬಂದಾಗ ನಾನೇ ಎಲ್ಲಾ ಹೇಳುತ್ತೇನೆ. ನೀನು ಅಡಿಗೆ ಮಾಡುವ ವೇಳೆಗೆ ಕುದುರೆಗೆ ಸ್ವಲ್ಪ ಹುಲ್ಲು ತಂದು ಬಿಡುತ್ತೇನೆ. ಎಂದು ಕುದುರೆಯ ಮೇಲೆಯೇ ಕುಳಿತು ಹೊರಟ. ಅವನು ಕುದುರೆಯ ಮೇಲೆ ಸವಾರಿಯಾಗಿ ಹೋಗುವುದನ್ನೇ ನಿಂತು ನೋಡಿದಳು ಅಜ್ಜಿ-ನಮ್ಮ ಮನೆಯಲ್ಲಿ ಎಲ್ಲರೂ ಕುದುರೆ ಸವಾರರೇ ? ಈ ಯುವಕ ಅದೇ ರೀತಿಯಲ್ಲಿ ಹೋಗುತ್ತಿದ್ದಾನಲ್ಲಾ, ಇವನು ಯಾವ ರೀತಿಯ ನಂಟು ? ನಮ್ಮ ವಂಶದ ಪೀಳಿಗೆಯೇ ನಾಶವಾಯಿತು ಇವನು ಯಾವ ಸೀಮೆ ಬಾಂಧವ್ಯ ? ಎಂದು ನಿಟ್ಟುಸಿರುಬಿಟ್ಟಳು.
ಅಜ್ಜೀ ಕುದುರೆಯನ್ನು ಕಟ್ಟಲು ಎಲ್ಲಾದರೂ ಜಾಗ ನೋಡಿಕೊಂಡು ಬರುತ್ತೇನೆ ಎಂದ.

ಅಯ್ಯೋ ಮಗೂ ಕುಮಾರ ನೋಡು ನಿನ್ನಲ್ಲಿ ಏನೋ ಆತ್ಮೀಯತೆ ಈ ಮನೆಯ ಹಿಂಭಾಗದಲ್ಲಿ ಕುದುರೆ ಲಾಯವೇ ಇದೆ ನಮ್ಮ ಮನೆಯಲ್ಲಿ ಯಾವಾಗಲೂ ಎರಡು ಜಾತಿ ಕುದುರೆಗಳು ಇದ್ದೇ ಇದ್ದುವು. ಈಗ ಪಾಳು ಬಿದ್ದಿದೆ. ನೋಡು ಅಲ್ಲಿ ಕಟ್ಟಿಹಾಕುವ ಹಾಗಿದ್ದರೆ ಕಟ್ಟು. ಕಾಳಿ ಮನೆಯ ಪಕ್ಕದಿಂದ ಕುದುರೆ ಲಾಯಕ್ಕೆ ಹೋಗುವ ದಾರಿ. ಕಾಳಿ ಹೋಗಿ ನೋಡು ತ್ತಾನೆ. ದಿವ್ಯವಾದ ಕಟ್ಟಡ. ವೆಂಕನನ್ನು ಕರೆದು ಚೊಕ್ಕಟಮಾಡಿಸಿ ಕುದುರೆ ತಂದು ಕಟ್ಟಿ ಹುಲ್ಲು ಹಾಕಿದ. ಈ ಮನೆಯ ಒಂದೊಂದು ಸನ್ನಿವೇಶವೂ ಕುತೂಹಲಕಾರಿಯಾಗಿತ್ತು ಕಾಳೀಪ್ರಸಾದನಿಗೆ. ಅಜ್ಜೀ ...ಏನು ಆಶ್ಚರ್ಯ ಈ ಮನೆ ರಾಜರ ಅರಮನೆಯಂತೆ ಇದೆಯಲ್ಲಾ ಅಬ್ಬ...,ಅಂದ

ಹೌದಪ್ಪ ! ಬಾ ಊಟಮಾಡು ಆಮೇಲೆ ಈ ಮನೆ ಚರಿತ್ರೆ ಹೇಳುತ್ತೇನೆ. ತನ್ನ ಹಿರಿಯರ – ಹೆತ್ತವರ ಮನೆ ಇದೇ ? ಎಂತಹ ವೈಭವದಲ್ಲಿದ್ದರು ? ಕುತೂಹಲದಿಂದ ಹೇಳು ಅಜ್ಜೀ ! ನಿಮ್ಮ ಮನೆಯವರು ಇಲ್ಲಿದ್ದರೇ ? ಎಂದ.

ಕಳೆದುಹೋದ ಕಥೆಯಪ್ಪಾ ! ಕೇಳು ಕೊಲೆಯಾಗಿ ಹೋದನಲ್ಲಾ ಪ್ರಮೋದ ಮತ್ತು ನಾನು ಇಬ್ಬರೇ ಮಕ್ಕಳು ನಮ್ಮ ತಂದೆಗೆ. ಅವನು ಪ್ರಮೋದ ನಾನು ಪದ್ಮ. ನಮ್ಮನ್ನು ಕಂಡರೆ ನಮ್ಮ ತಂದೆಗೆ ಪಂಚಪ್ರಾಣ ನಮ್ಮನ್ನು ಎರಡು ಕಣ್ಣಂತೆ ನೋಡಿಕೊಂಡರು. ನಮ್ಮ ತಂದೆಯ ಹೆಸರು ಪರಶುರಾಮ ಪಾಟೀಲ್, ಅಂತ ಹೆಸರಿಗೆ ತಕ್ಕಂತೆ ಬಹಳ ಪರಾಕ್ರಮಿ. ನಮ್ಮ ತಂದೆಯ ತಂದೆ ಅಂದರೆ ನಮ್ಮ ತಾತ ಪ್ರತಾಪದೇವ್ ಪಾಟೀಲ್ ನಾವು ಹುಟ್ಟಿದ ಹದಿನೈದು ವರ್ಷಗಳವರೆಗೂ ನಮ್ಮ ಅಜ್ಜಿ ತಾತ ಇದ್ದರು ಅವರನ್ನು ನೋಡಿದ್ದೆವು ಅವರ ಸ್ವಭಾವ ಚೆನ್ನಾಗಿ ಗೊತ್ತು ಅವರು ಬಹಳ ಎತ್ತರದ ಆಳು. ಹಾಗೆಯೇ ಮೈಕಟ್ಟು ಅಚ್ಚ ಬಿಳಿ ಮುಖ ಹುರಿನಹಾಡಿದ ಮೀಸೆ ತೇಜಃಪುಂಜವಾದ ಕಣ್ಣುಗಳು.

ಕುಮಾರಾ .. ನಿನ್ನ ಕಣ್ಣುಗಳೂ ಕೂಡಾ ನಮ್ಮ ತಾತನ ಕಣ್ಣುಗಳಂತೆ ಪ್ರಕಾಶಮಾನವಾಗಿದೆ....ಆ ಕಣ್ಣುಗಳು ಏನೋ ಒಂದು ವಿಧ ದರ್ಪ ಅಧಿಕಾರವನ್ನು ಸೂಚಿಸುವಂತಿದ್ದವು. ಅವರು ಮಾತಾಡದಿದ್ದರೂ ಕಣ್ಣು ಬಿಟ್ಟರೆ ಸಾಕು ಕೈ ಕೆಳಗಿನವರು ಗಡ–ಗಡನೆ ನಡಗುತ್ತಿದ್ದರು. ಅವರು ಮನೆಯಲ್ಲಿದ್ದರೆ ನಾವು ಉಸಿರೆತ್ತುತ್ತಿರಲಿಲ್ಲ. ಅವರ ಅಧಿಕಾರವೂ ಅಂತಹುದೇ

ಅವರು ಹೈದರಾಬಾದಿನ ನಿಜಾಮನ ವಂಶಸ್ಥರ ಹತ್ತಿರ ಸೇನಾಧಿಪತಿಯಾಗಿದ್ದರು. ಪ್ರತಾಪ್‌ದೇವ್—ಅಂದರೆ ಸಾಹಸಕ್ಕೆ ಹೆಸರಾದವರು. ನಿಜಾಮರ ಅಚ್ಚು ಮೆಚ್ಚಿನ ಭಂಟರಾಗಿದ್ದರು. ಆಗೆಲ್ಲಾ ರಾಜ್ಯ. ರಾಜ್ಯಗಳಿಗೆ ಪೈ ಪೋ ೯ ಟಿ - ಯುದ್ಧ ಶತ್ರು ಭಯ ಇದ್ದೇ ಇತ್ತು ಯಾವ ಸಮಯಕ್ಕೂ ನಮ್ಮ ತಾತ ಮುಂಚೂಣಿಯಲ್ಲಿರುತ್ತಿದ್ದರು. ಗಡೀ ಪ್ರದೇಶದ

ರಕ್ಷಣೆಗೆ ಪ್ರತಾಪ್‌ದೇವ್ ಹೋಗಿರಲಿ ಎಂದು ಭರವಸೆ ಇಟ್ಟು ಕಳುಹಿಸುತ್ತಿದ್ದರು ನಿಜಾಮರು. ಆಸಕ್ತಿಯಿಂದ ಕೇಳುತ್ತಿದ್ದ ಕಾಳೀಪ್ರಸಾದ ಅಜ್ಜೀ ನಿಮ್ಮ ವಂಶಸ್ಥರು ಧೈರ್ಯ ಶೌರ್ಯಕ್ಕೆ ಹೆಸರಾದವರು, ಎಂದು ಗೊತ್ತಾಯಿತು. ಎಂದ.

ಅವರು ಎಂದೂ ಜೀವಗಳ್ಳರಲ್ಲ. ಸೈನ್ಯ ಸಮೇತ ಹೋದರೆ ಯಾವ ಪಕ್ಷವೂ ಇವರ ಎದುರು ನಿಲ್ಲಲಾರದು, ನಮ್ಮ ತಾತ ಮನೆಗೆ ಬರುತ್ತಿದ್ದುದೇ ಅಪರೂಪ ಆಗ ಹೈದರಾಬಾದಿನಲ್ಲಿಯೇ ಇದ್ದರಂತೆ ನಮ್ಮ ಅಜ್ಜಿಯೂ ರೂಪವಂತೆ, ಮದುವೆಯಾದ ಹೊಸದರಲ್ಲಿ, ಗಂಡ ದೂರ–ದೂರ ಎಲ್ಲೆಲ್ಲೋ ಹೊರಟು ಹೋಗುತ್ತಿದ್ದುದಕ್ಕೆ ನಿರೀಕ್ಷಿಸಿ ಸಾಕಾಗಿ ಕೊನೆಗೆ ಅತ್ತು ಅವರು ಬಂದಾಗ ಮಾತನಾಡಿಸದೇ ಕೋಪಿಸಿಕೊಂಡಿರುತ್ತಿದ್ದರಂತೆ ಅಜ್ಜಿ ಹೇಳುತ್ತಿದ್ದರು ನಮ್ಮ ಪ್ರೀತಿ ಒಂದು ನಿಮಿಷವೂ ನಾವು ಬಿಟ್ಟಿರಲಾರೆವು ಎಂಬಂತೆ ಆದರೆ ಅನಿವಾರ್ಯ ಅವರು ಹೋಗಲೇಬೇಕು. ಕಡೆಗೆ ಅವರು ಬಂದಾಗ ನನ್ನ ಸಂಭ್ರಮ ಹೇಳತೀರದು- ನನ್ನ ಸಿಟ್ಟನ್ನು ಅವರ ಪ್ರೀತಿಯ ಸಾಗರದಲ್ಲಿ ಕೊಚ್ಚಿಹೋಗಿಸುತ್ತಿದ್ದರು.

ತಾತನ ವಿಷಯ ಹೇಳುತ್ತಿದ್ದರೆ ನಾವು ಆಸೆಯಿಂದ ಕೇಳುತ್ತಿದ್ದೆವು. ನಮ್ಮ ತಾತ ಸೈನ್ಯಾಧಿಕಾರಿ ಎಂದು ಹೇಳಿದೆನಲ್ಲಾ ಒಂದು ಯುದ್ಧದಲ್ಲಿ ನಿಜಾಮರಿಗೆ ಜಯಗಳಿಸಿ ಕೊಟ್ಟಿದ್ದರಿಂದ ಅವರು ಸಂತೋಷವಾಗಿ ಒಂದು ಜಹಗೀರನ್ನೇ ಇವರಿಗೆ ಕೊಟ್ಟರಂತೆ. ಸಭೆಯಲ್ಲಿ ಮರ್ಯಾದೆ ಮಾಡಿ ಎಲ್ಲರಿದುರಿಗೆ ಪ್ರತಾಪ್‌ದೇವ್ ಇಂದಿನಿಂದ ಸಿಂಧೂಪುರ್‌ಗೆ ಜಹಗೀರ್‌ದಾರ್ ಎಂದು ಘೋಷಣೆ ಮಾಡಿ ಖಿಲ್ಲತ್ ಕೊಟ್ಟರಂತೆ, ಆಗಿನಿಂದ ನಮ್ಮ ತಾತನವರನ್ನು ಜಹಗೀರ್‌ದಾರರೆಂದೇ ಗೌರವಿಸುತ್ತಿದ್ದರು ಎಲ್ಲರೂ. ನಿಜಾಮರು ತಾವೇ ಮೇಲ್ವಿಚಾರಣೆ ವಹಿಸಿ ಈ ಮನೆಯನ್ನು ಕಟ್ಟಿಸಿ ಕೊಟ್ಟರಂತೆ, ಇದಕ್ಕಾಗಿ ಅಪಾರ ಹಣವನ್ನೂ ಅವರೇ ಕೊಟ್ಟರಂತೆ. ನಮ್ಮ ತಾತ ಪ್ರಾಯದಲ್ಲೆಲ್ಲಾ ಯುದ್ಧ ಗಡಿರಕ್ಷಣೆ ಹೀಗೆಯೇ ಇದ್ದುದರಿಂದ ಮನೆಗೆ ಬರುವುದೇ ಅಪರೂಪ.

ಮದುವೆಯಾಗಿ 10 ವರ್ಷಗಳ ನಂತರ ಒಂದು ಗಂಡು ಮಗು ಹುಟ್ಟಿತಂತೆ, ಆ ಸಂತೋಷ ಹೇಳತೀರದು. ನಮ್ಮ ಅಜ್ಜಿ ನಮಗೆ ಆಗಿನ ಸಂಭ್ರಮವನ್ನು ನೆನೆಸಿಕೊಂಡು ಹೇಳುತ್ತಿದ್ದರು, ಆಗ ಈ ಮನೆಗೆ ವಾಸಕ್ಕೆ ಬಂದಿದ್ದರಂತೆ ಆಳು-ಕಾಳು ಕೆಲಸದವರು ಅಡಿಗೆಯವರು ಎಲ್ಲಾ ಇದ್ದರಂತೆ ಮಗುವಿಗೆ ನಾಮಕರಣವನ್ನು ಅದ್ಧೂರಿಯಾಗಿ ಮಾಡಿ ಊರಿಗೆಲ್ಲಾ ಸಿಹಿ ಹಂಚಿದರಂತೆ ಮಗುವಿಗೆ "ಪರುಶುರಾಮ ಪಾಟೀಲ್" ಎಂದು ಹೆಸರಿಟ್ಟರಂತೆ ಕುಮಾರಾ ! ಆ ಮಗುವೇ ನಮ್ಮ ತಂದೆ ಈ ಸಿಂಧೂಪುರ್‌ನಿಂದ 30 ಮೈಲಿ ದೂರದಲ್ಲಿ ಒಂದು ಬೆಟ್ಟ ಇದೆ. ಅದನ್ನು ಪರುಶುರಾಮ ಕ್ಷೇತ್ರ ಎನ್ನುತ್ತಾರೆ. ಅಲ್ಲಿ ಕೊಡಲಿಯನ್ನು ಕೈಯಲ್ಲಿ ಹಿಡಿದ ಪರುಶುರಾಮ ವಿಗ್ರಹ ತುಂಬಾ ಚೆನ್ನಾಗಿದೆ. ಆ ಪರುಶುರಾಮ ಕ್ಷೇತ್ರದ ಆ ದೇವರೇ ನಮ್ಮ ಮನೆದೇವರು.

ಆದ್ದರಿಂದ ನಮ್ಮ ತಾತನ ಕಾಲದಿಂದಲೂ ಪ್ರತಿವರ್ಷ ಆ ಬೆಟ್ಟಕ್ಕೆ ಹೋಗಿ ದೇವರ ಸೇವೆ ಪೂಜೆ ಎಲ್ಲಾ ಮಾಡಿಸಿಕೊಂಡು ಬರುವುದು ಪದ್ಧತಿ. ನಮ್ಮ ತಾತ ಪರುಶುರಾಮ ದೇವರಿಗೆ ಹರಕೆ ಹೊತ್ತು ನನಗೆ ಮಗುವಾದರೆ ನಿನ್ನ ಹೆಸರನ್ನೇ ಇಡುತ್ತೇನೆ, ನಿನಗೆ ಬೆಳ್ಳಿ ಕೊಡಲಿ ಮಾಡಿಸಿಕೊಡುತ್ತೇನೆ ಎಂದು ಹರಸಿಕೊಂಡಿದ್ದರಂತೆ ಅದರಂತೆ ಮಗು ಹುಟ್ಟಿದ ಮೇಲೆ ಬೆಳ್ಳಿಕೊಡಲಿ ಮಾಡಿಸಿಕೊಟ್ಟಿದ್ದಾರೆ. ಈಗಲೂ ಪರುಶು-ರಾಮರ ದೇವರ ಕೈಯಲ್ಲಿ ಬೆಳ್ಳಿಕೊಡಲಿ ಇದೆ.

ಕುಮಾರಾ ! ... ನಮ್ಮ ಮನೆದೇವರಾದ ಪರಶುರಾಮನಲ್ಲಿ ನಾವು ಎಷ್ಟು ಭಕ್ತಿಯನ್ನಿಟ್ಟಿದ್ದೆವೋ ! ಈಗ ನಾನು ಆ ದೇವರನ್ನು ನೆನೆಸಿ-ಕೊಳ್ಳುವುದೂ ಇಲ್ಲಾಪ್ಪ. ನಮ್ಮ ವಂಶವನ್ನೇ ಹೇಳ ಹೆಸರಿಲ್ಲದಂತೆ ತೊಡೆದು ಬಿಟ್ಟ ಆ ದೇವರು ಎಂದು ಸಂಕಟದಿಂದ ಹೇಳಿದಳು. ಆಗ ಕಾಳೀಪ್ರಸಾದ ನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ ಆಹಾ ! .. ಅದಿನ್ನೆಂತಹ ಸತ್ಯದ ದೇವರು? ಈ ಮನೆ ವಂಶದ ಕುಡಿಯಾಗಿ ನನ್ನನ್ನು ಉಳಿಸಿ ಇಲ್ಲಿ ಬಂದು ಸೇರು ವಂತೆ ಮಾಡಿದನಲ್ಲಾ ! ಆ ದೇವರ ಕೃಪೆ ಇಲ್ಲದಿದ್ದರೆ ನಾನು ಇಲ್ಲಿಗೆ ಹೇಗೆ ಬರುತ್ತಿದ್ದೆ ? ಆ ದೇವರು ನನಗೂ ಮನೆ ದೇವರಲ್ಲವೇ ? ಹೋಗ ಬೇಕು, ಎಂದು ಮನಸ್ಸಿನಲ್ಲಿ ಆಸೆಗೊಂಡ.

ಅಜ್ಜೀ ! ಯಾಕೆ ಸಂಕಟಪಡುತ್ತೀಯಾ ? ಆ ದೇವರ ಕೃಪೆಇದ್ದರೆ ನಿಮ್ಮ ತಂದೆ ವಂಶ ಬೆಳೆಯುತ್ತೆ ಸುಮ್ಮನಿರಿ, ಅಂದ. ಇನ್ನೆಲ್ಲಿ ಬಂತಪ್ಪಾ! ಆ ಭಾಗ್ಯ ? ನನ್ನ ಹೊಟ್ಟೆಯಲ್ಲಾದರೂ ಒಂದು ಮಗು ಹುಟ್ಟಲಿಲ್ಲ. ಅಜ್ಜೀ....ನಾನೇ ನಿಮ್ಮ ಮಗ ಎಂದುಕೊಳ್ಳಿ, ನಿಮಗಾಗಿ ನಾನು ಏನು ಬೇಕಾದರೂ ಮಾಡುತ್ತೇನೆ, ಅಂದ ಕಾಳೀಪ್ರಸಾದ. ಅಷ್ಟು ಪ್ರಾಯದ ಯುವಕ ಅಜ್ಜಿಗೆ ಸರಳವಾದ ಒಂದು ಮಗುವಿನಂತೆ ಕಂಡ, ಹೌದು ಮಗೂ ನಿನ್ನ ಪ್ರೀತಿ–ಆತ್ಮೀಯತೆ ನೋಡಿದರೆ ನೀನು ಆವ ಜನ್ಮದ ಮಗನೋ ಎನ್ನಿಸುತ್ತೆ ಕುಮಾರ, ನಿಮ್ಮ ತಂದೆಯೂ ಸೈನಿಕರಾಗಿದ್ದರೇ ಅಜ್ಜೀ–ಅಂದ ಅಯ್ಯೋ ! ಕುಮಾರಾ ? ಇನ್ನೂ ಬೇಕಾದಷ್ಟು ಹೇಳುವು ದಿದೆ ಕೇಳು....ನಮ್ಮ ತಾತನಿಗೆ ಗಂಡು ಮಗು ಹುಟ್ಟಿದ್ದು ಬಹಳ ಸಂತೋಷದ ವಿಷಯ ವಂಶೋದ್ಧಾರಕ, ಅವನು ತನ್ನಂತೆ ಧೀರನಾಗಿ ಬೆಳೆಯಬೇಕು ದೇಶಸೇವೆಯೇ ಮುಖ್ಯ, ದೇಶಕ್ಕಾಗಿ ಪ್ರಾಣತ್ಯಾಗ ಮಾಡಲೂ ಸಿದ್ಧನಾಗಿರಬೇಕು ಎಂಬ ಧ್ಯೇಯವುಳ್ಳವರು.

ಅವರು ಬಂದಾಗಲೆಲ್ಲಾ 5 ವರ್ಷದ ತಮ್ಮ ಮಗನನ್ನು ಕುದುರೆ ಮೇಲೆ ಕೂರಿಸಿಕೊಂಡು ಸವಾರಿ ಮಾಡುತ್ತಿದ್ದರಂತೆ, ಹಾಗೆಯೇ ಅವನಿಗೂ ಕಲಿಸಿದರು. ಅವರು ಬಂದಾಗಲೆಲ್ಲಾ ಗನ್ ತರುತ್ತಿದ್ದರು. ಊರಿಂದ ಆಚೆ ಬಹುದೂರ ಮಗನನ್ನು ಕರೆದುಕೊಂಡು ಹೋಗಿ ಪಿಸ್ತೂಲು–ಗನ್ ಚಾಲನೆ ಮಾಡುವುದನ್ನು ಹೇಳಿಕೊಡುತ್ತಿದ್ದರಂತೆ. ನಮ್ಮ ಅಪ್ಪನೂ 10–15 ವರ್ಷದ ವೇಳೆಗೆ ಪಕ್ಕಾ ಸೈನಿಕ ತರಬೇತಿ ಅವರ ಅಪ್ಪನಿಂದಲೇ ಪಡೆದರಂತೆ ನಮ್ಮ ತಾತನಿಗೆ ಮಗನೂ ಧೀರನಾಗಿ ಸೈನಿಕ ಪಡೆಗೇ ಸೇರಬೇಕೆಂಬ ಆಕಾಂಕ್ಷೆ. ನೋಡು ಕುಮಾರಾ, ಪರುಶುರಾಮ ದೇವರು ನಮ್ಮ ಮನೆದೇವರು ಮತ್ತು ಮಗ ಪರುಶುರಾಮ. ಕ್ಷತ್ರಿಯದ್ವೇಷಿ 21 ಬಾರಿ ದೇಶ–ದೇಶವನ್ನೆಲ್ಲಾ ಸುತ್ತಿ ಕ್ಷತ್ರಿಯ ಕುಲವನ್ನೇ ಕೊಡಲಿಯಿಂದ ಕಡಿಯುತ್ತಾ ಬಂದ ಕಡೆಗೆ ಅಯೋಧ್ಯಾರಾಮನಿಂದ ಪರಾಜಿತನಾಗಿ ತಪಸ್ಸಿಗೆ ಹೋದ. ಅಂತಹ ವೀರ ಕ್ಷತ್ರಿಯ ಪರುಶುರಾಮನಂತೆ ನೀನೂ ಸಹ ದುಷ್ಟರು, ಪಾಪಿಗಳನ್ನು ಸದೆ ಬಡೆಯಬೇಕು ಮಗನೇ....ಎಂದು ವೀರೋಚಿತ ಮಾತುಗಳನ್ನೇ ಹೇಳಿ ಕೊಡುತ್ತಿದ್ದರಂತೆ ನಮ್ಮ ತಾತ.

ನೋಡು ಕುಮಾರ ! ನಮ್ಮ ಮನೆ ಶೌರ್ಯ ಪ್ರತಾಪಕ್ಕೆ ಹೆಸರಾದುದು ಅನ್ನುವುದಕ್ಕೆ-ಒಂದು ಗುರುತು....ಕೊಡಲಿ ಹಿಡಿದ ಪರಶುರಾಮನ ಫಲಕ. ಅದು ಚಿನ್ನದ ಕೆತ್ತನೆಯ ಡಾಲರ್. ನಮ್ಮ ಮನೆಯಲ್ಲಿ ಮಕ್ಕಳು ಹುಟ್ಟಿದ ಪ್ರತಿಯೊಂದು ಮಕ್ಕಳ ನಾಮಕರಣದ ದಿನ ಈ ಚಿನ್ನದ ಫಲಕವನ್ನು ಶಾಸ್ತ್ರೋಕ್ತವಾಗಿ ಮಂತ್ರಿಸಿ ಮಕ್ಕಳ ಕತ್ತಿನಲ್ಲಿ ಹಾಕುವ ವಾಡಿಕೆ. ಅದು ರಕ್ಷೆ ಇದ್ದಂತೆ ! ಕೊಡಲಿ ಹಿಡಿದ ಪರುಶುರಾಮನ ವಿಗ್ರಹ, ನೋಡು ಕುಮಾರಾ....ನನಗೂ ಸಹ ನಮ್ಮ ತಂದೆ ಅದೇ ರೀತಿ ಪರುಶುರಾಮ-ಫಲಕವನ್ನು ನನ್ನ ಕತ್ತಿನಲ್ಲಿಯೂ ಹಾಕಿದ್ದಾರೆ. ಅದೊಂದನ್ನು ಮಾತ್ರ ನಮ್ಮ ತಂದೆಯ ವಂಶದ ಗುರುತಾಗಿ ಇಟ್ಟುಕೊಂಡಿದ್ದೇನೆ. ಕತ್ತಿನಿಂದ ತೆಗೆಯುವುದೇ ಇಲ್ಲ. ಎಂದು ಅಜ್ಜಿ ತನ್ನ ಕತ್ತಿನಲ್ಲಿ ಹಾಕಿಕೊಂಡಿದ್ದ ಆ ಚಿನ್ನದ ಡಾಲರ್ ( ಫಲಕ ) ನ್ನು ತೆಗೆದು ಕಾಳೀಪ್ರಸಾದನಿಗೆ ತೋರಿಸಿದರು. ಕಾಳೀಪ್ರಸಾದನ ಮೈ ಜುಂ..... ಎಂದಿತು. ಅಬ್ಬ ಇದೇನು ಕನಸೋ-ನನಸೋ ? ದೇವೀಪ್ರಸಾದ ನನಗೇನೂ ಅನ್ಯಾಯ ಮಾಡಿಲ್ಲ. ನನಗೆ ಸ್ವಲ್ಪ ಬುದ್ಧಿ ತಿಳಿದ ನಂತರ........

ಲೋ-ಕಾಳೀ ! ನೋಡು ನಿನ್ನ ಕತ್ತಿನಲ್ಲಿರುವ ಈ ಚಿನ್ನದ ಫಲಕ ನೀನು ಮಗುವಾಗಿದ್ದಾಗ ನಿನ್ನ ಕತ್ತಿನಲ್ಲಿಯೇ ಇತ್ತು ಇದು ನಿನಗೆ ರಕ್ಷೆಯಾಗಿರಲಿ ತೆಗೆಯಬೇಡ, ಎಂದು ಹೇಳಿ ಕರೀದಾರದಲ್ಲಿ ಪೋಣಿಸಿ ಹಾಕಿದ್ದ. ಅದು ಇಂದಿಗೂ ಕಾಳೀಪ್ರಸಾದನ ಎದೆಯ ಮೇಲೆ ರಕ್ಷೆಯಾಗಿ ಉಳಿದಿತ್ತು. ಅಬ್ಬ ! ಇದೊಂದು ಈ ವಂಶದ ಕುರುಹಾಗಿ ಉಳಿದಿದೆಯಲ್ಲಾ ನನ್ನ ಹತ್ತಿರ. ಇದೊಂದೇ ಸಾಕು. ನಾನು ಈ ವಂಶದವನೇ ಎಂದು ಸಾಬೀತು ಮಾಡಲು....ಆದರೆ....ಅದಕ್ಕೂ ಸಮಯ ಬರಬೇಕು. ಈಗ ಏನೂ ಸುದ್ದಿ ಎತ್ತುವುದಿಲ್ಲ. ಅಜ್ಜಿಯಿಂದ ಇನ್ನೂ ಎಲ್ಲಾ ತಿಳಿದುಕೊಳ್ಳಬೇಕು.

ಇವರ ಶೌರ್ಯ ಪ್ರತಾಪದ ವಂಶಕ್ಕೆ ಸರಿಯಾಗಿ ದೇವಿಪ್ರಸಾದ ನನ್ನನ್ನು ಧೀರನಾಗಿಯೇ ಬೆಳೆಸಿದ್ದಾನೆ. ಎಂದು ಮನಸ್ಸಿನಲ್ಲಿ ಅಂದುಕೊಂಡ. ದೇವಿಪ್ರಸಾದ ನನ್ನನ್ನು ಎಷ್ಟು ಅಕ್ಕರೆಯಿಂದ ಸಾಕಿದ ? ಅವನೇ ನನ್ನ

ಅಪ್ಪನೆಂದು ನಂಬಿ ಅವನಿಗೋಸ್ಕರ ಪ್ರಾಣವನ್ನೂ ತೆರಲು ಸಿದ್ಧನಾಗಿದ್ದೆ ನನ್ನ ಜನ್ಮ ವೃತ್ತಾಂತ ನನಗೇನು ಗೊತ್ತು ?

ಅವನು ಬೆಳೆಸಿದ ರೀತಿಯಲ್ಲಿ ದರೋಡೆಕೋರನಾಗಿ ಬೆಳೆದೆ, ಕಡೇ ಘಳಿಗೆ-ಯಲ್ಲಿ ದೇವೀಪ್ರಸಾದ ಮುಚ್ಚು-ಮರೆಯಿಲ್ಲದೆ ಸತ್ಯಸಂಗತಿಯನ್ನು ಹೇಳುವ ವೇಳೆಗೆ ನಾನು ಹುಟ್ಟಿದ ಮನೆಯ ವಿಷಯ ತಿಳಿದಿದ್ದು ? ವಿಷಯ ತಿಳಿದ ಮೇಲೆ ನನ್ನ ಮನಸ್ಸು ಬದಲಾಯಿಸಬಹುದೇನೋ ? ಎಂದು ತನ್ನ ಪ್ರಾಣವನ್ನೇ ತೊರೆದುಬಿಟ್ಟ. ಈಗಲೂ ದೇವಿಪ್ರಸಾದನ ಪ್ರೀತಿ ನೆನೆಸಿ ಕೊಂಡರೆ ನನಗೆ ದುಃಖಬರುತ್ತೆ. ಎಂದು ನೆನೆಸಿಕೊಳ್ಳುತ್ತಿದ್ದಂತೆಯೇ ಕಾಳೀಪ್ರಸಾದನಿಗೆ ತಡೆಯಲಾರದಷ್ಟು ದುಃಖ ಬಂದುಬಿಟ್ಟಿತು ಅತ್ತುಬಿಟ್ಟ.

ಅಜ್ಜಿಗೆ ಈ ಹುಡುಗ ಏಕೆ ಅಳುತ್ತಾನೆಂದು ತಿಳಿಯಲಿಲ್ಲ ಕುಮಾರಾ! ನಮ್ಮ ಮನೆ ಕಥೆ ಕೇಳಿ ನಿನಗೆ ದುಃಖವಾಯಿತೇನಪ್ಪಾ ! ಅದಲ್ಲ ಅಜ್ಜೀ ನಾನು ಬೆಳೆದ ರೀತಿ ನೆನೆಸಿಕೊಂಡು ಅತ್ತೆ, ಹೇಳು ಅಜ್ಜೀ....ನಿಮ್ಮ ತಂದೆ ಹೇಗೆ ಬೆಳೆದರು ? ಯಾವ ಉದ್ಯೋಗ ಮಾಡಿದರು ? ನಮ್ಮ ತಾತ ಹೈದರಾಬಾದಿನಿಂದ ಇಲ್ಲಿಯೇ ಬಂದು ನೆಲೆಸಿದರು ಎಂದು ಹೇಳಿದೆನಲ್ಲಾ! ಜಹಗೀರ್‌ದಾರರಾಗಿ ಸಿಂಧೂಪುರ್ ಆಡಳಿತವನ್ನೆಲ್ಲಾ ನೋಡಿಕೊಳ್ಳುತ್ತಿದ್ದರು. ಕರವಸೂಲು ಮಾಡಿ ನಿಜಾಮರಿಗೆ ಒಪ್ಪಿಸುತ್ತಿದ್ದರು. ಹಾಗೆಯೇ ರೈತರನ್ನೂ ಬಡವರನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅವರ ಕಾಲದಲ್ಲಿ ಕೆಲವು ಅನ್ನಛತ್ರಗಳನ್ನು ಕಟ್ಟಿಸಿದರು. ನೀರಾವರಿಗೆ ಅನುಕೂಲ-ವಾಗುವಂತೆ ಕಾಲುವೆ ತೋಡಿಸಿದರು. ಆದರೆ ಅವರು ಎಷ್ಟು ಒಳ್ಳೆಯವರೋ ಅಷ್ಟೇ ದುಷ್ಟರನ್ನು ಸದೆಬಡಿಯುತ್ತಿದ್ದರು. ಅವರ ಕಾಲದಲ್ಲಿ ದರೋಡೆ-ಕೋರರು ಈ ಸಿಂಧೂಪುರ್‌ಕಡೆಗೆ ತಲೆ ಹಾಕುತ್ತಿರಲಿಲ್ಲ. ಒಬ್ಬನೇ ಮಗ ಪರಶುರಾಮ ತಂದೆಯಂತೆ ಧೀರನಾಗಿ ಬೆಳೆದ ಅವನು ತಾನಾಗಿಯೇ ಸೈನ್ಯಕ್ಕೆ ಸೇರಲು ಅಪೇಕ್ಷೆ ಪಟ್ಟ ತಾತನಿಗೆ ಇಷ್ಟವಿರಲಿಲ್ಲ ತಾತನಿಗೆ ತಾವು ಪಟ್ಟ ಕಷ್ಟ ಗೊತ್ತು. ಸಂಸಾರವನ್ನು ತೊರೆದು ಹೊರಗಡೆಯೇ ಇರಬೇಕಾದ ಕೆಲಸ ಅದು. ಇಪ್ಪತ್ತೆರಡು ವರ್ಷ ತುಂಬಿದ ಪರಶುರಾಮನಿಗೆ ಮದುವೆ

ಮಾಡಿಬಿಡ ಬೇಕೆಂದು ಆಸೆಪಟ್ಟರು ನಮ್ಮ ತಾತ.

ನೋಡೋಣ ಮದುವೆಯಾದ ಮೇಲಾದರೂ ಹೆಂಡತಿಯ ಮೋಹ ದಿಂದ ಇಲ್ಲಿ ನಿಲ್ಲಬಹುದೆಂದು ಯೋಚಿಸಿದರು. ಪರಶುರಾಮ ಬಿಲ್ಲು ಗುರಿ ಹೊಡೆಯುವುದನ್ನೂ ಕಲಿತಿದ್ದ. ಪ್ರತಿದಿವ ಊರಿಂದ ಹೊರಗೆ ಕಾಡು-ಮರ ಗಿಡ ಇರುವಕಡೆ ಬಿಲ್ಲಿನ ಗುರಿ ಅಭ್ಯಾಸ ಮಾಡಲು ಹೋಗುತ್ತಿದ್ದ, ಆ ದಿನ ಕುದುರೆ ಮೇಲೆ ಸುತ್ತಾಡಿ ಆಯಾಸವಾಗಿತ್ತು ಕುಡಿಯಲು ನೀರು ಬೇಕಾಗಿತ್ತು. ಹತ್ತಿರ ಎಲ್ಲೂ ಕಾಣಲಿಲ್ಲ. ಸ್ವಲ್ಪ ದೂರದಲ್ಲಿ ತೋಟದ ಮಧ್ಯೆ ಒಂದು ಬಂಗಲೆ ಮನೆ ಕಾಣಿಸಿತು.

ಏನಾದರಾಗಲಿ ಅಲ್ಲಿಯೇ ಹೋಗಿ ನೀರು ಕುಡಿಯುವುದೆಂದು ಕುದುರೆ ಯನ್ನು ಮರಕ್ಕೆ ಕಟ್ಟಿ ನಡೆದು ಹೋದ, ಆ ಮನೆಯುವರೆಗೂ ಕಾಲು ದಾರಿ ಇತ್ತು. ಮನೆಯ ಸುತ್ತಲೂ ಹೂದೋಟ ದೊಡ್ಡ ಗೇಟು– ಗೇಟಿನ ಬಳಿ ಕಾವಲುಗಾರ ಒಬ್ಬ ಕುಳಿತಿದ್ದ. ಇದು ಯಾರೋ ದೊಡ್ಡ ಮನುಷ್ಯರ ಮನೆ ಇರಬೇಕು. ಎಂದುಕೊಂಡು ಏನಪ್ಪಾ! ಮನೆಯಲ್ಲಿ ಯಾರಾದರೂ ಇದಾರೆಯೇ ಅಂದ. ಜವಾನ ನಮ್ರತೆಯಿಂದ ತಾವು ಯಾರು ತಿಳಿಸಿ, ಒಳಗೆ ಹೋಗಿ ಹೇಳುತ್ತೇನೆ ಅಂದ. ಬಾಯಾರಿ ಬಂದಿರುವ ಒಬ್ಬ ಪಥಿಕ, ನೀರುಬೇಕು ಎಂದು ಹೇಳಪ್ಪಾ ಎಂದ. ಕೇಳಿಕೊಂಡು ಬಂದ ಜವಾನ ಒಳಗೆ ಬರಬೇಕಂತೆ ಎಂದ, ಪರಶುರಾಮ ಒಳಗೆ ಕಾಲಿಡು ತ್ತಿದ್ದಂತೆ ಕುಳಿತುಕೊಳ್ಳಿ, ನೀರು ತರುತ್ತೇನೆ ಎಂದಳು ಒಬ್ಬ ಹೆಣ್ಣು. ಆ ಹೆಣ್ಣು ಒಂದು ಚೊಂಬಿನಲ್ಲಿ ನೀರು ತಂದು ಲೋಟಕ್ಕೆ ಬಗ್ಗಿಸಿಕೊಟ್ಟಳು ಗಟ-ಗಟನೆ ಕುಡಿದ. ಇನ್ನು ಸ್ವಲ್ಪ ಬೇಕೇ ? ಹುಂ ಕೊಡಿ–ಎಂದು ಇನ್ನೂ ಒಂದು ಲೋಟ ಕುಡಿದ. ಹುಡುಗಿ ನಿರಾಭರಣ ಸುಂದರಿಯಾಗಿ-ದ್ದಳು.

ಅವಳ ವಿಶಾಲ ನೇತ್ರಗಳು ಅವನು ನೀರು ಕುಡಿಯುವುದನ್ನೇ ನೋಡುತ್ತಿದ್ದವು. ಅಪರಿಚಿತ ಯಾರೋ! ಎಂದು ನಾಚಿಕೆಯಿಂದ ಒಳಕ್ಕೆ ಹೋಗಿ ಬಾಗಿಲ ಮರೆಯಲ್ಲಿ ನಿಂತಳು. ಪರಶುರಾಮ ಎದ್ದು ನಿಂತು

ನಾನಿನ್ನು ಬರುತ್ತೇನೆ ಬಹಳ ಉಪಕಾರವಾಯಿತು. ಎಂದವನೇ ಮನೆಯಲ್ಲಿ ಸುತ್ತ ಯಾರೂ ಕಾಣುತ್ತಿಲ್ಲ ಯಾರೋ ಏನೋ .. ಹೆಚ್ಚು ಮಾತಾಡು ವುದು ಸಭ್ಯತೆಯಲ್ಲ. ಎಂದು ಹೊರಟುಬಿಟ್ಟ. ಆದರೆ ಮನೆಗೆ ಹೋದ ಮೇಲೂ, ಆ ನೀರು ತಂದುಕೊಟ್ಟ ಸುರ ಸುಂದರಿಯ ರೂಪು ಕಣ್ಣಿಗೆ ಕಟ್ಟಿದಂತಿತ್ತು. ಯಾವ ಕೆಲಸದಲ್ಲೂ ಮನಸ್ಸು ನಿಲ್ಲಲೊಲ್ಲದು, ಕುದುರೆ ಯನ್ನು ಲಾಯದಲ್ಲಿ ಕಟ್ಟಿ ತನ್ನ ಕೊ ಠ ಡಿ ಗೆ ಹೋಗಿ ಮಲಗಿದ. ಪರಶುರಾಮನನ್ನು ಕಂಡರೆ ತಾಯಿಗೆ ತುಂಬಾ ಪ್ರೀತಿ. ಮಗ ಸ್ವಲ್ಪ ಕಣ್ಮರೆಯಾದರೂ ಸಹಿಸಳು. ಹೊರಗಿಂದ ಬಂದು ಊಟಮಾಡದೆಯೇ ಇದ್ದ ಮಗನನ್ನು ನೋಡಿ ಬಾಪ್ಪ! ರಾಮಾ–ಊಟ ಮಾಡು ಎಂದು ಕರೆದು ಊಟ ಮಾಡಿಸಿದರು. ರಾತ್ರಿಯೆಲ್ಲಾ ಆ ಹುಡುಗಿಯದೇ ನೆನಪು ನಿದ್ದೆಯಲ್ಲೂ ಅದೇ ಕನಸು–ತಿದ್ದಿದ ಕಣ್ಣು ಮೂಗು, ಕರಿ–ಕುರುಳು ನೀಳ ಜಡೆ ಮೈಮೇಲೆ ಒಂದಾದರೂ ಆಭರಣವಿಲ್ಲ. ಆದರೂ ದೇವಕನ್ಯೆ ಯಂತಿದ್ದಳು ಕಣ್ಣು ಮುಂದೆ ನಿಂತಂತೆ ಅವಳದೇ ಕನಸು.

ತಾತನ ದಿನಚರಿ ಎದ್ದಕೂಡಲೇ ವ್ಯಾಯಾಮ, ನಂತರ ಸ್ವಲ್ಪ ವಿಶ್ರಾಂತಿ. ಮನೆಯ ಹಿಂಭಾಗದ ದೊಡ್ಡ ಆವರಣದಲ್ಲಿ ಈಜುವಕೊಳ. ಆ ಕೊಳದಲ್ಲಿ ಅರ್ಧಗಂಟೆ ಈಜುವುದು, ನಂತರ ಬೆಲೆಬಾಳುವ ಪೋಷಾಕನ್ನು ಧರಿಸಿ ತಲೆಗೆ ಜರಿಯ ಪಾಗು ಸುತ್ತಿ ತಮ್ಮ ಮನೆಯ ವಿಶಾಲವಾದ ಸಭಾಂಗಣಕ್ಕೆ ಬಂದು ಸುಸಜ್ಜಿತವಾದ ಆಸನದಲ್ಲಿ ಕುಳಿತುಕೊಳ್ಳುವುದು. ನಂತರ ತಮಗಾಗಿ ಕಾದು ನಿಂತಿರುವ ರೈತರು ಮತ್ತು ಪುರ ಜನರ ಕಷ್ಟ ಸುಖಗಳನ್ನು ವಿಚಾರಿಸಿ ಅವರಿಗೆ ತೀರ್ಮಾನಕೊಡುವುದು, ಹೀಗೆ ಪ್ರತಾಪದೇವ್ ಜಹಗೀರ್‌ದಾರ್ ಅವನಂತರ ಸಿಂಧೂಪುರ್ ಜನಗಳು ಸುಖ ಸಂತೋಷವಾಗಿದ್ದರು. ಅವರನ್ನು ಎಲ್ಲರೂ ಹೊಗಳುವವರೇ ಯಾರೇ ಆಗಿದ್ದರೂ ದುಷ್ಟರನ್ನು ಶಿಕ್ಷಿಸದೆ ಬಿಡುತ್ತಿರಲಿಲ್ಲ ಬಡ ಬಗ್ಗರಿಗೆ ಸಹಾಯ ಮಾಡುತ್ತಿದ್ದರು. ಇವರಿಂದ ಜನ ನೆಮ್ಮದಿಯಾಗಿದ್ದರು. ಊಟವಾದ ನಂತರ ತಾಂಬೂಲ ಮೆಲ್ಲುತ್ತಾ ಹೆಂಡತಿಯೊಂದಿಗೆ ಯೋಗಕ್ಷೇಮ, ಸರಸ ಸಲ್ಲಾಪ, ಹೆಂಡತಿ ಗಂಗಾಮಾಯಿ, ಗಂಡನಿಗೆ ಎಂದೂ ವಿಧೇಯಳು.

ಏನೇ, ಗಂಗಾ ! ನಿನ್ನ ಪ್ರಾಯದಲ್ಲಂತೂ ನಿನ್ನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಈಗಲಾದರೂ ನಿನ್ನ ಇಷ್ಟ-ಕಷ್ಟ ಏನೂ ಹೇಳಿಕೊಳ್ಳು ವುದಿಲ್ಲವಲ್ಲ ನೀನು. ನನ್ನ ಕಂಡರೆ ಇನ್ನೂ ಭಯ ಪಡುತ್ತೀಯಾ ? ನಾನ್ಯಾಕೆ ಭಯಪಡಲಿ ? 30 ವರ್ಷದ ನಮ್ಮ ದಾಂಪತ್ಯದಲ್ಲಿ ನಮ್ಮಂತೆ ಪ್ರೀತಿಯಾಗಿದ್ದವರು ಯಾವ ಗಂಡ ಹೆಂಡತಿಯೂ ಇರಲಾರರು. ಅಬ್ಬಾ ... 30 ವರ್ಷ ಆಗೋಯ್ತೇ ಆಗಲೇ ? ಆದರೆ ನೀನು ಇಂದಿಗೂ ನನ್ನ ಕಣ್ಣಿಗೆ ಮದುವೆ ಹೆಣ್ಣು ಇದ್ದಾಗೇ ಕಾಣ್ತೀಯಾ....ಸರಿ ಬಿಡಿ ನಿಮ್ಮ ಹಾಸ್ಯ, ನಮ್ಮ ಪರಶುರಾಮನಿಗೇ 24 ವರ್ಷ ಅವನು ನಮಗೆ ನಿಧಾನ ವಾಗೇ ಹುಟ್ಟಿದ. ಅದಿರಲಿ-ನಮ್ಮ ಮನೆಯಲ್ಲಿ ಮೊಮ್ಮಕ್ಕಳು ಆಡುವುದು ಬೇಡವೇ ? ಆಡಲಿ ಬಿಡು. ಏನ್ರಿ ನಿಮ್ಮ ತಮಾಷಿ ? ಮೊದಲು ಪರಶುರಾಮನಿಗೆ ಹೆಣ್ಣು ನೋಡಿ ಮದುವೆಮಾಡಿ ಮನೆ ಬಿಕೋ....ಅಂತಿದೆ ಅದೇ ನಾನೂ ಯೋಚನೆ ಮಾಡ್ತಿದೀನಿ ನಮ್ಮ ಮನೆತನಕ್ಕೆ ತಕ್ಕ ಹೆಣ್ಣು ನೋಡಬೇಕು. ನೋಡೋಣ ಎಂದು ವಿಶ್ರಾಂತಿಗಾಗಿ ಮಲಗಿದರು. ಪರಶುರಾಮ ಕುದುರೆಗೆ ಹುಲ್ಲು ಹಾಕಿ ಮಾಲೀಶ್ ಮಾಡುತ್ತಿದ್ದ. ಈ ದಿನವೂ ಅತ್ತ ಹೋಗುವ ಚಪಲ, ತಂದೆ ಕರೆದರು. ಏನು ಅಪ್ಪಾಜೀ . ಏನಪ್ಪಾ ಕುಮಾರಾ ! ನೆನ್ನೆ ಬೇಟೆಗಾಗಿ ಎಷ್ಟು ದೂರ ಹೋಗಿಬಿಟ್ಟಿದ್ದೆ?

ಹೌದು ಅಪ್ಪಾಜೀ ನೆನ್ನೆ ಹಾಗೆಯೇ ಊರಿಂದ ಸ್ವಲ್ಪ ದೂರ ಹೋಗಿ ಅಭ್ಯಾಸ ಮಾಡುತ್ತಿದ್ದೆ. ನೆನ್ನೆಯಿಂದ ನಿಮ್ಮನ್ನು ಒಂದು ಮಾತು ಕೇಳಬೇಕೆಂದಿದ್ದೆ. ಅದೂ - ಊರಿಂದ ಹೊರಗೆ ತೋಟದ ಮನೆ ಒಂದಿದೆ-ಯಲ್ಲಾ ! ಅದು ಯಾರ ಮನೆ ? ಇದುವರೆಗೂ ನಾನು ಕಂಡಿರಲಿಲ್ಲ. ಅಂದ. ಆ ಮಾತು ಕೇಳಿದ್ದೇ ಜಹಗೀರ್‌ದಾರರ ಕಣ್ಣು ಕೆಂಪಾಗತೊಡ-ಗಿತು. ಯಾರದ್ದಾಗಿರಲಿ ನೀನು ಅಲ್ಲಿಗೆ ಹೋಗಿದ್ದೆಯೇನೋ ? ಹೌದು ಅಪ್ಪಾಜಿ, ನನಗೆ ತುಂಬಾ ಬಾಯಾರಿಕೆಯಾಯಿತು ನೀರು ಕುಡಿಯಲು ಹೋಗಿದ್ದೆ ಇನ್ನೆಲ್ಲೂ ನಿನಗೆ ನೀರು ಸಿಕ್ಕಲಿಲ್ಲವೇ ? ಆ ದರಿದ್ರದ ಮನೆ ಯಲ್ಲಿ ಯಾರು ನಿನಗೆ ನೀರು ಕೊಟ್ಟರು ! ಎಂದು ರೋಷದಿಂದ ಕೇಳಿ ದರು. ಒಂದು ಹೆಣ್ಣು ಹುಡುಗಿ ಒಳಗೆ ಕರೆದು ನೀರು ಕೊಟ್ಟಳು. ಆ

ಮನೆಯವರು ನಿನಗೆ ಗೊತ್ತೇನಪ್ಪಾ ? ಆ ದರಿದ್ರದ ಮನೆಯ ಸುದ್ದಿಯೆತ್ತಲೂ ನನಗೆ ಇಷ್ಟವಿಲ್ಲ. ಅವರು ನಮ್ಮ ಬಂಧು ಬಳಗ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತೆ. ಅಲ್ಲೇ ಇದ್ದ ಪರಶುರಾಮನ ತಾಯಿ, ಏನು ಮಾಡುವುದು ಕುಮಾರಾ ! ಅದು ನಮ್ಮ ಸೋದರ ಮಾವನ ಮಗನ ಮನೆ. ನಮ್ಮ ತಾಯಿಕಡೆ ಬಳಗ. ಆ ಹುಡುಗಿ ಅವನ ಮಗಳು. ಆಹಾ! ನಿಮ್ಮ ತಾಯಿಗೆ ಬಳಗದ ಹೆಮ್ಮೆ ನೋಡು, ಛಲಿ ಮರ್ಯಾದಸ್ಥ ಇವಳ ಸೋದರ ಮಾವನ ಮಗ ! ಜೂಜು ಕೋರ, ಕುಡುಕ, ಒಂದು ಸಲ ಬ್ಯಾಂಕಿನಲ್ಲಿ ಹಣ ಕದ್ದಿದ್ದ. ನಾನೇ ಅವನನ್ನು ಹಿಡಿದು 3 ತಿಂಗಳು ಜೈಲಿಗೆ ಕಳುಹಿಸಿದ್ದೆ. ತಪ್ಪು ಮಾಡಿದ ಯಾರನ್ನೂ ನಾನು ಬಿಡುವುದಿಲ್ಲ ಆ ಮನೆಯ ಮೇಲೆ ಇವರ ದ್ವೇಷ ಹೇಳತೀರದು ಕುಮಾರಾ ! ಇವರೇ ಅವನಿಗೆ ತೋಟ ಗದ್ದೆ ಎಲ್ಲಾ ಕೊಟ್ಟಿದ್ದರು. ಹೇಗೋ ಬಡವ ಬದುಕಲಿ ಎಂದಿದ್ದರೆ ಜೂಜಾಡಿ ತೋಟ ಗದ್ದೆ ಎಲ್ಲಾ ಕಳೆದುಕೊಂಡು ಬಿಟ್ಟ.

ಈಗ ಆ ಮನೆ ಒಂದನ್ನು ಬಿಟ್ಟರೆ ತಿನ್ನುವುದಕ್ಕೂ ಗತಿಯಿಲ್ಲ ಅವನ ಹೆಂಡತಿ ಯಾವಾಗಲೂ ಕಾಯಿಲೆ ಪಾಪ ! ಆ ಹೆಣ್ಣು ಮಗಳು ಒಬ್ಬಳು, ಆ ಹುಡುಗಿ ಏನು ಕಷ್ಟಪಡುತ್ತಾ ಇದೆ ? ಅದೇನು ಪಾಪ ಮಾಡಿತು ? ಅವನಂತೂ ಪಾಪಿ ! ಮನೆಗೆ ಬರುವುದೇ ಅಪರೂಪ ! ನನ್ನ ಕರುಳು ಹಿಂಡುತ್ತೆ ಕುಮಾರಾ ! ನನ್ನನ್ನೂ ಅತ್ತ ಸುಳಿಯ ಗೊಡುವುದಿಲ್ಲ ಇವರು ಲೋ ! ಪರಶುರಾಮ ! ಇನ್ನೊಂದು ಸಲ ನೀನು ಆ ಮನೆ ಹತ್ತಿರ ಹೋದರೆ ನಿನ್ನ ಮುಖವನ್ನೂ ನೋಡುವುದಿಲ್ಲ ಜೋಕೆ, ಎಂದು ಎದ್ದು ಹೊರಟು ಹೋದರು ಪ್ರತಾಪದೇವ್. ಪರಶುರಾಮನಿಗೆ ಇದೊಂದು ಸಮಸ್ಯೆಯೇ ಆ ಯಿ ತು. ಅಮ್ಮಾ ! ನೆನ್ನೆ ತಾನೆ ನಾನು ಆ ಮನೆಗೆ ಹೋಗಿದ್ದು. ನೀನೂ ಇದುವರೆಗೂ ಆ ಮನೆ ವಿಚಾರ ಒಂದೂ ಹೇಳ-ಲಿಲ್ಲ. ? ಕುಮಾರಾ : ರಾಮಾ ! ಎಷ್ಟೋ ವರ್ಷಗಳಿಂದ ಅವರಿಗೂ ನಮಗೂ ಕೂಡಿಯಾಟವೇ ತಪ್ಪಿಹೋಗಿದೆಯಪ್ಪಾ ! ಆ ಹುಡುಗಿ 5 ವರ್ಷದವಳಾಗಿದ್ದಾಗ ನಾನು ನೋಡಿದ್ದು-ಹೆಸರು ಸಿರಿದೇವಿ, ಮುದ್ದಾದ ಹುಡುಗಿ ಈಗ ಹೇಗಿದ್ದಾಳೋ ರಾಮಾ ? ಅಮ್ಮಾ ! ಇಷ್ಟೆಲ್ಲಾ ತಿಳಿದ ಮೇಲೆ

ನನಗೆ ಅಯ್ಯೋ ಪಾಪ ! ಎನಿಸುತ್ತೆ ತುಂಬಾ ಚೆನ್ನಾಗಿದ್ದಾಳಮ್ಮಾ ನನಗೆ ನೀರು ಕೊಡುವಾಗ ಒಂದೇ ನಿಮಿಷ ಅವಳನ್ನು ನೋಡಿದ್ದು. ಸಂಕೋಚ ದಿಂದ ಒಳಗೆ ಹೊರಟು ಹೋದಳು. ಘನ ಗಂಭೀರದ ಹೆಣ್ಣು–ಯಾರದೋ ತಪ್ಪಿಗೆ ಯಾರಿಗೊ ಶಿಕ್ಷೆ, ಪಾಪ! ಆ ಹೆಣ್ಣಿಗೆ ಹೇಗೆ ಸಹಾಯ ಮಾಡೋಣ ಅಮ್ಮಾ ! .. ಎಂದು ಮನ ಕರಗಿ ಹೇಳಿದ ಪರಶುರಾಮ. ತಾಯಿ ಮಗನ ಸಂದಿಗ್ಧತೆಯಲ್ಲಿ ಹೀಗೇ ಒಂದುವಾರ ಕಳೆಯಿತು. ಪರಶುರಾಮನ ತಾಯಿಗೆ ಮನಸ್ಸಿನಲ್ಲಿ ಕೊರಗು, ಧೈರ್ಯವಾಗಿ ಹೇಳುವಂತಿಲ್ಲ.

ಕಡೆಗೆ ರಾಮಾ ! ಏನಾದರಾಗಲಿ ಇವತ್ತು ಆ ಮನೆಗೆ ಹೋಗಿ ನಮ್ಮ ಪರಿಚಯ ಹೇಳಿ ಸ್ವಲ್ಪ ಹಣ ಕೊಟ್ಟು ಬಾರಪ್ಪಾ! ಆ ಹುಡುಗಿ ಏನು ಮಾಡಿಕೊಂಡಿದಾಳೋ ಎಂದಳು. ಪರಶುರಾಮನಿಗಂತೂ ಮತ್ತೊಮ್ಮೆ ಹೋಗಿ ಆ ಹುಡುಗಿಯನ್ನು ನೋಡಬೇಕೆಂಬ ಕಾತುರ. ಸರಿ ತಂದೆಗೆ ಕಾಣದಂತೆ ಕುದುರೆ ಮೇಲೆ ಹೊರಟೇ ಬಿಟ್ಟ. ಆ ಮನೆಯನ್ನು ತಲಪಿದ್ದೇ ಕುದುರೆಯನ್ನು ಅಲ್ಲೇ ಕಟ್ಟಿ ನೇರ ಮನೆ ಬಾಗಿಲು ತಟ್ಟಿದ. ಸಿರಿದೇವಿ ಒಳಗೆ ಅಮ್ಮನನ್ನು ನೋಡಿಕೊಳ್ಳುತ್ತಿದ್ದಳು. ಪ ರ ಶು ರಾ ಮ ಈ ಸಲ ಸಂಕೋಚವಿಲ್ಲದೆ ಬಾಗಿಲು ತಟ್ಟಿದ. ಯಾರು ? ಎಂದು ಕೇಳುತ್ತಲೇ ಸಿರಿದೇವಿ ಬಂದು ಬಾಗಿಲು ತೆಗೆದಳು. ನೋಡುತ್ತಾಳೆ ಅದೇ ಯುವಕ ಅವಳ ಎದೆ ಧಡಕ್ ಎಂದಿತು. ಮತ್ತೆ ಈ ಯುವಕ ಏಕೆ ಬಂದ ? ಬಾಗಿಲು ಪೂರಾ ತೆಗೆಯದೆ ಓರೆ ಮಾಡಿ....ನೀವು ಯಾರು ? ಏನುಬೇಕು? ಎಂದು ಕಂಪಿಸುವ ಧ್ವನಿಯಲ್ಲಿ ಕೇಳಿದಳು. ಏನೂ ಭಯಪಡಬೇಡಿ! ನಾನು ಒಳಕ್ಕೆ ಬಂದು ಎಲ್ಲಾ ಹೇಳುತ್ತೇನೆ. ಎಂದು ಬಾಗಿಲನ್ನು ಹಿಂದಕ್ಕೆ ಸರಿಸಿ ಒಳಕ್ಕೆ ಹೋಗಿಯೇ ಬಿಟ್ಟ. ಸಿರಿ ಒಳಕ್ಕೆ ಓಡಿ–ಅಮ್ಮಾ ಯಾರೋ ಬಂದಿ ದಾರೆ ನೋಡು–ಎಂದು ಹೇಳಿ ಒಳಗೇ ನಿಂತಳು. ಸಿರಿಯ ತಾಯಿ ಕಾವೇರಿಮ್ಮಾಯಿ, ಯಾರಮ್ಮಾ ! ಅದೂ ? ಎಂದು ಮೆಲ್ಲನೆ ಎದ್ದು ಹೊರಕ್ಕೆ ಬಂದಳು. ಒಂದು ಹಳೇ ಸೀರೆ–ಖಾಯಿಲೆಯಿಂದ ಸೋತ ದೇಹ. ನೋಡಿದ್ದೇ ಪರಶುರಾಮನಿಗೆ ಅವರ ಕಷ್ಟ ಎಷ್ಟೆಂದು ಅರ್ಥವಾಯಿತು. ಬನ್ನೀ ಅಮ್ಮಾ! ಕೂತುಕೊಳ್ಳಿ. ನೀವೇನೂ ಗಾಬರಿಯಾಗಬೇಡಿ. ನಾನು ನಿಮ್ಮ ಆತ್ಮೀಯ

ಬಂಧು ಎಂದುಕೊಳ್ಳಿ. ನನಗೆ ಯಾರೂ ಗೊತ್ತಿಲ್ಲಾಪ್ಪಾ ! ಪರವಾಗಿಲ್ಲ ನಾನೇ ಹೇಳುತ್ತೇನೆ. ನಾನು ಪ್ರತಾಪದೇವ್ ಜಹಗೀರ್‌ದಾರರ ಮಗ– ಗಂಗಾಮಾಯಿ ನನ್ನ ತಾಯಿ. ಹೇಳುತ್ತಿದ್ದಂತೆಯೇ ಕಾವೇರಿ ಹೌದೇನಪ್ಪಾ! ನೀನು ಪರಶುರಾಮನೇ ? ಎಂದಳು.

ಹೌದು ಅಮ್ಮಾ ! ಇಷ್ಟು ಹತ್ತಿರವಿದ್ದೂ ನಿಮ್ಮನ್ನು ನೋಡಲಾಗಲಿಲ್ಲ. ಬೇಡಪ್ಪಾ ! ಮಹರಾಯ ನಿಮ್ಮ ತಂದೆಗೆ ತಿಳಿದರೆ ಹಗರಣವಾಗುತ್ತೆ. ಎಲ್ಲಾ ನನಗೆ ಗೊತ್ತಾಯಿತು. ಇನ್ನು ನಿಮ್ಮನ್ನು ಈ ಕಷ್ಟದಲ್ಲಿ ಬಿಡಲಾರೆ-ಎಂದು ಹೇಳಿದ ಮಾತನ್ನು ಕೇಳಿಸಿಕೊಂಡು ಸಿರಿ ಹೊರಕ್ಕೆ ಬಂದಳು. ಕ್ಷಮಿಸಿ ! ನೀವು ಯಾರೋ ಎಂದು ಬಾಗಿಲು ತೆಗೆಯಲಿಲ್ಲ. ಅವಳ ಸುಂದರವಾದ ಕಣ್ಣುಗಳು ಮುತ್ತೂ ಹೊಳಪಾಗಿ ಆ ಯುವಕನನ್ನೇ ಓರೆಗಣ್ಣಿನಿಂದ ನೋಡಿತು, ಸಿರಿದೇವಿಯೇ ಆಗಿದ್ದಳು ಅವಳು. ಇಬ್ಬರ ದೃಷ್ಟಿ ಒಂದು ಗೂಡಿದಾಗ ಯಾವುದೋ ಸುಂದರ ಸ್ವಪ್ನ ಕಂಡಂತಾಯಿತು. ನಿಮ್ಮ ಹೆಸರು ಸಿರಿದೇವಿ, ಎಂದು ಅಮ್ಮ ಹೇಳಿದರು, ಇದನ್ನು ನಮ್ಮ ಅಮ್ಮನೇ ಕೊಟ್ಟು ಕಳುಹಿಸಿದ್ದು. ಎಂದು ಒಂದು ಕೈಲಿ ಚೀಲವನ್ನು ಸಿರಿಯ ಕೈಗೆ ಕೊಟ್ಟ ಅಬ್ಬಬ್ಬಾ ! ಇದೆಂತಹ ಹೊರೆ ನಮಗೆ ಬೇಡ-ಬೇಡ. ನಾವು ಬಡತನದಲ್ಲಿಯೇ ಇದ್ದರೂ ನಮಗೆ ಆತ್ಮ ಗೌರವವಿದೆ. ನಮ್ಮ ತಂದೆಯಾದರೂ ಈಗ ಇದೆಲ್ಲಾ ಇಷ್ಟಪಡುವುದಿಲ್ಲ. ಎಂದು ಹೇಳಿ ಅವನ ಪಕ್ಕದಲ್ಲಿಯೇ ಇಟ್ಟುಬಿಟ್ಟಳು ಸಿರಿ-ನೋಡಿ ನೀವು ಹೀಗೆಲ್ಲಾ ಮಾಡಿದರೆ ನಾನು ಇನ್ನು ಮೇಲೆ ನಿಮ್ಮ ಮನೆಗೇ ಬರುವುದಿಲ್ಲ. ತೆಗೆದುಕೊಳ್ಳಿ. ಸಿರಿಗೆ ಆ ಯುವಕನಲ್ಲಿ ಏನೋ ಆಕರ್ಷಣೆ-ಹೌದು ಅವನು ಬರುತ್ತಿರಬೇಕು. ಬರದಿದ್ದರೆ ? ಸಾಧ್ಯವಿಲ್ಲ-ಎಂದಿತು ಮನಸ್ಸು.

ಇನ್ನೇನೂ ಇಲ್ಲ ನಿಮ್ಮ ತಂದೆಗೂ ನಮ್ಮ ತಂದೆಗೂ ಬದ್ಧ ದ್ವೇಷ ಸಂಬಂಧ ಎನ್ನುವುದೇ ಮರೆತು ಹೋಗಿತ್ತು. ಪರವಾಗಿಲ್ಲ ಬಿಡಿ ಹಿರಿಯರ ದ್ವೇಷವನ್ನು ನಾವು ಕಿರಿಯರು ಅಳಿಸೋಣ. ಪ್ರೀತಿಯಿಂದ ಅವರನ್ನು ಗೆಲ್ಲೋಣ. ನಾನು ಇನ್ನು ಹೋಗುತ್ತೇನೆ. ಎಂದು ಹೊರಟ, ಕಾವೇರಿಗೆ ಕಣ್ಣಲ್ಲಿ ನೀರು ಬಂತು. ನೋಡಪ್ಪಾ ! ಗಂಗಾಮಾಯಿಯನ್ನು ಕೇಳಿದೆನೆಂದು

ಹೇಳು. ನಾವಿಬ್ಬರು ಎಷ್ಟು ಅನ್ಯೋನ್ಯವಾಗಿದ್ದೆವು. ನನ್ನ ಗಂಡನ ಕೆಟ್ಟ ನಡತೆಯಿಂದ ಎಲ್ಲರೂ ದೂರವಾದರು. ಪರವಾಗಿಲ್ಲ ಇನ್ನು ಮೇಲೆ ಎಲ್ಲಾ ಸರಿಹೋಗುತ್ತೆ. ಕುದುರೆ ಏರಿ ಹೊರಟ ಪರಶುರಾಮನನ್ನು ಕಣ್ಮರೆಯಾಗುವ ವರೆಗೂ ಸಿರಿ ಬಾಗಿಲಲ್ಲಿಯೇ ನಿಂತು ನೋಡುತ್ತಲೇ ಇದ್ದಳು. ಅವಳ ಮನಸ್ಸು ಹೂವಿನಂತೆ ಹಗುರವಾಯಿತು. ಕುಣಿದು ಕುಪ್ಪಳಿಸುತ್ತಾ ಒಳಗೆ ಹೋಗಿ ಅಮ್ಮನನ್ನು ತಬ್ಬಿ ಮುದ್ದಾಡಿಬಿಟ್ಟಳು ನೋಡು ಸಿರಿ ನಮ್ಮ ಬಾಂಧವ್ಯನೇ ತಪ್ಪಿಹೋಗಿತ್ತು. ಈಗ ಬಂದಿದ್ದನಲ್ಲಾ ಅವನು ಮಗುವಾಗಿ ದ್ದಾಗ ಅವರ ಮನೆಗೆ ಆಗಾಗ ಹೋಗುತ್ತಿದ್ದೆವು.

ಆಮೇಲೆ 5-6 ವರ್ಷಗಳ ನಂತರ ನೀನು ಹುಟ್ಟಿದೆ. ಆಗಲೂ ತೊಟ್ಟಿಲು ಸಂಭ್ರಮಕ್ಕೆಲ್ಲಾ ಗಂಗಾ ಬಂದಿದ್ದಳು. ಅವಳೇ ಗಂಡನಿಗೆ ಹೇಳಿ 4 ಎಕರೆ ಗದ್ದೆ ತೋಟ ಎಲ್ಲಾ ನಿಮ್ಮ ಅಪ್ಪನಿಗೆ ಕೊಡಿಸಿದ್ದಳು. ಈ ಬಂಗಲೆ ಮನೆಯನ್ನೂ ಅವರೇ ಕಟ್ಟಿಸಿಕೊಟ್ಟಿದ್ದು- ಪ್ರತಾಪದೇವ್ ಈ ಊರಿಗೆ ಜಹಗೀರ್‌ದಾರರು, ತುಂಬಾ ದರ್ಪ ಬಡವರನ್ನು ಕಂಡರೆ ಅಷ್ಟೇ ಕನಿಕರ. ಮತ್ತೆ ಏನಮ್ಮಾ! ಅಂಥಾ ಬಳಗ ನಮಗೆ ಇದ್ದೂ ನಾವು ಕಂಗಾಲಿಗಳಾಗಿದ್ದೆವಲ್ಲಾ, ಸಿರಿ ಕೇಳಿದಳು. ಅಯ್ಯೋ! ಮಗಳೇ ನಿಮ್ಮಪ್ಪ ಎಲ್ಲಾ ಕಳೆದರು.

ಅಲ್ಲಿಂದ ಬಂದ ಕೂಡಲೇ-ಪರಶುರಾಮ ತಾಯಿಯ ಬಳಿ ಎಲ್ಲಾ ಹೇಳಿದ. ಅಮ್ಮಾ ಆ ಹುಡುಗಿ ತುಂಬಾ ಸ್ವಾಭಿಮಾನಿ. ನಾನು ಹಣ ಕೊಟ್ಟಿದ್ದಕ್ಕೆ ಬೇಡ, ಎಂದು ಹಠ ತೊಟ್ಟಳು. ಅಂತೂ ಕೊಟ್ಟು ಬಂದೆ. ಅವಳ ಅಮ್ಮ ತುಂಬಾ ಸಣ್ಣಗಾಗಿ ಬಿಟ್ಟಿದ್ದಾರೆ. ಔಷಧಿಕೂಡ ಇಲ್ಲಾ ಎಂದು ಕಾಣತ್ತೆ ನಿನ್ನನ್ನು ತುಂಬಾ ವಿಚಾರಿಸಿದರು.

ನೋಡು, ಅವಳ ಗಂಡ ಏನೂ ವಿಚಾರಿಸುವುದಿಲ್ಲ. ನೀನೇ ಒಳ್ಳೆ ಡಾಕ್ಟರನ್ನ ಅವರ ಮನೆಗೆ ಕರೆದುಕೊಂಡು ಹೋಗಿ ಅವಳ ಖಾಯಿಲೆ ವಾಸಿಯಾಗುವವರೆಗೂ ಔಷಧಿ ಕೊಡುವಂತೆ ಹೇಳು ರಾಮಾ... ಪರಶುರಾಮ ನಿಗೆ ಅಷ್ಟೇ ಬೇಕಾಗಿತ್ತು. ಯಾವುದೋ ನೆಪದಲ್ಲಿ ಸಿರಿಯನ್ನು ನೋಡ-ಬೇಕು.

ಇವರ ಸಮಾಗಮ ಹೀಗೆಯೇ ಹಿರಿಯರಿಗೆ ತಿಳಿಯದಂತೆಯೇ ನಡೆ-ಯುತ್ತಿತ್ತು. ಸ್ನೇಹ-ಕರುಣೆ, ಪ್ರೀತಿಗೆ ತಿರುಗಿತು. ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಗಾಢ ಪ್ರೇಮ. ಒಂದು ದಿನ ಪರಶುರಾಮ ........ಅಮ್ಮಾ ನಾನು ಸಿರಿಯನ್ನು ಮದುವೆಯಾಗುತ್ತೇನೆ ಅಮ್ಮಾ ! ಎಂದ. ಗಂಗಾಮಾಯಿ ದೇವರ ಪೂಜಾಗೃಹದಲ್ಲಿ ಪೂಜೆ ಮಾಡುತ್ತಿದ್ದಳು. ಮಗನ ಮಾತು ಕೇಳಿ ಗಡ-ಗಡನೆ ನಡುಗಿದಳು.

ಅಮ್ಮಾ ಯಾಕಮ್ಮಾ ! ಏನೂ ಉತ್ತರವನ್ನೇ ಹೇಳಲಿಲ್ಲ. ನಿನ್ನ ಇಷ್ಟ ಹೇಳಮ್ಮಾ ಅಲ್ಲ ಕಣೋ....ನನ್ನ ಏನು ಕೇಳುತ್ತೀ ? ಇದನ್ನು ನಿಮ್ಮ ಅಪ್ಪ ಕೇಳಿದರೆ ನಿನ್ನನ್ನು ತುಂಡು ತುಂಡಾಗಿ ಕತ್ತರಿಸಿ ಬಿಡು-ತ್ತಾರೆ. ಇಲ್ಲಮ್ಮ ಇದಕ್ಕೆ ನೀನೇ ಉಪಾಯ ಮಾಡಬೇಕು. ನಾನು ಸಿರಿ-ಯನ್ನಲ್ಲದೆ ಬೇರೆ ಹೆಣ್ಣನ್ನು ಖಂಡಿತ ಮದುವೆಯಾಗುವುದಿಲ್ಲ. ಸರಿ ಕಣಪ್ಪಾ ! ನನಗೂ ನನ್ನ ತೌರುಕಡೆ ಸಂಬಂಧ. ಆದರೆ ನಿಮ್ಮ ಅಪ್ಪನನ್ನು ಒಪ್ಪಿಸುವವರಾರು ? ಎಂದು ಭಯದಿಂದ ಮಗನಿಗೆ ಹೇಳಿದಳು.

ಸಿರಿಯಂತೂ ಕ್ಷಣ ಕ್ಷಣವೂ ಪರಶುರಾಮನ, ನಿರೀಕ್ಷಣೆಯಲ್ಲಿಯೇ ಕ್ಷಣವೊಂದು ಯುಗವಾಗಿ ಅನ್ನುವಂತೆ ತುಡಿಯುತ್ತಿದ್ದಳು.

ಆ ದಿನ ಪರಶುರಾಮ ಬಂದಾಗ ಸಿರಿ ಶೃಂಗಾರವಾಗಿದ್ದಳು. ತನ್ನ ಕರಿ ಗುಂಗುರು ಕೂದಲನ್ನು ಮುಡಿಕಟ್ಟಿ ಅದಕ್ಕೆ ಒಂದು ಮುತ್ತಿನ ಮಾಲೆಯನ್ನು ಸುತ್ತಿದ್ದಳು. ತನ್ನಲ್ಲಿದ್ದ ಹಳೆಯ ಸೀರೆಯನ್ನೇ ಅಚ್ಚುಕಟ್ಟಾಗಿ ಉಟ್ಟು ನಿರಾಭರಣ ಸುಂದರಿಯಾಗಿದ್ದಳು. ಅವಳ ಅಮ್ಮ ಇವರಿಬ್ಬರ ಅನ್ಯೋನ್ಯತೆ ಗಮನಿಸಿ, ಅಮ್ಮಾ.. ಸಿರಿ ಅವರ ಸಹವಾಸ ನಮಗೆ ಬೇಡ. ಅವರು ಸಿರಿವಂತರು-ನಾವು ಬಡವರು ಎಂದು ಹೇಳುತ್ತಿದ್ದಂತೆಯೇ ಪರಶುರಾಮ ಬಂದ.

ಅಮ್ಮಾ....ನೀವೇನೂ ಯೋಚಿಸಬೇಡಿ. ನಾನು ಹೇಗಾದರೂ ನಮ್ಮ ತಂದೆಯನ್ನು ಒಪ್ಪಿಸಿ ನಿಮ್ಮ ಮಗಳನ್ನು ಮದುವೆಯಾಗುತ್ತೇನೆ ಸಿರಿಯೇ ಆ ಮನೆ ಸಿರಿದೇವಿಯಾಗಬೇಕು. ಎಂದು ಹೇಳಿ ಸಿರಿಯನ್ನು ರೂಮಿ-

ನೊಳಕ್ಕೆ ಕರೆದು ಅವಳಿಗೆ ಗುಟ್ಟಾಗಿ ಏನೇನೋ ಹೇಳಿದ. ಸಿರಿ ಭಯ-ದಿಂದ ಇಲ್ಲಾಪ್ಪಾ... ಅದೆಲ್ಲಾ ಬೇಡಿ. ನನಗೆ ತುಂಬಾ ಭಯವಾಗುತ್ತೆ ಅಂದಳು.

ಏನೂ ಇಲ್ಲ ನಾನು ಹೇಳಿದ ಹಾಗೆ ಕೇಳು. ತಾನು ತಂದಿದ್ದ ಒಳ್ಳೆ ಜರಿ ಸೀರೆ-ಒಡವೆ ಎಲ್ಲಾ ಕೊಟ್ಟ. ಸಿರಿ ಅದೆಲ್ಲಾ ಉಟ್ಟು ತೊಟ್ಟು ಸಿರಿದೇವಿಯೇ ಆದಳು. ಕಣ್ಣು ಕೋರೈಸುವ ಅವಳ ರೂಪವನ್ನು ನೋಡಿ ಪರಶುರಾಮ ದಂಗಾದ. ಸಿರಿ ನೀನೆಷ್ಟು ಚಂದ ? ಎಂದು ಹಿಂದು ಮುಂದು ನೋಡದೆ ಅವಳನ್ನು ಬಾಚಿ ತಬ್ಬಿ....ಮೈ ಮುಖದ ಮೇಲೆಲ್ಲಾ ಮುತ್ತಿನ ಮಳೆಗರೆದ. ಸಿರಿ ನಾಚಿ ನೀರಾದಳು.

ಪರಶುರಾಮ-ತಮ್ಮ ಮನೆ ಬಾಗಿಲಲ್ಲಿ ಸಿರಿಯನ್ನು ಕುದುರೆಯಿಂದ ಇಳಿಸಿ-ಅವಳನ್ನು ಬಾಗಿಲ ಬಳಿ ನಿಲ್ಲಿಸಿ ಒಳಗೆ ಹೋಗಿ ಅಮ್ಮನನ್ನು ಕೂಗಿ ಕರೆ ತಂದ. ಗಂಗಾಮಾಯಿ ಹೊರಗೆ ಬಂದು ನೋಡಿ ಪ್ರತ್ಯಕ್ಷ ಲಕ್ಷ್ಮಿಯೇ ಮನೆ ಬಾಗಿಲಿಗೆ ಬಂದು ನಿಂತಿದ್ದಾಳೋ ?....ಎಂದು ಆಶ್ಚರ್ಯದಿಂದ ಬಾಯಿ ಮೇಲೆ ಕೈಯಿಟ್ಟು ಕಣ್ಣು ಮಿಟುಕಿಸದೆ ಅವಳನ್ನೇ ನೋಡುತ್ತಾ ನಿಂತುಬಿಟ್ಟಳು.

ಅಮ್ಮಾ ! ...ಏನಮ್ಮಾ ಹಾಗೆ ನಿಂತುಬಿಟ್ಟೆ ? ನಿನ್ನ ಸೊಸೆ ಇವಳು. ಕುಂಕುಮ ಇಟ್ಟು ಒಳಕ್ಕೆ ಕರೆದುಕೊಳ್ಳಮ್ಮಾ ! ಅಂದ.

ಗಂಗಾಮಾಯಿಗೆ ಏನೋ ಗಾಬರಿ-ಏನೋ ಸಂತೋಷ ಒಟ್ಟಿಗೇ ಆಯಿತು ಬೇಗ ಒಳಗೆ ಹೋಗಿ ಕುಂಕುಮ ತಂದು ಅವಳ ಹಣೆಗಿಟ್ಟು ಸಿರಿಯ ಕೈ ಹಿಡಿದು ಒಳಗೆ ಕರೆತಂದಳು. ರಾಮಾ! ಯಾರೋ ಈ ಹುಡುಗಿ

ಅದೇ ಅಮ್ಮಾ ನಿನ್ನ ಸೋದರ ಮಾವನ ಮಗಳು ಸಿರಿದೇವಿ, ನಿಮ್ಮ ಅಪ್ಪ ಇಲ್ಲ ಸರಿ. ಹೈದರಾಬಾದಿಗೆ ಹೋಗಿದ್ದಾರೆ-ಇನ್ನು ಒಂದು ವಾರ ಬರುವುದಿಲ್ಲ. ಆಮೇಲೆ ಏನು ಗತಿ ?

ಗಂಗಾಮಾಯಿಗೆ ತುಂಬಾ ಸಂತೋಷವೇನೋ ಆಯಿತು. ಸಿರಿಯನ್ನು ಬಹಳ ಅಕ್ಕರೆಯಿಂದ ನೋಡಿಕೊಂಡಳು. ಮನೆಯೆಲ್ಲಾ ಮಿಂಚಿನಂತೆ ಓಡಾಡುತ್ತಾ ತನ್ನ ಜೊತೆಗೆ ಸಹಾಯವಾಗಿದ್ದ ಸಿರಿಯನ್ನು ತುಂಬಾ ಮೆಚ್ಚಿದಳು. ದೇವರಲ್ಲಿ ಹರಕೆ ಹೊತ್ತಳು. ಇವಳು ಸೊಸೆಯಾಗಿ ಬರುವಂತೆ ಮಾಡಪ್ಪಾ ಎಂದು.

ಏಕಾಂತದಲ್ಲಿ ಪರಶುರಾಮನನ್ನು ಕಂಡು ಸಿರಿ, ನಿಮ್ಮ ತಾಯಿ ಎಷ್ಟು ಒಳ್ಳೆಯವರು. ನನ್ನನ್ನು ಎಷ್ಟು ಮುದ್ದು ಮಾಡುತ್ತಾರೆ ಆದರೆ ನಿಮ್ಮ ತಂದೆಯ ಮುಂದೆ ನಾನು ಹೀಗೆ ಇರಲು ಸಾಧ್ಯವೆ ? ಈ ಮನೆಯ ಅದೃಷ್ಟ ನನಗೆ ಇದೆಯೋ ಇಲ್ಲವೋ ಎಂದು ಗಳ–ಗಳನೆ ಅತ್ತು ಬಿಟ್ಟಳು. ನಾನು ನಿನ್ನ ಕೈಬಿಡುವುದಿಲ್ಲ ಎಂದು ಎಷ್ಟೆಷ್ಟೋ ಹೇಳಿ ಪಕ್ಕದಲ್ಲಿ ಕೂರಿಸಿಕೊಂಡು ಸಮಾಧಾನ ಪಡಿಸಿದ ಪರಶುರಾಮ. ಸಿರಿಯ ತಾಯಿ ಈಗ ಹುಷಾರಾಗಿದ್ದರು. ಅವರಿಗೂ ಭಯ ಜಹಗೀರ್‌ದಾರರು ಏನು ಹಗರಣ ಮಾಡುವರೋ ಎಂದು.

ಪ್ರತಾಪದೇವ್ ಪಾಟೀಲ್ ಬಂದರು, ಮನೆ ಒಂದು ವಿಧವಾದ ಸೆನ್ನಾಟಾ ನಿಶ್ಯಬ್ಧ ವಾತಾವರಣ. ಆಳುಗಳು ಎಲ್ಲಾ ಕೈಕಟ್ಟಿ ಏನು ಮಾಡಬೇಕೆಂದು ಕಾದು ನಿಂತಿದ್ದರು. ಸಿರಿ ಗಡ–ಗಡನೆ ನಡುಗುತ್ತಾ ಒಂದು ರೂಮಿನಲ್ಲಿ ಕುಳಿತಿದ್ದಳು. ಗಂಗಾಮಾಯಿ ಸ್ವಲ್ಪ ಹೊತ್ತಾದಮೇಲೆ ಬಂದು ಅವರ ಯೋಗ ಕ್ಷೇಮ ವಿಚಾರಿಸಿದರು. ಏನು ಮನೆ ಒಂದು ವಿಧ ಮಂಕಾಗಿದೆಯಲ್ಲಾ : ಪರಶುರಾಮ ಎಲ್ಲಿ?

ಆ ಮನೆ ಅನೇಕ ಕೊಠಡಿಗಳ ವಿಶಾಲ ಮನೆ. ಈ ಮನೆಯಲ್ಲಿ ಯಾರು ಎಲ್ಲಿದ್ದರೂ ಗೊತ್ತಾಗುತ್ತಿರಲಿಲ್ಲ. 3–4 ದಿನಗಳಾದ ನಂತರ ಗಂಗಾಮಾಯಿ ಸಿರಿಯನ್ನು ತನ್ನ ಜೊತೆ ಜೊತೆಗೆ ಬೇಕೆಂದೇ ಓಡಾಡಿಸು ತ್ತಿದ್ದರು. ಒಂದೆರಡು ಸಾರಿ ಹುಡುಗಿ ಕಣ್ಣಿಗೆ ಬಿದ್ದಾಗ ಜಹಗೀರ್‌ದಾರರು ಗಂಗಾ, ಯಾರು ಆ ಹುಡುಗಿ ಅಂದರು. ನಮಗೆ ದೂರದ ಸಂಬಂಧದ ಹುಡುಗಿ, ನನಗೆ ತುಂಬಾ ಬೇಜಾರೆಂದು ನಾನೇ ಕರೆಸಿಕೊಂಡೆ.

ಹುಡುಗಿ ತುಂಬಾ ಲಕ್ಷಣವಾಗಿದ್ದಾಳೆ ಮರ್ಯಾದೆ, ಗಂಭೀರ ಘನ ನೋಡಿದರೆ ದೊಡ್ಡ ಕುಟುಂಬದ ಹುಡುಗಿಯೆಂದು ಕಾಣುತ್ತೆ–ಇಷ್ಟಕ್ಕೆ ಬಂದ ಸಮಾಚಾರ, ತನ್ನ ನಡೆ ನುಡಿಗಳಿಂದ ಪ್ರತಾಪದೇವ್ ಮನವನ್ನು ಗೆದ್ದಳು ಸಿರಿ.

ಏನೇ ! ಪರಶುರಾಮ ಆ ಹುಡುಗಿಯ ಮೇಲೆ ಕಣ್ಣಿಟ್ಟಿರುವಂತೆ ಕಾಣುತ್ತೆ. ಕಂಡವರ ಮನೆ ಹುಡುಗಿ–ಏನಾದರೂ ತಪ್ಪಾದೀತು. ಕಳುಹಿಸಿ ಬಿಡು ಗಂಗಾ ಅಂದರು.

ನೋಡಿ ನಿಮಗೆ ಒಪ್ಪಿಗೆಯಾದರೆ ನಾವೇ ಸೊಸೆ ಮಾಡಿಕೊಳ್ಳೋಣ ರೀ. ಅವರ ಮನೆತನ ಏನು ? ಯಾರು ? ಎಂದು ತಿಳಿಯದೇ ಏನು ಮಾತು ನಿಂದು !

ನೋಡಿ ನಾನು ಇದುವರೆಗೆ ನಿಮ್ಮನ್ನು ಏನೂ ಕೇಳಿಲ್ಲ. ನನ್ನ ಇದೊಂದು ಮಾತು ನಡೆಸಿ ಕೊಡಿ, ಈ ಹುಡುಗಿಯನ್ನು ಪರಶುರಾಮನಿಗೆ ಮಾಡಿಕೊಳ್ಳೋಣ. ತುಂಬಾ ಒಳ್ಳೆ ಹುಡುಗಿ

ಆಯಿತು ಈ ಹುಡುಗಿಯ ಅಪ್ಪ ಅಮ್ಮ ಯಾರು ?
ನೋಡಿ, ಮೊದಲು ನೀವು ಮಾತು ಕೊಡಿ–ಎಂದು ಕೈ ಚಾಚಿದರು. ಗಂಗಾಮಾಯಿ ಕೈಮೇಲೆ ಭಾಷೆ ಕೊಟ್ಟು– ಆಗಲಿ ನನಗೂ ಒಪ್ಪಿಗೆ– ಪರಶುರಾಮನಿಗೆ ಇಷ್ಟವಿದೆಯೇ ?

ಅವನದೇ ಕಾರು–ಬಾರು. ಇವಳು ನನ್ನ ಮಾವನ ಮಗನ ಮಗಳು. ಸಿರಿದೇವಿ ಎಂದು. ದಿಕ್ಕಿಲ್ಲದೇ ಕಷ್ಟಪಡುತ್ತಿದ್ದ ತಾಯಿ ಮಗಳನ್ನು ನೋಡಿ ಪರಶುರಾಮನೇ ಮೆಚ್ಚಿ ಕರೆತಂದಿದ್ದಾನೆ ಇವಳ ಅಪ್ಪನೂ ದೇಶಾಂತರ ಹೋಗಿ 4 ವರ್ಷವಾಯಿತಂತೆ, ಪಾಪ ! ಹುಡುಗಿ–ಅವಳೇನೂ ಮಾಡಿದ್ದಾಳೆ? ಇಷ್ಟನ್ನೂ ಧೈರ್ಯ ಮಾಡಿ ಹೇಳಿಯೇ ಬಿಟ್ಟರು ಗಂಗಾಮಾಯಿ.

ಸರಿ ಅವಳ ಅಪ್ಪ. ಮಹಾಪಾಪಿ, ಅವನು ಇತ್ತಕಡೆ ಸುಳಿಯದಿದ್ದರೆ ಆಗಬಹುದು. ಎಂದು ಪಾಟೀಲ್ ಒಪ್ಪಿಗೆ ಕೊಟ್ಟರು

ಈ ಮಾತನ್ನು ರೂಮಿನಲ್ಲಿ ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದ ಪರಶುರಾಮುನಿಗೂ ಸಿರಿಗೂ ಆದ ಖುಷಿ ಅಷ್ಟಿಷ್ಟಲ್ಲ. ಇಬ್ಬರೂ ಅಪ್ಪಿ ಕೊಂಡು ಕುಣಿದಾಡಿಬಿಟ್ಟರು. ಇನ್ನೇನು ಜಹಗೀರ್‌ದಾರರ ಮನೆತನಕ್ಕೆ ತಕ್ಕಂತೆ ವಿಜೃಂಭಣೆಯಿಂದ ಮದುವೆಯಾಯಿತು.

ಅಜ್ಜಿ ಕಾಳೀಪ್ರಸಾದನಿಗೆ ಇದನ್ನೆಲ್ಲಾ ಹೇಳಿ ಕುಮಾರಾ, ಇಷ್ಟೊ ಹೇಳಿದ್ದು ಯಾರ ವಿಚಾರ ಗೊತ್ತೇ ! ಅದೇ ಪರಶುರಾಮು ನಮ್ಮ ತಂದೆ. ಸಿರಿದೇವಿ ನಮ್ಮ ತಾಯಿ, ಈ ರೀತಿಯ ಅವರ ಪ್ರೇಮ ವಿವಾಹದ ಕಥೆ ಯನ್ನು ಆಗಾಗ ನಮ್ಮ ಅಮ್ಮ ನನಗೆ ಹೇಳುತ್ತಿದ್ದರು. ನಮ್ಮ ಅಪ್ಪ ನಮ್ಮ ಅಮ್ಮನನ್ನು ತುಂಬಾ ಪ್ರೀತಿಸುತ್ತಿದ್ದರಂತೆ. ಕಾಳೀಪ್ರಸಾದ ಅಜ್ಜಿ ಹೇಳಿದ ವಂಶ ಚರಿತ್ರೆಯನ್ನೆಲ್ಲಾ ತದೇಕವಾಗಿ ಕೇಳಿದ. ತನ್ನ ವಂಶದ ಬಗ್ಗೆ ಹೆಮ್ಮೆಯೆನಿಸಿತು. ಜಹಗೀರ್‌ದಾರರ ವಂಶ ಎಂದರೆ ಸಾಮಾನ್ಯವೇ?

ಅಜ್ಜೀ.... ಇಂತಹ ಪ್ರಖ್ಯಾತರಾದವರ ಮನೆ ಹೀಗೆ ಪಾಳು ಬೀಡಾಗ ಬಾರದು ಅಜ್ಜೀ.... ನೀವಾದರೂ ಇರುವ ವೇಳೆಗೆ ಅವರ ವಿಷಯವನ್ನೆಲ್ಲಾ ತಿಳಿ-ದವರೊಬ್ಬರು ಈ ವಂಶದಲ್ಲಿ ಉಳಿದಿದ್ದಾರಲ್ಲಾ! ಎಂದು ಸಂತೋಷವಾಗುತ್ತದೆ ಅಜ್ಜೀ

ಅಯ್ಯೋ ! ಕುಮಾರಾ ! ಇದೊಂದು ಒಣಮರ–ಹೂವಿಲ್ಲ ಕಾಯಿಲ್ಲ. ನನಗೆ ಒಂದು ಮಗುವಾದರೂ ಇದ್ದಿದ್ದರೆ ಪರಶುರಾಮುನಂಥಾ ಧೀರ ತಾತನ ಮೊಮ್ಮಗ ಎಂದು ಹೇಳಿಕೊಳ್ಳಬಹುದಾಗಿತ್ತು.

ಬಿಡು ಅಜ್ಜೀ. ನಿಮ್ಮ ಮನೆ ದೇವರು ಪರಶುರಾಮು ದೇವರು. ಎಲ್ಲಾ ಒಳ್ಳೆಯದು ಮಾಡುತ್ತಾನೆ. ಸರಿ–ನಿಮ್ಮ ತಂದೆ ಪರಶುರಾಮುರು ಏನು ಉದ್ಯೋಗ ಮಾಡುತ್ತಿದ್ದರು.

ಹೌದಪ್ಪಾ ! ನಮ್ಮ ತಂದೆಯ ಚರಿತ್ರೆಯೂ ನೆನೆಸಿಕೊಳ್ಳುವಂತ–ಹುದೇ ನಮ್ಮ ಪ್ರತಾಪದೇವ್ ಪಾಟೀಲ್ ಮಗ ದೊಡ್ಡವನಾದ ಮೇಲೆ ಈ ಜಹಗೀರ್ ಆಡಳಿತವನ್ನೆಲ್ಲಾ ಅವನಿಗೇ ಒಪ್ಪಿಸಿದರು.

ಪರಶುರಾಮಾ.....ನೀನು ನನಗಿಂತ ಒಳ್ಳೆಯ ಹೆಸರನ್ನು ಪಡೆಯ ಬೇಕು. ನಿಜಾಮರಿಗೆ ದ್ರೋಹ ಮಾಡಬೇಡ. ನಮ್ಮ ಪ್ರಜೆಗಳನ್ನು ಚೆನ್ನಾಗಿ ಕಾಪಾಡು ಎಂದು ಹೇಳಿದರು.

ಯಾಕಪ್ಪಾ! ನೀವಿರುವಾಗ ನನಗೆ ಆ ಸ್ವಾತಂತ್ರ್ಯಬೇಡ. ನೀವು ಹೇಳಿದ ರೀತಿ ನಡೆದುಕೊಳ್ಳುತ್ತೇನೆ.

ನೋಡಪ್ಪಾ! ನೀನು ಇರುವವನು ಒಬ್ಬ ಮಗ. ಬೇರೆ ಎಲ್ಲೋ ಮಿಲ್ಟ್ರಿ ಆದು ಇದು ಎಂದು ಹೊರಟು ಹೋದರೆ ಇಲ್ಲಿ ನೋಡಿಕೊಳ್ಳು-ವವರು ಯಾರು. ನಿಮ್ಮಮ್ಮನಿಗಂತೂ ಸೊಸೆಯ ಮುದ್ದೇ ಮುದ್ದು. ಆವಳಿಗೆ ಎಷ್ಟು ಅಲಂಕಾರ ಮಾಡಿದರೂ ಸಾಲದು.

ಹೌದಪ್ಪಾ! ಕಬ್ಬಿಣದ ತಿಜೋರಿಯಲ್ಲಿದ್ದ ಒಡವೆಯೆಲ್ಲಾ ನಿಮ್ಮ ಸೊಸೆ ಮೈಮೇಲೆ ಇದೆ. ಹೋಗಲಿ-ಇಬ್ಬರೂ ಸಂತೋಷವಾಗಿದ್ದಾರೆ, ಅಷ್ಟೇ ನನಗೂ ಸಂತೋಷ ಅಪ್ಪಾ.

ಇದಾದ ನಂತರ ನಮ್ಮ ತಾತ ಒಂದು ಸಭೆ ಸೇರಿಸಿ ಊರಿನ ಪ್ರಮುಖರನ್ನು ಬರಮಾಡಿಕೊಂಡು ಮಗನಿಗೆ ಜಹಗೀರ್ ಆಡಳಿತವನ್ನು ಒಪ್ಪಿಸುವುದಾಗಿ ಹೇಳಿದರಂತೆ. ಎಲ್ಲರೂ ಸಂತೋಷದಿಂದ ಒಪ್ಪಿದರು. ಒಂದು ತಃಖ್ತು ತಯಾರಿಸಿ ನಿಜಾಮರಿಗೂ ಕಳುಹಿಸಿದರು. ಆಗಿನಿಂದ ನಮ್ಮ ತಂದೆ ಪರಶುರಾಮರೇ ಜಹಗೀರ್‌ದಾರರಾಗಿ ಆಡಳಿತ ನೋಡಿಕೊಂಡರು.

ಸಿರಿದೇವಿ ಗಂಡನಿಗೆ ಏನಾದರೂ ಉಪಚಾರ ಮಾಡಲು ಬಂದರೆ ನಮ್ಮ ತಂದೆ ಹೇಳುತ್ತಿದ್ದುದು–"ಸಿರಿ ನೀನ್ಯಾಕೆ ಬಡಿಸುತ್ತೀ? ನೀನ್ಯಾಕೆ ಪಂಖ ಹಾಕುತ್ತೀ ನೀನ್ಯಾಕೆ ಹಾಸಿಗೆ ಚೊಕ್ಕಟ ಮಾಡುತ್ತೀ? ಎಲ್ಲದಕ್ಕೂ ದಾಸ ದಾಸಿಯರಿದ್ದಾರೆ" ಎಂದು. ಅವಳು ಮುನಿಸಿನ ನಟನೆ ಮಾಡಿ "ಹಾಗಾದರೆ ಜಹಗೀರ್ ದಾರರಿಗೆ ಎಲ್ಲಾ ದಾಸ ದಾಸಿಯರೇ ಮಾಡುವಾಗ ನಾನೇತಕ್ಕೆ ಈ ಮನೆಯಲ್ಲಿ ದಂಡವಾಗಿ" ಎಂದು ಗಂಡನ ಪಕ್ಕದಿಂದ

ದೂರ ಸರಿದಾಗ, ನಮ್ಮ ಅಪ್ಪ ಅವಳ ಸೆರಗು ಹಿಡಿದೆಳೆದು ಬಿಗಿದಪ್ಪಿ... ಸಿರೀ....ನನ್ನ ಸಿರೀ ನೀನು ರಾಣಿ "ನನ್ನ ಸಿರಿದೇವಿ" ಈ ಮನೆಯ ಲಕ್ಷ್ಮಿ ನೀನೇನೂ ಮಾಡಬೇಡ.

ನೀವು ನನ್ನ ದೇವರು, ಕಂಗಾಲಿಗಳಾಗಿ ಬಿದ್ದಿದ್ದ ನಮ್ಮನ್ನು ಈ ಅರಮನೆಯ ಉಪ್ಪರಿಗೆಗೆ ಏರಿಸಿದ್ದೀರಿ. ನಿಮ್ಮ ಅಕ್ಕರೆ ನನಗೆ ಸೇರಿದ್ದು

ನಿಮ್ಮ ಜೊತೆ-ಜೊತೆಯಾಗಿದ್ದು ನಿಮ್ಮ ಸೇವೆ ಮಾಡಲು ಅವಕಾಶಕೊಡಿ.
ಹೀಗೆ ಅವರ ಅನ್ಯೋನ್ಯ ಪ್ರೇಮ ಗಾಢವಾಗಿತ್ತು.

ಕುದುರೆ ಸವಾರಿಗೆ ಹೆಸರುವಾಸಿಯಾದ ಮನೆ ನಮ್ಮದು. ರಾಜಾಸ್ಥಾನದ ಕುದುರೆಗಳು ಲಕ್ಷ ಬೆಲೆ ಬಾಳುವ ಒಳ್ಳೆ ಜಾತಿ ಕುದುರೆಗಳು ಎರಡು ಇದ್ದೇ ಇರುತ್ತಿದ್ದವು. ಅದರ ಪೋಷಣೆ ಪಾಲನೆ ಬಹಳ ಮುಖ್ಯ ಒಂದೊಂದು ಕುದುರೆಗೆ ಒಬ್ಬೊಬ್ಬ ಆಳು. ಬೆಳಗ್ಗೆ ಎದ್ದಕೂಡಲೇ ಕುದುರೆ ಮಾಲೀಷ್ ಮಾಡಬೇಕು. ರೇಷ್ಮೆಯ ನುಣುಪು ಕುದುರೆ ಮೈ ಹೊಳಪು. ನಮ್ಮ ತಾತನ ಮನೆಯಲ್ಲಿ ಕುದುರೆ ಬಂಡಿ ಇದ್ದರೂ ಸಹ ಕುದುರೆ ಸವಾರಿಯೇ ನಮ್ಮ ತಂದೆಗೂ ಇಷ್ಟವಾಗಿತ್ತು. ನಮ್ಮ ತಾಯಿ ಸಿರಿದೇವಿ ಅದೆಲ್ಲಾ ನೆನೆಸಿಕೊಂಡು ನನಗೆ ಹೇಳುತ್ತಿದ್ದರು. ಕುಮಾರಾ! ಕುದುರೆ ಸವಾರಿಯಲ್ಲೇ ಜೊತೆಯಾಗಿ ಹೆಂಡತಿಯನ್ನು ಊರೂರು, ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಸುತ್ತುತ್ತಿದ್ದರಂತೆ ನಮ್ಮ ತಂದೆ. ಗಿರಿ-ತೊರೆ-ವನ-ನದಿ. ಇಂತಹ ಪ್ರದೇಶಗಳಲ್ಲಿ ಸ್ವೇಚ್ಛೆಯಾಗಿ ವಿಹರಿಸಿ ಆನಂದ ಸಾಗರದಲ್ಲಿ ಮುಳುಗಿರುತ್ತಿದ್ದರಂತೆ. ನಮ್ಮ ತಾಯಿ ವೀರ ಮಹಿಳೆಯಂತೆ ಪೈಜಾಮು-ಲಾಂಗ್ ಕೋಟ್ ತಲೆಗೆ ಪಾಗು-ನಡು ಪಟ್ಟಿ ಧರಿಸಿ ಒಬ್ಬರಾಜಕುಮಾರನಂತೆಯೇ ಕಾಣುತ್ತಿದ್ದರು. ಅದೇ ಉಡುಪಿನಲ್ಲಿ ನಮ್ಮ ತಾಯಿ ಫೋಟೊ ಇದೆ. ತಾನೂ ಸಹ ಕುದುರೆ ಸವಾರಿ ಚೆನ್ನಾಗಿ ಮಾಡುತ್ತಿದ್ದರು. ಎಂದು ನಮ್ಮ ತಾಯಿ ಆಗಾಗ ನನಗೆ ಜಂಭದಿಂದ ಹೇಳುತ್ತಿದ್ದರು.

ಅಯ್ಯೋ! ಕುಮಾರ ನನಗೂ ಸಹ ಕುದುರೆ ಸವಾರಿ ಎಂದರೆ ಬಲು ಖುಷಿ. ನನ್ನನ್ನು ಅಜ್ಜೀ . ಅನ್ನುತ್ತೀ ನೀನು. ಆದರೆ ನಾನಿನ್ನೂ

ಶಕ್ತಿಶಾಲಿಯಾಗಿದ್ದೇನೆ. ಈಗಲೂ ಸಹ ಎಂತಹ ಕುದುರೆಯನ್ನಾದರೂ ಹತ್ತಿ ಬಹುದೂರ ಹೋಗಬೇಕೆಂದು ಆಸೆಯಾಗುತ್ತೆ.

ಕಾಳೀಪ್ರಸಾದ ದಂಗಾದ. ನಾವೇಕೆ ಈ ವೀರ ವನಿತೆಯರ ಮುಂದೆ? ಕಾಡು ಬೇಡರಾಗಿ ಬೆಳೆದು ಕುದುರೆ ಸವಾರಿ ಮಾಡುವುದು. ಒಂದು ಹೆಚ್ಚೇ ? ಅಂದುಕೊಂಡ.

ಭಲೇ....ಅಜ್ಜೀ....ನಿಮ್ಮ ಧೈರ್ಯವನ್ನು ಮೆಚ್ಚಿಕೊಂಡೆ. ಬೇಕಾದರೆ ನನ್ನ ಕುದುರೆಯನ್ನೇ ಕೊಡುತ್ತೀನಿ ನಾಳೆ ಸವಾರಿ ಮಾಡುತ್ತೀಯಾ ಅಜ್ಜೀ ! ಎಂದು ತಮಾಷೆಮಾಡಿದ.

ನಮ್ಮ ತಂದೆ ನನಗೆ ಹತ್ತು ವರ್ಷದ ಹುಡುಗಿಯಾಗಿದ್ದಾಗಲೇ ಕುದುರೆ ಸವಾರಿ ಕಲಿಸಿದ್ದರು. ಈಗ ಅದೆಲ್ಲಾ ನೆನಪು ಅಷ್ಟೇ. ನಮ್ಮ ಅಜ್ಜಿ-ತಾತನಿಗೆ ಮಗ-ಸೊಸೆ ಸಂತೋಷವಾಗಿ ಪ್ರೀತಿಯಿಂದ ಇರುವುದು ಬಹು ಹೆಮ್ಮೆ.

ಗಂಗಾ ! ನೋಡಿದೆಯಾ ? ನಮ್ಮ ಪರಶುರಾಮ ಒಂದು ದಿನವಾದರೂ ಹೆಂಡತಿಯನ್ನು ಬಿಟ್ಟಿರುವುದಿಲ್ಲ. ನಿನಗಂತೂ ನಾನು ಇಂತಹ ಸಂತೋಷ ವನ್ನು ಕೊಡಲಿಲ್ಲ ಮದುವೆಯಾದ ಕೂಡಲೇ ಸೈನ್ಯಕ್ಕೆ ಸೇರಿ ಹೊರಟು ಹೋದೆ ಎಂದು ಹೆಂಡತಿಯನ್ನು ಸಮಾಧಾನ ಮಾಡುತ್ತಿದ್ದರಂತೆ ನಮ್ಮ ತಾತ.

ಆದರೆ ಏನು ! ನಿಮ್ಮ ಪ್ರೀತಿ ಎಂದೂ ಕಮ್ಮಿಯಾಗಿರಲಿಲ್ಲ ಈಗ ವಯಸ್ಸಾದ ಕಾಲಕ್ಕೆ ನನ್ನ ಜೊತೆಯುಲ್ಲಿದ್ದೀರಲ್ಲಾ. ಅದಕ್ಕಿಂತ ಸಂತೋಷ ನನಗೆ ಬೇರೆ ಏನಿದೆ ? ಅದು ಸರಿ.. ನಾವು ಬೇಗ ಅಜ್ಜಿ-ತಾತ ಆಗ ಬೇಕು. ಅದೊಂದೇ ನನ್ನ ಆಸೆ.

ಹೌದು. ದೇವರ ಕೃಪೆ ನಮ್ಮ ಪರಶುರಾಮನಿಗೆ ಮಕ್ಕಳಾಗಿ ಊರಿಗೆಲ್ಲಾ ಊಟ ಸಿಹಿ ಹಂಚಬೇಕು. ಗಂಗಾ ! ನಾಳೆಯೇ ನಮ್ಮ ಮನೆ ದೇವರು ಪರಶುರಾಮ ಬೆಟ್ಟಕ್ಕೆ ಹೋಗಿ ದೇವರ ಸೇವೆ ಮಾಡಿ ಬರೋಣ ನಿನ್ನ ಮಗ-ಸೊಸೆಯರನ್ನೂ ಹೊರಡಿಸು.

ಈ ವೇಳೆಗಾಗಲೇ ಎಷ್ಟೋಬಾರಿ ಸಿರಿಯನ್ನೂ ಕರೆದುಕೊಂಡು ಬೆಟ್ಟಕ್ಕೆ ಹೋಗಿ ದೇವರ ಸೇವೆ ಮಾಡಿಕೊಂಡು ಬಂದಿದ್ದರಂತೆ ಪರಶುರಾಮ

ಸೊಸೆಗೆ–5–6 ವರ್ಷ ಮಕ್ಕಳಾಗದಿದ್ದುದಕ್ಕೆ ನಮ್ಮ ಅಜ್ಜಿ–ತಾತ ನೂರೆಂಟು ಹರಕೆ ಹೊತ್ತರಂತೆ. ಸೊಸೆ ಬಸುರಿ ಎಂದು ತಿಳಿದ ಕೂಡಲೇ ಅವರ ಸಂಭ್ರಮ ಹೇಳತೀರದು. ಸೊಸೆಗೆ ಎಷ್ಟು ಉಪಚಾರ ಮಾಡಿದರೂ ಸಾಲದು. ಇಷ್ಟು ಹರಕೆ ಹೊತ್ತು ಹುಟ್ಟಿದ ಹೆಣ್ಣು ಮಗು ನಾನೇ ಕುಮಾರ. ಈ ಮನೆಯಲ್ಲಿ ಹೆಣ್ಣು ಮಗುವೇ ಅಪರೂಪ. ನಮ್ಮ ತಂದೆ ತಾಯಿಗೆ ಮೊದಲ ಮಗುವೇ ನಾನು. ಮನೆಯಲ್ಲಿ ಸಂಭ್ರಮವೋ ಸಂಭ್ರಮ ವಂತೆ ಮೂರು ತಿಂಗಳಿಗೆ ನಾಮಕರಣ ಮಾಡಿ ಪದ್ಮಾದೇವಿ ಎಂದು ಹೆಸರಿಟ್ಟು ನನಗೆ ಪರಶುರಾಮ ದೇವರ ಫಲಕವನ್ನು ಹಾಕಿದರಂತೆ. ಇದೋ ನೋಡು ಅದೊಂದು ಈಗಲೂ ನನ್ನ ಕತ್ತಿನಲ್ಲಿದೆ ನನಗೆ 5 ವರ್ಷಗಳಾದ ನಂತರ ಒಬ್ಬ ಮಗ ಹುಟ್ಟಿದ ನನ್ನ ತಮ್ಮ ಅವನೇ ಪ್ರಮೋದ ಪಾಟೀಲ್.

ಈ ಮಾತು ಕೇಳಿದ ಕೂಡಲೇ ಕಾಳೀಪ್ರಸಾದನಿಗೆ ವ್ಯೋ ರೋಮಾಂ-ಚನವಾಯಿತು. ಇನ್ನು ನನ್ನ ತಂದೆಯದೇ. ವಿಷಯ ಅಜ್ಜಿಯಿಂದ ಎಲ್ಲಾ ತಿಳಿದುಕೊಳ್ಳಬೇಕು ಎಂದು ಕುತೂಹಲವಾಯಿತು.

ಅಜ್ಜೀ ! ಮೊಮ್ಮಗ ಹುಟ್ಟುವ ವೇಳೆಗೆ ನಿಮ್ಮ ಅಜ್ಜಿ–ತಾತ ಇದ್ದರೇನಜ್ಜೀ ?

ಹೌದಪ್ಪಾ ! ನನ್ನನ್ನೂ ನನ್ನ ತಮ್ಮನನ್ನೂ ಅತಿಶಯವಾಗಿ ಬೆಳೆಸಿದರು. ಮೊಮ್ಮಗನಿಗೆ ನಾಮಕರಣ, ಊರಿಗೆಲ್ಲಾ ಊಟ ಹಾಕಿ ಪ್ರಮೋದ ಎಂದು ಹೆಸರಿಟ್ಟು ಪರಶುರಾಮ ಫಲಕವನ್ನು ಹಾಕಿದರು. ನನ್ನ ತಮ್ಮನಿಗೆ 10 ವರ್ಷ ಆಗುವವರೆಗೂ ಬದುಕಿದ್ದರು ಅಜ್ಜಿ ತಾತ. ನಾನು ಅಪರೂಪದ ಹೆಣ್ಣುಮಗುವೆಂದು ನನಗೆ ಬಗೆ ಬಗೆಯ ಆಭರಣ–ಒಡವೆಗಳನ್ನು ಮಾಡಿಸಿ ಹಾಕಿ ದಿನಕ್ಕೊಂದು ಅಲಂಕಾರ ಮಾಡಿ ನೋಡುತ್ತಿದ್ದರು. ನನ್ನ ತಮ್ಮ ಪ್ರಮೋದನನ್ನು ಶೂರನಾಗಿ ಬೆಳೆಸಿದರು. ನನಗೂ ಕುದುರೆ ಸವಾರಿ ಮಾಡಲು ಕಲಿಸಿ ಪ್ರೋತ್ಸಾಹಿಸಿದರು. ನಾನೂ ನನ್ನ ತಮ್ಮನೂ ಕುದುರೆ

ಸವಾರಿಯಲ್ಲಿ ಹೊರಟೆವೆಂದರೆ ಪೈಪೋಟಿಯಿಂದ ದೌಡಾಯಿಸುತ್ತಿದ್ದೆವು. ಆದರೆ ನನ್ನ ತಮ್ಮ ಚಿಕ್ಕವನಾದರೂ ಅವನೇ ಮುಂದಿರುತ್ತಿದ್ದ. ಮೊಮ್ಮಗನ ಚಾಲಾಕ್ ನೋಡಿ ಭೇಷ್ ಅನ್ನುತ್ತಿದ್ದರು. ಲೋ! ಪರಶುರಾಮ, ನೋಡು ನಿನ್ನ ಮಗ ನಿನಗಿಂತ ಶೂರ, ಧೈರ್ಯಶಾಲಿ ದೇಶ ಸೇವೆಗೆ ಇವನು ಮೀಸಲು. ನಮ್ಮ ಜಹಗೀರ್‌ದಾರ್ ವಂಶಕ್ಕೆ ಕೀರ್ತಿ ತರುತ್ತಾನೆ ಎನ್ನುವರು.

ನಮ್ಮ ತಾತ ಇರುವವರೆಗೂ ಹೈದರಾಬಾದ್ ನಿಜಾಮರು ಪ್ರತಿ ವರ್ಷ ಚಿನ್ನದ ಕುಸುರಿ ಕೆಲಸದ ಪೋಷಾಕುಗಳು, ಜರತಾರಿ ಸೀರೆಗಳು, ಚಿನ್ನದ ನಾಣ್ಯಗಳು ಇವೆಲ್ಲಾ ಮರ್ಯಾದೆಯೊಂದಿಗೆ ಕಳುಹಿಸಿಕೊಡುತ್ತಿ-ದ್ದರು. ನನಗೂ ಅವೆಲ್ಲಾ ಚೆನ್ನಾಗಿ ಗೊತ್ತು. ನಮ್ಮ ತಾತ ಅವರು ಬದುಕಿದಷ್ಟೇ ಅದ್ಧೂರಿಯಾಗಿ ಅವರ ಸಾವೂ ಅದ್ಧೂರಿಯಾಗಿ ನಡೆದು ಹೋಯಿತು. ನಮ್ಮ ತಾತ ಒಂದು ದಿನ ಬೆಳಗ್ಗೆ ಪರಶುರಾಮ ದೇವರ ಪೂಜೆ ಮಾಡುತ್ತಿದ್ದಂತೆಯೇ ಗಂಗಾ! ಸ್ವಲ್ಪ ನೀರು ತಾ ಎಂದರು. ಅಜ್ಜಿ ನೀರು ತಂದು ಕೈಗೆ ಕೊಡಲು ಹೋದರು. ಬಾಯಿ ತೆರೆದು ಬಾಯಿಗೇ ಬಿಡು ಎಂದರಂತೆ ನೀರು ಕುಡಿಯುತ್ತಾ, ಪರಶುರಾಮಾ! ಸ್ವಾಮಿ! ನಮ್ಮ ವಂಶವನ್ನು ಬೆಳೆಸಪ್ಪಾ! ಎನ್ನುತ್ತಿದ್ದಂತೆಯೇ ಅವರ ಪ್ರಾಣ ಹೋಯಿತು. ನೋಡು ಕುಮಾರಾ! ಅವರು ದೇವರಲ್ಲಿ ಬೇಡಿ ಕೊಂಡ ಪ್ರಾರ್ಥನೆ ಎಲ್ಲಿ ನಡೆಯಿತು? ನನ್ನ ತಮ್ಮ ಪ್ರಮೋದನ ತಲೆಗೇ ವಂಶ ನಿಂತು ಹೋಯಿತು. ಆ ದೇವರು ಏನು ಮಾಡಿದ? ಎಂದು ಕಣ್ಣೀರು ಹಾಕಿದಳು ಅಜ್ಜಿ.

ಈಗಂತೂ ಕಾಳೀಪ್ರಸಾದನಿಗೆ ಆಶ್ಚರ್ಯವೋ ಆಶ್ಚರ್ಯ. ಆ ತಾತನ ಪ್ರಾರ್ಥನೆ ದೇವರಿಗೆ ಮುಟ್ಟಿದೆ ಇಷ್ಟು ಕಾಲವಾದ-ಮೇಲೆ ಆ ವಂಶದ ಕುಡಿ ನನ್ನನ್ನು ಇಲ್ಲಿ ತಂದು ಸೇರಿಸಿದ್ದಾನೆ. ಆ ಸ್ವಾಮಿ-ಎಂದು ಮನಸ್ಸಿನಲ್ಲಿ ಅಂದುಕೊಂಡು, ಅಜ್ಜೀ ದೇವರು ಅನ್ಯಾಯ ಮಾಡುವುದಿಲ್ಲ. ನಿಮ್ಮ ತಾತನ ಪ್ರಾರ್ಥನೆಯೂ ವ್ಯರ್ಥವಾಗುವುದಿಲ್ಲ. ಸಂಕಟ ಪಡಬೇಡಿ, ಅಂದ.

ಇನ್ನೆಲ್ಲಿಯ ಸಂಶಯಪ್ಪಾ ? ನನ್ನ ತಮ್ಮನೂ ಕೊಲೆಯಾದ. ಅವನ ಮಗು ಮುದ್ದು ಕಂದನನ್ನೂ ಪಾಪಿಗಳು ಎತ್ತಿಕೊಂಡು ಹೋಗಿ ಕೊಂದರು.

ಅಜ್ಜೀ ಕೊಂದರು ಅಂತ ಹೇಗೆ ಗೊತ್ತು ? ಎಲ್ಲಾದರೂ ಬದುಕಿರ-ಬಹುದು. ಹಾಂ ? ಏನಂದೇ ಕುಮಾರ ? ಆ ಮಗು ಬದುಕಿರಬಹುದು ಎನ್ನುತ್ತೀಯಾ ?

ವಿಧಿ ವಿಲಾಸ ಹೇಳಲಾಗದು ಅಜ್ಜೀ ದೇವರ ದಯೆ ಇದ್ದರೆ ಹಾಗೂ ಆಗಬಹುದು. ಹಾಂ.... ಹಾಗೆ ನೀನು ಹೇಳಿದಂತೆ ನನ್ನ ತಮ್ಮನ ಮಗು ಬದುಕಿ ದೊಡ್ಡವನಾಗಿ ಬಂದರೆ ಆ ಪರಶುರಾಮದೇವರಿಗೆ ಸಹಸ್ರಾಭಿಷೇಕ ಮಾಡಿಸುತ್ತೇನೆ. ಕುಮಾರಾ. ಹುಂ... ಎಲ್ಲಾ ಭ್ರಾಂತು 25 ವರ್ಷ ಇಲ್ಲದ ಮಗ ಈಗ ಬರುತ್ತಾನೆಯೇ ? ಎಂದು ನಿಟ್ಟುಸಿರು ಬಿಟ್ಟಳು-ಕಾಳೀಪ್ರಸಾದ ಮಾತು ಮರೆಸಿ ನಿಮ್ಮ ತಮ್ಮ ಏನು ಕೆಲಸ ಮಾಡುತ್ತಿದ್ದರು?

❋ ❋ ❋ ❋

ಅವನು ಒಳ್ಳೆ . ದೃಢಕಾಯನಾಗಿ ಬೆಳೆದ. ಬಹಳ ರೂಪವಂತ ಚಿಗುರು ಮೀಸೆ ಅವನ ಮುಖಕ್ಕೆ ಒಪ್ಪುತ್ತಿತ್ತು. ನಮ್ಮ ತಾಯಿ ಸಿರಿದೇವಿಗಂತೂ ಮಗನನ್ನು ನೇರ ನೋಡಿದರೆ ಎಲ್ಲಿ ದೃಷ್ಟಿತಾಗುವುದೋ ಎಂದು ಹೆದರು ತ್ತಿದ್ದರು. ನಮ್ಮ ತಾತ ಹೋದ ನಂತರ ಅಜ್ಜಿಯೂ ಅದೇ ವ್ಯಸನದಲ್ಲಿ ಬೇಗ ಹೋಗಿ ಬಿಟ್ಟರು. ನಮ್ಮ ತಂದೆ-ತಾಯಿಗೆ ನಮ್ಮದೇ ಸಂತೋಷ. ನನಗೆ ಸಂಭ್ರಮವಾಗಿ ಮದುವೆ ಮಾಡಿದರು. ನಮ್ಮ ಅಂತಸ್ತಿಗೆ ತಕ್ಕಂತೆ ಒಳ್ಳೆಯ ಮನೆಗೇ ನನ್ನನ್ನು ಕೊಟ್ಟಿದ್ದರು. ನನ್ನ ಗಂಡ ಪೋಲೀಸ್ ಸೂಪರಿಂಟೆಂಡೆಂಟ್ ಆಗಿದ್ದರು.

ನನ್ನ ತಮ್ಮ ಈ ಜಹಗೀರ್‌ದಾರಿಯನ್ನು ಒಪ್ಪಿಕೊಳ್ಳಲಿಲ್ಲ. ಶೂರ-ನಾಗಿ ಮಿಲ್ಟ್ರಿಗೆ ಸೇರಿ ದೇಶ ಸೇವೆ ಮಾಡಬೇಕೆಂಬುದೇ ಅವನ ದೃಢ ಸಂಕಲ್ಪ, ನಾನು ನನ್ನ ತಮ್ಮನನ್ನು ಬಿಟ್ಟು ಒಂದು ಘಳಿಗೆ ಇದ್ದವಳಲ್ಲ. ನಾವು ಆಡಿದ ಆಟಕ್ಕೆ ಕೊನೆ ಮೊದಲಿಲ್ಲ. ಒಂದೊಂದು ಸಾರಿ ಕಾಡು-

ಮೋಡು ಬೆಟ್ಟ ಗುಡ್ಡ ಎಲ್ಲಾ ಅಲೆಯುತ್ತಿದ್ದೆವು. ನಮ್ಮ ತಾಯಿ ನನ್ನನ್ನು ಬೈಯುತ್ತಿದ್ದರು. ನೀನು ಹೆಣ್ಣು ಹುಡುಗಿ, ದೊಡ್ಡವಳಾದೆ ಹಾಗೆಲ್ಲಾ ಹೋಗಬಾರದು ಎಂದು. ಕೂಡಲೇ ನನ್ನ ತಮ್ಮ ನನ್ನನ್ನು ವಹಿಸಿಕೊಂಡು ಏನಮ್ಮಾ ! ಅವಳು ಒಬ್ಬಳೇ ಹೋಗುತ್ತಾಳೆಯೇ ? ನಾನಿಲ್ಲವೇ ಧೀರ.... ಅಭಿಮನ್ಯು ....ಅವಳನ್ನು ಯಾರಾದರೂ ಮಾತಾಡಿಸಿದರೆ ನಾನು ಬಿಡು ತ್ತೇನೆಯೇ ? ಬಾರೆ—ಪದ್ಮ ! ಕೋಟೆವರೆಗೂ ಹೋಗಿ ಸುತ್ತಾಡಿ ಬರೋಣ ಎಂದು ಎಳೆದುಕೊಂಡು ಹೋಗುತ್ತಿದ್ದ.

ಪ್ರಮೋದ ! ಅತ್ತಕಡೆಯೆಲ್ಲಾ ದರೋಡೆಕೋರರ ಕಾಟ ಹೆಚ್ಚು ನೀನೂ ಹೋಗಬೇಡಪ್ಪಾ ! ಎಂದು ನಮ್ಮ ತಾಯಿ ಅವನಿಗೆ ಆಗಾಗ ಹೇಳುತ್ತಿದ್ದುದುಂಟು. ಏನಮ್ಮಾ ನಾನು ಅಂತಹ ಹೇಡಿಯೇ ? ದರೋಡೆ ಕೋರರ ಹುಟ್ಟಡಗಿಸುವುದಕ್ಕಾಗಿಯೇ ನಾನು ಹುಟ್ಟಿರುವುದು. ಎಂದು ಹೇಳಿ ಹೆಗಲಿಗೆ ಪಿಸ್ತೂಲು ತಗಲಿಸಿ ನಿಂತು ತಾಯಿಗೆ ಸೆಲ್ಯೂಟ್ ಮಾಡು ತ್ತಿದ್ದ. ನೋಡಿದೆಯಾ ಕುಮಾರಾ ! ಅಂಥಾ ನನ್ನ ಧೀರ ತಮ್ಮನನ್ನು ಪಾಪಿ ದರೋಡೆಕೋರರೇ ಕೊಲೆ ಮಾಡಿದರಲ್ಲ.

ಹೀಗೆ ಮಾತು ಮಾತಿಗೆ ಅಜ್ಜಿ ತಮ್ಮನನ್ನು ನೆನೆಸಿಕೊಂಡು ಗೋಳಾ ಡುತ್ತಿದ್ದರೆ ಕಾಳೀಪ್ರಸಾದನಿಗೂ ಸಂಕಟವಾಗುತ್ತಿತ್ತು. ನಾವು ಇಂತಹ ಎಷ್ಟು ಸಂಸಾರವನ್ನು ಲೂಟಿ ಮಾಡಿದ್ದೇವೆಯೋ ? ಕೊಲೆಯಾದವರ ಕುಟುಂಬ ಹೀಗೆಯೇ ಎಷ್ಟು ಸಂಕಟ ಪಡುತ್ತಿವೆಯೋ ? ಇದೇನೋ ನನ್ನ ಬಾಂಧವ್ಯ ಎಂಬುದರಿಂದ ಹೀಗೆ ಮನಸ್ಸು ತಲ್ಲಣಿಸುತ್ತಿದೆ- ಎಂದು ಕಾಳೀಪ್ರಸಾದ ತನ್ನ ಅಪ್ಪ ದೇವೀಪ್ರಸಾದ ತನ್ನನ್ನು ದರೋಡೆಕೋರನಾಗಿ ಬೆಳಸಿದ ರೀತಿಗೆ ನೊಂದು ಪಶ್ಚಾತ್ತಾಪ ಪಡುತ್ತಿದ್ದ.

ಕುಮಾರಾ ! ನೀನೇನೋ ನಮ್ಮ ಆತ್ಮೀಯ ಬಂಧುವಿನಂತೆ ನಮ್ಮ ಸಂಸಾರದ ವಿಷಯ ಕೇಳುತ್ತಿದ್ದೀಯೆ. ನನ್ನ ತಮ್ಮನ ವಿಷಯವನ್ನೂ ಕೇಳು ಹೇಳುತ್ತೇನೆ-

ನನ್ನ ತಮ್ಮ ಪ್ರಮೋದ ಮಿಲ್ಟ್ರಿಗೆ ಸೇರಲು ಕಾತುರನಾಗಿದ್ದ 30 ವರ್ಷ ತುಂಬುತ್ತಿದ್ದಂತೆಯೇ ಹೋಗಲು ತಂದೆ-ತಾಯಿಯನ್ನು ಬಲವಂತ ಮಾಡಿದ. ಪರಶುರಾಮ ನಮ್ಮ ತಂದೆ, ಸಿರಿದೇವಿ--ನಮ್ಮ ತಾಯಿ ಎಂದು ಹೇಳಿದೆನಲ್ಲಾ, ಇಬ್ಬರಿಗೂ ಮಗನ ಮೇಲೆ ಪ್ರಾಣ. ನೀನು ಒಬ್ಬನೇ ಮಗ ನಿನಗೆ ಮದುವೆ ಮಾಡಿ ಕಣ್ಣುತುಂಬಾ ನೋಡಬೇಕು ನಿನ್ನ ಮಗು ನಮ್ಮ ವಂಶದ ಕುಡಿ ನಿನ್ನಿಂದ ನಮ್ಮ ವಂಶ ಬೆಳೆಯಬೇಕು. ಎಂದೆಲ್ಲಾ ಹೇಳಿ ಮದುವೆಗೆ ಒಪ್ಪಿಸಿದರು.

ದಕ್ಷಿಣದ ಮಲೆನಾಡು ಮಂಗಳೂರಿನಲ್ಲಿ ವಾಸುದೇವ ಬಲ್ಲಾಳ ಎಂಬುವರು ಇದ್ದರು. ಅವರು ಮಂಗಳೂರು ಹಡಗು ತಾಣಕ್ಕೆ ಬರುವ ಹಡಗುಗಳನ್ನು ತಪಾಸಣೆ ಮಾಡುವ ಅಧಿಕಾರಿಯಾಗಿದ್ದರು. ಕಳ್ಳ ಸಾಗಾಣಿಕೆ ಯನ್ನು ಕಂಡು ಹಿಡಿದು ಶಿಕ್ಷೆಗೆ ಗುರಿಮಾಡುತ್ತಿದ್ದರು. ಅಂತಹ ಅಧಿಕಾರಿ ನಮ್ಮ ತಂದೆಗೆ ತಿಳಿದವರಾಗಿದ್ದರು. ಅವರ ಒಬ್ಬಳೇ ಮಗಳು ನಿರ್ಮಲಾದೇವಿ. ಮಂಗಳೂರು ಮಲೆನಾಡ ಹುಡುಗಿ ರೂಪ, ಸೌಂದರ್ಯ ಆರೋಗ್ಯದ ಶಾರೀರಿಕ ಸೊಂಪು. ಸಂಪಿಗೆಯ ಮೈಬಣ್ಣ-ಅವಳನ್ನು ನೋಡು ವುದೇ ಕಣ್ಣುಗಳಿಗೆ ಆನಂದ. ನನ್ನ ತಮ್ಮನೂ ಹುಡುಗಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮೆಚ್ಚಿ ಮದುವೆಯಾದ. ಎರಡು ಕಡೆಯವರೂ ಸೇರಿ ಅದ್ಧೂರಿಯಾಗಿ ಮದುವೆ ಮಾಡಿದರು. ನಾನೂ ಮದುವೆಯಲ್ಲಿ ಸಂಭ್ರಮವಾಗಿ ಓಡಾಡಿದೆ.

ನಿರ್ಮಲ ಸೌಂದರ್ಯದಷ್ಟೇ ಗುಣವಂತೆ. ನನ್ನ ತಮ್ಮನ ಹೆಂಡತಿ ಎಂದು ನನಗೆ ಹೆಮ್ಮೆ. ಅವಳನ್ನು ಎಷ್ಟು ಅಲಂಕರಿಸಿ ನೋಡಿದರೂ ತೃಪ್ತಿಯಿಲ್ಲ ಅವಳನ್ನು ಬಿಟ್ಟು ಹೋಗಬೇಕಲ್ಲಾ ! ಎಂದೇ ನನಗೆ ಸಂಕಟ. ನನ್ನ ತಮ್ಮನೂ ಏನೂ ಕಮ್ಮಿಯಲ್ಲ ಅವಳಿಗೆ ತಕ್ಕ ಗಂಡು. ಅವನ ರೂಪ, ಶೌರ್ಯ ನಮ್ಮ ಮನೆತನದ ಗೌರವ ಇವೆಲ್ಲಾ ನೋಡಿ ನನ್ನ ತಮ್ಮನಿಗೆ ಹೆಣ್ಣು ಕೊಡಲು ನಾನು ತಾನೆಂದು ಬರುತ್ತಿದ್ದರು, ಆದರೆ ನಿರ್ಮಲಾದೇವಿಯಂತಹ ಹೆಣ್ಣು ಇನ್ನಿಲ್ಲಬಿಡು ಅವಳು ಮನೆಯಲ್ಲಿ ಓಡಾಡು ತ್ತಿದ್ದರೆ ಗೆಜ್ಜೆಯ ನಾದ ಘಲ್-ಘಲ್ ಎನ್ನುತ್ತಿತ್ತು. ಅತ್ತಿತ್ತ ಸುಳಿದಾಗ

ಮಿಂಚಿನ ಪ್ರಭೆ ಹೊಳೆದಂತಾಗುತ್ತಿತ್ತು. ಅಂತಹ ಸೊಸೆಯನ್ನು ನಮ್ಮ ತಾಯಿ ಕಣ್ಣಿನಂತೆ ಜೋಪಾನ ಮಾಡುತ್ತಿದ್ದರು. ನೋಡಿದವರು ಜಹಗೀರ್‌ದಾರರ ಸೊಸೆಯೆಂದರೆ ಸಾಕ್ಷಾತ್ ಲಕ್ಷ್ಮಿಯೇ ಎಂದು ಮನ-ತುಂಬಿ ಹೇಳುತ್ತಿದ್ದರು.

ಅಜ್ಜಿ ಹೇಳುತ್ತಿದ್ದಂತೆ ಕಾಳೀಪ್ರಸಾದನ ಕುತೂಹಲ ಕೆರಳಿತು. ಅಯ್ಯೋ! ಅಂತಹ ಅಪ್ಪ-ಅಮ್ಮನನ್ನು ನೋಡುವ ಭಾಗ್ಯ ನನಗಿಲ್ಲದಾಯಿ-ತಲ್ಲ ! ಎಂದು ಮನದಲ್ಲಿಯೇ ಮರುಗಿದ.

ಅಜ್ಜೀ ! ಅವರ ಫೋಟೋ ಇದೆಯೇನಜ್ಜೀ ನನಗೆ ನೋಡ ಬೇಕೆಂದಾಸೆ-ಎಂದ.

ಇಲ್ಲದೇ ಏನು ? ಇದೆಯಪ್ಪಾ : ಆ ಫೋಟೋ ನೋಡಿ–ನೋಡಿ ಸಂಕಟ ಪಡಲಾರದೇ ಎಲ್ಲವನ್ನೂ ದೊಡ್ಡ ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿ ಆ ಒಳಗಡೆ ಕೊಠಡಿಯಲ್ಲಿಟ್ಟು ಬೀಗ ಹಾಕಿ ಬಿಟ್ಟಿದ್ದೇನೆ-ಎಂದೂ ತೆಗೆದಿಲ್ಲ.

ಇರಲಿ ಎಂದಾದರೊಂದು ದಿನ ನೋಡುತ್ತೇನೆ. ನಿರ್ಮಲಾದೇವಿಗೆ ಮಗು ಆಗುವವರೆಗೂ ನಿಮ್ಮ ತಂದೆ ತಾಯಿ ಇದ್ದರೇನಜ್ಜೀ ?

ಅಯ್ಯೋ ! ಅದೊಂದು ಕತೆ ಕುಮಾರಾ ! ಮಗ ಸೊಸೆ ಕಣ್ಣು ಮುಂದೆಯೇ ಓಡಾಡುತ್ತಿರಬೇಕೆಂದು ನನ್ನ ತಮ್ಮನನ್ನು ಎಲ್ಲಿಯೂ ಕಳುಹಿ-ಸುತ್ತಿರಲಿಲ್ಲ. ಆದರೆ ಪ್ರಮೋದ ಯಾವಾಗಲೋ ಮಿಲ್ಟ್ರಿಗೆ ಸೇರಲು ಅಪ್ಲಿಕೇಷನ್ ಹಾಕಿಬಿಟ್ಟಿದ್ದ. ಅಲ್ಲಿಂದ ಆರ್ಡರ್ ಬಂತು. ಒಂದು ತಿಂಗ-ಳೊಳಗಾಗಿ ಹಾಜರಾಗಬೇಕೆಂದು. ನಮ್ಮ ತಂದೆ ಹೋಗುವುದೇ ಬೇಡವೆಂದು ಎಷ್ಟೋ ತಡೆದರು. ಆದರೆ ಅವನ ಬಿಸಿ ರಕ್ತ, ಹೋರಾಡಿ ದೇಶಸೇವೆಗೆ ಹೋಗಲೇ ಬೇಕೆಂಬ ಹುಮ್ಮಸ್ಸು ಹುಟ್ಟಿಸಿತು. ಆ ವೇಳೆಗೆ ಅವನ ಹೆಂಡತಿ ನಿರ್ಮಲಾಗೆ ಮೂರು ತಿಂಗಳಾಗಿತ್ತು. ಗರ್ಭಿಣಿ ಎಂದು ತಿಳಿಯಿತು. ಅವಳೂ ಸಹ-ಈ-ಸಮಯದಲ್ಲಿ ನೀವು ದೂರ ಇರಕೂಡದು ನನ್ನನ್ನು ಬಿಟ್ಟು ಹೋಗಬೇಡಿ ಎಂದು ಬೇಡಿದಳು.

ನಿರ್ಮಲಾ ! ಧೈರ್ಯವಾಗಿರು. ನಾನು ಧೀರ ಯೋಧ. ಹೇಡಿಯಂತೆ ಮನೆಯಲ್ಲಿ ಕುಳಿತುಕೊಳ್ಳುವುದು ನನಗೆ ಒಪ್ಪದು. ನಾನು ಆಗಾಗ ಬರುತ್ತೇನೆ ಎಂದು ಹೇಳಿ ಹೊರಟೇಬಿಟ್ಟ.

ಮಿಲಿಟರಿ ಸೈನ್ಯ ಎಲ್ಲೆಲ್ಲಿ ಬೀಡು ಬಿಟ್ಟರೆ ಅಲ್ಲಲ್ಲಿ ಇರಬೇಕಾಗುತ್ತಿತ್ತು. ನಮ್ಮ ಮನೆ ಬಿಕೋ ಅನ್ನುತ್ತಿತ್ತು. ನಾನೂ ಗಂಡನ ಮನೆಗೆ ಹೊರಟುಹೋದೆ. ನನ್ನ ತಮ್ಮನೂ ಇಲ್ಲ. ನಮ್ಮ ತಂದೆ ತಾಯಿಯರಿಗೆ ಅದೇ ಒಂದು ಕೊರಗಾಯಿತು. ಆದರೆ ಗರ್ಭಿಣಿ ಸೊಸೆ, ಅವಳ ಆರೈಕೆಯಲ್ಲಿ ಮೊಮ್ಮಗು ಹುಟ್ಟುತ್ತೆ ಎಂಬ ಒಂದು ಆಸೆಯನ್ನಿಟ್ಟುಕೊಂಡು ದಿನ ಕಳೆಯುತ್ತಿದ್ದರು.

ನಿರ್ಮಲಾ ಬಲು ಒಳ್ಳೆಯ ಹೆಣ್ಣು. ಎಂದೂ ಅತ್ತೆ ಮಾವನಿಗೆ ಬೇಜಾರು ಮಾಡಿದವಳಲ್ಲ. ನನ್ನ ತಮ್ಮನಿಂದ ಆಗಾಗ ಕಾಗದ ಬರುತ್ತಿತ್ತು. ನಿರ್ಮಲಾಗೆ ಪ್ರೀತಿಯ ಪತ್ರಗಳು—ನಿನ್ನನ್ನೂ ನಮ್ಮಿಬ್ಬರ ಪ್ರೀತಿಯ ಕುರುಹು ಮುದ್ದು ಕಂದನನ್ನೂ ಯಾವಾಗ ನೋಡೇನೋ ಎಂದು ಕಾತುರದಲ್ಲಿದ್ದೇನೆ ಎಂದು ಅವಳಿಗೆ. ತಂದೆ ತಾಯಿಯರಿಗೆ—ನೀವು ಬೇಸರ ಪಟ್ಟುಕೊಳ್ಳಬೇಡಿ—ಯುವ ಶಕ್ತಿಯೇ ದೇಶದ ಶಕ್ತಿ. ಭಾರತಮಾತೆಯ ಸೇವೆಗೆ ಯುವಕರು ಹಿಂತೆಗೆಯಬಾರದು. ನಾವು ಇತ್ತೀಚೆಗೆ ಚೀಣಾದವರ ಧಾಳಿಯನ್ನು ಹಿಮ್ಮೆಟ್ಟಿಸಿದ್ದೇವೆ ನಮಗೆ ಜಯ ದೊರಕಿದೆ. ನಮಗೆಲ್ಲಾ ಗೌರವ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಇನ್ನೇನು ರಜ ಮಂಜೂರಾದ ಕೂಡಲೇ ಬರುತ್ತೇನೆ. ನಿಮ್ಮ ಆಶೀರ್ವಾದ ಸದಾ ಇರಲಿ- ಎಂದು ಕಾಗದ ಬರೆದಿದ್ದ.

ಇತ್ತ ದಿನ ತುಂಬಿ ನಿರ್ಮಲಾಗೆ ಹೆರಿಗೆಯಾಯಿತು. ಅವರ ಹಂಬಲದಂತೆ ಗಂಡುಮಗು, ಮುದ್ದಾದ ಮಗು. ಪೂರ್ಣ ಚಂದ್ರ ಬಿಂಬದಂತೆ ಪ್ರಕಾಶಮಾನವಾದ ಮುಖ. ಕೆಂಪು ಮುದ್ದು ತುಟಿಗಳು. ಹೊಳಪು ಕಣ್ಣು ಮಗು ಹುಟ್ಟಿದ ಸಮಾಚಾರ ಕೇಳಿದ ಕೂಡಲೇ ನಾನು ನಮ್ಮವರ ಜೊತೆ ಓಡಿ ಬಂದೆ. ಅಬ್ಬ! ಏನು ಲಕ್ಷಣವಾದ ಮಗು! ಅದನ್ನು ಎತ್ತಿಕೊಂಡು ಮುದ್ದಾಡಲು ನನ್ನ ತಮ್ಮ ಇಲ್ಲವಲ್ಲಾ! ಎಂದು ಎಲ್ಲರೂ

ವ್ಯಸನಪಟ್ಟೆವು. ನಿರ್ಮಲಾಗೆ ಆ ಸಂತೋಷದಲ್ಲಿಯೂ, ಗಂಡನನ್ನು ನೆನೆಸಿಕೊಂಡು ಬಿಕ್ಕಿ-ಬಿಕ್ಕಿ ಅತ್ತಳು. ನಮ್ಮ ತಂದೆ ಊರಿಗೆಲ್ಲಾ ಸಿಹಿ ಹಂಚಿದರು. ಜಹಗೀರ್‌ದಾರರ ಮೊಮ್ಮಗ, ಇವನು ರಾಜಾಧಿರಾಜನಾಗಿ ರಾಜ್ಯವಾಳುತ್ತಾನೆ ಎಂದು ನಮ್ಮ ತಂದೆ ತಾಯಿ ಹಿಗ್ಗಿದರು.

ನಮ್ಮ ಮನೆಯ ಪದ್ಧತಿ ಮೂರು ತಿಂಗಳಿಗೆ ಮಗುವಿಗೆ ನಾಮಕರಣ ಶಾಸ್ತ್ರ ಮಾಡುವುದು, ನನ್ನ ತಮ್ಮನಿಗೆ ಶುಭ ಸಮಾಚಾರ ತಿಳಿಸಿ ಕಾಗದ ಬರೆದರು. ನಾಮಕರಣದ ವೇಳೆಗೆ ಬರುತ್ತೇನೆ. ನನಗೂ ತುಂಬಾ ಕಾತುರ, ಎಂದು ನನ್ನ ತಮ್ಮನಿಂದ ಉತ್ತರ ಬಂತು.

ಇದೀಗ ಕಾಳೀಪ್ರಸಾದನಿಗೆ ಕುತೂಹಲ, ನಾನೇ ಆ ಮಗು ಹೌದಲ್ಲವೇ? ನನಗೆ ಏನು ಹೆಸರಿಟ್ಟಿದ್ದರೋ ತಿಳಿದುಕೊಳ್ಳಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡ.

ನಮ್ಮ ತಂದೆ ತಾಯಿಯರಿಗೆ ಮಗ ಬರುವ ಸಂಭ್ರಮ, ನಿರ್ಮಲಾ ಎಂದು ಗಂಡನನ್ನು ನೋಡುವೆನೋ? ಎಂದು ಆಸೆಯಿಂದ ಕ್ಷಣ- ಕ್ಷಣವೂ ನಿರೀಕ್ಷಿಸುತ್ತಿದ್ದಳು. ಮನೆಯೆಲ್ಲಾ ಸುಣ್ಣ ಬಣ್ಣದಿಂದ ಶೃಂಗಾರವಾಯಿತು. ನೆಂಟರಿಷ್ಟರಿಗೆ ನಾಮಕರಣದ ಆಹ್ವಾನ ಪತ್ರಿಕೆ ಕಳುಹಿಸಿಯಾಯಿತು.

ಪ್ರಮೋದ ಬಂದೇ ಬಂದ. ಹೊಸಲು ದಾಟುತ್ತಿದ್ದಂತೆಯೇ ನಿರ್ಮಲಾ....ನಿರ್ಮಲಾ ! ಎಂದು ಕೂಗುತ್ತಲೇ ಮನೆಯೆಲ್ಲಾ ಓಡಾಡಿದ.

ನಮ್ಮ ತಾಯಿ-ಪ್ರಮೋದಾ ಇಷ್ಟು ಆಸೆ ಇಟ್ಟುಕೊಂಡು ಅಲ್ಲಿ ಹೇಗೆ ಎಲ್ಲರನ್ನೂ ಬಿಟ್ಟಿದ್ದೆಯಪ್ಪಾ ! ಸಧ್ಯ ಸುಖವಾಗಿ ಬಂದೆಯಲ್ಲಾ ಎಂದರು.

ಅಮ್ಮಾ ! ಎಲ್ಲಮ್ಮಾ ನಿರ್ಮಲಾ ಕಾಣುತ್ತಲೇ ಇಲ್ಲ.. ಎಂದು ಕಾತುರನಾಗಿ ಹುಡುಕಾಡಿದ.

ಲೋ ! ಪ್ರಮೋದ ! ಅವಳು ಮೊದಲಿನಂತೆ ಅಲ್ಲಪ್ಪಾ ಬಾಣಂತಿ, ಒಳಗಿನ ಕೊಠಡಿಯಲ್ಲಿದ್ದಾಳೆ, ನಿನ್ನ ಕಾಲಿನ ಷೂ....ಅದೆಲ್ಲಾ ಬಿಚ್ಚಿಬಾ, ಎಂದರು.

ನಿರ್ಮಲಾಗೆ ಮುಖ ತೋರಿಸಲು ನಾಚಿಕೆ. ಪ್ರಮೋದ ಅವಳ ಮಂಚದ ಮೇಲೆ ಕುಳಿತು ಏನೇನೋ ಪ್ರಶ್ನೆ ಕೇಳಿದ. ಎಲ್ಲದಕ್ಕೂ ನಿರ್ಮಲ ನಾಚಿ ಸುಮ್ಮನೆ ಅವನ ಭುಜವನ್ನು ಒರಗಿ ಕುಳಿತಿದ್ದಳು.

ಏನು ನಿರ್ಮಲಾ. ನಾನು ಮಿಲ್ಟ್ರಿಯಲ್ಲೇ ಇರಬೇಕಾಗಿತ್ತೋ? ನಾನು ಬಂದಿರುವುದು ನಿನಗೆ ಇಷ್ಟವಿಲ್ಲವೋ? ಎಂದು ಅವಳ ಮುಖವೆತ್ತಿ ಚುಂಬಿಸಿದ. ಸ್ವಲ್ಪ ಇರಿ ನನಗೆ ಮಾತಾಡಲು ಆಗುತ್ತಿಲ್ಲ. ನಿಮ್ಮನ್ನು ನೋಡಿದ ಸಂತೋಷದಲ್ಲಿ ಗಂಟಲು ಕಟ್ಟಿಬಿಟ್ಟಿದೆ. ಮೊದಲು ನಿಮ್ಮ ಕುಮಾರನನ್ನು ನೋಡಿ!

ಮೊದಲು ನೀನು ನಿರ್ಮಲಾ! ನಿನ್ನನ್ನು ಮುದ್ದಿಸಲು ಓಡೋಡಿ ಬಂದಿದ್ದೇನೆ, ನಿನ್ನನ್ನು ನನ್ನ ಹೃದಯ ಮಂದಿರದಲ್ಲಿಟ್ಟು ಪೂಜಿಸುತ್ತಿದ್ದೆ ಇವತ್ತು ಎದುರಿಗೇ ನನ್ನ ಪ್ರೀತಿಯ ಕಾಣಿಕೆಯನ್ನು ನನ್ನ ದೇವಿಗೆ ಅರ್ಪಿಸಿ ಪೂಜಿಸುತ್ತಿದ್ದೇನೆ ಎಂದು ನಿರ್ಮಲೆಯನ್ನು ಎತ್ತಿ ಮುದ್ದಾಡಿ ಮುತ್ತಿನ ಸುರಿಮಳೆ ಸುರಿಸಿದ.

ಅಯ್ಯೋ ! ಸ್ವಲ್ಪ ಬಿಡಿ. ಮಗನನ್ನು ಮುದ್ದಾಡಲು ಸ್ವಲ್ಪ ಬಾಕಿ ಪ್ರೀತಿ ಇಟ್ಟುಕೊಳ್ಳಿ. ಇದೋ ನೋಡಿ ನಿಮ್ಮ ವೀರ ಪುತ್ರ ಮುದ್ದಾಗಿ ಹೇಗೆ ಮಲಗಿದ್ದಾನೆ ? ಎಂದು ಸೊಳ್ಳೆ ಪರದೆ ಸರಿಸಿದಳು. ತೊಟ್ಟಿಲ ತುಂಬಾ ಮಲಗಿದ್ದ ಮಗುವನ್ನು ನೋಡಿ ಪ್ರಮೋದ ದಂಗಾದ.

ಮಲಗಿದ್ದ ಮಗುವನ್ನು ಕೈಗೆತ್ತಿಕೊಂಡು ಅದರ ಹವಳದ ತುಟಿ-ಯನ್ನು ಬೆರಳಿನಿಂದ ಮುಟ್ಟಿ ಮುಟ್ಟಿ ನೋಡಿದ, ಎಷ್ಟು ಮೃದುವಾಗಿದೆ

ಎಂದು ಚುಂಬಿಸಿದ ಮಗು ಕಣ್ಣು ಬಿಟ್ಟು ಪಕ್ಕನೆ ನಕ್ಕಿತು. ನಿರ್ಮಲಾ ನಮ್ಮ ಮಗು ಎಷ್ಟು ಸುಂದರ. ಅದೋ ನೋಡು ಅವನ ಕಣ್ಣುಗಳು ನಿನ್ನಂತೆಯೇ ಆಕರ್ಷಕವಾಗಿವೆ, ನಿನ್ನ ರೂಪೇ ಹೊತ್ತಿದ್ದಾನೆ.

ಅಯ್ಯೋ ? ನಿಮಗೆ ಗೊತ್ತಾಗೋಲ್ಲ ಹೋಗಿ. ಅವನು ಎಲ್ಲಾ ನಿಮ್ಮ ತದ್ರೂಪ. ಆ ನೀಳ ಮೂಗು ವಿಶಾಲ ಹಣೆ, ಪುಟ್ಟ ಬಾಯಿ ಎಲ್ಲಾ ನಿಮ್ಮಂತೆಯೇ.

ಮಾತು ಕೇಳಿಸಿಕೊಂಡೇ ನಮ್ಮ ತಾಯಿ–ತಂದೆ. ನಾನು ಎಲ್ಲಾ ಅವರ ರೂಮಿಗೆ ಬಂದೆವು. ಏನಪ್ಪಾ ! ಅದು ಚರ್ಚೆ ? ನಿಮ್ಮ ಸಮಾಗಮ ಬಹಳ ದಿವಸಕ್ಕೆ ಆಗಿದೆ. ಗಂಡ ಹೆಂಡತಿ ಮಾತಾಡ್ತಲಿ ಎಂದು ಮಧ್ಯೆ ಬರಲಿಲ್ಲ. ಈಗ ಮಗು ನಿನ್ನ ಹಾಗಿದೆ ಎಂದು ನೀನು ಇಲ್ಲ ನಿಮ್ಮ ಹಾಗಿದೆ ಎಂದು ಅವಳು ಬಡಿದಾಡುತ್ತಿದ್ದೀರಾ ? ಇಲ್ಲ, ಇಲ್ಲ, ಅವನ ಲಕ್ಷಣ ಅವನ ಬೆಳವಣಿಗೆ ಎಲ್ಲಾ ಅವನ ತಾತನಂತೆ. ಅವನು ಜಹಗೀರ್ ದಾರರ ವಂಶದ ರಾಜ! ಎಂದು ಎಲ್ಲರೂ ಮಗುವನ್ನು ಒಬ್ಬರ ಕೈಯಿಂದ ಒಬ್ಬರು ಎತ್ತಿ ಎತ್ತಿ ಮುದ್ದಾಡಿದೆವು.

ಆಯಿತಾ ಕುಮಾರಾ ! ಆ ಮಗು ವಿನಾಶಕಾಲಕ್ಕೇ ಹಾಗೆ ಹುಟ್ಟಿತೋ ಏನೋ ? ಅಪ್ಪ ಅಮ್ಮನನ್ನೂ ಮುಗಿಸಿ ತಾನೂ ನಾಶವಾಗಿ ಹೋಯಿತು, ಎಂದು ಅಜ್ಜಿ ಮಗುವನ್ನು ವರ್ಣಿಸಿ ಅತ್ತಳು.

ಕಾಳೀಪ್ರಸಾದನಿಗೆ ಅಜ್ಜಿಯಿಂದ ವಿವರವಾಗಿ ಚರಿತ್ರೆಯನ್ನು ಕೇಳಿ ನಾನು ಅವರ ಮುದ್ದಿನ ಮಗುವಾಗಿ ಬೆಳೆಯಲು ನನಗೆ ಅದೃಷ್ಟವಿಲ್ಲ ವಾಯಿತಲ್ಲ ! ಎಂದು ಹಲುಬಿದ ಮನಸ್ಸಿನಲ್ಲಿ.

ಇಷ್ಟೆಲ್ಲಾ ಹೇಳಿದೆ ಅಜ್ಜೀ....ಕೊನೆಗೆ ಮಗುವಿಗೆ ನಾಮಕರಣ ಹೇಗಾಯಿತು ? ಮುಂದೆ ಅವರು ಏನಾದರು ಅದೂ ಹೇಳಿಬಿಡು ಅಜ್ಜೀ.. ಅಂದ.

ಆಯಿತಪ್ಪಾ ನಾಮಕರಣ ಸಂಭ್ರಮವಾಗಿ ಆಯಿತು. ನಾನೂ ಅದು ವರೆಗೂ ಅಲ್ಲಿಯೇ ಇದ್ದೆ. ಮಗುವಿಗೆ ಹೆಸರಿಡುವ ವಿಷಯದಲ್ಲಿ ಒಬ್ಬೊಬ್ಬರೂ ಚರ್ಚೆಮಾಡಿದರು. ನಮ್ಮ ತಂದೆ ಮಗುವನ್ನು ಎತ್ತಿ ಕೊಂಡು ಮಗ ಪ್ರಮೋದನನ್ನು ಕರೆದು ಪ್ರಮೋದಾ ! ನಿನ್ನ ಮಗನ ಅಪರೂಪ ರಹಸ್ಯ ಒಂದಿದೆ ನೀನು ಮಗುವನ್ನು ಸರಿಯಾಗಿ ಗಮನಿಸಿ ನೋಡಿದೆಯಾ ? ಎಂದರು.

ಏನಪ್ಪಾಜಿ ಅದು ? ಎಂದು ಆಶ್ಚರ್ಯದಿಂದ ಕೇಳಿದ. ಮಗುವಿನ ಅಂಗಿ ಸರಿಸಿ ಬೆನ್ನು ನೋಡು ಏನಿದೆ ? ಹೌದಪ್ಪಾ! ಏನೋ ಮಚ್ಚೆ ಇದೆ. ಹಾಂ-ಹಾಂ-ಆ ಮಚ್ಚೆ ಕೊಡಲಿ ಆಕಾರದಲ್ಲಿದೆ ಎಂದು ಆಶ್ಚರ್ಯ ಪಟ್ಟ ನನ್ನ ತಮ್ಮ.

ನೋಡು ಪ್ರಮೋದ ಇದು ಸಾಮಾನ್ಯ ಮಗುವಲ್ಲ. ಪರಶುರಾಮ ಅವತಾರವೇ ಈ ಮಗು. ಕೊಡಲಿಯ ಗುರುತು ಮಚ್ಚೆ ಇರುವುದರಿಂದ ನಮ್ಮ ಮನೆ ದೇವರು ಪರಶುರಾಮನ ಅನುಗ್ರಹದಿಂದಲೇ ಹುಟ್ಟಿರು-ವುದು. ಇವನು ನಮ್ಮ ವಂಶದ ರಾಜನಾಗುತ್ತಾನೆ ಎಂದೆಲ್ಲಾ ಮಾತನಾಡಿ ದರು.

ನಮ್ಮ ಮನೆ ಪುರೋಹಿತರನ್ನು ಮಗುವಿಗೆ ಏನು ಹೆಸರಿಡುವುದು? ಈ ಮಚ್ಚೆಯ ರಹಸ್ಯವೇನೆಂದು ಕೇಳಿದಾಗ ಅವರು ಗ್ರಹಬಲವನ್ನು ನೋಡಿ ಇವನು ದುಷ್ಟರನ್ನು ನಿಗ್ರಹ ಮಾಡಿ ಧರ್ಮ ಪಾಲನೆ ಮಾಡು ತ್ತಾನೆ. ಆದರೆ ಇವನಿಗೆ 25 ವರ್ಷ ಕಳೆಯಬೇಕು ಎಂದು ಹೇಳಿದರು. ಇವನು ನಿಮ್ಮ ವಂಶದ ಕೀರ್ತಿ ಎತ್ತಿ ಹಿಡಿಯುತ್ತಾನೆ ಇವನಿಗೆ……. ಧರ್ಮಪಾಲ ಪಾಟೀಲ್, ಎಂದೇ ನಾಮಕರಣವಾಗಲಿ ಎಂದರು.

ಕಾಳೀಪ್ರಸಾದ ಕೇಳುತ್ತಿದ್ದಂತೆಯೇ ಅವನಿಗೆ ಒಂದೊಂದೂ ಪವಾಡ ದಂತಿತ್ತು. ಅಬ್ಬ ! ಎಂತಹ ದೈವದ ಕೈವಾಡ ದೇವೀಪ್ರಸಾದ ಆಗಾಗ ಹೇಳುತ್ತಿದ್ದ ಕಾಳೀ ! ನಿನ್ನ ಬೆನ್ನಿನ ಮೇಲೆ ಮಚ್ಚೆ ಇದೆ ಕಣೋ....

ಆದರಿಂದಲೇ ನೀನು ದರೋಡೆಕೋರರ ರಾಜನಾಗಿದ್ದಿ, ಎಂದು ನಾನು ಧರ್ಮಪಾಲನೆ ಮಾಡುವವನೇ ? ಕೊಲೆಗಡುಕ, ನಾನು ಪಾಪಿ. ಎಂದು ಪರಿತಪಿಸಿದ ಅಜ್ಜೀ ನನಗೆ ಏನೋ ಸಂಕಟವಾಗುತ್ತಿದೆ. ಒಂದು ಚೊಂಬು ನೀರು ಕೊಡು ಅಜ್ಜೀ, ಎಂದು ಒಂದು ಚೊಂಬು ನೀರು ತರಿಸಿ ಗಟ-ಗಟನೆ ಕುಡಿದ. ನಾನು ಇಲ್ಲಿ ಬರದಿದ್ದರೆ ನನ್ನ ಜನ್ಮ ವೃತ್ತಾಂತ ಹೇಗೆ ತಿಳಿ-ಯುತ್ತಿತ್ತು. ನಾನು ದರೋಡೆಕೋರನಾಗಿಯೇ ಮುಂದುವರಿಯು-ತ್ತಿದ್ದೆ. ಈ ಮನೆಯ ಮೇಲೆ ದೇವರ ಕೃಪೆ ಅಪಾರವಾಗಿದೆ. ನಾನು ಕಳದು ಹೋಗುವ ಮಗುವೆಂದೇ ದೇವರು ನನ್ನ ಬೆನ್ನಿನ ಮೇಲೆ ಕೊಡಲಿ ಆಕಾರದ ಮಚ್ಚೆಯನ್ನು ಉಳಿಸಿದನೋ ಏನೋ? ಅಬ್ಬ ಈ ಗುರುತೂ ಸಹ ನನಗೆ ಬಹಳ ಸಹಾಯವಾಗುತ್ತೆ. ಆಗಲಿ ಅದಕ್ಕೂ ಸಮಯ ಬರಲಿ ಎಂದು ಸುಮ್ಮನಾದ.

ಯಾಕೋ ಮಗೂ ಸುಮ್ಮನಾದೆ? ಆ ಮಗು ಏನಾಯಿತೆಂದು ನಿನಗೆ ಸಂಕಟವೇ ? ಕೇಳು-ನಮ್ಮ ಪುರೋಹಿತರು ಹೇಳಿದ್ದೆಲ್ಲಾ ಸುಳ್ಳಾಯಿತು ಕುಮಾರಾ ! 25 ವರ್ಷ ಇರಲಿ....ಮಗು ಒಂದು ವರ್ಷ ಕೂಡಾ ಬೆಳೆಯಲಿಲ್ಲ. ದರೋಡೆಕೋರರಿಗೆ ಬಲಿಯಾಯಿತು. ದೇವರು.... ಭವಿಷ್ಯ ಎಲ್ಲಾ ಸುಳ್ಳು. ಹಿಂದಿನದೆಲ್ಲಾ ಮರೆತು ನಾನು ಈ ಮನೆಯಲ್ಲಿ ನನ್ನ ಕಡೆಗಾಲದ ದಿನವನ್ನು ಎಣಿಸುತ್ತಾ ಕಾಲ ತಳ್ಳುತ್ತಿದ್ದೇನೆ ಕುಮಾರಾ! ನೀನೇನೋ ಆತ್ಮೀಯನಂತೆ ಎಲ್ಲಾ ಕಷ್ಟ ಸುಖ ಕೇಳುತ್ತಿದ್ದೀಯಪ್ಪ.

ಹೌದು ಅಜ್ಜೀ ! ನಿಮ್ಮ ಕಷ್ಟ ಸುಖದಲ್ಲಿ ನಾನೂ ಭಾಗಿ, ನನಗೂ ಯಾರೂ ಇಲ್ಲ. ನೀವೇ ನನ್ನ ಭಾಗದ ತಾಯಿ ಇದ್ದಹಾಗೆ. ನನ್ನನ್ನೇ ನಿಮ್ಮ ಮೊಮ್ಮಗನೆಂದು ತಿಳಿದು ಸಮಾಧಾನ ಮಾಡಿಕೊಳ್ಳಿ. ಎಂದ ಆದರೆ ?

❋ ❋ ❋ ❋

ಮನಸ್ಸಿನಲ್ಲಿ "ನಾನೇ ಆ ಮಗು" ಎಂದು ಹೇಳಿಬಿಡಲೇ ! ಎನ್ನಿ-ಸಿತು. ಮನಸ್ಸು ಗಟ್ಟಿಮಾಡಿದ, ಇರಲಿ ಅದಕ್ಕೆ ಇನ್ನೂ ಕಾಲಾವಕಾಶವಿದೆ

ಎಂದುಕೊಂಡು ಕಾಳೀಪ್ರಸಾದ ಅಜ್ಜೀ ನಿಮ್ಮ ತಮ್ಮನ ಕೊಲೆ ಹೇಗಾ-ಯಿತು ಹೇಳಿ ಅಜ್ಜೀ.

ಕುಮಾರಾ, ಅದನ್ನು ನೆನೆಸಿಕೊಂಡರೇ ಮೈ ನಡುಕ ಬರುತ್ತೆ. ನನ್ನ ತಮ್ಮ ಪ್ರಮೋದ ಒಂದು ತಿಂಗಳು ರಜಾ ಪಡೆದು ಬಂದಿದ್ದ. ಮತ್ತೆ ಅವನು ಹೋಗುವ ಕಲ್ಪನೆಯೇ ಯಾರಿಗೂ ಬೇಡವಾಗಿತ್ತು. ಮಗುವಿಗೆ ಪರಶುರಾಮ ಫಲಕವನ್ನು ಹಾಕಿ–ನಾಮಕರಣ ಶುಭಕಾರ್ಯ ಅದ್ದೂರಿ-ಯಾಗಿ ನಡೆಯಿತು. ನಮ್ಮ ತಾಯಿ–ತಂದೆ ಮೊಮ್ಮಗನನ್ನು ಅರೆಕ್ಷಣ ಬಿಟ್ಟಿರುತ್ತಿರಲಿಲ್ಲ, ನಿರ್ಮಲಾ ತನ್ನ ಗಂಡನನ್ನು ಮತ್ತೆ ನೀವು ಹೋಗುವು ದಾದರೆ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ನಿಮ್ಮನ್ನು ಬಿಟ್ಟಿರಲಾರೆ,, ಎಂದು ಬೇಡಿಕೊಳ್ಳುತ್ತಿದ್ದಳು, ಅಯ್ಯೋ:...ನಿರ್ಮಲಾ ನಿನಗೆ ಅರ್ಥವಾಗುವುದಿಲ್ಲ. ನಾವು ಸೈನಿಕರು ಎಂತಹ ಕಾಡು ಮೇಡುಗ-ಳಲ್ಲಿ ಟೆಂಟ್ ಹಾಕಿಕೊಂಡು ವಾಸಮಾಡುತ್ತೇವೆ. ಒಂದು ಹೆಣ್ಣೂ ಅಲ್ಲಿರು ವುದಿಲ್ಲ. ನಾನು ಮತ್ತೆ ಬೇಗ ಬ ರು ತ್ತೇ ನೆ ಸುಮ್ಮನಿರು ಎಂದು ಸಮಾಧಾನ ಮಾಡುತ್ತಿದ್ದ.

ಶುಭಕಾರ್ಯಕ್ಕೆ ಬಂದ ನೆಂಟರಿಷ್ಟರೆಲ್ಲಾ ಪ್ರಯಾಣಮಾಡಿದರು. ನಾನೂ ಸಹ ನಿರ್ಮಲಾ ಬಾಣಂತನಕ್ಕಾಗಿ ನಿಂತಿದ್ದೆ. ನಾನು ಹೊರಟಾಗ ನಮ್ಮ ತಂದೆ ತಾಯಿ ನನ್ನನ್ನು ಕಳುಹಿಸಿಕೊಡಲು ನನ್ನ ಜೊತೆ ಬಂದರು. ಎರಡು ದಿನ ಇದ್ದು ಹೋಗಿ ಎಂದು ಅವರನ್ನು ನಿಲ್ಲಿಸಿಕೊಂಡೆ. ನೋಡು ಅದೇ ಗಂಡಾಂತರವಾಯಿತು. ಅದಾದ ಎರಡು ದಿನಕ್ಕೇ ಮನೆಯಲ್ಲಿ ಕೊಲೆಯಾಗಿದೆಯೆಂದು ಸಮಾಚಾರ ಬಂತು. ಮತ್ತೆ ನಾವೆಲ್ಲಾ ಓಡೋಡಿ ಬಂದೆವು. ಆ ಭಯಂಕರ ದೃಶ್ಯ! ಅಬ್ಬ! ನನ್ನ ತಮ್ಮ ತಮ್ಮನ ಹೆಂಡತಿ ಮಲಗಿದ್ದ ಕೊಠಡಿ ತುಂಬಾ ರಕ್ತದ ಕೋಡಿ, ನನ್ನ ತಮ್ಮನ ಎದೆಗೆ ಚೂರಿಯಿಂದ ಇರಿದಿದ್ದರು. ನಿರ್ಮಲಾ ತಲೆ ಒ ಡೆ ದಿ ದ್ದ ರು, ಮಗುವೂ ಇರಲಿಲ್ಲ. ಬರೀತೊಟ್ಟಿಲು ನಮ್ಮ ತಂದೆ ತಾಯಿ ದುಃಖವನ್ನು ತಡೆದುಕೊಳ್ಳಲಾರದೇ ಮೂರ್ಛೆ ಹೋದರು. ಜನ ಊರಿಗೆ ಊರೇ ಬಂದು ತುಂಬಿತು ಅಯ್ಯೋ! ಎಂಥಾ ಧರ್ಮಾತ್ಮರ ಮನೆಗೆ ಇಂಥಾ

ಅನ್ಯಾಯ ಆಗಬಾರದಾಗಿತ್ತು ಎಂದು ಎಲ್ಲರೂ ಗೋಳೋ....ಎನ್ನುವವರೇ ಮಗುವನ್ನೂ ಸಾಯಿಸಿ ಎಲ್ಲಾದರೂ ಎಸೆದಿರಬಹುದೆಂದು ಮನೆಯ ಸುತ್ತ ಮುತ್ತ–ಊರಿನ ದಾರಿ–ದಾರಿಯಲ್ಲೂ ಹುಡುಕಿದೆವು. ಮಗುವಿನ ಶವವೂ ಸಿಕ್ಕಲಿಲ್ಲ, ಅಲ್ಲಿಗೆ ನಮ್ಮ ವಂಶದ ಕತೆಯೇ ಮುಗಿಯಿತು ಕುಮಾರಾ. ನಮ್ಮ ತಂದೆ ತಾಯಿ ಆ ಕೊರಗಿನಲ್ಲಿಯೇ ಎರಡು ವರ್ಷ ಇದ್ದು ಅವರೂ ಹೋಗಿಬಿಟ್ಟರು-ಇಷ್ಟು ಹೇಳಿ ಬಿಕ್ಕಿ–ಬಿಕ್ಕಿ ಅತ್ತಳು ಅಜ್ಜಿ.

❋ ❋ ❋ ❋

ಈಗ ಕಾಳೀಪ್ರಸಾದನ ತಲೆ ಗೋಜು ಗೊಂದಲವಾಯಿತು. ಮನಸ್ಸು ಸ್ಥಿಮಿತದಲ್ಲಿಲ್ಲದಾಯಿತು, ಇಂಥಾ ಮ ನೆ ತ ನ ಅಳಿಯಬೇಕೇ ? ಅಥವಾ ನನ್ನಿಂದ ಬೆಳಯಬೇಕೇ? ಇದೊಂದು ಮನೆಯನ್ನು ಉಳಿಸುವ ಮಹಾ ಧರ್ಮಕಾರ್ಯವನ್ನು ಮಾಡಿಬಿಟ್ಟರೆ ನನ್ನ ಪಾಪ ಕಾರ್ಯಕ್ಕೆ ಪ್ರಾಯಶ್ಚಿತ್ತ ವಾಗುತ್ತದೆಯೋ ? ಈ ಮನೆಯಂತೆ ಎಷ್ಟು ಮನೆಯ ಕಂದಮ್ಮಗಳನ್ನು ಕೋಡೊಯ್ದು ದರೋಡೆಕೋರರ ಗುಂಪಿನಲ್ಲಿ ಸಾಕಿ ತರಬೇತಿ ಕೊಟ್ಟು ಅವರನ್ನು ದರೋಡೆಕೋರರನ್ನಾಗಿ ಮಾಡಿದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಒಂದು ಸಲ ಮಾರಮ್ಮನ ದೊಡ್ಡ ಜಾತ್ರೆ ಒಂದೂರಿನಲ್ಲಿ ನಡೆ- ಯುತ್ತಿತ್ತು. ಆಗ ನಾವೂ ಜಾತ್ರೆಗಳಿಗೆ ಹೋಗಿ ಅನೇಕ ವಿಧ ದರೋಡೆ ಮಾಡುತ್ತಿದ್ದೆವು. ಜಾತ್ರೆಗೆ ಬಹಳ ಶ್ರೀಮಂತ ದಂಪತಿಗಳು ಮುದ್ದಾದ ಗಂಡು ಮಗುವನ್ನು ಎತ್ತಿಕೊಂಡು ಬಂದಿದ್ದರು. ಏನೋ ವ್ಯಾಪಾರ ಮಾಡಲು ಮಗುವನ್ನು ಕೆಳಗೆ ಇಳಿಸಿದರು. ದೇವೀಪ್ರಸಾದನ ಆಜ್ಞೆಯಂತೆ ಚಕ್ಕನೆ ಮಗುವನ್ನೆತ್ತಿಕೊಂಡು ಜನಜಂಗುಳಿಯಲ್ಲಿ ನಾನು ಮ ರೆ ಯಾ ದೆ. ನಂತರ ದೇವೀಪ್ರಸಾದ ಮಗುವನ್ನು ನನ್ನಿಂದ ತೆಗೆದುಕೊಂಡು ಕಾಡಿನ ಗುಹೆಗೆ ಹೊರಟು ಹೋದ. ನಾನು ಮತ್ತೆ ಜಾತ್ರೆಯ ಬಳಿ ಬಂದು ನೋಡು- ವಾಗ ಆ ದಂಪತಿಗಳು ಮಗುವನ್ನು ಹುಡುಕುತ್ತಾ ಎದೆ ಎದೆ ಬಡಿದು- ಕೊಂಡು ಅಳುತ್ತಾ ಅಲ್ಲೇ ಜ್ಞಾನತಪ್ಪಿ ಬಿದ್ದರು. ಕೊಲೆಗಡುಕ-ಕಟುಕನಾದ ನನಗೆ ಆಗ ಏನೂ ಅನ್ನಿಸಲಿಲ್ಲ, ಅಂತಹುದೆಲ್ಲಾ ಸರ್ವೇ ಸಾಮಾನ್ಯ-

ವೆನಿಸುತ್ತಿತ್ತು. ಆ ದಂಪತಿಗಳು ಮಗುವನ್ನು ಕಳೆದುಕೊಂಡು ಎಷ್ಟು ಸಂಕಟ ಪಟ್ಟಿರಬಹುದು? ಆ ಪುಟ್ಟ ಕಂದಮ್ಮ ನಮ್ಮ ಗುಂಪಿನಲ್ಲಿ ದರೋಡೆ-ಕೋರನಾಗಿಯೇ ಬೆಳೆದ. ಆ ಮನೆಯ ಉದ್ಧಾರ ನನ್ನಿಂದ ಆಯಿತೇ ? ಎಂದು ಕಾಳೀಪ್ರಸಾದ ಹಿಂದಿನದೆಲ್ಲಾ ಜ್ಞಾಪಿಸಿಕೊಂಡು ಪಶ್ಚಾತ್ತಾಪ ಪಟ್ಟ.

ಕಾಳೀಪ್ರಸಾದ ಚಿಂತಿಸುತ್ತಾ ಸುಮ್ಮನೆ ಕುಳಿತದ್ದನ್ನು ಕಂಡು ಯಾಕೆ ಕುಮಾರಾ ! ನಿನಗೆ ನಮ್ಮ ಮನೆಯವರ ಚರಿತ್ರೆಯನ್ನು ಕೇಳಿ ಅಷ್ಟು ಸಂಕಟವಾಯಿತೇ ? ಎಂದು ಅಜ್ಜಿ ಕೇಳಿದಳು.

ಹೌದು-ಅಜ್ಜೀ ನನ್ನ ಮನಸ್ಸು ಒಂದು ಸ್ಥಿಮಿತಕ್ಕೆ ಬರುವವರೆಗೂ ನಾನು ಎಲ್ಲಿಯಾದರೂ ಸುತ್ತಾಡಿ ಬರುತ್ತೇನೆ ನೀನು ಯೋಚಿಸಬೇಡ.

ಲೋ ಯಂಕಾ....ನೀನು ಅಜ್ಜಿಯನ್ನು ಚೆನ್ನಾಗಿ ನೋಡಿಕೋ.... ಎಂದು ಹೇಳಿದವನೇ ಕಾಳೀಪ್ರಸಾದ ಕುದುರೆಯನ್ನು ಹತ್ತಿ ನಾಗಾಲೋಟ ದಲ್ಲಿ ಬಹುದೂರ ಹೊರಟುಹೋದ.

ಆಹಾರ ನಿದ್ರೆಯ ಪರಿವೆಯೇ ಇಲ್ಲದೆ ಒಂದೇ ಸಮ ಪ್ರಯಾಣ ಮಾಡಿ ವಿಂಧ್ಯಾದ್ರಿಯ ಅರಣ್ಯದ ಒಳಹೊಕ್ಕ. ಅವನಿಗೆ ಚಿರಪರಿಚಿತವಾದ ಸ್ಥಳ ಅದು. ಕುದುರೆಯನ್ನು ಮರಕ್ಕೆ ಕಟ್ಟಿ ಹುಲ್ಲು ಹಾಕಿ ಕಾಲುನಡಿಗೆ ಯಲ್ಲಿ ಕಾಡೆಲ್ಲಾ ಸುತ್ತಾಡಿದ. ಕಾಳೀಪ್ರಸಾದ ಮಗುವಿನಿಂದ ಓಡಾಡಿ ಬೆಳೆದ ಸ್ಥಳ ಅದು. ಒಂದೊಂದು ಮರ-ಗಿಡಗಳೂ ಚಿರಪರಿಚಿತವಾದದ್ದು. ಮತ್ತು ಅವುಗಳ ಒಡನಾಟ ಅವನಿಗೆ ಆನಂದದಾಯಕ ಪ್ರಶಾಂತ ಸ್ಥಳ. ಜನದ ಜಂಗುಳಿಯಿಲ್ಲ, ಜಾಗದ ಅಭಾವವಿಲ್ಲ. ಕಾಳೀಪ್ರಸಾದ ಆಯಾಸ-ವೆಲ್ಲಾ ಪರಿಹಾರವಾದಂತೆ ಒಂದು ನಿಟ್ಟುಸಿರು ಬಿಟ್ಟ. ಒಂದೊಂದು ಮರ ಗಿಡಗಳನ್ನೂ ಮುಟ್ಟಿ ಮುಟ್ಟಿ ಮಮತೆಯಿಂದ ಸವರಿದ. ಆ ಗಿಡ-ಮರಗಳು ಕಾಳೀ ನಮ್ಮನ್ನು ಬಿಟ್ಟು ಹೋಗಬೇಡ. ಕಾಳೀಪ್ರಸಾದ ನೀನು ಹೋಗ ಬೇಡ. ಎನ್ನುತ್ತಿವೆಯೋ? ಎಂಬಂತೆ ಅವನಿಗೆ ಮಂದ ಮಾರುತದ ಚಾಮರ ಬೀಸಿದವು. ಅವನು 25 ವರ್ಷ ಬೆಳೆದ ಆ ವಾತಾವರಣ

ಅವನಿಗೆ ಎಷ್ಟೋ ನೆಮ್ಮದಿಕೊಟ್ಟಿತು. ತನ್ನ ಜೊತೆಗಾರರಾಗಲಿ, ಕಾಡು ಬೇಡರಾಗಲಿ ಒಬ್ಬರಾದರೂ ಅಲ್ಲಿ ಇರಲಿಲ್ಲ. ಒಂಟಿಯಾಗಿ ಕಾಲು ಸೋಲುವವರೆಗೂ ಸುತ್ತಾಡಿದ. ನೀರು ಕುಡಿಯಬೇಕೆನ್ನಿಸಿತು. ಝುಳು ಝುಳು ಹರಿಯುವ ನೀರು ಪ್ರವಾಹದತ್ತ ಹೋದ. ದೇವೀಪ್ರಸಾದ ಕುಳಿತಿದ್ದ ಬಂಡೆಯು ಸ್ಥಳವೇ ಅದು. ಬಂಡೆಯ ಸಂದಿಯಿಂದ ಹರಿಯುವ ತಿಳಿನೀರನ್ನು ಬೊಗಸೆಯಲ್ಲಿ ತುಂಬಿ ತುಂಬಿ ಕುಡಿದ. ಆಯಾಸ ಸ್ವಲ್ಪ ಪರಿಹಾರವಾಯಿತು. ಅದೇ ಬಂಡೆಯ ಮೇಲೆ ಕುಳಿತು ಹಿಂದಿನದೆಲ್ಲಾ ಜ್ಞಾಪಿಸಿಕೊಂಡ.

ದೇವೀಪ್ರಸಾದ ಆ ಬಂಡೆಯ ಮೇಲಿಂದಲೇ ಆಳವಾದ ನೀರಿನ ಪ್ರಪಾತಕ್ಕೆ ಬಿದ್ದು ಸತ್ತಿದ್ದು. ಅಯ್ಯೋ! ದೇವೀಪ್ರಸಾದ ನೀನೇಕೆ ಹೀಗೆ ಮಾಡಿದೆ? ನನ್ನನ್ನೇಕೆ ಜೀವದಿಂದ ಉಳಿಸಿದೆ? ಮಗುವಾಗಿದ್ದಾಗಲೇ ಸಾಯಿಸಬಾರದಿತ್ತೇ? ಶೂರನಾದ ಮಗನಂತೆ ಸಾಕಿದೆ. ದರೋಡೆಕೋರನಾಗಿ ಮಾಡಿದೆ, ಕೊಳ್ಳೆಯ ಹಣ ರಾಶಿ ರಾಶಿಯಾಗಿ ಬಿದ್ದಿದೆ. ಅದೇ ದಾರಿಯಲ್ಲೇ ಸಾಗಿದ್ದರೆ ನನಗೆ ಎಷ್ಟೋ ನೆಮ್ಮದಿ ಸಿಕ್ಕುತ್ತಿತ್ತು. ನನ್ನನ್ನು ಇಲ್ಲಿ ಕರೆದುಕೊಂಡು ಬಂದು ನನ್ನ ಜನ್ಮ ವೃತ್ತಾಂತವನ್ನು ಹೇಳಿ ನನ್ನ ತಲೆಯನ್ನೇ ಕೆಡಿಸಿ ಬಿಟ್ಟೆಯಲ್ಲಾ! ನೀನು ಬದುಕಿದ್ದರೇ ಚೆನ್ನಾಗಿತ್ತು, ನಾನು ನಿನ್ನ ಮಗನಾಗಿಯೇ ನಿನ್ನನ್ನು ಪ್ರೀತಿಸುತ್ತಿದ್ದೆ, ಈಗ ಈ ಕವಲೊಡೆದ ದಾರಿಯಲ್ಲಿ ಎತ್ತ ಹೋಗುವುದೆಂದೇ ತಿಳಿಯಲೊಲ್ಲದು– ಎಂದು ಸಂಕಟದಿಂದ ಕಾಳೀಪ್ರಸಾದ ಗೊಳೋ ಎಂದು ಅತ್ತುಬಿಟ್ಟ. ಎಷ್ಟೋ ಹೊತ್ತು ಆ ಬಂಡೆಯ ಮೇಲೆಯೇ ಕುಳಿತು ಚಿಂತಿಸಿದ. ಮತ್ತೆ ದರೋಡೆಗೆ ಮನಸ್ಸು ಒಪ್ಪಲೊಲ್ಲದು. ನನ್ನ ಹೆತ್ತವರ ಮನೆಯ ವಾತಾವರಣಕ್ಕೆ-ಸಂಪ್ರದಾಯಕ್ಕೆ ಹೊಂದಿಕೊಳ್ಳಲು ನನಗೆ ಬಹಳ ಕಷ್ಟವಾಗುತ್ತಿದೆ. ಏನು ಮಾಡಲಿ? ಎಂದು ಕಾಳೀಪ್ರಸಾದ ಒಂದು ದಿನವೆಲ್ಲಾ ಆ ಕಾಡಿನ ಗುಹೆಯಲ್ಲಿ ಕಳೆದ.

ಆದರೆ ಮೊದಲಿನಂತೆ ಧೈರ್ಯವಾಗಿ ರಾತ್ರಿ ಕಳೆಯಲು ಅವನಿಂದ ಆಗಲಿಲ್ಲ. ಕಾಡುಪ್ರಾಣಿಗಳ ಘರ್ಜನೆ, ನಿಶ್ಶಬ್ದ ವಾತಾವರಣದಲ್ಲಿ ಜೀರುಂಡೆ

ಗಳ ಜೀರ್–ಜೀರ್ ಸದ್ದು, ಒಂಟಿತನ ಅವನಿಗೆ ಭಯ ಹುಟ್ಟಿಸಿತು. ಮೊದಲು ದೇವೀಪ್ರಸಾದನ ರಕ್ಷಣೆ–ತನ್ನ ಅನುಯಾಯಿಗಳ ಬೆಂಬಲ ಇತ್ತು. ಸಮೂಹದಲ್ಲಿ ಇವನಿಗೆ ಒಂಟಿತನ ಕಾಣುತ್ತಿರಲಿಲ್ಲ. ಇನ್ನು ಇಲ್ಲಿರಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದ. ಸೂರ್ಯೋದಯವಾಗಿ ಚಿಲಿ–ಪಿಲಿ ಹಕ್ಕಿಗಳ ಕಲರವ ಕಾಳಿಯ ಮನಸ್ಸಿಗೆ ಧೈರ್ಯ ತಂದಿತು. ನಿಧಿಯಿದ್ದ ಗುಹೆಗೆ ಹೊರಟ. ಗುಹೆಯೊಳಗೆ ಆ ಕತ್ತಲೆಯಲ್ಲಿ ಯಾರು ತನ್ನನ್ನು ಹಿಂಬಾಲಿಸುವರೋ? ಎಂದು ಅವನ ಎದೆ ನಡುಗಿತು, ಹಿಂದಿದ್ದ ಎದೆಗಾರಿಕೆ ಇಲ್ಲದುದು ಕಾಳಿಗೆ ಭ್ರಮೆಯುಂಟಾಯಿತು.

ಬೇಕಾದಷ್ಟು ನಿಧಿಯನ್ನು ತೆಗೆದುಕೊಂಡು ಕುದುರೆ ಹತ್ತಿ ಹೊರಟ ಕಾಳೀಪ್ರಸಾದ. ಪಟ್ಟಣದ ಕಡೆ ಹೋಗ ಬೇಕಾದ್ದರಿಂದ ಬೆಲೆಬಾಳುವ ಉಡುಪನ್ನು ಹಾಕಿದ್ದ. ರಾಜಾಸ್ಥಾನೀ ಯುವಕನಂತೆ ತಲೆಗೆ ಜರಿಯ ಪಾಗು ಸುತ್ತಿ ಉದ್ದವಾಗಿ ಸೆರಗು ಕುಚ್ಚು ಬಿಟ್ಟಿದ್ದ. ರೇಷ್ಮೆ ಜುಬ್ಬಾ ಪೈಜಾಮು ಅವನ ನೀಳ ಆಕಾರಕ್ಕೆ ತಕ್ಕಂತೆ ಒಪ್ಪುತ್ತಿತ್ತು. ಕುದುರೆಯ ಮೇಲೆ ಠೀವಿಯಿಂದ ಬರುತ್ತಿದ್ದ ಇವನನ್ನು ಯಾರಾದರೂ ನೋಡಿದರೆ ಇವನು ಯಾರೋ ರಾಜಕುಮಾರನಿರಬಹುದೆಂದು ದಾರಿಯ ಪಕ್ಕಕ್ಕೆ ಸರಿದು ಕೈಮುಗಿದು ಗೌರವ ತೋರಿಸುತ್ತಿದ್ದರು. ತನ್ನ ಊರಾದ ಸಿಂಧೂಪುರ್‌ಗೆ ಬಂದ,

ಕಾಳೀಪ್ರಸಾದ ಊರಿನ ಹೊರಗೆ ಬಂದು ಮರದ ನೆರಳಿನಲ್ಲಿ ಕುದುರೆ ಕಟ್ಟಿ ಹಾಕಿ ಹುಲ್ಲನ್ನು ಕೊಂಡು ತಂದು ಕುದುರೆಗೆ ಮೇವು ಹಾಕಿದ. ಈಗ ಮುಂದೆ ಅಜ್ಜಿ ಮನೆಗೆ ಹೋಗುವುದೇ ? ಎಂದು ಯೋಚಿಸಿದ. ಅದು ಬೇಕಾಗಲಿಲ್ಲ. ತಾಳು ಮೊದಲು ನಮ್ಮ ಮನೆದೇವರು ಪರಶುರಾಮ ಬೆಟ್ಟಕ್ಕೆ ಹೋಗಿಬರೋಣ ಎಂದು ತೀರ್ಮಾನಿಸಿದ. ಅಲ್ಲಿ ಓಡಾಡುವ ಜನರನ್ನು ಕೇಳಿದ. ಪರಶುರಾಮ ಬೆಟ್ಟ ಎಲ್ಲಿದೆ ? ಎಷ್ಟು ದೂರ? ಎಂದು ಕೆಲವರು ಗೊತ್ತಿಲ್ಲ ಎಂದರು. ಆಮೇಲೆ ಕೆಲವರು ಹೇಳಿದರು. ಇಲ್ಲಿಂದ ಇಪ್ಪತ್ತು ಮೈಲಿ ದೂರದಲ್ಲಿದೆ. ಆದರೆ ಬೆಟ್ಟ ಎತ್ತರವಾಗಿದೆ ನಾನ್ನೂರು ...ಐನೂರು ಮೆಟ್ಟಿಲನ್ನು ಹತ್ತಬೇಕಾಗುತ್ತದೆ, ಎಂದು ಹೇಳಿದರು. ಸಂ

ಕುದುರೆಯಿಂದ ಬೆಟ್ಟಹತ್ತಲಾಗುವುದಿಲ್ಲ. ನೋಡೋಣ—ಎಂದು ಅವರು ಹೇಳಿದ ದಾರಿಯಲ್ಲಿ ಬೆಟ್ಟದವರೆಗೂ ಕುದುರೆ ಸವಾರಿಯಲ್ಲಿ ಹೋದ. ಬೆಟ್ಟದ ಬುಡಕ್ಕೆ. ಕೆಲವು ಸಣ್ಣ ಸಣ್ಣ ಅಂಗಡಿಗಳಿದ್ದವು. ಕುದುರೆಯನ್ನು ನೋಡಿಕೊಳ್ಳುವಂತೆ ಅವರಿಗೆ ಹೇಳಿ ಹಣ ಕೊಟ್ಟ. ಯಾರೋ ಈತ ರಾಜಕುಮಾರನಿರಬಹುದೆಂದು ಅವರು ನಮ್ರತೆಯಿಂದ ಆಗಲಿ, ಎಂದರು.

ಮೆಟ್ಟಲಿನ ದಾರಿಯುದ್ದಕ್ಕೂ ಮರಗಳ ತಣ್ಣನೆ ನೆರಳು ಕ್ರಮಬದ್ಧವಾದ ಮೆಟ್ಟಲು. ಕಾಳೀಪ್ರಸಾದನಿಗೆ ಏನೋ ಒಂದು ವಿಧ ಲವಲವಿಕೆ. ಅವನ ಜೀವಮಾನದಲ್ಲಿ ಎಂದೂ ದೇವರು, ದೇವಸ್ಥಾನ, ಪೂಜೆ,, ಎಂದು ಹೋದವನಲ್ಲ. ಕೆಲವು ದೇವಸ್ಥಾನಗಳಿಗೆ ನುಗ್ಗಿ ದರೋಡೆ ಲೂಟಿ ಮಾಡಿ ದೇವರ ಒಡವೆಗಳನ್ನು ಕದ್ದಿದ್ದುಂಟು. ಈಗ ಅವನಿಗೇ ಆಶ್ಚರ್ಯ ತಾನು ದೇವರ ದರ್ಶನಕ್ಕೆ ಹೋಗುತ್ತಿದ್ದೇನೆ ಎಂದು, ಕೆಲವು ಭಕ್ತಾದಿಗಳು. ರಾಮ—ರಾಮ—ಪರಶುರಾಮ,. ಎಂದು ದೇವರ ಹೆಸರು ಹೇಳುತ್ತಾ ಹತ್ತುತ್ತಿದ್ದರು.

ಬೆಟ್ಟದ ಮೇಲೆ ದಿವ್ಯವಾದ ದೇವಸ್ಥಾನ. ದೇವಸ್ಥಾನದ ಪಕ್ಕದಲ್ಲಿ ಬಂಡೆಯ ಸಂದಿಯಿಂದ ಶಿಳಿನೀರಿನ ಜರಿಯೊಂದು ಹರಿಯುತ್ತಿದೆ, ಬೆಟ್ಟ ಹತ್ತಿ ಬಂದು ಆಯಾಸಪಟ್ಟ ಭಕ್ತಾದಿಗಳು ಕೈಕಾಲು ಮುಖ ತೊಳೆದು ಬೊಗಸೆ ನೀರು ಕುಡಿದು ದೇವರ ದರ್ಶನಕ್ಕೆ ಒಳಕ್ಕೆ ಹೋಗುತ್ತಿದ್ದರು, ಬೆಳ್ಳಿ ಕೊಡಲಿಯನ್ನು ಕೈಯಲ್ಲಿ ಹಿಡಿದ ಭವ್ಯಮೂರ್ತಿ ಪರಶುರಾಮ ದೇವರು. ಜಟಾಧಾರಿಯಾದ ಪರಶುರಾಮನಿಗೆ ಕಿರೀಟಕ್ಕೆ ಬದಲು ಜಟೆಯ ಸುತ್ತ ಚಿನ್ನದ ನಾಗಾಭರಣ; ಕಚ್ಚೆಹಾಕಿ ಉಡಿಸಿದ ಪಟ್ಟೆ ಪೀತಾಂಬರ, ಘಮ ಘಮಿಸುವ ಪಚ್ಚೆತೆನೆ ಮಲ್ಲಿಗೆಯ ಮಾಲೆ. ಕಾಳೀಪ್ರಸಾದ ದೇವರನ್ನು ತದೇಕವಾಗಿ ನೋಡಿದ. ಅವನ ಕಣ್ಣಿಗೆ ಮಿಂಚೊಂದು ಹೊಳೆದಂತಾಯಿತು, ಭಕ್ತಿಭಾವದಿಂದ ನಮಸ್ಕರಿಸಿದ.

ಅಲ್ಲಿ ಪೂಜೆ ಮಾಡುವ ಪೂಜಾರರು ವಯೋ ವೃದ್ಧರೂ ಮಹಾ ತೇಜಸ್ವಿಗಳೂ ಆಗಿದ್ದರು. ಕಾಳೀಪ್ರಸಾದನನ್ನು ನೋಡಿ, ತಾವು ಯಾರು?

ಶ್ರೀಮಂತರ ಮನೆಯವರಿರಬಹುದು ಅಥವಾ ಯಾವುದೇ ದೇಶದ ರಾಜಕುಮಾರರಿರಬಹುದು ಎನ್ನಿಸುತ್ತೆ ದಯಮಾಡಿ, ದೇವರ ದರ್ಶನಮಾಡಿ ಎಂದರು.

ಕಾಳೀಪ್ರಸಾದ ಎಲ್ಲರಂತೆ ತಾನೂ ಕೈಮುಗಿದು ನಿಂತ, ಪೂಜಾರರು ಕರ್ಪೂರದಾರತಿ ಮಾಡಿ–ಇದೋ ನೋಡಿ ದೇವರ ಎದೆಯ ಭಾಗದಲ್ಲಿ ಚಿನ್ನ ವಜ್ರದ ಫಲಕ-ಇದೆ ನೋಡಿ, ಅದು ಈ ದೇವಸ್ಥಾನವನ್ನು ಕಟ್ಟಿಸಿದ ಜಹಗೀರ್‌ದಾರರು–ಪರಶುರಾಮ ಪಾಟೀಲರು ಮಾಡಿಸಿ ಸ್ವಾಮಿಗೆ ಅರ್ಪಿ-ಸಿರುವ ಪದಕ-ಲಕ್ಷಾಂತರ ರೂಪಾಯಿ ಬೆಲೆ ಬಾಳುತ್ತದೆ. ಎಂದರು.

ಕಾಳೀಪ್ರಸಾದನಿಗೆ ಮೈ ಜುಂ... ಎಂದಿತು. ಸ್ವಾಮಿ....ಅವರು ಈಗ ಇದ್ದಾರೆಯೇ ? ಎಂದು ಕೇಳಿದ.

ಇಲ್ಲ. ಪರಶುರಾಮ ಪಾಟೀಲರ ತಂದೆ ಪ್ರತಾಪದೇವ್ ಪಾಟೀಲರು ಈ ಪರಶುರಾಮ ದೇವರ ಪ್ರತಿಷ್ಠಾಪನೆ ಮಾಡಿ ಪ್ರತಿವರ್ಷ ಉತ್ಸವಾದಿ ಗಳನ್ನು ನಡೆಸುತ್ತಿದ್ದರು, ಮಹಾ ಧರ್ಮಾತ್ಮರು, ದಾನಿಗಳು. ಪರಶುರಾಮ-ಪಾಟೀಲರು ತಮಗೆ ಮೊಮ್ಮಗ ಹುಟ್ಟಿದಾಗ ಮಗುವಿನ ನಾಮಕರಣ ಶುಭ ಮಹೋತ್ಸವದ ದಿನ ಮಗುವಿಗೆ ಧರ್ಮಪಾಲನೆಂದು ಹೆಸರಿಟ್ಟು ಈ ಫಲಕವನ್ನು ಮಾಡಿಸಿ ಅದರಲ್ಲಿ ಧರ್ಮಪಾಲ, ಎಂದು ಹೆಸರನ್ನು ಕೆತ್ತಿಸಿ ದೇವರಿಗೆ ಅರ್ಪಿಸಿದರು. ಮಗು ದೇವರ ರಕ್ಷಣೆಯಲ್ಲಿ ಆಯುಷ್ಮಂತ-ನಾಗಿ ಬೆಳೆಯಲಿ ಎಂದು ಪ್ರಾರ್ಥಿಸಿದರು. ಆದರೆ ಆದರೇ ...ಮಗು ವರ್ಷದೊಳಗಾಗಿ ಕೊಲೆಗಡುಕರಿಂದ ಕೊಲೆಯಾಗಿ ಹೋಯಿತು. ಅಂತಹ ಪುಣ್ಯಾತ್ಮರ ವಂಶ ಹೇಳ ಹೆಸರಿಲ್ಲವಾಯಿತು–ಎಂದು ಆ ವೃದ್ಧರು ಕಣ್ಣಿನಲ್ಲಿ ನೀರಿಡುತ್ತಾ ಹೇಳಿದರು.

ಅಬ್ಬ ಇದೇನಿದು ಎಲ್ಲಿ ಬಂದರೂ ನನಗೆ ಈ ಪರಶುರಾಮದೇವರ ಅನುಗ್ರಹ ಆಗುತ್ತಿದೆ. ಆ ಫಲಕವೇ ಈ ವಂಶದವರ ನಿಶಾನೆ ಎಂದು ಕಾಳೀಪ್ರಸಾದ ಕೈಮುಗಿದ ದೇವರಿಗೆ.

ಅಪ್ಪಾ ? ರಾಜಕುಮಾರಾ ! ನಿಮ್ಮ ಹೆಸರೇನು ? ನಿಮ್ಮ ಹೆಸರಿನಲ್ಲಿ ದೇವರಿಗೆ ಅರ್ಚನೆ ಮಾಡುತ್ತೇನೆ ಒಳ್ಳೆಯದಾಗುತ್ತೆ ಎಂದರು,

ಕಾಳೀಪ್ರಸಾದ ಏನೆಂದು ಹೇಳಿಯಾನು ! ಯೋಚಿಸಿ ಅವರ ಮನೆಯ ಕಡೆಯ ಮಗು ಆ ಫಲಕದಲ್ಲಿರುವ ಹೆಸರಿನ ಧರ್ಮಪಾಲನ ಹೆಸರಿನಲ್ಲಿಯೇ ಪೂಜೆ ಮಾಡಿ, ಅಂದ.

ಆ ವಯೋವೃದ್ಧರ ಮುಖದಲ್ಲಿ ಒಂದು ವಿಧ ನಿರಾಶೆಯ ಭಾವ ಮೂಡಿತು, "ಹುಂ" ನೀನ್ಯಾರೋ ತಿಳಿಯದು ಆ ವಂಶದವರ ಮೇಲೆ ನಿನಗೇನು ಅಭಿಮಾನ ? ಒಂದು ಗಾದೆ "ಸತ್ತ ಮಗುವಿನ ಜಾತಕಫಲ ಕೇಳಿದರು" ಎನ್ನುವಂತೆ ಆ ಸತ್ತ ಮಗುವಿನ ಹೆಸರಿನಲ್ಲೇನಪ್ಪ ಅರ್ಚನೆ ? ನಾವಂತೂ ಜಹಗೀರ್‌ದಾರ್ ಮನೆಯ ಋಣ ತೀರಿಸಬೇಕು. ಅವರು ನಮಗೆ ಬಹಳ ಉಪಕಾರ ಮಾಡಿದ್ದಾರೆ. ನೀನ್ಯಾರೋ? ನಿನಗೇನಪ್ಪ ಅಕ್ಕರೆ? ಎಂದು ಆತ್ಮೀಯವಾಗಿ ಹೇಳಿದರು.

ಸ್ವಾಮಿ ಪರಶುರಾಮ ದೇವರ ಕೃಪೆ ಹೇಗಿದೆಯೋ ? ಅವನ ದಯೆ ಇದ್ದರೆ ಆ ಮಗು ಸಾಯದೆ ಬದುಕಿರಬಹುದು. ಎಂದಾದರೂ ಬರಬಹುದು. ಆ ಮಗುವಿನ ಹೆಸರಿನಲ್ಲಿಯೇ ಅರ್ಚನೆ ಮಾಡಿ ಎಂದ ಕಾಳೀಪ್ರಸಾದ,

ಪ್ರಸಾದ ಸ್ವೀಕರಿಸಿ ಕುದುರೆ ಏರಿ ಊರೊಳಕ್ಕೆ ಬಂದ. ಎಲ್ಲೆಲ್ಲೂ ಆ ವಂಶದವರ ಪ್ರಶಂಸೆಯೇ.... ಜಹಗೀರ್‌ದಾರರು ಕಟ್ಟಿಸಿದ ಛತ್ರ, ಜಹಗೀರ್‌ದಾರರು ಕಟ್ಟಿಸಿದ ಕೊಳ-ಕಾಲುವೆ. ಹೀಗೆ ಎಲ್ಲಿ ಕೇಳಿದರೂ ಅವರ ಹೆಸರೇ ಅವರ ಹೆಸರನ್ನುಳಿಸಬೇಕಾದರೆ ನಾನು ಏನೇನು ಮಾಡ ಬೇಕು ? ಹೇಗಿರಬೇಕು ? ಎಂದು ಕಾಳೀಪ್ರಸಾದ ಯೋಚಿಸುತ್ತಾ ಬಂದ.

ಊರಿಗೆ ಹತ್ತಿರವಾಗುತ್ತಿದ್ದಂತೆ ಅದೊಂದು ಆಶ್ರಮ ಕಂಡಿತು, ತಂಪಾದ ಪ್ರಶಾಂತ ವಾತಾವರಣ ಹೂವಿನ ಗಿಡ ಬಳ್ಳಿಗಳು. ಆ ವಿಶಾಲ

ವಾತಾವರಣದಲ್ಲಿ ಅಲ್ಲಲ್ಲೇ ಸಣ್ಣ ಸಣ್ಣ ಕೊಠಡಿಗಳು. ಆ ವ ರ ಣ ದ ಲ್ಲಿ ಅಲ್ಲಲ್ಲೇ ಬೇವಿನ ಮರಗಳು. ಆ ಗಾಳಿ ಸೇವನೆ ಆರೋಗ್ಯಕ್ಕೆ ಒಳ್ಳೆಯದು. ಇದೆಲ್ಲಾ ನೋಡಿ ಕಾಳೀಪ್ರಸಾದ ಗೇಟಿಂದ ಒಳಕ್ಕೆಹೋದ ಎತ್ತರವಾದ ಕಟ್ಟಡ. ಅದರ ಮುಂಭಾಗ........ವೃದ್ಧಾಶ್ರಮ, "ದೇವಿ ರಾಜರಾಜೇಶ್ವರಿ" ಎಂದು ಇತ್ತು, ಅಲ್ಲಲ್ಲಿ ಮರದ ಕೆಳಗೆ ಕುಳಿತಿದ್ದ ವೃದ್ಧರು-ದೇವರ ಭಜನೆ-ವೇದಪಠನ- ಗೀತಾಪಠನ ಮಾಡುತ್ತಿದ್ದರು.

ಅವರನ್ನು ಕೇಳಿದ್ದಕ್ಕೆ ನೀವ್ಯಾರಪ್ಪಾ ! ಶ್ರೀಮಂತರು ? ಅದು ನಮ್ಮಂತಹವರಿಗೆ ಆಶ್ರಯ ನೀಡಿ ಪೋಷಿಸುತ್ತಿರುವ ದೇವಿ ರಾಜರಾಜೇಶ್ವರಿ-ಯವರು ಕಟ್ಟಿಸಿರುವ ಆಶ್ರಮ. ಆ ದೇವಿ ನಿಜವಾಗಿಯೇ ದೇವಿ ಸ್ವರೂಪಳು, ಎಂದು ಕೈ ಮುಗಿದರು ಆ ವೃದ್ಧರು.

ಕಾಳೀಪ್ರಸಾದನಿಗೆ ಇದೆಲ್ಲಾ ಹೊಸ ವಿಷಯವಲ್ಲ. ಇಂತಹ ಧರ್ಮ ಕಾರ್ಯಗಳು ಈ ಊರಲ್ಲಿ ಏನೇನು ನಡೆಯುತ್ತಿವೆಯೋ ? ಎಲ್ಲಾ ಪವಾಡ ದಂತಿದೆ. ಸ್ವಾಮಿ....ಆ ದೇವಿ ಎಲ್ಲಿದಾರೆ ? ಎಂದ.

ಅಪ್ಪಾ: ಶ್ರೀಮಂತರೇ ಅವಳು ಒಂದೇ ಕಡೆ ಇರುವುದಿಲ್ಲ ಅವಳ ದರ್ಶನಕ್ಕಾಗಿ ಜನರು ಕಾದು ಕುಳಿತಿರುತ್ತಾರೆ ಎಂದರು. ಸರಿ ಆ ದೇವಿ ಅಂದರೆ ದೇವಸ್ಥಾನದಲ್ಲಿರುವ ದೇವಿಯೇ ತಾತಾ ? ಎಂದು ಕೇಳಿದ ಕಾಳೀಪ್ರಸಾದ.

ಅಲ್ಲ-ಅಲ್ಲ ಇವಳು ಮಾತಾಡುವ ದೇವಿ ಎಲ್ಲರನ್ನೂ ವಿಚಾರಿಸಿ ಅವರ ಕಷ್ಟಕ್ಕೆ ಪರಿಹಾರ ಹೇಳುವ ದೇವಿ. ಅವಳು ರಾಜ ರಾಜೇಶ್ವರಿಯೇ ಸರಿ.

ಕಾಳೀಪ್ರಸಾದನಿಗೆ ಇದೊಂದೂ ಅರ್ಥವಾಗಲಿಲ್ಲ. ಈ ಊರಿನ ವಿಷಯ ಏನೇನೋ ಇನ್ನೂ ತಿಳಿದುಕೊಳ್ಳಬೇಕಾಗಿದೆ, ಅಜ್ಜಿಯನ್ನೇ ಕೇಳಿದರಾಯಿತು. ಎಂದುಕೊಂಡು ಕುದುರೆ ಏರಿ ಹೊರಟ.

ಇವನು ಪದೇ ಪದೇ ಶ್ರೀಮಂತನ ರೀತಿ ಜಹಗೀರ್‌ದಾರರ ಮನೆಗೆ ಬರುತ್ತಿರುವುದನ್ನು ಊರಿನವರೆಲ್ಲಾ ಗಮನಿಸಿದರು. ಇವನು ಯಾರೋ ಮೋಸಗಾರ, ಹಿಂದಿನವರು ಕೂಡಿಟ್ಟ ಆಸ್ತಿಯನ್ನು ಲಪಟಾಯಿಸಲು ಬಂದಿದ್ದಾನೆ ಎಂದು ಆ ಊರಿನ ಕೆಲವರು ಅಜ್ಜಿ ಮನೆಗೆ ಬರಲು ಶುರು ಮಾಡಿದರು,

ಏನು ಪದ್ಮಕ್ಕಾ ! ಜಹಗೀರ್‌ದಾರ್ ಮನೆಯ ವಹಿವಾಟು ಎಂದರೆ ಏನು ? ಅದೆಲ್ಲಾ ಊರಿನ ಪ್ರಜೆಗಳ ಸ್ವತ್ತು, ನಿಜಾಮರ ಕೊಡುಗೆ ಯಾರು ಆ ಯುವಕ ನಿಜಹೇಳು, ಎಂದು ಒಂದು ಗುಂಪೇ ಬಂದು ಅಜ್ಜಿಯನ್ನು ದಬಾಯಿಸಿದರು.

ಅಜ್ಜಿಯೂ ಧೈರ್ಯವಂತೆ, ಇದುವರೆಗೆ ನೀವೆಲ್ಲಾ ಏನಾಗಿದ್ದಿರಿ ? ಈ ಮನೆಯ ಕಡೆಯೂ ಸುಳಿಯುತ್ತಿರಲಿಲ್ಲ. ಪಾಪ ! ಆ ಹುಡುಗ ನನ್ನ ತಮ್ಮನ ಸ್ನೇಹಿತನ ಮಗ, ನನಗೆ ಸಹಾಯವಾಗಿದಾನೆ, ಅಷ್ಟೇ ಅದರಿಂದ ನಿಮಗೇನು ? ಜಹಗೀರ್‌ದಾರರ ಆಡಳಿತದಲ್ಲಿಯೇ ಎಲ್ಲಾ ಹೋಯಿತು, ಈಗಿರುವುದು ಇದೊಂದು ಮನೆ ಮಾತ್ರ, ಇದಕ್ಕೆ ನಿಮ್ಮ ಸಂಬಂಧ ಏನೂ ಇಲ್ಲ ಎಂದಳು,

ಈ ಜನಗಳ ಗುಂಪು ಇರುವಾಗಲೇ ಕಾಳೀಪ್ರಸಾದ ಬಂದು ಕುದುರೆ ಯಿಂದ ಇಳಿದ. ಅಜ್ಜೀ ಇವರೆಲ್ಲಾ ಯಾರು ? ಅಂದ, ಅಯ್ಯೋ ... ಕುಮಾರ ! ಎಂದೂ ಇಲ್ಲದ ಹಕ್ಕು ಬಾಧ್ಯತೆಗೆ ಬಂದಿವಾರೆ. ನೀನು ಯಾರೋ... ಜಹಗೀರ್‌ದಾರರ ಸ್ವತ್ತನ್ನು ಹಾರಿಸಲು ಬಂದಿದ್ದೀ ಎನ್ನು ತ್ತಾರೆ. ಈಗ ಕಾಳೀಪ್ರಸಾದ–ನಿಜವಾದ ಕಾಳೀಪ್ರಸಾದನೇ ಆದ. ಅವನ ಕಣ್ಣುಗಳು ಕಿಡಿ ಕಾರಿದುವು.

ಏನು ? ಜಹಗೀರ್‌ದಾರರ ಮನೆಯ ಹಕ್ಕು ಬಾಧ್ಯತೆ ನಿಮಗೆ ಇದೆಯೇ ಅದು ಆ ವಂಶದವರ ಹಕ್ಕು. ಹುಷಾರ್ ! ಇನ್ನೊಂದು ಸಲ ನೀವು ಈ ರೀತಿ ಬಂದರೆ ನಿಮ್ಮ ಚರ್ಮ ಸುಲಿದು ಕಳುಹಿಸಬೇಕಾಗುತ್ತೆ, ನಡಿಯಿರಿ–ಎಂದು ರೋಷಾ ವೇಷದಿಂದ ಗದರಿದ ಅವರನ್ನು.

ಜನರ ಗುಂಪು-ನೋಡಿದ್ರೇನೋ ಇವನ ಪೊಗರು? ಇವನು ಯಾರೋ ಪರದೇಶಿ ನಮ್ಮೂರಿಗೆ ಬಂದು ನಮ್ಮನ್ನೇ ದಬಾಯಿಸುತ್ತಾನೆ. ಚೆನ್ನಾಗಿ ಎರಡು ಬಿಗೀರ‍್ರೋ....ಎಂದು ಹೊಡೆಯಲು ಕೈ ಎತ್ತಿದರು.

ಓ ...ಹೋ!....ನನ್ನ ತಂಟೆಗೆ ಬಂದರೆ ನಿಮ್ಮ ಗತಿ ಆಯಿತು ಎಂದ ಕುದುರೆಯ ಚಾವಟಿ ತೆಗೆದುಕೊಂಡು ಛಟೀರ್–ಛಟೀರ್ ಎಂದು ನಾಲ್ಕು ಬಿಗಿದ. ಅವರೆಲ್ಲಾ ಹೆದರಿ ಇವನ್ಯಾರೋ ಮಹಾ ರೌಡಿ, ತಾಳು ನಿನಗೆ ಸರಿಯಾಗಿ ಮಾಡ್ತೀವಿ ನಿಜಾಮರಿಗೆ ಸಮಾಚಾರ ಮುಟ್ಟಿಸಿ ನಿನಗೆ ಸರಿಯಾದ ಶಿಕ್ಷೆ ಮಾಡಿಸ್ತೀವಿ ಎಂದು ಎಲ್ಲರೂ ಕೂಗಿಕೊಂಡರು.

ಸರಿ ಸರಿ ನನಗೂ ಅದೇ ಬೇಕಾದ್ದು. ಈ ವಂಶದ ಹಕ್ಕುದಾರ ಯಾರು ? ಎನ್ನುವುದು ಅವರ ಮುಂದೆಯೇ ತೀರ್ಮಾನವಾಗಬೇಕು. ಅದುವರೆಗೂ ಇಲ್ಲಿ ಒಬ್ಬರೂ ಸುಳಿಯಬೇಡಿ, ಎಂದು ಕಾಳೀಪ್ರಸಾದ ವೀರಾವೇಶದಿಂದ ಅವರನ್ನೆಲ್ಲಾ ಅಟ್ಟಿದ.

ಈಗ ಎಲ್ಲಾ ನೋಡುತ್ತಿದ್ದ ಅಜ್ಜಿಗೆ ಜಂಘಾಬಲವೇ ಉಡುಗಿದಂತಾಗಿ ಗಡ ಗಡನೆ ನಡುಗುತ್ತಿದ್ದಳು. ಕಾಳೀಪ್ರಸಾದ ಏನೊಂದೂ ಮಾತನಾಡದೆ ಮನೆಯೊಳಗೆ ಹೋಗಿ ಕುರ್ಚಿಯಲ್ಲಿ ಕುಳಿತ. ಅಜ್ಜಿ ಅವನ ರೋಷಾವೇಶವನ್ನು ಇದೇ ಮೊದಲು ನೋಡಿದ್ದು. ಭಯದಿಂದ ಅವನ ಎದುರೂ ನಿಲ್ಲಲಾರದೆ ಒಳಗೆ ಹೋಗಿ ಮುದುಡಿ ಒಂದು ಕಡೆ ಕುಳಿತಳು. ಯಂಕ ಅಲ್ಲೇ ವರಾಂಡದಲ್ಲಿ ಕೈಕಟ್ಟಿ ನಿಂತಿದ್ದ ಲೋ ಯಂಕಾ--ಒಂದು ಚೊಂಬು ಕುಡಿಯುವ ನೀರು ತಾ, ಎಂದು ಗರ್ಜಿಸಿದ ಕಾಳೀಪ್ರಸಾದ. ಯಂಕನಿಗೂ ಭಯವಾಗಿತ್ತು. ಉಸಿರೆತ್ತದೆ ನೀರು ತಂದುಕೊಟ್ಟ.

ಸ್ವಲ್ಪ ಸಮಾಧಾನವಾದ ಮೇಲೆ ಕಾಳೀಪ್ರಸಾದ ಚಿಂತೆಗೊಳಗಾದ ಇದೇನು ನಾನು ಮಾಡಿದ್ದು ? ಇನ್ನು ಸ್ವಲ್ಪ ಇದ್ದರೆ ಅವರನ್ನು ಕೊಂದು ಬಿಡುತ್ತಿದ್ದೆ. ಅವರಿಗೆಲ್ಲಾ ನಾನು ಯಾರು ಎಂದು ಏನು ಗೊತ್ತು. ನಿಜ ಸಂಗತಿ ತಿಳಿಯುವವರೆಗೂ ಯಾರೂ ನನ್ನನ್ನು ನಂಬುವುದಿಲ್ಲ. ಅದಕ್ಕೆ

ಇನ್ನೂ ಸಮಯ ಕಾಯಬೇಕಾಗಿದೆ. ಮೊದಲು ಅಜ್ಜಿಗೆ ನಂಬಿಕೆ ಬರಬೇಕು. ಎಂದು ಅಜ್ಜೀ... ನನ್ನ ಕೈಲಿ ಮಾತಾಡುವುದಿಲ್ಲವೇ ? ನನ್ನ ಮೇಲೆ ಕೋಪವೇ ಎಂದ.

ಅಜ್ಜಿ ಹೊರಕ್ಕೆ ಬಂದು ಅಪ್ಪಾ ! ಮಹರಾಯಾ ! ಆ ನಿನ್ನ ಭಯಂಕರ ಕೋಪ ನೋಡಿ ಯಾರಿಗಾದರೂ ಮೈ ನಡುಕ ಬರುತ್ತೆ. ಅಷ್ಟಕ್ಕೂ ಅವರೆಲ್ಲಾ ಕೇಳಿದ್ದರಲ್ಲಿ ತಪ್ಪೇನು, ಈ ಮನೆಯ ಹಕ್ಕು ಬಾಧ್ಯತೆಯ ವಿಷಯ ನಿನಗೇಕೆ ? ಇವತ್ತಿಗೂ ಜಹಗೀರ್‌ದಾರರ ಮನೆ ಎಂದರೆ ಗೌರವ ಇಟ್ಟಿರುವವರು ಈ ಊರಲ್ಲಿ ಬೇಕಾದಷ್ಟು ಜನ ಇದ್ದಾರೆ. ಸರಿ. ಆ ಗೌರವ ಉಳಿಸಬೇಕೆಂದೇ ನಾನು ಇಲ್ಲಿರುವುದು. ಅವರೆಲ್ಲಾ ಹೇಗಾದರೂ ಮಾಡಲಿ, ನೀನು ಮಾತ್ರ ನನ್ನನ್ನು ತಪ್ಪಾಗಿ ತಿಳಿಯದಿದ್ದರೆ ಸಾಕು ಅಜ್ಜೀ.

ಸಾಕು–ಸಾಕು-ನಿನ್ನನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ ? ನೀನು ಇಲ್ಲಿರುವುದರಿಂದಲೇ ಅವರೆಲ್ಲಾ ಜಗಳಕ್ಕೆ ಬಂದಿರುವುದು. ನನ್ನ ಪಾಡಿಗೆ ನಾನು ಇದ್ದುಕೊಳ್ಳುತ್ತೇನೆ. ಮಹರಾಯನಾಗಿ ನೀನು ಎಲ್ಲಿಯಾದರೂ ಹೋಗು, ಎಂದು ಅಜ್ಜಿ ನಿಷ್ಠೂರವಾಗಿ ಹೇಳಿದಳು.

ಕಾಳೀಪ್ರಸಾದನ ಮನಸ್ಸಿಗೆ ಅಜ್ಜಿಯ ಮಾತಿನಿಂದ ಬಹಳ ನೋವಾಯಿತು. ಹೇಗಾದರೂ ಅಜ್ಜಿಯನ್ನು ಸಮಾಧಾನ ಪಡಿಸಬೇಕು. ಎಂದು ಅಜ್ಜೀ.. ನೀನು ಸ್ವಲ್ಪ ಸಮಾಧಾನವಾಗಿರು, ನಿನಗೇನೂ ಗೊತ್ತಿಲ್ಲ. ನೋಡು ನಾನು ಆ ಪರಶುರಾಮದೇವರ ಪಾದದಾಣೆಯಾಗಿ ಹೇಳುತ್ತೇನೆ. ನಿಮ್ಮ ದೇವರು ಪರಶುರಾಮನ ಸತ್ಯವಿದ್ದರೆ ಆ ವಂಶದ ಮಗು ಬದುಕಿದ್ದು ಎಲ್ಲಿ ದ್ದರೂ ಬರುತ್ತಾನೆ ಅವನನ್ನು ಹುಡುಕಿ ಎಲ್ಲಿದ್ದರೂ ಕರತಂದು ನಿಲ್ಲಿಸ ಬೇಕೆಂದೇ ನನ್ನ ಹೋರಾಟ.

ಈ ಮಾತಿನಿಂದ ಅಜ್ಜಿಯ ಮನಸ್ಸು ಪುಳಕಗೊಂಡಿತು. ಆಶ್ಚರ್ಯ ದಿಂದ ಠಕ್ಕನೆ ಎದ್ದು ನಿಂತು ಏನು ಹೇಳುತ್ತೀ ಕುಮಾರ ನೀನು ? ನನ್ನ ತಮ್ಮನ ಮಗು ಬದುಕಿದ್ದಾನೆ ಎನ್ನುತ್ತೀಯಾ ?

ಏಕಿರಬಾರದು, ಅಂದರೆ ! ಅವನು ಒಂದು ಸಮಯ ಬಂದರೆ ನೀನು ಅವನೇ ಎಂದು ನಂಬುತ್ತೀಯಾ! ಅಜ್ಜೀ?....ಅಂದ.

ಓಹೋ! ಅವನನ್ನು ಗುರುತಿಸುವುದು ಏನೂ ಕಷ್ಟವಿಲ್ಲ. ಅವನ ಬೆನ್ನಿನ ಮೇಲೆ ಪರಶುರಾಮ ದೇವರ ಕೊಡಲಿ ಗುರುತು ಮಚ್ಚೆ ಇದೆ ಕುಮಾರಾ! ಅವನು ಎಷ್ಟು ದೊಡ್ಡವನಾಗಿದ್ದರೂ ಆ ಮಚ್ಚೆ ಗುರುತು ಇದ್ದೇ ಇರುತ್ತೆ.

ಸರಿ ಅಜ್ಜಿ, ನೀನು ಹೇಳಿದ್ದು ಒಳ್ಳೆಯದೇ ಆಯಿತು. ಆ ಮಚ್ಚೆ ಗುರುತು ಇರುವವನನ್ನು ಹುಡುಕುತ್ತೇನೆ ಅಂದ.

ಏನೋಪ್ಪ ಈಗ ತಾನೆ ನಿನ್ನ ಮೇಲೆ ಕೋಪಿಸಿಕೊಂಡು ನಿನ್ನ ಸಹವಾಸವೇ ಬೇಡ ಹೋಗು, ಎಂದು ಬೈದೆ. ಆದರೆ ಈಗ ನೀನು ಈ ಮನೆಯ ವಂಶ ಉಳಿಸುವುದಕ್ಕಾಗಿ ಇಷ್ಟು ಮುತುವರ್ಜಿ ವಹಿಸುವುದು ನೋಡಿದರೆ ನೀನೇ ನಮ್ಮ ಆಪ್ತ ಬಂಧು ಎನಿಸುತ್ತೆ.

ಅಜ್ಜೀ, ಸ್ವಲ್ಪ ಸಮಾಧಾನ ಮಾಡಿಕೋ–ಇಲ್ಲಿ ಕೇಳು, ನೆನ್ನೆ ನಾನು ಪರಶುರಾಮ ಬೆಟ್ಟಕ್ಕೆ ಹೋಗಿದ್ದೆ....

ಇನ್ನೂ ಅವನು ಹೇಳುತ್ತಿದ್ದಂತೆಯೇ ಅಜ್ಜಿ....ಹೌದೇನೋ ಕುಮಾರಾ! ಆ ದೇವರ ದರ್ಶನ ಮಾಡಿದೆಯಾ ! ನೋಡು ನಿನ್ನ ಅಕ್ಕರೆ ನೋಡಿ ನನಗೆ ಆಶ್ಚರ್ಯವಾಗುತ್ತದೆ. ನಾನೇ ಆ ನಮ್ಮ ಮನೆದೇವರನ್ನು ದರ್ಶನ ಮಾಡುತ್ತಿಲ್ಲ. ಹುಂ ಆಮೇಲೆ?

ಆಮೇಲೆ ಬೆಟ್ಟ ಹತ್ತಿ ಮೇಲೆ ಹೋದೆ. ಅಜ್ಜೀ....ಬೆಟ್ಟ ತುಂಬಾ ಚೆನ್ನಾಗಿದೆ. ದೇವಸ್ಥಾನ–ದೇವರು ಎಲ್ಲಾ ತುಂಬಾ ಆಕರ್ಷಕವಾಗಿದೆ ನೀನು ಹೇಳಿದಂತೆ ದೇವರ ಕೈಯಲ್ಲಿ ಬೆಳ್ಳೀ ಕೊಡಲಿ ಇದೆ. ಅಲ್ಲಿ--ಪೂಜಾರರು ತುಂಬಾ ವಯಸ್ಸಾದವರು ಅವರು ನಿಮ್ಮ ವಂಶದ ವಿಷಯವನ್ನೆಲ್ಲಾ ಹೇಳಿ ನೋಡಪ್ಪಾ ! ಜಹಗೀರ್‌ದಾರ್ ವಂಶದವರ ವಜ್ರದ ಫಲಕ ಇದು ನೋಡು ಇದರ ಮೇಲೆ ಅವರ ವಂಶದ ಕಡೆಯ ಮಗು ಧರ್ಮಪಾಲ-

ಪಾಟೀಲ, ಎಂದು ಹೆಸರು ಕೆತ್ತಿಸಿದ್ದಾರೆ. ಆ ಮಗುವೇ ಪ್ಪ ಕೊಲೆಯಾಗಿ ಹೋಯಿತು, ಅದೊಂದು ಧರ್ಮದ ವಂಶ, ಎಂದು ದುಃಖಪಟ್ಟರು ಅಜ್ಜೀ!

ಹೌದಪ್ಪಾ : ಆ ಮುದುಕರು ಬಹಳ ಒಳ್ಳೆಯವರು ನಮ್ಮ ತಾತನ ಕಾಲದಿಂದಲೂ ಆ ದೇವಸ್ಥಾನದ ವ್ಯವಸ್ಥಾಪಕರು ಅರ್ಚಕರು ಎಲ್ಲಾ ಅವರೇ.. ಅವರಿಗೆ ನಮ್ಮ ವಂಶದ ಮೇಲೆ ತುಂಬಾ ಅಭಿಮಾನ, ನೀನು ಪೂಜೆ ಮಾಡಿದೆಯಾ ಕುಮಾರ ?

ಅಜ್ಜೀ ನನಗೆ ದೇವರು, ಪೂಜೆ–ಭಕ್ತಿ ಎಂದರೆ ಏನೂ ಅಂದು ಗೊತ್ತಿಲ್ಲ ನಾನು ಬೆಳೆದ ರೀತಿಯೇ ಬೇರೆ–ಆ ಅರ್ಚಕರು ನನ್ನನ್ನು ಯಾರೋ ಶ್ರೀಮಂತ ರಾಜಕುಮಾರ ಎಂದು ತಿಳಿದಿರಬಹುದು. ನಿಮ್ಮ ಹೆಸರಿನಲ್ಲಿ ದೇವರಿಗೆ ಅರ್ಚನೆ ಮಾಡುತ್ತೇನೆ, ನಿಮ್ಮ ಹೆಸರೇನು? ಎಂದು ಕೇಳಿದರು. ಅಜ್ಜೀ.. ನನಗೆ ಏನೂ ಗೊತ್ತಾಗಲಿಲ್ಲ ಅರ್ಚಕರೇ !....ಆ ಪರಶುರಾಮ ಫಲಕದಲ್ಲಿರುವ ಮಗುವಿನ ಹೆಸರು ಧರ್ಮಪಾಲ, ಎಂಬ ಹೆಸರಿನಲ್ಲಿಯೇ ಅರ್ಚನೆ ಮಾಡಿ, ಅಂದುಬಿಟ್ಟೆ. ಅರ್ಚನೆ–ಪೂಜೆ ಅವೆಲ್ಲಾ ನನಗೆ ಒಂದೂ ಅರ್ಥವಾಗೊಲ್ಲ ಅಂದ ಕಾಳೀಪ್ರಸಾದ.

ಅಜ್ಜಿಗೆ ಆಶ್ಚರ್ಯವಾಯಿತು. ಇದೇನಪ್ಪಾ ಕುಮಾರಾ ! ನಿನ್ನ ಒಂದೊಂದು ವಿಚಾರವೂ ನನಗೆ ದಿಕ್ಕೇ ತೋಚದಂತೆ ಮಾಡುತ್ತಿದೆ. ಆ ಮಗು ಸತ್ತೇಹೋಯಿತೆಂದು ನಾನು ಎಲ್ಲಾ ಮರೆತು ಕಾಲ ಕಳೆಯುತ್ತಿದ್ದೆ. ಆದರೆ ನೀ ಬಂದು ಏನೋ ನಮ್ಮ ವಂಶದ ಮಗು ಸತ್ತಿಲ್ಲ. ಹುಡುಕಿ ಕರೆ ತರುತ್ತೇನೆ ಎನ್ನುತ್ತೀ ಆ ಮಗುವಿನ ಹೆಸರಿನಲ್ಲಿ ಪೂಜೆ ಮಾಡಿಸಿದ್ದೀ. ನಿನ್ನ ಅಕ್ಕರೆ ಏನು ಈ ಮನೆ ಮೇಲೆ ?

ಅಜ್ಜೀ....ನೀನು ನನಗೆ ಆಶೀರ್ವಾದ ಮಾಡು ಅಷ್ಟು ಸಾಕು. ನಾನು ಎಲ್ಲಾ ಮಾಡುತ್ತೇನೆ ಎಂದು ಬಗ್ಗಿ ನಮಸ್ಕಾರ ಮಾಡಿದ ಕಾಳೀಪ್ರಸಾದ.

ನೀನು ಯಾರೋ ಏನೋ ? ನನ್ನ ಪ್ರೀತಿ ನಿನ್ನ ಮೇಲಿದೆ ನೂರು ವರ್ಷ ಚೆನ್ನಾಗಿ ಬದುಕು ಮಗೂ ಎಂದು ಆಶೀರ್ವಾದ ಮಾಡಿದಳು.

ಕಾಳೀಪ್ರಸಾದ ಅಲ್ಲಿಯೇ ಊಟ ಮಾಡಿ ಕುದುರೆಯ ಮೇಲೆ ಮತ್ತೆ ಹೊರಟ. ಅಜ್ಜಿ ಎಚ್ಚರಿಕೆ ಹೇಳಿದಳು. ನೋಡಪ್ಪಾ ! ಇದೇತಾನೆ ಈ ಊರಿನ ಜನ ನಿನ್ನ ಮೇಲೆ ಆಕ್ರಮಣ ಮಾಡಿದಾರೆ-ನೀನು ಅವರ ತಂಟೆಗೆ ಹೋಗಬೇಡ, ಎಂದು ಬಾಗಿಲವರೆಗೂ ಬಂದು ಅವನು ಹೊರಡುವುದನ್ನೇ ನೋಡುತ್ತಾ ಹೇಳಿದಳು.

ಕಾಳೀಪ್ರಸಾದ ಧಡ ಧಡನೆ ಕುದುರೆ ಓಡಿಸಿಕೊಂಡು ಹೊರಟೇ ಬಿಟ್ಟ. ಅವನಿಗೆ ಈ ಊರಿನ ಅನೇಕ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ. ಆ ಊರಿನ ಮಧ್ಯಭಾಗ, ದೊಡ್ಡದಾದ ರಸ್ತೆ. ಆ ರಸ್ತೆಯಲ್ಲಿ ಜನಗಳ ಓಡಾಟ ಹೆಚ್ಚಾಗಿತ್ತು ! ಆ ರಸ್ತೆಯಲ್ಲಿ ಒಂದು ಅನ್ನ ಛತ್ರ. ಆ ಛತ್ರದ ಮುಂಭಾಗದಲ್ಲಿ ದೊಡ್ಡದಾದ ಬೋರ್ಡ್, "ದೇವಿ ರಾಜರಾಜೇಶ್ವರಿ ಛತ್ರ. ದೀನ-ದಲಿತ ಮಕ್ಕಳಿಗೆ ಮಾತ್ರ ಇಲ್ಲಿ ಊಟ" ಎಂದು ಬರೆದಿತ್ತು. ಕಾಳೀಪ್ರಸಾದ ಛತ್ರದ ಬಳಿ ಕುದುರೆಯಿಂದ ಇಳಿದ. ಇದೇನು ! ಎಲ್ಲಿ ನೋಡಿದರೂ ದೇವಿ ರಾಜರಾಜೇಶ್ವರಿ ಹೆಸರು. ಅದು ಯಾರಿರಬಹುದು ? ಬಾಗಿಲ ಬಳಿ ಇಬ್ಬರು ಕಾವಲುಗಾರರು ನಿಂತಿದ್ದರು. ಕಾಳೀಪ್ರಸಾದ ಅವರನ್ನು ವಿಚಾರಿಸಿದ. ಇವನನ್ನು ನೋಡಿ ಅವರು ಭಯ ಭಕ್ತಿಯಿಂದ. ತಾವು ಯಾರು ? ಇದು ದೇವಿ ರಾಜರಾಜೇಶ್ವರಿಯವರು ಕಟ್ಟಿಸಿದ ಛತ್ರ. ಇಲ್ಲಿ ತೀರಾ ಬಡ ಮಕ್ಕಳಿಗೆ ಮಾತ್ರ ಊಟ ಹಾಕುವ ವ್ಯವಸ್ಥೆ ಮಾಡಿದಾರೆ ದೇವಿಯವರು.

ಕಾಳೀಪ್ರಸಾದನಿಗೆ ಕುತೂಹಲ, ಆ ದೇವಿ ಯಾರು? ನೋಡಬೇಕೆಂದು ಆ ದೇವಿ ಇಲ್ಲಿಯೇ ಇದಾರೆಯೇ ?

ಇಲ್ಲ-ಇಲ್ಲ-ಅವರು ರಾಜೇಶ್ವರಿ ಭವನದಲ್ಲಿರುತ್ತಾರೆ. ಭಕ್ತಾದಿಗಳಿಗೆ ನೊಂದವರಿಗೆ, ಕಷ್ಟದಲ್ಲಿರುವವರಿಗೆ ಆಗಾಗ ದರ್ಶನ ಕೊಟ್ಟು ಅವರಿಗೆ ಸಹಾಯಮಾಡುತ್ತಾರೆ.

ಆವರನ್ನು ಯಾವಾಗ ಹೇಗ ನೋಡುವ್ವುದು ? ಎಂದು ಕಾಳೀಪ್ರಸಾದ ಅವರನ್ನೇ ಕೇಳಿದ.

ಆ ಆಳುಗಳು ತಾವು ಯಾರೋ ರಾಜಕುಮಾರರಂತೆ ಕಾಣುತ್ತೆ. ಆದರೆ ಆವರ ಅಪ್ಪಣೆಯಿಲ್ಲದೆ ಅವರನ್ನು ಯಾರೂ ನೋಡುವುದಕ್ಕಾಗು ವುದಿಲ್ಲ. ಒಂದೊಂದು ಸಲ ಅವರು ಇದ್ದಕ್ಕಿದ್ದಂತೆ ಇಲ್ಲಿಗೂ ಆಶ್ರಮ-ಗಳಿಗೂ ಬರುತ್ತಿರುತ್ತಾರೆ. ಇಲ್ಲಿಯ ವ್ಯವಸ್ಥೆ ಸರಿಯಾಗಿದೆಯೋ ಇಲ್ಲವೋ? ಎಂದು ನೋಡಲು ಬರುತ್ತಾರೆ.

ಕಾಳೀಪ್ರಸಾದ ಮಾತಾಡುತ್ತಿರುವಂತೆಯೇ ಛತ್ರದ ಮುಂಭಾಗದಲ್ಲಿ ಇಟ್ಟಿದ್ದ ನಗಾರಿಯನ್ನು ಡಬ-ಡಬನೆ ಬಡಿಯಲಾಯಿತು. ಎಲ್ಲಿದ್ದರೋ ಮಕ್ಕಳು ಓಡೋಡಿ ಬಂದು ಸಾಲು ಮಾಡಿ ನಿಂತರು, ಒಬ್ಬೊಬ್ಬರೇ ಬಂದು ಕೈ ಕಾಲು ತೊಳೆದು ಛತ್ರದ ದೊಡ್ಡ ಹಾಲಿನಲ್ಲಿ ಸಾಲಾಗಿ ಕುಳಿತರು ಎಲ್ಲಾ 10 ವರ್ಷದ ಒಳಗಿನ ಮಕ್ಕಳು. ಕಂಗಾಲಿಗಳಂತೆ ಇದ್ದರು. ಛತ್ರದ ವ್ಯವಸ್ಥಾಪಕರು ಬಂದು ಸಾಲಿನಲ್ಲಿ ಕುಳಿತಿದ್ದ ಮಕ್ಕಳ ನ್ನೆಲ್ಲಾ ಒಂದು ಸಲ ನೋಡಿಕೊಂಡು ಬಂದರು. ಒಂದು ಸಾಲಿನಲ್ಲಿ ದೊಡ್ಡವನೊಬ್ಬ ಭಿಕ್ಷುಕ ಕುಳಿತಿದ್ದ. ಅವನನ್ನು ಎಬ್ಬಿಸಿ ಇಲ್ಲಿ ಮಕ್ಕಳಿಗೆ ಮಾತ್ರ. ದೊಡ್ಡವರಿಗೆ ಅವಕಾಶವಿಲ್ಲ. ನಮ್ಮ ದೇವಿಯವರು ನೋಡಿದರೆ ನಮಗೇ ಶಿಕ್ಷೆಯಾಗುತ್ತೆ ನಡೀ ಹೊರಗೆ, ಎಂದು ಅವನನ್ನು ಕಳುಹಿಸಿ ಬಾಗಿಲಲ್ಲಿದ್ದ ಕಾವಲುಗಾರರಿಗೆ ತರಾಟೆಗೆ ತೆಗೆದುಕೊಂಡರು, ಆ ದೊಡ್ಡವ-ನನ್ನ್ಯಾಕೆ ಒಳಕ್ಕೆ ಬಿಟ್ಟಿರಿ. ದೇವಿಯವರು ನೋಡಿದ್ದರೆ ಏನು ಗತಿ ? ಎಂದು ಬೈದರು,

ಕಾಳೀಪ್ರಸಾದ ಇದೆಲ್ಲಾ ನೋಡುತ್ತಿದ್ದ, ಅವನಿಗೆ ಆಶ್ಚರ್ಯ ಇದೆಂತಹದೇವಿ ? ಇಷ್ಟು ಮಕ್ಕಳು ಊಟಮಾಡುವಾಗ ಆ ಒಬ್ಬ ದೊಡ್ಡವನು ತಿಂದರೆ ಏನು ಗಂಟು ಹೋಗುತ್ತೆ ? ಎಂದುಕೊಂಡ.

ಛತ್ರದ ವ್ಯವಸ್ಥಾಪಕರು ಕಾಳೀಪ್ರಸಾದನನ್ನು ನೋಡಿ ಯಾವುದೋ ದೇಶದ ರಾಜಕುಮಾರ ಇರಬಹುದು. ಅವರನ್ನು ಹೊರಗೇ ನಿಲ್ಲಿಸಿ ಬಿಟ್ಟೆವಲ್ಲಾ ! ಎಂದು ಮರ್ಯಾದೆಯಿಂದ ಒಳಕ್ಕೆ ಬರಬಹುದು, ಮಕ್ಕಳಿಗೆಲ್ಲಾ ಊಟಹಾಕುವ ವ್ಯವಸ್ಥೆಯನ್ನು ಎಲ್ಲರೂ ನೋಡಬಹುದು. ನಮ್ಮ ದೇವಿಯವರ ಅಪ್ಪಣೆಯಾಗಿದೆ, ಎಂದು ಕಾಳೀಪ್ರಸಾದನನ್ನು ಕರೆದರು.

ಎಲ್ಲದಕ್ಕೂ ದೇವಿಯ ಅಪ್ಪಣೆ ಆ ದೇವಿ ಹೇಗಿರಬಹುದು? ಎಂದುಕೊಂಡು ಛತ್ರದ ಒಳಕ್ಕೆಹೋದ. ನೂರಾರು ಮಕ್ಕಳು ಗಬ–ಗಬನೆ ತಿನ್ನುತ್ತಿದ್ದರು. ವ್ಯವಸ್ಥಾಪಕರು ಅಲ್ಲಲ್ಲೇ ಓಡಾಡುತ್ತಾ ಬಡಿಸುವವರಿಗೆ ಅಡಿಗೆ ದಂಡವಾಗದಂತೆ ಬಡಿಸಿ ಎಂದು ಹೇಳುತ್ತಿದ್ದರು. ಮಕ್ಕಳು ಊಟಮಾಡಿ ಶಿಸ್ತಿನಿಂದ ಸಾಲಾಗಿ ಹೊರಕ್ಕೆ ಹೋದರು. ಕೆಲಸದವಳು ಆ ಜಾಗ ಶುಚಿ ಮಾಡಿದಳು. ಅದುವರೆಗೂ ಕಾಳೀಪ್ರಸಾದ ಒಂದು ಆಸನದಲ್ಲಿ ಕುಳಿತಿದ್ದ. ಅವನಿಗೆ ಆ ದೇವಿಯನ್ನು ಎಲ್ಲಿ ನೋಡುವುದೆಂದು ತಿಳಿದುಕೊಳ್ಳಲು ಕಾದಿದ್ದ ಸ್ವಾಮಿ... ಆ ದೇವಿಯನ್ನು ಎಲ್ಲಿ ನೋಡಬಹುದು ? ನಾನೊಂದು ಬಾರಿ ನೋಡಬೇಕು .. ಎಂದು ಕೇಳಿದ.

ಪ್ರತಿದಿನ ದೇವಿಯವರು ಸಭಾಂಗಣಕ್ಕೆ ಬಂದು ಅವರ ದರ್ಶನಕ್ಕಾಗಿ ಕಾದಿರುವವರನ್ನು ವಿಚಾರಿಸಿ ಅವರ ಕಷ್ಟ ಪರಿಹಾರ ಮಾಡುತ್ತಾರೆ. ಪ್ರಸಾದ ಕೊಡುತ್ತಾರೆ ದೊಡ್ಡ–ದೊಡ್ಡ ಅಧಿಕಾರಿಗಳೂ, ಶ್ರೀಮಂತರೂ ಸಹ ಕ್ಯೂನಲ್ಲಿ ಕಾದು ನಿಂತು ದೇವಿ ದರ್ಶನ ಮಾಡಿ ಹೋಗುತ್ತಾರೆ. ನೀವೂ ಸಹ ಆ ಸಮಯದಲ್ಲಿ ಕ್ಯೂನಲ್ಲಿ ನಿಂತು ನೋಡಬಹುದು ಎಂದು ಆ ವ್ಯವಸ್ಥಾಪಕರು ಹೇಳಿದರು.

ಸರಿ ನೋಡುತ್ತೇನೆ–ಎಂದು ಹೇಳಿ ಅಲ್ಲಿಂದ ಹೊರಟ ಕಾಳೀಪ್ರಸಾದ ನೇರ ಅಜ್ಜಿ ಮನೆಗೆ ಬಂದ. ಅಜ್ಜೀ! ಈ ಊರಲ್ಲಿ ಏನೇನೋ ಆಶ್ಚರ್ಯ ಸಂಗತಿ ನಿನಗೇನೂ ಗೊತ್ತಿಲ್ಲವೇನಜ್ಜೀ ?

ಏನಪ್ಪಾ ! ಅದೂ ? ಬಾ ಟೀ ಮಾಡಿದ್ದೇನೆ ಕುಡಿ, ಆಮೇಲೆ ಎಲ್ಲಾ; ಟೀ ಆಯಿತು ಅಜ್ಜೀ, ಖಾನಾವಳೀಲಿ ಕುಡಿದೆ. ಈ ಊರಲ್ಲಿ ದೇವಿ ರಾಜರಾಜೇಶ್ವರಿಯ ಪ್ರಭಾವ ಎಲ್ಲೆಲ್ಲೂ , ಯಾರು ಅಜ್ಜೀ ಆ ದೇವಿ?

ಹೌದಪ್ಪಾ; ಹಾಗಂತಾರೆ ಜನ, ಅವಳು ದಾನ ಧರ್ಮ, ಎಲ್ಲಾ ಮಾಡುತ್ತಾಳಂತೆ, ಅವಳಿಂದ ಕುಂಕುಮ ಪ್ರಸಾದ ತೆಗೆದುಕೊಳ್ಳಲು ಜನ ಕಾದು ನಿಂತಿರುತ್ತಾರಂತೆ. ನಾನಂತೂ ಮನೆ ಬಿಟ್ಟೇ ಹೋದವಳಲ್ಲ. ನನಗೇನಪ್ಪ ಗೊತ್ತು ?

ಸರಿ, ಅಜ್ಜಿ ನಾನು ಆ ದೇವಿಯನ್ನು ನೋಡಲೇ ಬೇಕು ನನಗೆ ಏನಾದರೂ ತಿನ್ನುವುದಕ್ಕೆ ಕೊಡು ಅಜ್ಜೀ....ಹಾಗೇ ಸುತ್ತಾಡಿಕೊಂಡು ಬರುತ್ತೇನೆ.

ಅಜ್ಜಿ ಆಗತಾನೇ ಮಾಡಿ ಗರಿ-ಗರಿ ದೋಸೆ ತಂದುಕೊಟ್ಟಳು ಈ ಮನೆ ತನ್ನ ಮನೆಯೇ ಎಂಬ ಭಾವನೆ ಬೇರೂರಿತ್ತು ಕಾಳೀಪ್ರಸಾದನಿಗೆ. ಅಜ್ಜಿಗೆ ಬೇಕಾದ್ದು ಸಾಮಾನು ತಂದುಕೊಡುತ್ತಿದ್ದ, ತನಗೆ ಬೇಕೂ ಎನ್ನಿಸಿದಾಗ ಬಂದು ಸಂಕೋಚವಿಲ್ಲದೆ ಕೇಳಿ ಊಟಮಾಡುತ್ತಿದ್ದ. ಈ ಮನೆಗಾಗಿ ಮುಂದೆ ಯೋಜನೆ ಹಾಕಿಕೊಳ್ಳಬೇಕೆಂದು ಯೋಚಿಸುತ್ತಿರುವಾಗಲೇ ಆ ದೇವಿ ಯಾರೆಂದು ನೋಡಲೇ ಬೇಕೆಂಬ ಗೀಳು ಹಿಡಿಯಿತು, ಕಾಳೀಪ್ರಸಾದ ನಿಗೆ. ರಾಜ ರಾಜೇಶ್ವರಿ ಬರುತ್ತಾರೆ ಎಂದಕಡೆಯಲ್ಲೆಲ್ಲಾ ಜನರ ಸಾಲು ಕಾದು ನಿಂತಿರುತ್ತಿತ್ತು. ಅವರನ್ನು ಕೇಳಿದ. ನೀವೆಲ್ಲಾ ಆ ದೇವಿಗಾಗಿ ಏಕೆ ಹೀಗೆ ಕಂಗಾಲಾಗಿ ಕಾಯುತ್ತೀರಿ ? ಎಂದು.

ಒಬ್ಬ-ಸ್ವಾಮಿ ! ನಾನು ಒಪ್ಪತ್ತಿನ ಕೂಳಿಗೂ ಗತಿಯಿಲ್ಲದ ಬಡವನಾಗಿದ್ದೆ. ನನ್ನ ಹೆಂಡತಿ ಮಕ್ಕಳನ್ನು ಸಾಕಲಾರದೆ ಓಡಿಸಿಬಿಟ್ಟಿದ್ದೆ. ನನ್ನ ಹೆಂಡತಿ ದೇವಿಯ ಪಾದ ಹಿಡಿದು ಗೋಳೋ ಎಂದು ಅತ್ತಳು. ನನ್ನ ಸಂಸಾರ ಕಾಪಾಡಿ ಎಂದು ಬೇಡಿಕೊಂಡಳು. ಆ ಕರುಣೆಯ ದೇವಿ ತಮ್ಮದೊಂದು ಛತ್ರವನ್ನು ನೋಡಿಕೊಳ್ಳುವ ಕೆಲಸವನ್ನು ನನಗೆ ಕೊಟ್ಟು ತಿಂಗಳಿಗೆ ಸಂಬಳ-ವಾಸಕ್ಕೆ ಮನೆ ಎಲ್ಲಾ ಕೊಟ್ಟಿದಾರೆ ಸ್ವಾಮಿ ! ಈಗ ನಮ್ಮ ಸಂಸಾರ ಸುಖವಾಗಿದ್ದೀವಿ. ಆ ದೇವಿಯ ಕರುಣೆ ಅಷ್ಟಿಷ್ಟಲ್ಲ, ನಾನು ಛತ್ರದ ಸಮಾಚಾರ ದೇವಿಗೆ ಒಪ್ಪಿಸಲು ಬಂದೆ. ಯಾರೇ ಆದರೂ ಕ್ಯೂನಲ್ಲಿ ನಿಲ್ಲಬೇಕು ಅಂದ.

ಇನ್ನೂ ಕೆಲವರು ಆ ದೇವಿ ಕೈಯಿಂದ ಮುಟ್ಟಿದ ಕುಂಕುಮ ಕೊಟ್ಟರೆ ಸಾಕು ಖಾಯಿಲೆಯೆಲ್ಲಾ ವಾಸಿಯಾಗಿಬಿಡುತ್ತೆ ಅಂದರು.

ಅಬ್ಬಬ್ಬ....ಅವಳ ಮಹಿಮೆಯನ್ನು ಎಲ್ಲರೂ ಹೊಗಳುವವರೇ? ಅವಳು ಇನ್ನೆಂತಹ ದೇವಲೋಕದ ದೇವಿಯಿರಬಹುದು, ಈ ದಿನ ಕಾದಿದ್ದು ಅವಳನ್ನು ನೋಡಿಯೇ ನೋಡಬೇಕೆಂದು ಕಾಳೀಪ್ರಸಾದ ಆ ಜನಗಳ ಕ್ಯೂನಲ್ಲಿ ತಾನೂ ನಿಂತ. ಆದರೆ ಇವನು ಸಾಮಾನ್ಯ ಮನುಷ್ಯನಂತಿರಲಿಲ್ಲ. ಉತ್ತಮ ಪೋಷಾಕನ್ನು ಧರಿಸಿ ತಲೆಗೆ ಬೆಲೆಬಾಳುವ ಜರಿಯ ಪಾಗನ್ನು ಸುತ್ತಿ ಎಲ್ಲರ ಮಧ್ಯೆ ಎತ್ತಿಕಾಣುವಂತೆ ನಿಂತಿದ್ದ, ಅಲ್ಲಿ ನಿಂತಿದ್ದವರು ಈತ ಯಾರೋ ರಾಜಕುಮಾರನಿರಬಹುದು ದೇವಿಯ ದರ್ಶನಕ್ಕಾಗಿ ಇವನೂ ಕ್ಯೂನಲ್ಲಿ ನಿಂತಿದ್ದಾನಲ್ಲ ! ಎಂದು ಗೌರವದಿಂದ ಸರಿದು ನಿಂತರು,

ಅದು ಒಂದು ದೊಡ್ಡ ಸಭಾಂಗಣ. ಎತ್ತರವಾದ ವೇದಿಕೆ ಬೆಲೆ ಬಾಳುವ ಕುಸುರಿ ಕೆಲಸದ ಜಾಲರಿಗಳಿಂದ ಅಲಂಕೃತವಾಗಿತ್ತು, ಮಖಮಲ್ಲಿನ ಹಾಸು ಹಾಸಲಾಗಿತ್ತು. ವೇದಿಕೆಯ ಮೇಲೆ ಎತ್ತರವಾದ ಸಿಂಹಾಸನ. ಅದಕ್ಕೆ ಮೆತ್ತನ್ನೆ ದಿಂಬು, ಪೀಠದ ಅತ್ತಿತ್ತ ಬೆಳ್ಳಿಯ ನಂದಾದೀಪ ಪ್ರಶಾಂತವಾಗಿ ಉರಿಯುತ್ತಾ ಅಲ್ಲಿಯ ಪವಿತ್ರತೆಯನ್ನು ಎತ್ತಿ ಹಿಡಿದಿತ್ತು. ಊದುಬತ್ತಿಯ–ಅಗರು ಚಂದನದ ಸು ವಾ ಸ ನೆ ಘಮ ಘಮಿಸುವ ವಾತಾವರಣ. ರಾಜರಾಜೇಶ್ವರೀ ಸಭಾಂಗಣ. ಎಂದು ಫಲಕ ಹಾಕಲಾಗಿತ್ತು ಇಂತಹ ಸಭಾಂಗಣದಲ್ಲಿ ನಿಂತ ಜನ ಭಯ ಭ ಕ್ತಿ ಯಿಂ ದ ದೇವಿಯ ಆಗಮನವನ್ನು ನಿರೀಕ್ಷಿಸುತ್ತಾ ನಿಂತಿದ್ದಾರೆ. ದೇವಿ ಮುದ್ರಿತ ಬೆಳ್ಳಿ ಬಿಲ್ಲೆಯನ್ನು ಧರಿಸಿದ ಸೇವಕರು ನಡುಕಟ್ಟಿ ನಿಂತು ಬರುವ ಜನರನ್ನು ನಮ್ರತೆಯಿಂದ ಸಾಲಾಗಿ ನಿಲ್ಲಿಸುತ್ತಿದಾರೆ. ಸಾಲಿನಲ್ಲಿ ನಿಲ್ಲಲೂ ಶಕ್ತಿಯಿಲ್ಲದ ರೋಗಿಗಳು– ಅಂಗವಿಕಲರು– ಆಬಾಲ ವೃದ್ಧರು, ಕಾರಿನಲ್ಲಿ ಬಂದಿಳಿದ ಕೋಟ್ಯಾಧೀಶ್ವರರವರೆಗೆ ಬೇಧವಿಲ್ಲದೆ ಸಾಲಿನಲ್ಲಿ ನಿಲ್ಲಬೇಕಾಗುತ್ತಿತ್ತು. ಸಾಲು ನಿಲ್ಲಿಸುವುದಕ್ಕಾಗಿ ಕಟ–ಕಟೆಯನ್ನು ನಿರ್ಮಿಸಲಾಗಿತ್ತು. ಭಕ್ತಾದಿಗಳು ಅವರವರ, ಶಕ್ತ್ಯಾನುಸಾರ ದೇವಿಗೆ ಕಾಣಿಕೆ ತರುತ್ತಿದ್ದರು.

ದೇವಿ ವೇದಿಕೆಗೆ ಬರುವುದಕ್ಕೆ ಮುಂಚಿತವಾಗಿ ಧರ್ಮದರ್ಶಿ ದೀನದಯಾಳುಶರ್ಮರು ವೇದಿಕೆಯ ಮುಂಭಾಗದಲ್ಲಿ ಬಂದು ನಿಂತು, ಸರ್ವರಿಗೂ ಕೈಯೆತ್ತಿ ಮುಗಿಯುತ್ತಾ ಭಕ್ತಾದಿಗಳು !....ಸರ್ವರಿಗೂ ನಮಸ್ಕಾರ ದೇವಿಯ ಧ್ಯಾನ–ಜಪ ಇದೀಗ ಮುಗಿಯಿತು. ನಿಮ್ಮ–ನಿಮ್ಮ ಅಭೀಷ್ಟಗಳನ್ನು ದೇವಿ ಪೂರೈಸುತ್ತಾಳೆ. ಆದರೆ ಭಕ್ತ ಸಮೂಹದಲ್ಲಿ ಒಂದು ವಿನಂತಿ. ದೇವಿಯು ಮಾತು ಮಾತಿಗೆ ಹೇಳುತ್ತಾರೆ "ದಯೆಯೇ ಧರ್ಮದ ಮೂಲ, ದಯೆಯಿಲ್ಲದ ಕಾರ್ಯಕ್ಕೆ ಬೆಲೆಯಿಲ್ಲ", ಎಂದು. ಆದ್ದರಿಂದ ಅಶಕ್ತರೂ, ಅಂಗವಿಕಲರೂ ಮೊದಲು ದೇವಿಯ ದರ್ಶನ ಮಾಡಿಕೊಂಡು ಹೋಗಲಿ ಅದಕ್ಕೆ ನಿಮ್ಮೆಲ್ಲರ ಒಪ್ಪಿಗೆ ಬೇಕು ಎಂದು ತಲೆಬಾಗಿ ಕೈ ಮುಗಿದರು.

ಆ ಧರ್ಮದರ್ಶಿ ಇನ್ನೂ ಯುವಕ, ತೇಜಸ್ವಿ–ಆತನೇ ದೇವಿಯ ಆಪ್ತ ಸೇವಕ, ( P.A ) ಮತ್ತು ವ್ಯವಸ್ಥಾಪಕನೂ ಆಗಿದ್ದ. ಆತ ತಲೆಗೆ ಜರಿಪೇಟ ಸುತ್ತಿ ಜರಿಯ ಪಂಚೆ ಉಟ್ಟು ಬೆಲೆ ಬಾಳುವ ಶಲ್ಯ ಹೊದ್ದಿದ್ದ. ಬೆರಳುಗಳಲ್ಲಿ ವಜ್ರದ ಉಂಗುರ ಥಳ–ಥಳನೆ ಹೊಳೆಯುತ್ತಿತ್ತು. ಗಾಂಭೀರ್ಯ ಮುಖದಲ್ಲಿ ಎದ್ದು ಕಾಣುತ್ತಿತ್ತು. ಕೈ ಎತ್ತಿ ಮುಗಿದು ನಿಮಗೆಲ್ಲಾ ಒಪ್ಪಿಗೆಯೇ ? ಎಂದು ಕೇಳಿದ.

ಓ ಹೋ ಆಗಬಹುದು, ಕರುಣಾಮಯಿ ರಾಜೇಶ್ವರಿದೇವಿಗೆ ಜೈ.... ಜೈ ಎಂದು ಘೋಷಿಸಿದರು.

ಹತ್ತಿರದ ಸಾಲಿನಲ್ಲಿಯೇ ನಿಂತಿದ್ದ ಕಾಳೀಪ್ರಸಾದ ಯಾವುದೋ ಲೋಕದಲ್ಲಿ ತಾನಿರುವಂತೆ ಭಾವಿಸಿದ. ಇದೇನು ವೈಭವ ? ಇಷ್ಟು ಜನ ತುಂಬಿದ್ದರೂ ಪ್ರಶಾಂತ ವಾತಾವರಣ ? ಒಂದು ಹೆಣ್ಣಿಗೆ ಇಷ್ಟು ಗೌರವವೇ ? ಅವಳೇನು ಕೋಟ್ಯಾಧೀಶ್ವರಳೇ ? ಅಬ್ಬ ಅವಳ ಕಾರ್ಯದರ್ಶಿಯೇ ಇಷ್ಟು ವೈಭವವಾಗಿದ್ದಾನಲ್ಲಾ ! ಇನ್ನು ಆ ದೇವಿ ಹೇಗಿರಬಹುದು ? ಎಂದು ಸ್ವಲ್ಪ ಗಟ್ಟಿಯಾಗಿಯೇ ಅಂದ.

ಅವನ ಪಕ್ಕದಲ್ಲಿಯೇ ನಿಂತಿದ್ದವರೊಬ್ಬರು...ಅಯ್ಯೋ! ನೀವು ನೋಡಿಲ್ಲವೇನೋ? ಪ್ರತ್ಯಕ್ಷ ದೇವಿಯೇ ಅವಳು. ಏನು ಪವಾಡವೋ! ಅವರು ಮುಟ್ಟಿದ್ದು ಅಮೃತ ಕೇಳ್ರೀ...ಈ ಭವ್ಯ ಭವನವನ್ನು ಒಬ್ಬರು ಮೇಯರ್ ಕಟ್ಟಿಸಿಕೊಟ್ಟರಂತೆ. ಮತ್ತೊಬ್ಬರು-ಹೌದು, ರೀ ನಾವು ಕಂಡ ಹಾಗೆ ಅವರ ಮಗಳಿಗೆ ಹುಚ್ಚು ಇತ್ತು. ದೇವಿಯ ಅನುಗ್ರಹದಿಂದಲೇ ವಾಸಿಯಾಯಿತು.

ಕಾಳೀಪ್ರಸಾದನ ವ್ಯಕ್ತಿತ್ವವನ್ನು ನೋಡಿ ಅಲ್ಲೊಬ್ಬರು ನೀವು ಶ್ರೀಮಂತರಂತೆ ಕಾಣುತ್ತೀರಿ, ನಿಮಗೇನು ತೊಂದರೆ ಯಿದ್ದರೂ ದೇವಿಯು ಕೃಪೆ ಮಾಡಿದರೆ ನಿಮ್ಮ ಕೆಲಸ ಕೈಗೂಡುತ್ತೆ. ನೋಡಿ ದೇವಿಯ ಪ್ರೀತಿನಂತೆ ಚುನಾವಣೆಯಲ್ಲಿ ಗೆದ್ದಿದ್ದಕ್ಕೆ ಮಂತ್ರಿಗಳೊಬ್ಬರು ಕಾರನ್ನೇ ತೆಗೆದುಕೊಟ್ಟ ರಂತೆ ಹೀಗೆ ಅಲ್ಲಿ ನಿಂತ ಜನ ಅವಳ ಗುಣ ಗಾನ ಮಾಡುತ್ತಿದ್ದರು. ಅಂತಹ ದೇವಿಯನ್ನು ಕಾಣಲು ಕಾಳೀಪ್ರಸಾದ ಕಾತುರನಾಗಿದ್ದ.

ವೇದಿಕೆಯ ತೆರೆ ಸರಿಯಿತು. ಎತ್ತರವಾದ ಪೀಠದ ಮೇಲೆ ದೇವಿ ಕುಳಿತಿದ್ದಾಳೆ. ಅಡಿಯಿಂದ ಮುಡಿಯವರೆಗೆ ರತ್ನ ಖಚಿತ ಆಭರಣಗಳನ್ನು ಧರಿಸಿದ ದೇವಿ ದಿವ್ಯ ತೇಜಸ್ಸಿನಿಂದ ಪ್ರತ್ಯಕ್ಷ ಲಕ್ಷ್ಮಿಯೇ ಧರೆಗಿಳಿದು ಬಂದಂತಿದ್ದಳು. ಕಾಳೀಪ್ರಸಾದ ಆಶ್ಚರ್ಯ ಚಕಿತನಾಗಿ ದೇವಿಯನ್ನು ಎವೆ ಯಿಕ್ಕದೆ ನೋಡಿದ, ಅವನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಛೆ....ಛೆ.. ಈ ದೇವಿಯ ಐಶ್ವರ್ಯದ ಮುಂದೆ ನನ್ನ ಧನರಾಶಿ ಯಾವ ಮಹಾ? ಅಷ್ಟಕ್ಕೂ ಅದು ಯಾವ ಸಾರ್ಥಕಕ್ಕೆ? ಮೊದಲು ನನಗೆ ಈ ದೇವಿಯ ದರ್ಶನ ಬೇಕು ಅವಳನ್ನು ಹತ್ತಿರದಿಂದ ನೋಡಬೇಕು, ಎಂದು ಕಾತರಿಸಿದ.

ದೇವಿಯ ಪಾದದ ಬಳಿ ಬೆಳ್ಳಿ ತಟ್ಟೆಯನ್ನಿಟ್ಟು ದೇವಿಯ ಪಾದ-ಗಳೆರಡನ್ನೂ ತಟ್ಟೆಯಲ್ಲಿ ಇರಿಸಲಾಗಿದೆ. ಬಂದ ಭಕ್ತಾದಿಗಳು ಪಾದಕ್ಕೆ ಪೂಜೆ ಮಾಡಿ ತಂದಿರುವ ಕಾಣಿಕೆಯನ್ನು ತಟ್ಟೆಯಲ್ಲಿ ಸಮರ್ಪಿಸಿ ಹೋಗುತ್ತಿದ್ದಾರೆ. ಕಾಣಿಕೆ ಒಂದೇ ರೂಪಾಯಿಯಾಗಿರಬಹುದು ಒಂದು ಲಕ್ಷವಾಗಿರಲೂ-

ಬಹುದು. ಅದರಿಂದ ದೇವಿಗೆ ಯಾವ ವ್ಯತ್ಯಾಸವೂ ಇಲ್ಲ. ದೇವಿಯು ಬಳಿ ಮರದ ಕಾಲುಮಣೆ ಮೇಲೆ ಬೆಳ್ಳಿಯ ನಾಣ್ಯಗಳಿಂದ ತುಂಬಿದ ಒಂದು ಹರಿವಾಣವನ್ನಿಡಲಾಗಿತ್ತು. ಶೀರಾ ಅಶಕ್ತರಾಗಿ, ಬಡತನದಲ್ಲಿ ನೊಂದವರಿಗೆ ಅವರ ಕಷ್ಟ-ಸುಖಗಳನ್ನು ವಿಚಾರಿಸಿ ತಾನೇ ಒಂದು ಹಿಡಿ ನಾಣ್ಯವನ್ನು ತೆಗೆದು ತನ್ನ ಕೈಯ್ಯಾರ ಕೊಡುತ್ತಿದ್ದಳು. ಆ ದಾನ ಮಾಡಿದ ಸಂತೋಷ ಅವಳ ಮುಖದಲ್ಲಿ ಮಂದಹಾಸ ಚೆಲ್ಲುತ್ತಿತ್ತು. ಅವರೆಲ್ಲಾ ಕೈ ಮುಗಿದು ಹರಿಸಿ ಹೋಗುತ್ತಿದ್ದರು. ಅದೇ ಕ್ಯೂನಲ್ಲಿದ್ದ ಶ್ರೀಮಂತರು, ವ್ಯಾಪಾರಿ, ಸೇಠ್ ಥೈಲಿಯಲ್ಲಿ ಹಣವನ್ನು ಅವಳ ಪಾದದಲ್ಲಿ ಸುರಿದು, ದೇವಿ ನಿಮ್ಮ ಅನುಗ್ರಹದಿಂದ ನನ್ನ ವ್ಯಾಪಾರದಲ್ಲಿ ಬಹಳ ಲಾಭ ಪಡೆದೆ. ನಿಮ್ಮ ಅಮೃತ ಹಸ್ತದಿಂದ ಕೊಟ್ಟ ಕುಂಕುಮ ಭಾಗ್ಯವೇ ಅದು-ಎಂದು ದೇವಿಯ ಪಾದ-ವನ್ನು ಕಣ್ಣಿಗೆ ಒತ್ತಿಕೊಂಡ.

ಧರ್ಮದರ್ಶಿಗಳ ಕಡೆ ತಿರುಗಿದಳು-ಏನಪ್ಪಣೆ ? ಎನ್ನುವಂತೆ ಕೈಕಟ್ಟಿ ಹತ್ತಿರ ಬಂದರು.

ನೋಡಿ ಈ ಸೇಟುಗೆ ಹೇಳಿ ಈ ಒಂದು ತಿಂಗಳ ವ್ಯಾಪಾರದ ಲಾಭ ವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲಾ ಕಟ್ಟಡಕ್ಕೆ ಸಹಾಯಾರ್ಥ ವಾಗಿ ಕೊಡ ಬೇಕೆಂದು, ಧರ್ಮದರ್ಶಿ ಸೇಟುಗೆ ಹೇಳಿದರು, ಹಾಗೆಯೇ ಆಗಲಿ ದೇವಿಯ ಅಪ್ಪಣೆ ಎಂದು ಕೈಮುಗಿದು ಹೊರಟ.

ದೇವಿಯು ಬಡವರಿಂದ ಒಂದು ಪೈಸೆ ಮುಟ್ಟದಿದ್ದರೂ ಇಂತಹ ಕೊಬ್ಬಿದ ಶ್ರೀಮಂತರಿಂದ ವಸೂಲಿ ಮಾಡಿ ಆ ಹಣವನ್ನು ಧರ್ಮಕಾರ್ಯಗಳಿ ಗಾಗಿ ಉಪಯೋಗಿಸುತ್ತಿದ್ದಳು. ಇದರಿಂದಾಗಿಯೇ ಜನರಿಗೆ ದೇವಿಯಲ್ಲಿ ಅಪಾರ ಭಕ್ತಿ ಎಲ್ಲಿ ನೋಡಿದರೂ ರಾಜರಾಜೇಶ್ವರಿ ಛತ್ರ, ಮಕ್ಕಳಿಗೆ ಊಟ, ಹರಕು ಬಟ್ಟೆಯಲ್ಲಿ ತಿರುಗುವ ಕಂಗಾಲಿಗಳಿಗೆ ಬಟ್ಟೆ. ಹೀಗೆ ದೇವಿಯ ಧರ್ಮ ಕೆಲಸ ಅಪಾರ.

ಕಾಳೀಪ್ರಸಾದ ಎಲ್ಲಾ ನೋಡುತ್ತಾ ನಿಂತೇ ಇದ್ದ. ಕ್ಯೂ ಎಲ್ಲಾ ಖಾಲಿಯಾಯಿತು. ಇವನು ಮಾತ್ರ ವೇದಿಕೆಯ ಪಕ್ಕದಲ್ಲಿ ನಿಂತೇ ಇದ್ದ.

ದೇವಿ ಈತನನ್ನು ಗಮನಿಸಿದಳು. ಸೇವಕರು ಇನ್ನೇನು ಸಭಾಂಗಣದ ಬಾಗಿಲು ಹಾಕುವ ಸಮಯ. ಧರ್ಮದರ್ಶಿಗಳೇ....ಆತ ಯಾರು ? ಆತನಿಗೆ ಏನು ಬೇಕಾಗಿದೆ ? ಎಂದು ಕೇಳಿ, ಎಂದು ದೇವಿ ಅವನ ಕಡೆ ನೋಡುತ್ತಾ ಹೇಳಿದಳು. ಧರ್ಮದರ್ಶಿಗಳು ವೇದಿಕೆಯ ಬಳಿ ಬಂದು ತಾವು ಯಾರು? ತಮಗೆ ಏನಾಗಬೇಕಾಗಿದೆ ? ಕ್ಯೂನಲ್ಲಿ ನಿಂತಿದ್ದರೂ ಏಕೆ ಬರಲಿಲ್ಲ ದೇವಿಯ ದರ್ಶನಕ್ಕೆ ? ಎಂದು ಕೇಳಿದರು.

ಕಾಳೀಪ್ರಸಾದ ಉತ್ಸಾಹದಿಂದ ಸ್ವಾಮಿ ಒಂದು ನಿಮಿಷ ಅವಕಾಶ ಕೊಡಿ ದೇವಿಯನ್ನು ಹತ್ತಿರದಿಂದ ದರ್ಶನ ಮಾಡಬೇಕು, ಎಂದ.

ನೀವು ಯಾರೋ–ಧನಿಕರು ಎಂದು ಕಾಣುತ್ತೆ. ಕ್ಯೂ ಮುಗಿದ ಮೇಲೆ ದೇವಿಯ ದರ್ಶನಕ್ಕೆ ಯಾರನ್ನೂ ಬಿಡುವುದಿಲ್ಲ. ನಿಮಗಾಗಿ ದೇವಿಯ ಅಪ್ಪಣೆಯಾಗಿದೆ. ಒಂದು ನಿಮಿಷ ಬನ್ನಿ, ಎಂದು ಧರ್ಮದರ್ಶಿಗಳು ಕಾಳೀಪ್ರಸಾದನನ್ನು ಕರೆದರು.

ಜನರೆಲ್ಲಾ ಮಾಡಿದ್ದನ್ನು ನೋಡಿಕೊಂಡಿದ್ದ. ಕೈ ಮುಗಿದು ದೇವಿಯ ಬಳಿ ಹೋಗಿ ನಿಂತ ಕೂಡಲೇ ಕಾಳೀಪ್ರಸಾದನಿಗೆ ಫಳಕ್ಕನೆ ಮಿಂಚೊಂದು ಹೊಳೆದಂತಾಯಿತು. ಅದು ಆ ದೇವಿಯ ತೇಜಸ್ಸು ಹಾಗಿತ್ತು. ತನ್ನನ್ನೇ ಮರೆತು ಕಾಳೀಪ್ರಸಾದ ದೇವಿಯನ್ನು ತದೇಕವಾಗಿ ನೋಡುತ್ತಾ ನಿಂತು ಬಿಟ್ಟ. ದೇವಿಯೂ ಅವನನ್ನು ದಿಟ್ಟಿಸಿ ನೋಡಿದಳು. ಅವಳ ಆ ಸುಂದರ ವಾದ ಕಣ್ಣುಗಳಲ್ಲಿ ಏನೋ ಪ್ರಶಾಂತತೆ ಮುಗ್ಧನೋಟ, ವಾತ್ಸಲ್ಯ ಪೂರಿತ ನೋಟ, ಜಗ ಜಗಿಸುವ ಆಭರಣಗಳಿಂದ ಅಲಂಕೃತವಾಗಿದ್ದರೂ ಗರ್ವ ವಿಲ್ಲದ ಮುಗ್ಧ ಸರಳತೆ. ಬಹಳ ಹೊತ್ತು ಕುಳಿತು ಭಕ್ತರಿಗೆ ಸಂದರ್ಶನ ನೀಡಿ ಪ್ರಸಾದ ಕೊಟ್ಟಿದ್ದರಿಂದ ದೇವಿ ಸುಸ್ತಾಗಿ ಸೋತಿದ್ದುದು ಮುಖಭಾವದಲ್ಲಿ ಕಾಣುತ್ತಿತ್ತು. ಕಾಳೀಪ್ರಸಾದ, ದೇವಿ ಎಂದರೆ ಎಷ್ಟು ವಯಸ್ಸಾಗಿರಬಹುದು ? ಎಂದುಕೊಂಡಿದ್ದ. ಹತ್ತಿರ ನೋಡಿದಾಗ–ದೇವಿ ಬಾಲೆಯೂ ಅಲ್ಲ ಪ್ರೌಢೆಯೂ ಅಲ್ಲ, ನವ ಯೌವ್ವನೆ. ಹದಿನಾರು ವರ್ಷದ ಷೋಡಶಿ ಆ ದೇವಿಯ ಆಕರ್ಷಣೆಯಿಂದ ಕಾಳೀಪ್ರಸಾದ ದಿಗ್ಮೂಢನಾದ.

ಅವನನ್ನು ನೋಡಿ ಧರ್ಮದರ್ಶಿಗಳು ಶ್ರೀಮಂತರೇ ಬೇಗ ದೇವಿಗೆ ನಮಸ್ಕಾರ ಮಾಡಿ ಹೊರಡಿ-ದೇವಿ ತುಂಬಾ ಆಯಾಸಗೊಂಡಿದ್ದಾರೆ ಎಂದರು.

ಕಾಳೀಪ್ರಸಾದ ದೇವಿಯ ಪಾದ ಮುಟ್ಟಿ ಕಣ್ಣಿಗೊತ್ತಿಕೊಂಡು ದೇವಿ ಕ್ಷಮಿಸಬೇಕು, ಕಾಣಿಕೆ ತರಬೇಕೆಂದು ನನಗೆ ಗೊತ್ತಿರಲಿಲ್ಲ, ಇದೋ ಈಗ ನನ್ನ ಬಳಿ ಇರುವುದು ಬೆಲೆ ಬಾಳುವ ಈ ವಜ್ರದುಂಗುರ, ಇದನ್ನೇ ತಮಗೆ ಒಪ್ಪಿಸುತ್ತೇನೆ. ಎಂದವನೇ ತನ್ನ ಕಿರು ಬೆರಳಿನಲ್ಲಿದ್ದ ವಜ್ರ-ದುಂಗುರವನ್ನು ತೆಗೆದು ಹಿಂದು ಮುಂದು ನೋಡದೆ ದೇವಿಯ ಕೈ-ತೆಗೆದು ಕೊಂಡು ಅವಳ ತೋರು ಬೆರಳಿಗೆ ಹಾಕಿದ.

ಧರ್ಮದರ್ಶಿಗಳು ಅವನನ್ನು ಗದರಿಸಿ, ಏನು ನೀವು ಮಾಡಿದ ಕೆಲಸ ದೇವಿಯನ್ನು ಯಾರೂ ಮುಟ್ಟುವ ಹಾಗಿಲ್ಲ ಏನು ಕಾಣಿಕೆಯಾದರೂ ಪಾದದ ಬಳಿ ತಟ್ಟೆಯಲ್ಲಿ ಇಡಬೇಕು ಎಂದು ಬೈದರು.

ಅದೆಲ್ಲಾ ನಾನು ತಿಳಿದವನಲ್ಲ ಕ್ಷಮಿಸಿ, ಎಂದ. ಕಾಳೀಪ್ರಸಾದನಿಗೆ ಇವರ ನಿಬಂಧನೆ ಕಟ್ಟುಪಾಡು ಅವೆಲ್ಲಾ ಯೋಚಿಸುವ ತಾಳ್ಮೆಯಾಗಲಿ, ಅದರಂತೆ ನಡೆದುಕೊಳ್ಳಬೇಕೆಂಬ ಭಯವಾಗಲಿ ಇರಲಿಲ್ಲ. ಅವನು ಬೆಳೆದ ರೀತಿಯೇ ಒರಟು ...ಅವನು ಯಾರಿಗೂ ತಲೆ ಬಾಗುವವನಲ್ಲ, ಆದರೆ ಆ ದೇವಿಯ ಮುಂದೆ ತನ್ನ ಎಲ್ಲಾ ದರ್ಪ-ರೋಷವನ್ನೂ ಅಡಗಿಸಿಟ್ಟು ಕೊಂಡ.

ಆದರೆ ಅವನ ಮುಖಭಾವ ದರ್ಪ-ಅಧಿಕಾರ ವ್ಯಕ್ತಿತ್ವವನ್ನು ಪ್ರತಿ ಬಿಂಬಿಸುತ್ತಿತ್ತು. ವೀರ ಯೋಧನ ಮೈಕಟ್ಟು, ಚಿಗುರು ಮೀಸೆಯ ಯೌವನ ಪ್ರತಿಭೆ ಸೂಸುವ ಸುಂದರ ಮುಖ, ರಾಜಯೋಗ್ಯವಾದ ಉಡುಪು. ತಲೆಗೆ ಸುತ್ತಿದ ಸಿರ ಪಾಗು, ನಿಂತ ನಿಲುವಿನಲ್ಲಿಯೇ "ದೇವಿಯು ನನಗೆ ಪ್ರಸಾದವನ್ನು ಕೊಡಬೇಕು" ಎಂದು ಕೈನೀಡಿದ, ಅದು ಅಧಿಕಾರ ವಾಣಿಯಂತಿತ್ತು.

ದೇವಿಯು ಅವನನ್ನು ತನ್ನ ಪ್ರಶಾಂತ ಕಣ್ಣುಗಳಿಂದ ತದೇಕವಾಗಿ ನೋಡಿದಳು. ಈತ ಸಾಮಾನ್ಯ ಯುವಕನಲ್ಲ, ತನ್ನ ತೋಳ್ಬಲದಿಂದ

ಪ್ರಪಂಚವನ್ನೇ ಗೆದ್ದು ಆಳುವ ಸಾಮರ್ಥ್ಯವುಳ್ಳವನಂತೆ ಕಾಣುತ್ತಾನೆ. ಈತ ನನ್ನು ಗೌರವಿಸಬೇಕಾಗಿತ್ತು, ಎಂದುಕೊಂಡು ನಮ್ಮ ಧರ್ಮದರ್ಶಿಗಳ ಮಾತಿಗೆ ಬೇಸರ ಪಟ್ಟುಕೊಳ್ಳಬೇಡಿ, ಕುಂಕುಮ ಪ್ರಸಾದ ತೆಗೆದುಕೊಳ್ಳಿ ನಿಮಗೆ ಒ ಳ್ಳೆ ಯ ದಾ ಗ ಲಿ" ಎಂದು ಹೇಳಿ ತನ್ನ ಮೃದುಹಸ್ತದಿಂದ ಕುಂಕುಮ ಪ್ರಸಾದವನ್ನು ಅವನ ಕೈಗೆ ಕೊಟ್ಟು ಬೆರಳಿನಲ್ಲಿ ಉಳಿದ ಕುಂಕುಮವನ್ನು ಅವನ ಹಣೆಗೆ ತಿಲಕದಂತೆ ಇಟ್ಟಳು,

ದೇವಿಗೆ ಈತನಮೇಲೆ ಏನು ಅನುಗ್ರಹ? ಎಂದು ಧರ್ಮದರ್ಶಿಗಳು ದುರ–ದುರನೆ ದೇವಿಯ ಕಡೆ ನೋಡಿದರು. ದೇವಿ ಮತ್ತೊಂದೂ ಮಾತನಾಡದೆ ತನ್ನ ಸೇವಕಿಯ ಜೊತೆ ಒಳಕ್ಕೆ ಹೊರಟು ಹೋದಳು.

ಕಾಳೀಪ್ರಸಾದ ವೇದಿಕೆಯಿಂದ ಇಳಿದು ಬಂದ ನಂತರ ಅಲ್ಲಿಯೇ ಇದ್ದ ಸೇವಕರು ಗೌರವ ಭಾವದಿಂದ "ಶ್ರೀಮಂತರೇ !–ಸಭಾಂಗಣದ ಬಾಗಿಲನ್ನು ಮುಚ್ಚಬೇಕಾಗಿದೆ. ತಾವು ದಯವಿಟ್ಟು ಹೊರಕ್ಕೆ ದಯ–ಮಾಡಿಸಬೇಕು" ಎಂದರು. ಕಾಳೀಪ್ರಸಾದನಿಗೆ ಆ ಸೇವಕರ ಗೌರವದ ಮಾತು ಅಷ್ಟಾಗಿ ಅರ್ಥವಾಗದಿದ್ದರೂ ತಾನು ಇನ್ನು ಇಲ್ಲೇ ಇರುವಂತಿಲ್ಲ' ಎಂಬುದಂತೂ ಗೊತ್ತಾಯಿತು ಹೊರಕ್ಕೆ ನಡೆದ. ಒಂದೊಂದೇ ಹೆಜ್ಜೆ ನಿಧಾನವಾಗಿ ನಡೆದ. ದೇವಿಯ ದರ್ಶನದಿಂದ ಪುಳಕಿತಗೊಂಡ ಅವನ ಮನಸ್ಸು ಅದೇ ದೃಶ್ಯವನ್ನು ಚಿಂತನ ಮಾಡುತ್ತಿತ್ತು. ನೆಲದ ಮೇಲೆ ನಡೆಯುತ್ತಿದ್ದರೂ ಎಲ್ಲೋ ಶೂನ್ಯದಲ್ಲಿ ತೇಲಿಕೊಂಡು ಹೋಗುವಂತಿತ್ತು. ಆ ದೇವಿಯ ಪ್ರತಿರೂಪ ಮತ್ತೆ ಮತ್ತೆ ಮೂಡಿ ಮಾಯವಾಗುತ್ತಿತ್ತು. ಹೌದು ಆ ದೇವಿ ಕಿಶೋರಿ, ಸುಂದರ ಯುವತಿ ಅವಳ ಕಣ್ಣಿನ ನೋಟವೇ ಆಕರ್ಷಣೀಯ, ಅಬ್ಬ... ಅವಳ ನುಣುಪಾದ ಬೆರಳಿಗೆ ತನ್ನ ಉಂಗುರ-ವನ್ನು ತೊಡಿಸಿದಾಗ ನನ್ನ ಮೈ ರೋಮಾಂಚಿತವಾಯಿತು. ತನ್ನ ಹಣೆಗೆ ಅವಳ ಬೆರಳು ಸೋಕಿತು, ಎಂದು ಆನಂದದಿಂದ ಹಣೆಯನ್ನು ಮೃದುವಾಗಿ ಮುಟ್ಟುತ್ತಾ ನಡೆದ ಕಾಳೀಪ್ರಸಾದ.

ರಾಜ ರಾಜೇಶ್ವರಿ ದೇವಿ ತನ್ನ ವಿಶ್ರಾಂತಿ ಗೃಹಕ್ಕೆ ಬಂದು ತನ್ನ ಉಡುಪು, ಒಡವೆಗಳನ್ನೂ ತೆಗೆಯದೆ ಪಲ್ಲಂಗದ ಮೇಲೆ ದಿಂಬೊರಗಿ

ಏನೋ ಯೋಚನೆಯಲ್ಲಿ ಮಗ್ನಳಾದಂತೆ ಕುಳಿತಿದ್ದಳು. ಧರ್ಮದರ್ಶಿಗಳು ಒಳಗೆ ಬಂದು "ಇದೇಕೆ ದೇವಿಯವರು ಹೀಗೆ ಕುಳಿತಿರಿ ? ಏನು ಯೋಚಿಸುತ್ತಿರುವಿರಿ ? ಆ ಯುವಕ ಉದ್ಧಟತನದಿಂದ ನಿಮ್ಮ ಕೈ ಮುಟ್ಟಿದ್ದಕ್ಕೆ ನಿಮಗೆ ಬೇಸರವಾಯಿತೇ.

ತಕ್ಷಣ ದೇವಿ ಸರಿಯಾಗಿ ಕುಳಿತು ಛೆ-ಛೆ ಅದೇನಿಲ್ಲ ಧರ್ಮದರ್ಶಿಗಳೇ ! ಆ ಶ್ರೀಮಂತರನ್ನು ನೀವು ಅಷ್ಟೊಂದು ಗದರಿ ನಿಕೃಷ್ಟವಾಗಿ ಮಾತಾಡಬಾರದಿತ್ತು.

ಓ .. ಹೋ....ಇದೇನು ದೇವಿಯ ಅನುಗ್ರಹ ಆ ಯುವಕನ ಮೇಲೆ? ನಾವು ಯಾರಿಗೇ ಆಗಲಿ ಅಷ್ಟೊಂದು ಸ್ವಾತಂತ್ರ್ಯವನ್ನು ಕೊಟ್ಟಿದ್ದಿಲ್ಲವಲ್ಲಾ.

ಇರಬಹುದು, ಆದರೆ ಆ ಯುವಕ ಸಾಮಾನ್ಯ ವ್ಯಕ್ತಿಯಲ್ಲ. ಕೋಟ್ಯಾಧೀಶ್ವರನಂತೆ ಕಾಣುತ್ತಾನೆ, ಇದೋ ನೋಡಿ, ಈ ವಜ್ರದುಂಗುರ "ರಾಜಧಿರಾಜರು ಧರಿಸುವಂತಹುದು' ಎಂದು ದೇವಿ ತನ್ನ ಕಿರು ಬೆರಳಿನಲ್ಲಿ ಧರಿಸಿದ್ದ ಉಂಗುರದ ಕೈಯನ್ನು ಮುಂದೆ ನೀಡಿದಳು.

ಧರ್ಮದರ್ಶಿ ದೇವಿಯ ಬೆರಳನ್ನು ಹಿಡಿದು ಉಂಗುರವನ್ನು ಪರೀಕ್ಷಿಸುವಂತೆ ನೋಡಿದರು. ಚಕಿತರಾಗಿ ಹೌದು-ಹೌದು, ಇದು ಬಹಳ ಬೆಲೆ ಬಾಳುವ ಉಂಗುರ. ಸಾಮಾನ್ಯ ಜನರಲ್ಲಿ ಇರಲು ಸಾಧ್ಯವೇ ಇಲ್ಲ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಉಂಗುರವನ್ನು ದೇವಿಗೆಂದು ಅರ್ಪಿಸಿದ ಆ ಶ್ರೀಮಂತ ಯಾರಿರಬಹುದು ?

ಧರ್ಮದರ್ಶಿಗಳೇ ! ಉಂಗುರದಷ್ಟೇ ಆ ಯುವಕನೂ ಘನವಂತ, ಕಾಣಿಕೆ ತರಲಿಲ್ಲವೆಂದು ಭಕ್ತಿ ಪರವಶನಾಗಿ ಉಂಗುರವನ್ನು ನನ್ನ ಬೆರಳಿಗೆ ತೊಡಿಸಿದ, ಅವನು ಯಾರೆಂದು ತಿಳಿದುಕೊಳ್ಳುವ ಮೊದಲೇ ಅವನನ್ನು ಅಟ್ಟಿ ಬಿಟ್ಟಿರಿ ?

ಅಂದರೆ ದೇವಿಗೆ ಆ ಯುವಕನ ಮೇಲೆ ಅನುಗ್ರಹವೋ ? ಒಂದು ವಿಧ ದರ್ಪ ಅಧಿಕಾರ ವಾಣಿಯಿಂದ ಧರ್ಮದರ್ಶಿ ಕೇಳಿದರು.

ದೇವಿಯೂ ಅಷ್ಟೇ ನಿರ್ಭಯದಿಂದ ನನ್ನದೇನು ! ಕೋಟ್ಯಾಧೀಶ್ವರರು ಬಂದಾಗ ನೀವೇ ಅವರನ್ನು ಓಲೈಸುತ್ತೀರಿ. ಅವರು ಲಕ್ಷಗಟ್ಟಲೆ ಕಾಣಿಕೆ

ನಿವೇಶನ ಎಲ್ಲಾ ಕೊಟ್ಟಾಗ ಅವರನ್ನು ಗೌರವಿಸಿ ನನ್ನಿಂದ ಪ್ರಸಾದ ರೂಪದಲ್ಲಿ ಅನೇಕ ವಿಧ ಮಂಗಳದ್ರವ್ಯ ಕೊಡಿಸುತ್ತೀರಿ. ಅದೂ ನಿಮ್ಮ ಅನುಗ್ರಹದಿಂದಲೇ ಅಲ್ಲವೇ ?

ಯಾವ ಕೋಟ್ಯಾಧೀಶ್ವರರೇ ಆಗಲಿ ದೇವಿಯವರಲ್ಲಿ ಭಕ್ತಿ ಭಾವ ದಿಂದ ಭಯಪಟ್ಟು ನಡೆದುಕೊಳ್ಳುತ್ತಾರೆ, ಆದರೆ ಆ ಯುವಕ ನೇರ ದೇವಿಯವರ ಹಸ್ತವನ್ನು ಮುಟ್ಟಿ ಉಂಗುರವಿಟ್ಟಿದ್ದು ಉದ್ಧಟತನ.

ಈಗ ದೇವಿ ಏನೊಂದೂ ಉತ್ತರ ಕೊಡದೆ ಒಂದು ನಿಮಿಷ ಹಾಗೆಯೇ ಕಣ್ಮುಚ್ಚಿ ಕುಳಿತಳು. ಅವಳಿಗೆ ಹಿಂದಿನ ಅನೇಕ ದೃಶ್ಯಗಳು ಮನಃ ಪಟಲದ ಮೇಲೆ ಮೂಡಿ ಅಳಿದುವು.

ದೇವಿ ತನ್ನ ಆಭರಣಗಳನ್ನು ಒಂದೊಂದಾಗಿ ಬಿಚ್ಚಿ ಒಂದು ತಟ್ಟೆ ಯಲ್ಲಿಡುತ್ತಾ ಧರ್ಮದರ್ಶಿಗಳತ್ತ ನೋಡದೆಯೇ ಅಲಕ್ಷ್ಯದಿಂದ–ಧರ್ಮದರ್ಶಿ ಗಳಿಗೆ ಹಣದ ಲಾಲಸೆ ಹೆಚ್ಚಿದಂತೆ ಕಾಣುತ್ತೆ. ನಿಜವಾದ ಭಕ್ತರನ್ನು ದೇವಿ ಅರ್ಥ ಮಾಡಿಕೊಳ್ಳಬಲ್ಲಳು, ಆ ಯುವಕ ಪ್ರಾಪಂಚಿಕ ವ್ಯವಹಾರ ವನ್ನೆ ತಿಳಿಯದ ಸರಳ ಮುಗ್ಧ ಬಾಲಕನಂತಿದ್ದ ಅವನಿಗೆ ನಾನು ಹೆಣ್ಣು, "ಎಂಬ ಪರಿವೆಯೇ ಇರಲಿಲ್ಲ. ದೇವಿಯೇ" ಎಂಬ ಭಕ್ತಿಯಿಂದ ಕೈಗೆ ಉಂಗುರ ತೊಡಿಸಿದ. ಇದರಿಂದ ಪ್ರಮಾದವೇನು ? ಎಂದು ಹೇಳಿ ಸ್ನಾನ ಗೃಹದತ್ತ ನಡೆದಳು.

ಮಮತಾ ಬಾ–ಸ್ನಾನಕ್ಕೆ ಅಣಿ ಮಾಡು, ಎಂದು ದೇವಿ ಸೇವಕಿ- ಯನ್ನು ಕರೆದಳು. ಹೊರಗಡೆ ಕಾದು ನಿಂತಿದ್ದ ಸೇವಕಿ ಇದೋ ಬಂದೆ. ಅಮ್ಮ....ಎಂದು ಸುಗಂಧ ತೈಲ, ಸುಖೋಷ್ಣ ಬಿಸಿನೀರು ಎಲ್ಲಾ ಸಿದ್ಧ ಪಡಿಸಿದಳು. ದೇವಿ ಯಾವಾಗಲೂ ಸಭೆ–ಸಂದರ್ಶನ ಮುಗಿಸಿ ಬಂದ ಮೇಲೆ ಆಯಾಸ ಪರಿಹಾರಕ್ಕಾಗಿ ಸ್ನಾನಮಾಡಿ ದೇವತಾ ಮಂದಿರದೊಳಗೆ ಕುಳಿತು ಏಕಾಂತವಾಗಿ ಪೂಜೆ–ಜಪ ಮಾಡುವ ಪರಿಪಾಠ. ಈ ಎಲ್ಲಾ ಐಶ್ವರ್ಯ ಸಂಪತ್ತಿಗಿಂತ ದೇವರ ಧ್ಯಾನದಲ್ಲಿ ದೇವಿ ನೆಮ್ಮದಿಯನ್ನು ಕಾಣುತ್ತಿದ್ದಳು.

ದೇವಿಯು ಬಿಚ್ಚಿಟ್ಟ ಒಡವೆಗಳನ್ನೆಲ್ಲಾ ಧರ್ಮದರ್ಶಿಗಳು ಒಂದೊಂದಾಗಿ ನೋಡಿ ಪೆಟ್ಟಿಗೆಯಲ್ಲಿಟ್ಟರು. ಉಂಗುರ ಮಾತ್ರ ದೇವಿಯು ಕೈಯ್ಯಲ್ಲೇ ಉಳಿದಿತ್ತು.

ಕಾಳೀಪ್ರಸಾದ ದೇವಿಯು ಗುಂಗಿನಲ್ಲಿಯೇ ಅಜ್ಜಿಯು ಮನೆ ಸೇರಿದ, ಅವನ ಮನಸ್ಸು ಒಡೆದ ಹಾಲಿನಂತಾಗಿತ್ತು. ಇತ್ತ ಮೊಸರೂ ಅಲ್ಲ ಇತ್ತ ಹಾಲೂ ಅಲ್ಲ. ಪ್ರಾಪಂಚಿಕ ವ್ಯವಹಾರವನ್ನರಿತ ವಿದ್ಯಾವಂತನೂ ಅಲ್ಲ. ಏನೂ ತಿಳಿಯದ ಮೂಢನೂ ಅಲ್ಲ.

ಕಾಳೀಪ್ರಸಾದ ಬಾಲಕನಾಗಿದ್ದಾಗ, ದೇವಿಪ್ರಸಾದ ಬರೀ ಸಾಹಸ–ಧೈರ್ಯ ಶೌರ್ಯದ ವಿದ್ಯೆಯಲ್ಲಿಯೇ ತೊಡಗಿಸಿದ್ದು. ಸ್ವಲ್ಪ ದೊಡ್ಡವನಾದ ಮೇಲೆ ಕಾಳೀಪ್ರಸಾದ ಅಕ್ಷರ ವಿದ್ಯೆ ಕಲಿಯಬೇಕೆಂದು ತುಂಬಾ ಆಸೆ ಪಟ್ಟ. ದೇವಿಪ್ರಸಾದನಿಗೆ ಮಗನಮೇಲೆ ಅಪಾರ ಪ್ರೀತಿ, ಹೇಗಾದರೂ ಮಗನಿಗೆ ವಿದ್ಯೆಕಲಿಸಬೇಕೆಂದು ಮನಸ್ಸು ಮಾಡಿದ.

ಒಂದು ಹಳ್ಳಿಯಲ್ಲಿ ಒಬ್ಬರು ವಿದ್ಯಾವಂತ ಗುರುಗಳು ಅಲ್ಲಿಯ ಕೆಲವೇ ಮಕ್ಕಳಿಗೆ ವಿದ್ಯೆ ಕಲಿಸುತ್ತಾ ತಮ್ಮ ಜಮೀನು ವ್ಯವಸಾಯ ನೋಡಿಕೊಂಡು ಹಳ್ಳೀ ಜೀವನ ನಡೆಸುತ್ತಿದ್ದರು. ಅದನ್ನು ಹೇಗೋ ಪತ್ತೆ ಮಾಡಿದ ದೇವಿಪ್ರಸಾದ,

ಒಳ್ಳೆ ಸಭ್ಯಸ್ತನಂತೆ ವೇಷ ಹಾಕಿ 10 ವರ್ಷದ ಕಾಳೀಪ್ರಸಾದನನ್ನು ಕರೆದುಕೊಂಡು ಆ ಗುರುಗಳ ಬಳಿ ಹೋದ. ಅವರಿಗೆ ಸ್ವಲ್ಪ ಹಣ ಕೊಟ್ಟು ವಿದ್ಯೆ ಹೇಳಿಕೊಡಲು ಒಪ್ಪಿಸಿದ, ಆದರೆ ವಾರಕ್ಕೆ ಒಂದು ದಿನ ಮಾತ್ರ ನಮ್ಮ ಹುಡುಗನನ್ನು ಕಳುಹಿಸಿಕೊಡಲು ಸಾಧ್ಯ ಎಂದ, ನಿಮ್ಮಿಷ್ಟ ಎಂದರು ಗುರುಗಳು,

ಚುರುಕಾಗಿ ತೇಜಸ್ವಿಯಾಗಿದ್ದ ಕಾಳೀಪ್ರಸಾದನನ್ನು ಗುರುಗಳು ತುಂಬಾ ಪ್ರೀತಿಸುತ್ತಿದ್ದರು. ಹರಿಪ್ರಸಾದ, ಅವನ ಹೆಸರು ಎಂದು ಹೇಳಿದ್ದ ದೇವಿಪ್ರಸಾದ. ಕೆಲವು ತಿಂಗಳು ಕಳೆಯುವುದರಲ್ಲಿ ಕಾಳೀಪ್ರಸಾದ ಚೆನ್ನಾಗಿ ಓದುವುದನ್ನೂ ಬರೆಯುವುದನ್ನೂ ಕಲಿತ, ಅವನಿಗೆ ವಿದ್ಯೆಯಲ್ಲಿ ಆಸಕ್ತಿ ಹೆಚ್ಚಾಯಿತು. ಒಂದು ದಿನ ಅವನು ತಂದೆಯೊಂದಿಗೆ ಅಪ್ಪಾ ! ನಾನು

ಇನ್ನೂ ಚೆನ್ನಾಗಿ ವಿದ್ಯೆ ಕಲಿಯಬೇಕು ಪ್ರತಿದಿನ ಗುರುಗಳ ಬಳಿಗೆ ಕಳುಹಿಸಪ್ಪಾ ! ಅಂದ.

ದೇವಿಪ್ರಸಾದನಿಗೆ ಏಕೋ ಎದೆ ಝಗ್....ಎಂದಿತು. ಇದೇನು ನಾನು ಇವನನ್ನು ತಯಾರು ಮಾಡಿದ ರೀತಿ ಏನು ? ಇವನು ವಿದ್ಯೆ ಕಲಿತು ಉದ್ಯೋಗ ಮಾಡುವುದಕ್ಕಾಗಿಯೋ ? ಛೆ–ಛೆ–ಇದಂತೂ ಸಾಧ್ಯವಿಲ್ಲ. ಮಗನನ್ನು ಕರೆದು ಹತ್ತಿರ ಕೂರಿಸಿಕೊಂಡ. ನೋಡು....ಕಾಳೀ ನಿನಗೆ ಹೇಳಿಕೊಡುವುದು ಇನ್ನೂ ಬೇಕಾದಷ್ಟಿದೆ. ನೀನು ವಿದ್ಯೆ ಕಲಿತಿದ್ದು ಸಾಕು. ಕುದುರೆ ಸವಾರಿ ಚೆನ್ನಾಗಿ ಕಲಿತುಕೋ . ನೀನು ಪಾಠಕ್ಕೆ ಹೋಗುವುದನ್ನು ನಿಲ್ಲಿಸಿದ್ದೇನೆ, ಎಂದು ಪ್ರೀತಿಯಿಂದ ತಲೆ ನೇವರಿಸಿದ. ಆಯಿತು ಅಪ್ಪನ ಇಷ್ಟಕ್ಕೆ ಎಂದೂ ಬದಲು ಹೇಳುವವನಲ್ಲ ಕಾಳಿ. ಅಷ್ಟಕ್ಕೆ ಅವನ ವಿದ್ಯಾಭ್ಯಾಸ ನಿಂತಿತು. ಅಕ್ಷರ ವಿದ್ಯೆ ಬಂತು, ಆದರೆ ವಿದ್ಯಾವಂತನಾಗಲಿಲ್ಲ, ಕಾಳೀಪ್ರಸಾದ.

ಅಜ್ಜಿಯು ಮನೆಗೆ ಬಂದಕೂಡಲೇ ಬಹಳ ಖುಷಿಯಿಂದ ಅಜ್ಜಿಯನ್ನು ಆನಾಮತ್ತು ಎತ್ತಿಕೊಂಡು ಮನೆಯೆಲ್ಲಾ ತಿರುಗಿಬಿಟ್ಟ, ಅಜ್ಜಿಗೆ ಏನೊಂದೂ ಅರ್ಥವಾಗಲಿಲ್ಲ. ಇದೇನೋ ಕುಮಾರ ! ಏನಾಗಿದೆ ನಿನಗೆ ? ಬಿಡು. ಮಾತಾಡೋ ಎಂದಳು ಅಜ್ಜಿ.

ಹೌದು ಅಜ್ಜೀ. ನನಗೆ ಈ ದಿನ ತುಂಬಾ ಖುಷಿಯಾಗಿದೆ. ನೋಡು ನನ್ನ ಹಣೆಯ ಮೇಲೆ ಏನಿದೆ ? ಎಂದು ಅಜ್ಜಿಗೆ ಮುಖ ತೋರಿಸಿದ.

ಯಾರೋ ನಿನಗೆ ಕುಂಕುಮ ಇಟ್ಟವರು ? ಅದೇ ಅಜ್ಜಿ ರಾಜ–ರಾಜೇಶ್ವರಿದೇವಿ, ಅವಳನ್ನು ನಾನು ಈವತ್ತು ಹತ್ತಿರದಿಂದ ನೋಡಿದೆ, ಅಬ್ಬ ! ಎಷ್ಟು ಚೆನ್ನಾಗಿದ್ದಾಳೆ ಅಂದರೆ–ಅವಳನ್ನು ನೋಡುತ್ತಲೇ ಇರಬೇಕೆನ್ನಿಸುತ್ತೆ ಅಜ್ಜೀ... ನೋಡು ಈ ತಿಲಕವನ್ನು ಅವಳೇ ನನ್ನ ಹಣೆಗೆ ಇಟ್ಟಳು ಅಜ್ಜೀ....ಎಂದು ಒಂದೇ ಸಮನೆ ಬಡಬಡಿಸಿದ ಕಾಳೀಪ್ರಸಾದ.

ಅಜ್ಜಿಗೆ ಆಶ್ಚರ್ಯ ಅವನ ಮುಖವನ್ನೇ ನೋಡುತ್ತಾ, ಇದೇನೋ ಕುಮಾರ ನಿನ್ನ ಪ್ರತಾಪ ? ಏನೇನೋ ಜನ ಹೇಳಿಕೊಳ್ಳುತ್ತಾರೆ. ಆ

ದೇವಿಯನ್ನು ನೋಡಲು ಜನ ಕಾದು ನಿಂತಿರುತ್ತಾರೆ, ಕೋಟ್ಯಾಧೀಶ್ವರರು ಅವಳ ಕಾಲ ಬಳಿ ಹಣ ಸುರಿಯುತ್ತಾರೆ ಎಂದು,

ಹೌದು ಅಜ್ಜೀ! ಅದೆಲ್ಲಾ ನಿಜ. ನಾನೇ ನೋಡಿದೆ. ಆ ದೇವಿಯ ಮೈಮೇಲೆ ರತ್ನ ಖಚಿತ ಒಡವೆಗಳು ಜ್ವಲಿಸುತ್ತಿದ್ದುವು. ಜನ ಕಾದು ನಿಂತಿದ್ದರು. ಏನೋ ಕುಮಾರ! ನಿನ್ನ ಚರಿತ್ರೆಯೇ ನನಗೆ ಅರ್ಥವಾ-ಗೋಲ್ಲಪ್ಪ, ಆ ದೇವಿ ಕೋಟ್ಯಾಧೀಶ್ವರಳು ಎನ್ನುತ್ತಾರೆ ಅಂತಹವಳ ಸಹವಾಸ ನಮಗ್ಯಾಕೋ? ತೆಪ್ಪಗೆ ನನ್ನ ಜೊತೆಯಲ್ಲಿ ಹಾಯಾಗಿರು.

ಅಜ್ಜೀ....ನಾವೂ ಕೋಟ್ಯಾಧೀಶ್ವರರೇ....ಆ ದೇವಿಗಿಂತ ನಾವೇನೂ ಕಮ್ಮಿ ಇಲ್ಲ, ಸುಮ್ಮನಿರಜ್ಜೀ

ಅಯ್ಯೋ ನೀನು ಯಾವ ಸೀಮೆ ಧನಂದಾರಿಯೋ? ನಂಗಂತೂ ಗೊತ್ತಿಲ್ಲ, ಬಾ–ಊಟಮಾಡು, ಯಂಕ–ನಾನು ಇಬ್ಬರೂ ನಿನಗಾಗಿ ಕಾದು ಕುಳಿತಿದ್ದೆವು.

ಅಜ್ಜೀ ಇನ್ನುಮೇಲೆ ನನ್ನನ್ನು ಯಾವುದಕ್ಕೂ ಕಾಯಬೇಡ, ನಾನು ಯಾವಾಗಲೋ ಬರುತ್ತೇನೆ, ಇಲ್ಲದಿದ್ದರೆ ಬರುವುದೇ ಇಲ್ಲ, ಏನೋ! ಯಂಕ ನಿನಗಾದರೂ ಬುದ್ಧಿ ಬೇಡವೇ? ಅಜ್ಜಿಯನ್ನು ಊಟಮಾಡು ಎಂದು ಹೇಳೋಕೆ ಗೊತ್ತಾಗೊಲ್ಲವೇ? ಗದರಿದ.

ಯಂಕ ನಮ್ರ ಸೇವಕ, ತನ್ನ ಧಣಿ ಮಾತಿಗೆ ಎದುರಿಲ್ಲ. ಆಯಿತು ಧಣೀ ಇನ್ನು ಮೇಲೆ ಹೀಗೆ ಮಾಡೋಲ್ಲ.

❋ ❋ ❋ ❋

ರಾಜರಾಜೇಶ್ವರಿ ಊಟವಾದ ನಂತರ ತನ್ನ ವಿಶ್ರಾಂತಿ ಗೃಹದಲ್ಲಿ ಪಲ್ಲಂಗದ ಮೇಲೆ ಅಂಗಾತ ಮಲಗಿ ಮೇಲೆ ನೋಡುತ್ತಾ ಏನೋ ಯೋಚಿಸುತ್ತಿದ್ದಳು. ಸೇವಕಿ ಬಂದು ಅಮ್ಮಾ ಗಾಳಿ ಬೀಸಲೇ? ಎಂದಳು,

ಬೇಡ ಬೇಡ ನೀನು ಬಾಗಿಲು ಮುಂದೆ ಮಾಡಿ ಹೋಗು, ಎಂದು ಅಪ್ಪಣೆ ಮಾಡಿದಳು. ಸ್ವಲ್ಪ ಹೊತ್ತಿಗೆಲ್ಲಾ ಧರ್ಮದರ್ಶಿಗಳು ಒಳಕ್ಕೆ ಬಂದರು. ಅವರ ಕೈಯಲ್ಲಿ ಹಣ ತುಂಬಿದ ಕೈಚೀಲ ಇತ್ತು, "ದೇವಿಯ

ಥರಿಗೆ ಒಪ್ಪಿಸಿ ಹೋಗೋಣಾಂತ ಬಂದೆ. ಆಮೇಲೆ ವಿಶ್ರಾಂತಿಯಾಗಲಿ" ಎಂದರು.

ದೇವಿ ಮಲಗಿದ್ದಂತೆಯೇ ಧರ್ಮದರ್ಶಿಗಳೇ.. ಸುಮ್ಮನೆ ನನಗೆ ಯಾಕೆ ತೊಂದರೆ ಕೊಡುತ್ತೀರಿ. ಎಲ್ಲಾ ವ ಹಿ ವಾ ಟ ನ್ನೂ ನಿಮಗೇ ಒಪ್ಪಿಸಿದ್ದೇನಲ್ಲ.

ಆದರೂ ನಿಮ್ಮ ಒಪ್ಪಿಗೆ ಇಲ್ಲದೆ ನಾನೇನೂ ಮಾಡುವುದಿಲ್ಲ. ಈ ದಿನ ನಿಮ್ಮ ಪಾದಪೂಜೆಯ ತಟ್ಟೆಯಲ್ಲಿ 3500 ರೂಪಾಯಿಗಳು-ಬಂದಿವೆ, ತೆಗೆದುಕೊಳ್ಳಿ ಎಂದರು.

ಧರ್ಮದರ್ಶಿಗಳೇ ! ಬಂದ ಹಣ ನಮ್ಮಲ್ಲಿ ಉಳಿಯಬಾರದು. ಈ ಹಣದಿಂದ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿ.

ಸರಿ ಸಂತೋಷ–ನಿಮ್ಮ ಧ್ಯೇಯ–ಧರ್ಮಗಳಿಂದಲೇ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದೀರಿ, ಗತ ಕಾಲವು ನಿಮ್ಮ ಮನಸ್ಸಿನ ಮೇಲೆ ತುಂಬಾ ಪರಿಣಾಮ ಮಾಡಿಬಿಟ್ಟಿದೆ.

ಇರಬಹುದು....ಅದು ನಿಮಗೂ ಆಗಿಲ್ಲವೇ? ಏಕೆ ನಿಂತೇ ಇದ್ದೀರಿ? ಕುಳಿತುಕೊಳ್ಳಿ.

ಇಲ್ಲ–ಇಲ್ಲ ನೀವು ವಿಶ್ರಾಂತಿ ಪಡೆಯಿರಿ, ದೇವಿ ತನ್ನ ಬೆರಳಿನಲ್ಲಿದ್ದ ಉಂಗುರವನ್ನು ತಿರುಗಿಸಿ ನೋಡುತ್ತಿದ್ದಳು, ಧರ್ಮದರ್ಶಿಗಳೇ ! ಈ ಉಂಗುರ ಕೊಟ್ಟ ವ್ಯಕ್ತಿ ಯಾರು ಎಂದು ತಿಳಿಯಿತೇ ? ಕುತೂಹಲದಿಂದ ಕೇಳಿದಳು.

ಇಲ್ಲ ತಿಳಿಯಲಿಲ್ಲ–ಅಂತೂ ಆತ ಈ ಊರಿಗೆ ಹೊಸಬ. ಬಹಳ ಶ್ರೀಮಂತನಿರಬಹುದು. ಈ ಉಂಗುರಕ್ಕೆ ಬೆಲೆ ಕಟ್ಟಲಾಗದು, ನೋಡಿ ನಕ್ಷತ್ರದಂತೆ ಹೊಳೆಯುತ್ತಿದೆ.

ಅದಕ್ಕೇ ನಾನು ಕೇಳಿದ್ದು–ಅವರ ಪರಿಚಯ ನಮಗಾದರೆ ನಮ್ಮ ಧರ್ಮಕಾರ್ಯಗಳಿಗೆ ಅವರಿಂದ ಹಣ ದೊರಕಬಹುದು.

ಧರ್ಮದರ್ಶಿಗಳಿಗೆ ದೇವಿಯ ವಿಷಯದಲ್ಲಿ ಅಪಾರ ನಂಬಿಕೆ. ಅವಳ ಎಲ್ಲಾ ವಹಿವಾಟುಗಳಿಗೆ ಅವರದೇ ಬೆಂಬಲ, ಅವರ ವಿರೋಧವಾಗಿ

ದೇವಿಯು ಎಂದೂ ನಡೆದುಕೊಂಡವಳಲ್ಲ. ಧರ್ಮದರ್ಶಿಗಳು ಅವಳ ಆತ್ಮೀಯ ಬಂಧು ಇದ್ದಂತೆ ಅವರಲ್ಲಿ ಗೌರವ ಭಾವ ಅವಳಿಗೆ ಧರ್ಮದರ್ಶಿಗಳು ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಳಿತು ಕೇಳಿದರು. ನಾಳಿನ ಕಾರ್ಯಕ್ರಮದ ಸಿದ್ಧತೆಯೇನು ?

ದೇವಿಯು ಹಾಗೆಯೇ ಎದ್ದು ಕುಳಿತು ಅದೇ ನಿಮ್ಮೊಂದಿಗೆ ಆಲೋಚಿಸಿ ಏರ್ಪಾಡು ಮಾಡೋಣವೆಂದಿದ್ದೆ, ನೀವೇ ಬಂದಿರಿ. ದೇವಿ ಅಲ್ಲೇ ತಟ್ಟೆಯಲ್ಲಿಟ್ಟದ್ದ ದ್ರಾಕ್ಷಿಗೊಂಚಲಿನಿಂದ ಒಂದೊಂದೇ ಹಣ್ಣು ಬಾಯಿಗೆ ಹಾಕಿಕೊಳ್ಳುತ್ತಾ ಧರ್ಮದರ್ಶಿಗಳ ಕಡೆ ತಟ್ಟೆಯನ್ನು ಹಿಡಿದು ತೆಗೆದುಕೊಳ್ಳಿ, ಎಂದಳು.

ಸಧ್ಯ ನನಗಿರಲಿ, ನಿಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿ ನೀವು ಸರಿಯಾಗಿ ಊಟ ತಿಂಡಿಯನ್ನು ಮಾಡುತ್ತಿಲ್ಲ, ಹೀಗಾದರೆ ನಮ್ಮ ಮುಂದಿನ ಕಾರ್ಯಗಳಿಗೆ ನಿಮಗೆ ಶಕ್ತಿ ಬೇಡವೇ ? ಆತ್ಮೀಯತೆಯಿಂದ ಹೇಳಿದರು.

ಅದಿರಲಿ ಧರ್ಮದರ್ಶಿಗಳೇ ಆ ಉಂಗುರ ಕೊಟ್ಟ ಯುವಕ ಯಾರು? ಎಂದು ಪತ್ತೆ ಮಾಡಿ. ನಾಳೆ ರಾಜರಾಜೇಶ್ವರಿ ಛತ್ರದ ಸಭಾ ಭವನದಲ್ಲಿ ಪ್ರವಚನವಿದೆ. ಎಂದು ಪ್ರಕಟಿಸಿ. ಜನಗಳನ್ನು ಸುಸಂಸ್ಕೃತರನ್ನಾಗಿ ಪರಿವರ್ತಿಸುವ ಜವಾಬ್ದಾರಿಯೂ ನಮಗಿರಬೇಕು ಅಲ್ಲವೇ ?

ಸರಿ ಆದಕ್ಕೆ ಎಲ್ಲಾ ಏರ್ಪಾಡನ್ನೂ ಮಾಡುತ್ತೇನೆ ನೀವು ಆರಾಮವಾಗಿ ಮಲಗಿ.

ಎಲ್ಲಿ ಮಲಗುವುದು ! ನಮ್ಮ ವೃದ್ಧಾಶ್ರಮದಲ್ಲಿ ಒಬ್ಬರು ಮುದುಕರಿಗೆ ವಿಪರೀತ ಜ್ವರವಂತೆ. ಅವರು ದೇವಿಯನ್ನು ಒಂದು ಸಲ ನೋಡಬೇಕೆಂದು ಹಂಬಲಿಸುತ್ತಾರಂತೆ ಪಾಪ ! ಸಾಯಂಕಾಲ ಹೋಗಿ ಬರೋಣ.

ಆಯಿತು, ಬರ ಬರುತ್ತಾ ದೇವಿಯು ಕರುಣಾಮಯಿ ಆಗಿಬಿಟ್ಟರು. ಇರಲಿ ಈಗ ನಾನು ಹೋಗಲೇ ? ಎಂದು ಧರ್ಮದರ್ಶಿಗಳು ಬಾಗಿಲು ಮುಂದೆ ಮಾಡಿ ಹೊರಟರು.

ದೇವಿಯು ಆರಾಮವಾಗಿ ಮಲಗಿದ್ದರೂ ಅವಳ ಮನಸ್ಸು ನಾಲ್ಕಾರು ದಿಕ್ಕಿಗೆ ಓಡುತ್ತಿತ್ತು. ನಾಳೆ ಪ್ರವಚನಕ್ಕೆ ಒಳ್ಳೆಯ ಧಾರ್ಮಿಕ ವಿಷಯ ಗಳನ್ನು ಆರಿಸಿಕೊಂಡು ಜನರಲ್ಲಿ ಒಳ್ಳೆಯ ನಡತೆ ಸಂಸ್ಕೃತಿಯನ್ನು ಮೂಡಿಸುವಂತಿರಬೇಕು. ಧರ್ಮಕಾರ್ಯಗಳಿಗೆ ಜನರನ್ನು ಪ್ರಚೋದಿಸ ಬೇಕು. ಅದರಿಂದ ಬಡವರ ಉದ್ಧಾರವಾಗಬೇಕು, ರೋಗಿಗಳ ಶಿಶ್ರೂಷಾ ಶಿಬಿರದಲ್ಲಿ ಉಪಚರಿಸುವ ದಾದಿಯರು ಇಲ್ಲವಂತೆ ಅಲ್ಲಿಗೆ ಸರಿಯಾದ ಬಡ ಹೆಣ್ಣು ಮಕ್ಕಳನ್ನು ಆರಿಸಿ ಕೆಲಸಕ್ಕೆ ನೇಮಿಸಬೇಕು. ಇವೆಲ್ಲಾ ಯೋಚನೆಯ ಮಧ್ಯೆ-ಮನಸ್ಸಿನಾಳದಲ್ಲಿ ಕಂಡೂ ಕಾಣದಂತಹ ವ್ಯಕ್ತಿಯ ಚಿತ್ರ ಒಂದು ಕ್ಷಣದಲ್ಲಿ ಮೂಡಿ ಮಾಯವಾಗುತ್ತಿತ್ತು. ಅದು ಕಾಳೀಪ್ರಸಾದನ ಚಹರೆ-ಅದರೆ ಅದು-ಅಸ್ಪಷ್ಟ ಒಂದೇ ನಿಮಿಷ-ನೇರ ಅವನ ಮುಖ- ವನ್ನು ನೋಡಿ ಕುಂಕುಮ ಪ್ರಸಾದ ಅವನ ಹಣೆಗೆ ಬೆರಳಗಲ, ತಿಲಕ ವಿಟ್ಟಿದ್ದು. ಆ ಬಿಳುಪಾದ ವಿಶಾಲ ಹಣೆಗೆ ಕುಂಕುಮ ತಿಲಕ ಎಷ್ಟು ಶೋಭಿಸುತ್ತಿತ್ತು. ತೇಜಃ ಪುಂಜ ಆ ಕಣ್ಣುಗಳ ನೋಟ ಅಧಿಕಾರ-ದರ್ಪ ಸೂಸುವಂತಿತ್ತು, ನಾನು ನೇರ ತಲೆ ಎತ್ತಿ ಆತನನ್ನು ನೋಡಿದ್ದು ಒಂದು ಕ್ಷಣ. ಅವನ ಚಿತ್ರ ನನ್ನ ನೆನಪಿನ ಸುಳಿಯಲ್ಲಿ ಸುತ್ತಿ ಸುತ್ತಿ ಮಸುಕಾಗಿ ಮನಃ ಪಟಲದಲ್ಲಿ ಕಾಣಿಸಿಕೊಳ್ಳುತ್ತೆ. ಯಾರೋ ಆ ಧೀಮಂತ-ಹೀಗೆಲ್ಲಾ ತನ್ನದೇ ಆದ ಆಲೋಚನಾ ಆಕಾಶದಲ್ಲಿ ತೇಲುತ್ತಾ ಶೂನ್ಯದತ್ತ ನೋಟ ಬಿಟ್ಟು ಮಲಗಿದ್ದಳು ದೇವಿ.

ತಿಂಡಿಯ ತಟ್ಟೆ ಹಾಲಿನ ಲೋಟ ಕೈಯಲ್ಲಿ ಹಿಡಿದು ಸೇವಕಿ ಅಮ್ಮಾ! ಏಳಿ ತಿಂಡಿ, ಹಾಲು ತೆಗೆದುಕೊಳ್ಳಿ ಎಂದಳು.

ಮಮತಾ, ಏನೇ ಎಷ್ಟೊತ್ತು ಆಗಿದೆಯೇ ? ಆಗಲೇ ಬಂದು ಕೂಗಬಾರದೇ ?

ದೇವಿ ಸ್ವಲ್ಪ ವಿಶ್ರಾಂತಿಯಿಂದ ಮಲಗಿದಾರೆ ಎಬ್ಬಿಸಬೇಡ, ಎಂದು ಧರ್ಮದರ್ಶಿಗಳು ಹೇಳಿದರು. ಅಮ್ಮಾ : ಅದಕ್ಕೆ ಕೂಗಲಿಲ್ಲ.

ಸರಿ ನನಗೆ ಹಾಲು ಸಾಕು-ತಿಂಡಿ ಏನೂ ಬೇಡ, ಹೊರಗಡೆ ಹೋಗಬೇಕಾದ ಕೆಲಸವಿದೆ.. ಕಾರಿನಲ್ಲಿಯೇ ಹೋಗೋಣ ಎಲ್ಲಾ ಸಿದ್ಧ ಮಾಡು ನನ್ನ ಜೊತೆಯಲ್ಲಿ ನೀನೇ ಬಾ.

ಇತ್ತ ಕಾಳೀಪ್ರಸಾದನ ಮನಸ್ಸಿನಲ್ಲಿ ಏನೋ ತುಮುಲ. ಅವನು ಬೆಳೆದ ವಾತಾವರಣವೇ ರಾತ್ರಿಯೆಲ್ಲಾ ದರೋಡೆ ಮಾಡಿ ಬೆಳಗಿನಹೊತ್ತು ಬಂಡೆ ಸಂದಿಗಳಲ್ಲಿ ಮರದ ಕೆಳಗೆ ಅಥವಾ ಗುಹೆಯ ಒಳಗೆ ಮಲಗಿ ಬಿಡುತ್ತಿದ್ದ. ವೇಶಾಂತರದಿಂದ ಪಟ್ಟಣ ಸುತ್ತಿ ತಮಗೆ ಉಣ್ಣಲು-ತಿನ್ನಲು ಏನುಬೇಕೋ ತಿಂ ು ಮತ್ತೆ ಎಲ್ಲರ ಕಣ್ಣು ತಪ್ಪಿಸಿ ಗುಹೆಯಕಡೆ ಸೇರಿ-ಕೊಳ್ಳುತ್ತಿದ್ದ, ಆದರೆ ಈಗಿನ ಜೀವನವೇ ಬೇರೆಯಾಗಿತ್ತು. ಆ ದರೋಡೆಯ ನೆನಪು ಅತೀವ ವೇದನೆಯುಂಟು ಮಾಡುತ್ತಿತ್ತು ಅವನಿಗೆ ಅಜ್ಜಿಯ ಪ್ರೀತಿಯಿಂದಾಗಿ ಅದು ತನ್ನ ಮನೆ ಎಂಬ ಆತ್ಮೀಯ ಸಂತೋಷ ಉಂಟಾಗಿತ್ತು. ಇಲ್ಲಿಗೆ ಬಂದ ಹೊಸದರಲ್ಲಿ ಅಜ್ಜಿ ಮನೆಗೆ ಆಗಾಗ ಬರುತ್ತಿದ್ದ ಯಾವುದೋ ಖಾನಾವಳಿಯಲ್ಲಿ ಊಟ ಮಾಡಿ ಅಲ್ಲಿಯೇ ಒಂದು ಕೊಠಡಿ-ಯಲ್ಲಿ ಮಲಗುತ್ತಿದ್ದ. ಇತ್ತೀಚೆಗೆ ಅಜ್ಜಿಯ ಪ್ರೀತಿಯಿಂದ, ಮನೆಯಲ್ಲಿಯೇ ಊಟ ಮಾಡಿ ಅಲ್ಲೇ ಮಲಗುತ್ತಿದ್ದ.

ರಾಜರಾಜೇಶ್ವರಿ ದೇವಿಯನ್ನು ಕಂಡಾಗಿನಿಂದ ಊಟ-ನಿದ್ದೆಯ ಗಮನವಿಲ್ಲದೆ ಎಲ್ಲೆಲ್ಲೋ ತಿರುಗುತ್ತಿದ್ದ. ಆ ದಿನ ಎದ್ದ ಕೂಡಲೇ ಹೊರಗಡೆ ಹೊರಟ ಕಾಳೀಪ್ರಸಾದನನ್ನು ನೋಡಿ-ಅಜ್ಜಿ ಇದೇನೋ ಕುಮಾರಾ ! ಎದ್ದು ಬೆಳಗ್ಗೆಯೇ ಹಾಗೆಯೇ ಹೊರಟೆ ಮೊದಲು ಸ್ನಾನ ಮಾಡಿ ಹೋಗು ಆ ವೇಳಗೆ ತಿಂಡಿ ಮಾಡಿ ಕೊಡುತ್ತೇನೆ ಅಂದಳು.

ಅಜ್ಜಿ ನಾನು ಹಾಗೇ ದಿನಾ ಸ್ನಾನ ಮಾಡಿ ಅಭ್ಯಾಸವಿಲ್ಲ ಅಜ್ಜೀ ನನಗೆ ಹೊರಗಡೆ ಕೆಲಸವಿದೆ, ಅಜ್ಜಿಯ ಬೆನ್ನು ಸವರುತ್ತಾ ಹೇಳಿದ.

ಅಜ್ಜಿಗೆ ಇತ್ತೀಚೆಗೆ ಅವನಲ್ಲಿ ಬಹಳ ಸಲಿಗೆ-ಅದೂ ಪ್ರೀತಿಯಿಂದ, ನೋಡು ! ಕುಮಾರಾ ನಮ್ಮ ಮನೆಯಲ್ಲಿದ್ದ ಮೇಲೆ ಪ್ರತಿ ದಿನ ಸ್ನಾನ ಮಾಡ ಬೇಕು, ದೇವರ ಪೂಜೆ ಮಾಡಬೇಕು. ಹಾಗೆ ಮಾಡದಿದ್ದರೆ ನೀನು ನಮ್ಮ ಮನೆಗೆ ಬರಲೇಬೇಡ.

ಅಯ್ಯೋ ! ಈ ಬಂಧನ ಎಲ್ಲಾ ನನಗಾಗೋಲ್ಲ ಅಜ್ಜಿ....ನನ್ನ ಪಾಡಿಗೆ ನನ್ನ ಬಿಟ್ಟು ನೀನು ಆರಾಮವಾಗಿ ಇರು....ಎಂದು ಹೇಳಿಕೊಂಡೇ ಬಾಗಿಲು ದಾಟಿ ಹೊರಟೇಬಿಟ್ಟ ಕಾಳಿ, ಕಾಲು ನಡಗೆಯಲ್ಲಿ ಊರೆಲ್ಲಾ ಸುತ್ತಿದ.

ಮತ್ತೆ ರಾಜರಾಜೇಶ್ವರಿ ಭವನದ ಮುಂದೆ ಬಂದು ನಿಂತ-ಈ ದಿನವೂ ಆ ದೇವಿಯನ್ನು ನೋಡಬಹುದು ಎಂದುಕೊಂಡು ಬಂದ ಆದರೆ ಭವನದ ಸಭಾಂಗಣದ ಬಾಗಿಲು ಪೂರಾ ಹಾಕಿತ್ತು ಮುಂಭಾಗದಲ್ಲಿ ಇಬ್ಬರು ಸೇವಕರು ಕಾವಲಾಗಿ ಕುಳಿತಿದ್ದರು. ಅವರನ್ನು ಕೇಳಿದ ಯಾವಾಗ ಬಾಗಿಲು ತೆಗೆಯು-ತ್ತೀರಿ ? ದೇವಿಯವರು ಯಾವಾಗ ಈ ಜಾಗಕ್ಕೆ ಬರುತ್ತಾರೆ ? ಎಂದು.

ದೇವಿಯವರು ವಾರಕ್ಕೆ ಒಂದು ದಿನ ಮಾತ್ರ ಈ ಸಭಾಂಗಣಕ್ಕೆ ಬರುವುದು ಅದು ಶುಕ್ರವಾರ.

ಅದುವರೆಗೆ ಎಲ್ಲಿರುತ್ತಾರೆ ನಾನು ಅವರನ್ನು ನೋಡಬೇಕು, ಕಾಳೀಪ್ರಸಾದ ಈ ದಿನ ಸಾಮಾನ್ಯ ಉಡುಪಿನಲ್ಲಿ ಬಂದಿದ್ದ.

ಸ್ವಾಮೀ....ನೀವು ಯಾರೋ ಹೊಸಬರೆಂದು ಕಾಣುತ್ತೆ ದೇವಿಯವರು ಅವರ ವಾಸದ ಭವನದಲ್ಲಿರುತ್ತಾರೆ, ಆಗ ಯಾರನ್ನೂ ನೋಡುವುದಿಲ್ಲ.

ಕುತೂಹಲದಿಂದ ಕಾಳೀಪ್ರಸಾದ ಕೇಳಿದ. ನಾನು ಅವರನ್ನು ಈಗಲೇ ನೋಡಬೇಕು. ಎಂದು ಅಧಿಕಾರವಾಣಿಯಿಂದ ಹೇಳಿದ.

ಸೇವಕರಿಗೆ ಸ್ವಲ್ಪ ಭಯವಾಯಿತು, ಈತ ಯಾರೋ ಅಧಿಕಾರಿ-ಯಾಗಿರಬಹುದು, ಆದರೆ ! ದೇವಿಯ ಅಪ್ಪಣೆ ಯಾರನ್ನೂ ಒಳಕ್ಕೆ ಬಿಡುವಂತಿಲ್ಲ ಏನು ಮಾಡುವುದು ? ಎಂದು ಯೋಚಿಸಿ, ನಮ್ರತೆಯಿಂದ ಸ್ವಾಮಿ ದಯಮಾಡಿ ಕ್ಷಮಿಸಿ, ಈಗ ಯಾರನ್ನೂ ಬಿಡಕೂಡದೆಂದು ದೇವಿಯ ಅಪ್ಪಣೆಯಾಗಿದೆ. ಕಾಳೀಪ್ರಸಾದ ಎಂದೂ ಯಾರ ಮಾತಿಗೂ ಬಗ್ಗುವವನಲ್ಲ. ಅವನ ಕೋಪ ನೆತ್ತಿಗೇರಿತು. ಸೇವಕರನ್ನು ಕೆಂಗಣ್ಣಿನಿಂದ ನೋಡುತ್ತಾ ನಿಮ್ಮನ್ನು ಒಂದು ನಿಮಿಷದಲ್ಲಿ ಚಿವುಟಿ ಹಾಕಿ ಒಳಗೆ ಹೋಗ ಬಲ್ಲೆ. ಆದರೆ ದೇವಿಗೆ ನನ್ನ ಮೇಲೆ ಕೋಪ ಬರಬಾರದೆಂದು ತಡೆದಿ-ದ್ದೇನೆ, ಮತ್ತೆ ನಿಮ್ಮ ಆ ದೇವಿಯನ್ನು ಯಾವಾಗ ನೋಡಬಹುದು ? ಎಂದು ರೋಷದಿಂದ ಹೆಜ್ಜೆಯನ್ನು ನೆಲಕ್ಕೆ ಅಪ್ಪಳಿಸುತ್ತಾ ಕೇಳಿದ.

ಸೇವಕರು ನಡುಗುತ್ತಾ ! ಸ್ವಾಮಿ ! ಈ ದಿನ ಸಾಯಂಕಾಲ ಛತ್ರದ ಸಭಾಂಗಣದಲ್ಲಿ ದೇವಿಯವರು ಪ್ರವಚನ ಹೇಳುತ್ತಾರೆ. ಅಲ್ಲಿ ನೀವು ಅವರನ್ನು ಕಾಣಬಹುದು ಎಂದರು ನಂತರ ದೇವಿಗೆ ಆಶನ

ವಿಷಯವನ್ನು ತಿಳಿಸಿದರು--ಕಾಳೀಪ್ರಸಾದ ಅಲ್ಲಿಂದ ದಾಪುಗಾಲು ಹಾಕುತ್ತಾ ನಡೆದ. ವಿಚಾರಿಸುತ್ತಾ ರಾಜರಾಜೇಶ್ವರೀ ಛತ್ರದ ಬಳಿ ಬಂದ. ಆ ಛತ್ರ ಅವನು ಮೊದಲು ಒಂದು ಬಾರಿ ನೋಡಿದ್ದ, ಅದು ಬಡ ಮಕ್ಕಳಿಗೆ ಮಾತ್ರ ಊಟ ಹಾಕುವ ಛತ್ರ ಅಲ್ಲಿಯೂ ಒಬ್ಬ ಸೇವಕ ಮತ್ತು ಛತ್ರದ ವ್ಯವಸ್ಥಾಪಕರು ಮಾತ್ರ ಇದ್ದರು,

ವ್ಯವಸ್ಥಾಪಕರನ್ನು ಆ ದಿನವೇ ನೋಡಿ ಮಾತಾಡಿಸಿದ್ದ ಕಾಳೀಪ್ರಸಾದ. ಅವರು ಅವನನ್ನು ಗೌರವದಿಂದ ಮಾತಾಡಿಸಿದ್ದರು. ಛತ್ರದ ಮುಂದೆ ಒಂದು ದೊಡ್ಡ ಬೋರ್ಡ್ ಹಾಕಿತ್ತು. ಅದರಲ್ಲಿ ಈ ದಿನ ಸಾಯಂಕಾಲ ರಾಜರಾಜೇಶ್ವರಿ ದೇವಿಯವರ ಪ್ರವಚನವಿದೆ. ಯಾರು ಬೇಕಾದರೂ ಬರ ಬಹುದು. ಆದರೆ ಶಿಸ್ತಿನಿಂದ ನಡೆದುಕೊಳ್ಳಬೇಕು. ದೇವಿಯ ಬಳಿ ಯಾರೂ ಹೋಗುವಂತಿಲ್ಲ, ಯಾರೂ ದೇವಿಗೆ ಆಗ ಕಾಣಿಕೆ ಕೊಡುವಂತಿಲ್ಲ. ದೇವಿ-ಯವರ ಉಪದೇಶ ಮಾತ್ರ ಮುಖ್ಯವಾದದ್ದು—ಈ ರೀತಿಯ ವಿವರಣೆ-ಯನ್ನು ಕಾಳೀಪ್ರಸಾದ ಓದಿಕೊಂಡ, ಅಲ್ಲಿದ್ದ ವ್ಯವಸ್ಥಾಪಕರನ್ನು ಕಂಡು ಮಾತಾಡಿಸಿದ–ಸ್ವಾಮಿ, – ದೇವಿಗೆ ಕಾಣಿಕೆಯ ಹಣ ಮುಖ್ಯವಲ್ಲವೇ ಅದೇಕೆ ತೆಗೆದುಕೊಳ್ಳುವುದಿಲ್ಲ ಎಂದ,

ನಮ್ಮ ದೇವಿ ಅಂತಹ ದುರಾಸೆಯವರಲ್ಲ, ಯಾವುದೇ ಹಣ ಬಂದರೂ ಒಳ್ಳೆಯ ಕಾರ್ಯಗಳಿಗೆ ಉಪಯೋಗಿಸುತ್ತಾರೆ, ಈ ದಿನ ನೀವು ಅವರ ಪ್ರವಚನವನ್ನು ಕೇಳಿ, ನಿಮಗೇ ತಿಳಿಯುತ್ತೆ ಎಂದು ಹೇಳಿ ವ್ಯವಸ್ಥಾಪಕರು ಸೇವಕನೊಂದಿಗೆ ಏನಪ್ಪಾ ! ರಾಜಣ್ಣಾ ಸಂಜೆ ವೇಳೆಗೆ ಈ ಸಭಾಂಗಣವನ್ನು ಅಚ್ಚುಕಟ್ಟಾಗಿ ಅಲಂಕರಿಸಿ ಸಿದ್ಧಮಾಡು ಎಂದು ಹೇಳಿ ಹೊರಟು ಹೋದರು.

ಕಾಳೀಪ್ರಸಾದನಿಗೆ ತುಂಬಾ ಖುಷಿ. ನಿಂತಲ್ಲಿ ನಿಲ್ಲಲಾರದೆ ಆ ಛತ್ರದ ಮುಂದೆಲ್ಲಾ ಸುತ್ತಾಡಿದ. ಬೇಗ ಬೇಗ ನಡೆಯುತ್ತಾ ಅಜ್ಜಿ ಮನೆಗೆ ಬಂದ. ಅಜ್ಜೀ....ಏನು ಮಾಡುತ್ತಿದ್ದೀಯಾ ? ಅಜ್ಜಿಗೆ ಸಿಟ್ಟು ಬಂದಿತ್ತು ಮಾತಾಡಲಿಲ್ಲ,

ನಂಗೊತ್ತು ಅಜ್ಜಿಗೆ ಸಿಟ್ಟು ಬಂದಿದೆ, ನೀನು ಸ್ನಾನ ಮಾಡು ಅಂದೆ ನಾನು ಆಗ ಮಾಡಲಿಲ್ಲ, ಈಗ ಮಾಡುತ್ತೇನೆ ಅಜ್ಜೀ....ಉ....ಶ್ ಅಮ್ಮಾ!

ಸಾಕಾಯಿತು. ಎಂದು ಹೇಳುತ್ತಾ ಅಜ್ಜಿಯ ತೊಡೆಯಮೇಲೆ ತಲೆಯಿಟ್ಟು ಕಾಲು ಬೀಸಿ ಮಲಗಿದ.

ಅಜ್ಜಿ ಕೋಪ ಮಾಯವಾಗಿ ಮಮತೆ ಉಕ್ಕಿತು. ಇದೇನೋ ಕುಮಾರಾ! ನಿನ್ನ ಒರಟುತನ ನೋಡಿದರೆ ನಿನ್ನ ಇನ್ನು ಮೇಲೆ ಮನೆಗೇ ಸೇರಿಸಬಾರದು ಅನ್ನಿಸುತ್ತೆ ಮತ್ತೆ ಅಂಟಿಕೊಂಡೇ ಬರುತ್ತೀ.

ಏನಜ್ಜೀ ಈ ಮೊಮ್ಮಗನ್ನ ದೂರ ಅಟ್ಟಬೇಕೂ ಅಂತೀಯಾ? ಅಜ್ಜಿಯ ಕೆನ್ನೆ ಸವರುತ್ತಾ ಕೇಳಿದ.

ಇದೋ ನೋಡು ಈ ಪ್ರೀತಿ ಆತ್ಮ ಸಂಬಂಧವಿಲ್ಲದೇ ಬರುತ್ತೇನೋ? ಬಾ ಊಟಮಾಡು, ಎಲ್ಲೆಲ್ಲಿ ಸುತ್ತಿ ಬಂದ್ಯೋ; ಒಳ್ಳೆ ಆಳುಗಾತ್ರ ಅಷ್ಟು ಉದ್ದ ದಪ್ಪಕ್ಕೆ ಮಲಗಿ ತನ್ನ ತೊಡೆಯಮೇಲೆ ತಲೆಯಿಟ್ಟಿದ್ದ ಕಾಳೀಪ್ರಸಾದನ ಒರಟು ಕೂದಲಿನ ತಲೆಯನ್ನು ವಾತ್ಸಲ್ಯದಿಂದ ನೇವರಿಸಿದಳು, ಅಜ್ಜಿ.

ಅಚ್ಛಾ....ಅಚ್ಛಾ ನನಗೆ ಇಷ್ಟು ಸಾಕು. ಅಜ್ಜೀ....ನಾನು ಸ್ನಾನ ಮಾಡಿ ಬರುತ್ತೇನೆ—ಎಂದು ಚಟ್ಟನೆ ಎದ್ದು ಕಾಳೀಪ್ರಸಾದ ಹೋದ.

ಜಹಗೀರ್‌ದಾರರ ಮನೆಯ ಹಿಂಭಾಗದಲ್ಲಿದ್ದ ಈಜುಕೊಳ ಒಂದಿತ್ತಲ್ಲವೇ? ಅದನ್ನು ಯಂಕನ ಕೈಲಿ ಶುಚಿಮಾಡಿಸಿ ನೀರನ್ನು ತುಂಬಿಸಿದ್ದ ಕಾಳೀಪ್ರಸಾದ. ಅವನಿಗೆ ಬಿಸಿನೀರಿನ ಅವಶ್ಯಕತೆಯೇ ಇಲ್ಲ, ಅವನಿಗೆ ಈ ದಿನ ದೇವಿಯನ್ನು ಕಾಣುವ ಖುಷಿ, ಮನಸ್ಸಿನ ತುಂಬ ಉತ್ಸಾಹವನ್ನು ಮೂಡಿಸಿತ್ತು. ಈಜು ಕೊಳದಲ್ಲಿ ಮನಸೋ ಇಚ್ಛೆ ಈಜಿದ. ಅಚ್ಛಾ.... ಅಚ್ಛಾ ಬಹುತ್ ಅಚ್ಛಾ...ರಾಗವಾಗಿ ಹೇಳುತ್ತಾ ಮೈತುಂಬ ಬಟ್ಟೆಯನ್ನು ಹಾಕಿಕೊಂಡು ಅಜ್ಜಿಯ ಮುಂದೆ ಬಂದು ನಿಂತ, ಅವನೆಂದೂ ಅಜ್ಜಿಗೆ ತನ್ನ ಮೈಮೇಲಿನ ಭಾಗವನ್ನು ತೋರಿಸಿಲ್ಲ. ಅದು ಒಂದು ರಹಸ್ಯವಾಗಿಯೇ ಜಾಗ್ರತೆ ವಹಿಸಿದ್ದ—ದೇವಿಪ್ರಸಾದ ಹೇಳಿದ್ದ ಬೆನ್ನಿನ ಮಚ್ಚೆ ಅಜ್ಜಿಗೆ ಈಗಲೇ ಕಾಣಿಸಬಾರದು, ಅದಕ್ಕೆ ಇನ್ನು ಸ್ವಲ್ಪ ಕಾಲಬೇಕು ಎಂಬುದು ಅವನ ಆಲೋಚನೆ.

ಅಜ್ಜಿ–ನಾನು ಹೊರಗಡೆ ಹೋಗಬೇಕು ತಿಂಡೀ ಕೊಡು ಅಜ್ಜೀ-ಎಂದು ಕುರ್ಚಿಮೇಲೆ ಹಾಜರಾಗಿ ಕುಳಿತ. ಅಜ್ಜೀ ತಟ್ಟೆ ತುಂಬಾ ಉಪ್ಪಿಟ್ಟು ಲೋಟದಲ್ಲಿ ಟೀ ಎಲ್ಲಾ ಕೊಟ್ಟು ಅಲ್ಲಾ ಕುಮಾರಾ! ಯಾವಾಗಲೂ ಹೊರಗಡೆ ಸುತ್ತಬೇಕು ಅಂತಾನೇ ಇದ್ದೀಯಲ್ಲಾ! ನಿನ್ನ ಕೆಲಸ ಏನು? ನಿನ್ನ ಸಂಪಾದನೆ ಏನು? ಎಂದು ಒಂದು ದಿನವಾದರೂ ನನಗೆ ಹೇಳಿದ್ದೀಯಾ? ಮನೆಗೆ ಸಾಕು ಸಾಕು ಅನ್ನುವಂತೆ ಸಾಮಾನು ತಂದು ಹಾಕುತ್ತೀ? ಏನು ನಿನ್ನ ಉದ್ಯೋಗ? ಎಂದು ಅವನ ತಟ್ಟೆಗೆ ಇನ್ನೂ ಸ್ವಲ್ಪ ಉಪ್ಪಿಟ್ಟು ಹಾಕುತ್ತಾ ಕೇಳಿದಳು.

ಕಾಳೀಪ್ರಸಾದ ಗಬ ಗಬನೆ ಉಪ್ಪಿಟ್ಟು ತಿನ್ನುತ್ತಾ ಅಬ್ಬಾ ನಿನಗೆ ಎಲ್ಲಾ ಹೇಳ್ತೀನಿ ತಾಳು ಅಜ್ಜೀ, ಅದೇನೋ? ಮಾತು ಮಾತಿಗೆ ಅಬ್ಬಾ-ಅಬ್ಬಾ ಅನ್ನುತ್ತೀ–ನೀನು ಯಾವ ಜಾತೀನೋ?....

ಅಜ್ಜೀ-ನನಗೆ ಎಲ್ಲಾ ಜಾತಿ ಮಾತೂ ಬರುತ್ತೆ ನನಗೆ ಜಾತಿಯೇ ಇಲ್ಲ–ಲೋ ಯಂಕಾ! ಅಜ್ಜೀನ ಚೆನ್ನಾಗಿ ನೋಡ್ಕೋ ನಾನು ಯಾವಾಗಲೋ ಬರುತ್ತೇನೆ. ಎಂದು ಹೊರಟು ಬಿಟ್ಟ.

ಈ ದಿನ ಅವನ ಉಡುಪು ಸಾಮಾನ್ಯ....ಒಂದು ಪೈಜಾಮ ಮೇಲೆ ಸಿಲ್ಕ್ ಜುಬ್ಬಾ. ತಲೆಗೆ ಪೇಟಾ ಕಟ್ಟದೆ ಒರಟು ಗುಂಗುರು ಕೂದಲನ್ನು ಹಾಗೇ ಬಿಟ್ಟಿದ್ದ, ಓರಣವಾಗಿ ಬಾಚದೇ ಬಿಟ್ಟಿದ್ದರಿಂದ ಹಣೆಯ ಮೇಲೆಲ್ಲಾ ಹಾರಾಡುತ್ತಿತ್ತು. ಅವನ ಕಾತುರ ಇದ್ದದ್ದೆಲ್ಲಾ ದೇವಿಯನ್ನು ಕಾಣಬೇಕು. ಅವಳ ಮಾತನ್ನು ಕೇಳಬೇಕು.. ನೇರ ರಾಜರಾಜೇಶ್ವರಿ ಛತ್ರದ ಬಳಿ ಬಂದ,

ಛತ್ರದ ಹೊರಾಂಗಣ ವಿಶಾಲವಾಗಿತ್ತು. ಚಪ್ಪರ, ತೋರಣ, ವಿದ್ಯುದ್ದೀಪಗಳಿಂದ ಅಲಂಕೃತವಾಗಿತ್ತು. ಎತ್ತರದ ವೇದಿಕೆ. ದೇವಿ ಕುಳಿತು ಕೊಳ್ಳುವ ಸ್ಥಳ, ಸಂಜೆಯ ಸಮಯವಾದ್ದರಿಂದ ಜನ ಜಮಾಯಿಸುತ್ತಿ-ದ್ದರು. ಸೇವಕರು ಜನರನ್ನು ಸಾಲಾಗಿ ಶಿಸ್ತಿನಿಂದ ಕೂರಿಸುತ್ತಿದ್ದರು. ಯಾರಿಗೂ ಯಾವ ಪೀಠೋಪಕರಣವೂ ಇಲ್ಲ. ನೆಲಕ್ಕೆ ಹಾಸಿದ ಜಮಖಾನದ ಮೇಲೆ ಕುಳಿತುಕೊಳ್ಳಬೇಕಾಗಿತ್ತು, ಕಾಳೀಪ್ರಸಾದನೂ ಎಲ್ಲರಿಗಿಂತ ಮುಂದೆ ಕುಳಿತುಕೊಂಡ. ವೇದಿಕೆಯ ಮೇಲೆ ಧರ್ಮದರ್ಶಿಗಳು ಮೊದಲು ಬಂದು

ಎಲ್ಲರಿಗೆ ಕೈ ಮುಗಿದು ಭಕ್ತ ಬಂಧುಗಳೇ ದೇವಿಯು ಪ್ರವಚನ ಮಾಡು ವುದು ನಿಮ್ಮೆಲ್ಲರ ಒಳಿತಿಗಾಗಿ, ಅದು ಉಪದೇಶವೆಂದು ತಿಳಿಯಬೇಡಿ. ನಮ್ಮಲ್ಲಿ ಉತ್ತಮ ಸಂಸ್ಕೃತಿ ಜಾಗೃತವಾಗಬೇಕು, ಎಂಬ ಧ್ಯೇಯ ಅವರದು. ಅವರ ಅಮೃತವಾಣಿಯನ್ನು ಸಾವಧಾನವಾಗಿ ಕೇಳಿ. ಯಾರೂ ದೇವಿಯ ವೇದಿಕೆ ಬಳಿ ಬರಬಾರದು, ಎಂದು ಹೇಳಿ ಪಕ್ಕದ ಆಸನದಲ್ಲಿ ಕುಳಿತರು.

ಅಲ್ಲಿ ನೆರೆದಿದ್ದ ಜನ ಉತ್ಸಾಹದಿಂದ ದೇವಿಯ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಒಳಗಡೆಯಿಂದ ತನ್ನ ಸೇವಕಿಯೊಂದಿಗೆ ದೇವಿ ವೇದಿಕೆಗೆ ಬಂದು ನಿಂತು ಎಲ್ಲರಿಗೂ ಕೈ ಮುಗಿದು ಮಹಾ ಜನರೇ! ಭಕ್ತಾದಿಗಳೇ ನಿಮಗೆಲ್ಲಾ ಸ್ವಾಗತವನ್ನು ಬಯಸುತ್ತೇನೆ, ಈ ದಿನ ನಿಮ್ಮೆಲ್ಲರ ಸಮಕ್ಷಮ ನನಗೆ ತಿಳಿದಿರುವ ಒಂದೆರಡು ಮಾತನ್ನು ಹೇಳುತ್ತೇನೆ. ಆಗಾಗ ನಾನು ಪ್ರವಚನವನ್ನು ಮಾಡುವ ಉದ್ದೇಶ ನೀವೆಲ್ಲಾ ನಮ್ಮ ಆತ್ಮೀಯ ಬಂಧುಗಳು, ನಿಮ್ಮಿಂದ ಬರೀ ಕಾಣಿಕೆಯನ್ನೇ ತೆಗೆದುಕೊಳ್ಳುವ ಪರಿಪಾಠ ನಮ್ಮದಲ್ಲ, ನಿಮ್ಮಲ್ಲಿ ಒಳ್ಳೆಯ ಸಂಸ್ಕೃತಿ ಉತ್ತಮ ಧೈರ್ಯ ಬೆಳೆಯ ಬೇಕು. ನಿಮ್ಮ ದಾನ ಸದುಪಯೋಗವಾಗಬೇಕು. ಇದಕ್ಕಾಗಿ ನನ್ನ ಪ್ರಾರ್ಥನೆಯನ್ನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ–ಜೈ ಮಾತಾ....ಜೈ ಎಂದು ವೇದಿಕೆಯ ಪೀಠದಲ್ಲಿ ಕುಳಿತಳು ದೇವಿ.

ನೆರೆದಿದ್ದ ಸಮೂಹ–ಜೈ ರಾಜರಾಜೇಶ್ವರಿ ದೇವಿಗೆ ಜೈ ಎಂದು ಹೇಳಿ ಶಬ್ದವಿಲ್ಲದೆ ಕುಳಿತರು.

ಈ ದಿನ ದೇವಿಯ ದರ್ಶನ ಕಣ್ಣಿನ ತಣಿಸುವಂತಿತ್ತು. ಮೈಮೇಲೆ ಒಂದೇ ಒಂದು ಆಭರಣವೂ ಇಲ್ಲ. ನಿರಾಭರಣ ಸನ್ಯಾಸಿನಿಯಂತೆ ಕಾಷಾಯ ವಸ್ತ್ರ ಸೀರೆಯನ್ನುಟ್ಟು ಮುಡಿಯನ್ನು ಮೇಲೆ ಕಟ್ಟಿ ಮಂದಸ್ಮಿತಳಾಗಿ ಪ್ರಶಾಂತ ಕಣ್ಣಿನೋಟದಿಂದ ಸಭೆಯನ್ನು ಒಂದು ಸಲ ನೋಡಿ ಮಾತು ಪ್ರಾರಂಭಿಸಿದಳು–ಮನುಷ್ಯ ಪ್ರಾಣಿಗಳಿಗಿಂತ ಶ್ರೇಷ್ಠ ಎನ್ನುತ್ತಾರೆ. ಆದರೆ ಅದು ಅವನ ಗುಣ, ಉತ್ತಮ ನಡವಳಿಕೆಯಿಂದ ಮಾತ್ರ ಸರಿ. ಹಾಗಿಲ್ಲದೆ ದುಷ್ಟನಾಗಿ ಹಿಂಸಾ ಪ್ರವೃತ್ತಿಯುಳ್ಳವನಾದ ಮನುಷ್ಯನನ್ನು ಕ್ರೂರಪ್ರಾಣಿ–

ಗಿಂತಲೂ ಕಡೆ ವನ್ನ ಬಹುದು. ನಮ್ಮ ಮನಸು ಶತ್ರುವೂ ಆಗಬಲ್ಲದು ಮಿತ್ರನೂ ಆಗಬಲ್ಲದು ನೋಡಿ ಬೀಗದ ಕೈ ಪೆಟ್ಟಿಗೆಯನ್ನು ಮುಚ್ಚಲೂ ತೆಗಯಲೂ ಸಹಾಯಕವಾಗುವಂತ ನಮ್ಮ ಮನಸ್ಸು ಒಳ್ಳೆಯ ಮತ್ತ್ತ ಕೆಟ್ಟ ಕಾರ್ಯಗಳಿಗೆ ಪ್ರೇರೇಪಿಸಬಲ್ಲದು. ಮಾನವ ವಿವೇಚನಾ ಶಕ್ತಿಯುಳ್ಳ ವನು-ಒಳ್ಳೆಯದನ್ನೇ ಆರಿಸಿಕೊಳ್ಳಬೇಕು. ಮನುಷ್ಯನಿಗೆ ಬಡತನ-ಸಿರಿತನ ಶಾಶ್ವತವಲ್ಲ ಇಂದು ಸಿರಿವಂತರಾಗಿದ್ದವರು ಮೋಸಗಾರರಿಂದ ಅನ್ಯಾಯ ದಿಂದ ಬಡವರಾಗಬಹುದು, ಆದರೆ ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ ಕೆಟ್ಟದ್ದಕ್ಕೆ ಕೆಟ್ಟದ್ದು ಅನುಭವಿಸಲೇಬೇಕು, ಸುಲಿಗೆ-ದರೋಡೆ-ಕೊಲೆಗಳಿಂದ ಸಂಪಾದಿಸಿದ್ದ ಹಣ ತಾತ್ಕಾಲಿಕವಾಗಿ ಸಂತೋಷವನ್ನು ಕೊಡಬಹುದು, ಆದರೆ ಅದರಿಂದ ಕ್ಷಣ ಕ್ಷಣವೂ ಭಯ ತಪ್ಪಿದ್ದಲ್ಲ.

ಅಲ್ಲಿಯೇ ಕುಳಿತು ದೇವಿಯ ಒಂದೊಂದು ಮಾತನ್ನೂ ಕೇಳಿಸಿ ಕೊಳ್ಳುತ್ತಿದ್ದ ಕಾಳೀಪ್ರಸಾದನ ಎದೆಯಲ್ಲಿ ಒಂದು ವಿಧ ಭಯ-ನಡುಕ ವುಂಟಾಯಿತು, ಇದೇನು ! ದೇವಿ ನನ್ನ ವಿಷಯವಾಗಿಯೇ ನನಗಾಗಿಯೇ ಪ್ರವಚನವನ್ನು ಹೇಳುತ್ತಿದ್ದಾಳೆಯೇ ? ನನ್ನ ದರೋಡೆ ವಿಚಾರ ಇವಳಿಗೆ ಹೇಗೆ ಗೊತ್ತು ? ಎಂದು ತಲ್ಲಣಿಸಿದ. ಆದರೆ ದೇವಿ ಹೇಳುವ ಒಂದೊಂದು ಮಾತೂ ಅಮೃತವಾಣಿ ನಿಜ, ಎಂದು ಒಪ್ಪಿದ.

ಯಾವುದೇ ರೀತಿ ಸಂಪಾದಿಸಿದ ಹಣವೂ ಧರ್ಮಕಾರ್ಯಗಳಿಗೆ ಉಪಯೋಗವಾಗಬೇಕು. ತ್ಯಾಗದಿಂದಲೇ ಸಂತೋಷ, ಸಾರ್ಥಕ ಜೀವನ.

ಇಷ್ಟು ಚಿಕ್ಕ ವಯಸ್ಸಿನ ದೇವಿಯ ಅಮೋಘ ತತ್ವ ವಿಚಾರ ಜನಗಳ ಮನಸ್ಸಿಗೆ ಹಿಡಿಸುವಂತೆ ಹೇಳುವ ರೀತಿ, ಜನಗಳು ತಮ್ಮ ತಮ್ಮಲ್ಲೇ ವಿಮರ್ಶಿಸಿಕೊಳ್ಳುತ್ತಿದ್ದರು ನಾವು ನಮ್ಮನ್ನು ತಿದ್ದಿಕೊಳ್ಳ-ಬೇಕು ಎಂದು,

ಮತ್ತೆ ದೇವಿ-ಮಹಾಜನಗಳಲ್ಲಿ ಮತ್ತೊಂದು ಮುಖ್ಯ ವಿಚಾರ-ಮಾತೃದೇವೋಭವ, ಎಂದು ವೇದಗಳು ಸಾರಿ ಹೇಳುತ್ತಿವೆ ತಾಯಿ ದೇವರು. ದೇವರು ಎಲ್ಲಿದ್ದಾನೆ ? ಎಂದು ಕೇಳಿದರೆ ತಾಯಿಯೇ ಪ್ರತ್ಯಕ್ಷ ದೇವರು ತಾಯಿಯ ಪ್ರೀತಿ, ಮಮತೆ, ತ್ಯಾಗವನ್ನು ಮತ್ತೆ ಯಾರೂ ಮಾಡಲಾರರು,

ಆದ್ದರಿಂದ ತಾಯಿಯನ್ನು ಪಡೆದಿರುವವರು ಪುಣ್ಯಾತ್ಮರು, ತಾಯಿಯನ್ನು ಕಳೆದುಕೊಂಡವರು ನತದೃಷ್ಟರು. ಪುಟ್ಟ ಮಕ್ಕಳಾಗಿರುವಾಗಲೇ ತಾಯಿಯಿಲ್ಲದ ಮಕ್ಕಳು ಧೂರ್ತರ ಕೈಗೆ ಸಿಕ್ಕಿ ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಸ್ವಾರ್ಥಿಗಳು ತಮ್ಮ ಲಾಭಕ್ಕಾಗಿ ಆ ಮಕ್ಕಳನ್ನು ಉಪಯೋಗಿಸಿಕೊಳ್ಳುತ್ತಾರೆ. ಆದ್ದರಿಂದಲೇ ನನಗೆ ತಾಯಿಯಿಲ್ಲದ ಮಕ್ಕಳನ್ನು ಕಂಡರೆ ಕರುಣೆ, ಪ್ರೀತಿ, ನಮ್ಮ ಸಮಾಜದಲ್ಲಿ ಅಂತಹ ಮಕ್ಕಳ ಉದ್ಧಾರವಾಗಬೇಕು ಎಂದು ಹೇಳುತ್ತಿದ್ದಂತೆಯೇ ದೇವಿಗೆ ದುಃಖ ತಡೆಯಲಾಗದೆ ವೇದಿಕೆಯ ಮೇಲೆಯೇ ಗಳಗಳನೆ ಅತ್ತುಬಿಟ್ಟಳು.

ಕರುಣಾಮಯಿ ದೇವಿಗೆ ಜೈ-ಎಂದು ಘೋಷಿಸಿದರು. ಎಲ್ಲರ ಹೃದಯದಲ್ಲಿಯೂ ದೇವಿಯ ಒಂದೊಂದು ಮಾತೂ ಬೇರೂರಿತು.

ದೇವಿಯು ಮತ್ತೊಂದು ಮಾತೂ ಆಡದೆ ಒಳಕ್ಕೆ ಹೊರಟು ಹೋದಳು.. ಧರ್ಮದರ್ಶಿಗಳು ಎದ್ದುನಿಂತು, ದೇವಿಯ ಧರ್ಮಕಾರ್ಯಗಳಿಗೆ ಉದಾರವಾಗಿ ಕಾಣಿಕೆ ನೀಡುವವರು ಮತ್ತೊಂದು ದಿನ ನಾವು ಸಭೆ ನಡೆಸುತ್ತೇವೆ. ಆಗ ತಂದು ಕೊಡಬಹುದು, ಎಂದು ಹೇಳಿ ಒಳಕ್ಕೆ ಹೊರಟು ಹೋದರು.

ಜನರು ದೇವಿ ಮಾಡಿರುವ ಅನೇಕ ಧರ್ಮಕಾರ್ಯಗಳನ್ನು ಹೊಗಳುತ್ತಾ ಹೌದು, ದೇವಿಗೆ ಅದೇಕೋ ಅನಾಥ ಮಕ್ಕಳನ್ನು ಕಂಡರೆ ತುಂಬಾ ಕರುಣೆ. ಊಟ-ಬಟ್ಟೆ ಎಲ್ಲಾ ಕೊಟ್ಟು ಕಾಪಾಡುತ್ತಾರೆ–ಎಂದು ಹೇಳುತ್ತಾ ಹೋದರು.

ಕಾಳೀಪ್ರಸಾದನ ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು ಇಂತಹ ನೀತಿ ನಿಯಮದ ವಿಷಯವೆಲ್ಲಾ ಅವನಿಗೆ ತಿಳಿಯದು. ಕೊಳ್ಳೆಹೊಡೆದು ಅಪಾರ ಒಡವೆ ವಸ್ತು ತಂದ ದಿನ ದೇವಿಪ್ರಸಾದ ಶಹಬಾಸ್ ಮಗನೇ.... ನಿನ್ನ ಬೆಳೆಸಿದ್ದಕ್ಕೆ ಸಾರ್ಥಕವಾಯಿತು, ಅನ್ನುತ್ತಿದ್ದ. ಮನುಷ್ಯನಿಗೆ ಹಣ ಸಂಪಾದನೆಯೇ ಮುಖ್ಯವೆಂದು ತಿಳಿದಿದ್ದ ಆದರೆ ಇಂದು ದೇವಿಯ ಒಂದೊಂದು ಮಾತೂ ತನ್ನನ್ನು ಎಚ್ಚರಿಸುವುದಕ್ಕಾಗಿಯೋ ? ಎಂಬಂತಿತ್ತು ಹೌದು ! ತಾಯಿಯ ಪ್ರೀತಿಯನ್ನು ಕಳೆದುಕೊಂಡ ನಾನು ದುಷ್ಟನಾಗಿ

ಬೆಳೆದೆ. ದೇವಿಪ್ರಸಾದ ಸ್ವಾರ್ಥಿ, ತನ್ನ ಲಾಭಕ್ಕಾಗಿಯೇ ನನ್ನನ್ನು ಉಪಯೋಗಿಸಿಕೊಂಡ, ದೇವಿ ಹೇಳುವಂತೆ ಹಣದಿಂದ ಶಾಂತಿಯಿಲ್ಲ, ಅಯ್ಯೋ! ಈಗೇನು ಮಾಡಲಿ? ಆ ದೇವಿಯ ಸ್ನೇಹ ನನಗೆ ಬೇಕು. ಅವಳ ಮಾತಿನಿಂದ ನನ್ನ ಮನಸ್ಸಿಗೆ ಶಾಂತಿ....ಇದೆಲ್ಲಾ ಯೋಚಿಸುತ್ತಾ ಸ್ವಲ್ಪಹೊತ್ತು. ಅಲ್ಲಿಯೇ ನಿಂತ-ಎಲ್ಲೂ ಇರಲಾರದೆ ಮನೆಯ ಕಡೆ ನೇರ ಬಂದ.

ಅಂದು ಪೂರ್ಣಿಮೆ, ದೇವಿಯ ಪ್ರವಚನ ಮುಗಿಯುವ ಹೊತ್ತಿಗೆ ರಾತ್ರಿ 8 ಗಂಟೆ ಆಗಿತ್ತು. ಹಾಲು ಚೆಲ್ಲಿದಂತೆ ಬೆಳದಿಂಗಳು, ತಂಗಾಳಿ ತಂಪಾಗಿ ಬೀಸುತ್ತಿತ್ತು. ಆಕಾಶದಲ್ಲಿ ತಾರೆಗಳ ಮಧ್ಯೆ, ಬೆಳ್ಳಿಯ ಬೆಡಗಿನ ಚಂದ್ರ ತೇಲುತ್ತಿದ್ದ. ಕಾಳೀಪ್ರಸಾದ ನಡೆಯುತ್ತಾ ಪ್ರಕೃತಿಯ ಸೌಂದರ್ಯವನ್ನು ಗಮನಿಸಿ ಪುಳಕಿತನಾದ. ಚಂದ್ರನೂ-ಬೆಳದಿಂಗಳೂ ದರೋಡೆಕೋರರಿಗೆ ಶತ್ರುವಿನಂತೆ, ಇದೀಗ ಕಾಳೀಪ್ರಸಾದನಿಗೆ ಬೆಳದಿಂಗಳು ಆನಂದದಾಯಕವಾಗಿತ್ತು. ಅದಕ್ಕೆ ಕಾರಣ ಅವನ ಮನಸ್ಸು ದೇವಿಯ ಮುಖಮಂಡಲವನ್ನು ಚಂದ್ರನಿಗೆ ಹೋಲಿಸುತ್ತಿತ್ತು ಆ ಆನಂದ ಅವನ ನಡಗೆಯಲ್ಲಿ ಚುರುಕು ತಂದಿತ್ತು. ಅಜ್ಜಿ ಮನೆಗೆ ಖುಷಿಯಾಗಿ ಬಂದ, ಅಜ್ಜೀ....ಮೊದಲು ಈ ದೊಡ್ಡ ಮನೆಯ ಬಾಗಿಲೆಲ್ಲಾ ತೆಗದು ಚೊಕ್ಕಟ ಮಾಡಬೇಕು. ಅಜ್ಜೀ ನನಗೇ ಅಂತ ಒಂದು ಕೊಠಡಿ ಬೇಕು ಅಜ್ಜೀ....

ಏನೋ ತಲೆ ಹರಟೆ?....ಏನೇನೋ ಪಾರುಪತ್ಯ ಮಾಡುತ್ತೀ— ಇದೇನು ನಿಮ್ಮ ತಾತನ ಮನೆಯೇ? ನಿನಗೆ ಇಲ್ಲಿ ಯಾವ ಅಧಿಕಾರವೂ ಇಲ್ಲ.

ನಾನು ನಿನ್ನ ಮೊಮ್ಮಗ ಅಂದ ಮೇಲೆ ನನಗೆ ತಾನೇ ಅಧಿಕಾರ- ಇರಲಿ ನೀನು ಬೇಡ ಅಂದರೆ ನಾನು ಬಿಡುತ್ತೇನೆಯೇ? ಅಜ್ಜೀ ಇವತ್ತಿನ ಸಮಾಚಾರ ಏನು ಗೊತ್ತೇ?

ನೋಡು ಕುಮಾರ, ನೀನು ತುಂಬಾ ಒರಟು ಮನುಷ್ಯ - ನಿನ್ನ ಯಾವ ಸಮಾಚಾರವೂ ನನಗೆ ಬೇಡ,

ಇಲ್ಲಿ ಕೇಳು ಅಜ್ಜೀ! ನಾನು ಹಿಂದೆ ಒರಟು ಮನುಷ್ಯನಾಗಿದ್ದೆ. ಆದರೆ ಈಗ ದೇವಿಯನ್ನು ನೋಡಿದ ಮೇಲೆ ನಾನು ಬದಲಾಗಿದ್ದೀನಿ,

ಇವತ್ತು ದೇವಿಯ ಭಾಷಣ ಇತ್ತು. ನಾನು ಇಷ್ಟು ಹೊತ್ತೂ ಅಲ್ಲಿಯೇ ಕೂತು ಕೇಳಿದೆ. ಅಬ್ಬ–ದೇವಿಯ ಒಂದೊಂದು ಮಾತೂ ನಿಜವಾದದ್ದು.

ಹೌದೇನೋ, ದೇವಿ ಪ್ರವಚನವನ್ನೂ ಹೇಳುತ್ತಾಳೆಯೋ ? ಏನು ಹೇಳಿದಳು ?

ಕಾಳೀಪ್ರಸಾದ ಮನಸ್ಸಿನ ನೋವನ್ನು ಹತ್ತಿಕ್ಕಲಾರದೇ ವ್ಯಸನದಿಂದ ಅಜ್ಜೀ ದೇವಿ ಹೇಳಿದ ಒಂದೊಂದು ಮಾತೂ ನನಗಾಗಿಯೇ ಹೇಳಿದಂತಿತ್ತು. ತಾಯಿಯೇ ದೇವರು ತಾಯಿಯ ಪ್ರೀತಿಯನ್ನು ಪಡೆದ ಮಕ್ಕಳು ಅದೃಷ್ಟವಂತರು. ತಾಯಿಯಿಲ್ಲದ ಅನಾಥ ಮಕ್ಕಳು ಬೇರೆಯವರ ಕೈಯಲ್ಲಿ ಸಿಕ್ಕಿ ನಲುಗುತ್ತಾರೆ, ಎಂದು ಹೇಳುತ್ತಾ ದೇವಿ ಅತ್ತುಬಿಟ್ಟಳು ಅಜ್ಜೀ ಈಗ ನೀನೇ ಹೇಳು, ನಾನು ತಾಯಿಯ ಪ್ರೀತಿಯನ್ನೇ ಕಾಣೆ-ತಾಯಿ ತಂದೆ ಎಲ್ಲಾ ನಾನು ಮಗುವಾಗಿದ್ದಾಗಲೇ ಸತ್ತುಹೋದರಂತೆ– ನಾನು ಅನಾಥ, ಅಜ್ಜೀ–ಎಲ್ಲಿಯೋ ಬೆಳೆದು ದುಷ್ಟನಾದೆ. ದೇವಿಯ ಮಾತು ಕೇಳಿದ ಮೇಲೆ ನನಗೆ ಒಳ್ಳೆಯವನಾಗಿ ಬಾಳಬೇಕೆಂದೆನಿಸಿದೆ.

ನಿನ್ನ ತಂದೆ ತಾಯಿ ಯಾರು ಅಂತ ನಿನಗೆ ಗೊತ್ತಿಲ್ಲವೇ, ಕುಮಾರಾ ? ಅಕ್ಕರೆಯಿಂದ ಅಜ್ಜಿ ಕೇಳಿದಳು.

ಪತ್ತೆ ಮಾಡುತ್ತೇನೆ ಅಜ್ಜೀ, ಪ್ರಯತ್ನ ಪಡುತ್ತಿದ್ದೇನೆ. ಆ ದೇವಿಯನ್ನಂತೂ ನೋಡುತ್ತಲೇ ಇರಬೇಕು ಅನ್ನಿಸುತ್ತೆ,

ಒರಟೊರಟಾಗಿ ನಡೆದುಕೊಂಡರೂ ಕಾಳೀಪ್ರಸಾದ. ನಾನು ಅನಾಥ, ಅಜ್ಜೀ ! ಎಂದು ಹೇಳಿದ ಕೂಡಲೇ ಆವನ ಮೇಲೆ ಕನಿಕರ ಉಂಟಾಯಿತು. ಅಜ್ಜಿಗೆ ಹೋಗಲಿ ಬಿಡು ಕುಮಾರಾ, ಯಾರೂ ಇಲ್ಲ ಅಂದು–ಕೊಳ್ಳಬೇಡ ! ನಾನು ನಿನಗೆ ತಾಯಿಯಂತೆ ಅಂತ ತಿಳಿದುಕೋ....ಬಾ ಚಪಾತಿ–ಪಲ್ಯ ಮಾಡಿದ್ದೀನಿ ತಿಂದು ಮಲಗು. ಎಂದು ಅಜ್ಜಿ ತಟ್ಟೆಯಲ್ಲಿ 5–6 ಚಪಾತಿ ಪಲ್ಯ ತಂದು ಕೊಟ್ಟಳು, ಅಚ್ಚ–ಅಚ್ಚ ಅಂದ.

ಹಸಿವಾಗಿತ್ತು ಕಾಳೀಪ್ರಸಾದನಿಗೆ ಗಬ–ಗಬನೆ ತಿಂದ. ಅವನ ಯೋಚನೆಯೆಲ್ಲಾ ದೇವಿಯ ಮೇಲೆ ಅಬ್ಬ ! ದೇವಿಯ ರೂಪ ಈ ದಿನ ಇನ್ನೂ ಚೆನ್ನಾಗಿತ್ತು. ಒಂದೂ ಆಭರಣವಿಲ್ಲದೆಯೇ ಎಷ್ಟು ಸುಂದರಳಾಗಿ ಕಾಣುತ್ತಿ-

ದ್ದಳು. ಹೀಗೆ ತನ್ನಷ್ಟಕ್ಕೆ ತಾನೇ ಯೋಚಿಸುತ್ತಾ ಆನಂದ ಪರವಶನಾಗಿ ಮಲಗಿದ.

ದೇವಿಯ ಯೋಚನೆಯೂ ಅದೇ ಆಗಿತ್ತು. ಆ ದಿನ ಪ್ರವಚನ ಮಾಡುವಾಗ ಜನಗಳಲ್ಲಿ ಒಳ್ಳೆ ಭಾವನೆ ಸುಸಂಸ್ಕೃತಿ ಮೂಡಿಸಬೇಕೆಂಬ ಭಾವನೆಯಿಂದ ತಾನು ಹೇಳುವ ವಿಚಾರದಲ್ಲಿ ತಲ್ಲೀನಳಾಗಿದ್ದಳು. ಆದರೆ ಒಂದು ಬಾರಿ ಸಭೆಯಲ್ಲಿ ಕಣ್ಣಾಡಿಸಿದಾಗ ಮುಂದೆಯೇ ಕುಳಿತಿದ್ದ ಕಾಳೀಪ್ರಸಾದನ ರೂಪ ಕಣ್ಣಿಗೆ ಬಿತ್ತು. ಆದರೆ ಈ ದಿನ ಅವನು ಉಡುಪನ್ನು ಪೂರ್ಣ ಬದಲಾವಣೆ ಮಾಡಿ ಸಾಧಾರಣ ಉಡುಪು ಹಾಕಿದ್ದರಿಂದ ಸರಿಯಾಗಿ ಗುರುತಿಸಲಾಗಲಿಲ್ಲ ದೇವಿಗೆ, ಮುಖದ ಮೇಲೆಲ್ಲಾ ಹರಡಿ ಗುಂಗುರು ಗುಂಗುರಾಗಿದ್ದ ಕೂದಲು ಮಾತ್ರ ಜ್ಞಾಪಿಸಿಕೊಂಡು ಅವನೇ ಇರಬಹುದು ಎಂದುಕೊಂಡಳು.

ಈ ದಿನ ಅವಳು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಳು, ತಂದೆ ತಾಯಿಯಿಲ್ಲದ ದಿಕ್ಕಿಲ್ಲದ ಅನಾಥ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಾ ಶೋಷಣೆಗೆ ಸಿಕ್ಕಿಕೊಂಡಿರುವ ಮಕ್ಕಳ ಭವಿಷ್ಯವನ್ನೂ ರೂಪಿಸಬೇಕು-ಇದಕ್ಕಾಗಿ ಅವರಿಗೆ ವಿದ್ಯಾಶಾಲೆಯೊಂದನ್ನು ಕಟ್ಟಿಸಬೇಕು. ಅದಕ್ಕಾಗಿ ಒಂದು ನಿವೇಶನವನ್ನು ಆಯ್ಕೆಮಾಡಿ ಇಂಜಿನಿಯರುಗಳೊಂದಿಗೆ ಮಾತಾಡಿ ಕಟ್ಟಡದ ರೇಖಾಚಿತ್ರವನ್ನು ತಯಾರಿಸಬೇಕು. ಈ ವಿಷಯವನ್ನು ಧರ್ಮದರ್ಶಿಗಳೊಂದಿಗೆ ಸಮಾಲೋಚನೆ ಮಾಡಿದಳು, ಆದರೆ ಅವರು ಸಾಮಾನ್ಯಕ್ಕೆ ಒಪ್ಪಲಿಲ್ಲ, ದೇವಿ ನಿಮಗೆ ಇಷ್ಟೆಲ್ಲಾ ಕಷ್ಟದ ಜವಾಬ್ದಾರಿ ಯಾಕೆ ? 8–10 ಲಕ್ಷ ರೂಪಾಯಿಗಳಾದರೂ ಬೇಕು, ಅಷ್ಟನ್ನು ವಸೂಲಿ ಮಾಡುವ ಶ್ರಮ ಸಾಮಾನ್ಯವಲ್ಲ ಈಗ ಮಾಡುತ್ತಿರುವ ಧರ್ಮ ಸಾಕು, ಎಂದರು.

ಧರ್ಮದರ್ಶಿಗಳೇ ! ನೀವು ಅನಾಥ ಮಕ್ಕಳ ಕಷ್ಟವನ್ನು ಮರೆತಂತಿದೆ. ನಮ್ಮ ಕಣ್ಣಿಗೆ ಬಿದ್ದಷ್ಟು ಮಕ್ಕಳನ್ನಾದರೂ ನಾವು ಉದ್ಧಾರಮಾಡೋಣ ಹಣದ ವಿಚಾರ ಇರಲಿ. ನನಗೆ ಉಂಗುರವನ್ನು ಕೊಟ್ಟ ವ್ಯಕ್ತಿ ಉದಾರಿ ಅವನು ಶ್ರೀಮಂತನಾಗಿದ್ದರೆ ಕೊಟ್ಟೇ ಕೊಡುತ್ತಾನೆ. ಮೊದಲು ಅವನನ್ನು

ಪತ್ತೆಮಾಡಿ- ಹೀಗೆ ಹೇಳಿ ದೇವಿ ತಾನೇ ಹೊರಟುಬಿಟ್ಟಳು ಅವಳ ಜೊತೆಯಲ್ಲಿ ಒಬ್ಬ ಸೇವಕನನ್ನು ಕರೆದುಕೊಂಡು ಕುದುರೆ ಸವಾರಿಯಲ್ಲಿ ಒಂದು ಬಯಲು ಪ್ರದೇಶದ ಕಡೆ ನಡೆದಳು.

ಅವಳು ಬರೀ ದೇವಿಯೆಂದು ಪೂಜಿಸಿಕೊಳ್ಳುವವಳಲ್ಲ ವೀರ ವನಿತೆ. ಕುದುರೆ ಸವಾರಿಯಲ್ಲಿ ಎಷ್ಟು ದೂರ ಬೇಕಾದರೂ ಸಲೀಸಾಗಿ ಹೋಗುತ್ತಿದ್ದಳು. ಆ ಬಯಲು ಪ್ರದೇಶ ಒಬ್ಬ ಜಮೀನುದಾರರ ಹೊಲವಾಗಿತ್ತು. ಅದರಲ್ಲಿ ಬೆಳೆ ಏನೂ ಆಗುತ್ತಿರಲಿಲ್ಲ ಆದ್ದರಿಂದ ದೇವಿಯ ಕೃಪೆ ಪಡೆಯ ಬೇಕೆಂದು ಆ ಎರಡು ಎಕರೆ ಹೊಲವನ್ನು ದೇವಿಗೆ ಕಾಣಿಕೆಯಾಗಿ ಬರೆದು ಕೊಟ್ಟರು. ಕುದುರೆಯನ್ನು ಮರಕ್ಕೆ ಕಟ್ಟಿಹಾಕಿ ಅಲ್ಲೆಲ್ಲಾ ಓಡಾಡಿದಳು ಏನೋ ಶೇಖರ ! ಮಕ್ಕಳ ಕಲ್ಯಾಣ ಮಂದಿರ–ಅದರೆ ಸ್ಕೂಲು ಕಟ್ಟುವುದಕ್ಕೆ ಈ ಸ್ಥಳ ಪ್ರಶಸ್ತವಾಗಿದೆಯಲ್ಲವೇ ? ಎಂದು ಸೇವಕನೊಂದಿಗೆ ಕೇಳಿದಳು.

ಅವನು ಭಕ್ತಿಯಿಂದ ದೇವಿಯ ಯಾವ ಕೆಲಸವೂ ಪ್ರಶಸ್ತವಾದುದೇ ಅಂದ. ಅಷ್ಟರಲ್ಲಿ - ಅದೋ ! ಕೇಳಿ ದೇವಿ ! ದೂರದಲ್ಲಿ ಕುದುರೆಯ ಖುರ ಪುಟ ಶಬ್ದ ಕೇಳುತ್ತಿದೆ, ಇತ್ತಲೇ ಬರುವಂತಿದೆ ಅಂದ ಶೇಖರ.

ಯಾರಾದರೂ ಬರಲಿ, ಯಾಕೆ ಭಯವೇ ಶೇಖರ ? ಇಲ್ಲ. ದೇವಿಯವರು ಇರುವಾಗ ಭಯವೆಲ್ಲಿಯದು ! ಜೈ, ರಾಜರಾಜೇಶ್ವರಿ ಅಂದ ಶೇಖರ. ಆ ವೇಳೆಗೆ ಕುದುರೆ ಸವಾರ ಹತ್ತಿರವಾಗಿ ಕಾಣಿಸಿಕೊಂಡ.

ದೇವಿಯು ಕುತೂಹಲದಿಂದ ನೋಡಿದಳು....ರಾಜ ಉಡಿಗೆಯಲ್ಲಿದ್ದ ತನಗೆ ಉಂಗುರ ತೊಡಿಸಿದ ಯುವಕ–ಅವಳಿಗೆ ಆಶ್ಚರ್ಯವಾಯಿತು. ಅವನೂ ಕುದುರೆಯಿಂದ ಛಂಗನೆ ಇಳಿದು ನೇರ ದೇವಿಯ ಹತ್ತಿರ ನಿಂತು ಅಬ್ಬ !....ನಿಮ್ಮನ್ನು ಎಲ್ಲೆಲ್ಲಿ ಹುಡುಕಲಿ ? ಎಂದು ಒರಟಾಗಿಯೇ ಮಾತನಾಡಿದ. ಅಲ್ಲಿಯೇ ಇದ್ದ ಸೇವಕ–ನೀವು ಯಾರೋ ? ದೇವಿಯನ್ನು ಹಾಗೆಲ್ಲಾ ಏಕವಚನದಲ್ಲಿ ಮಾತನಾಡಬಾರದು, ಎಂದ.

ವಚನ ಎಂದರೆ ಏನು ? ನಾನು ದೇವಿಯನ್ನು ಮಾತಾಡಿಸಿದೆ. ನೀನೇನು ಅದೆಲ್ಲಾ ಕೇಳುತ್ತೀ ? ಎಂದು ದರ್ಪದಿಂದ–ಏನು ದೇವಿ ! ನಿನ್ನನ್ನೇ ಕೇಳಿದ್ದು–

ನೀವು ಯಾರಾದರೂ ಆಗಿರಬಹುದು. ನಮ್ಮ ಸೇವಕರನ್ನೆಲ್ಲಾ ಏಕೆ ಅಧಿಕಾರದಿಂದ ಮಾತಾಡಿಸುತ್ತೀರಿ ? ನಾವು ನಿಮ್ಮನ್ನು ಕರೆಸಲಿಲ್ಲ, ಎಂದು ಎರಡು ಕೈಗಳನ್ನೂ ಸೊಂಟದ ಮೇಲೆ ಇಟ್ಟು ಅಷ್ಟೇ ದರ್ಪದಿಂದ ದೇವಿ ಉತ್ತರ ಕೊಟ್ಟಳು,

ದೇವಿಯು ಕುದುರೆ ಸವಾರಿಯಲ್ಲಿ ಬಂದಿದ್ದರಿಂದ ಅವಳ ಉಡುಪೂ ಪೈಜಾಮ-ಜುಬ್ಬಾ-ಹಾಕಿ ನಡುಪಟ್ಟಿ ಕಟ್ಟಿದ್ದಳು.

ಅವನೂ ಅಷ್ಟೇ ರೀತಿಯಾಗಿ ಸೊಂಟದ ಮೇಲೆ ಕೈಯಿಟ್ಟು ವಾಹರೇ ವಾಹ್-ಅಚ್ಛಾ....ದೇವಿ ಬಹುತ್ ಬಹದೂರ್ ಹೈ. ದೇವಿ ನಿನ್ನ ಧೈರ್ಯ ನನಗೆ ಬಹಳ ಇಷ್ಟವಾಯಿತು. ಇಂಥಾ ದೇವಿಯ ಪ್ರೀತಿ ನನಗೆ ಬೇಕು.

ಛೆ .. ನೀನು ಯಾರು ? ಇಲ್ಲಿಗೇಕೆ ಬಂದೆ ? ನೀನು ಮರೆತಂತಿದೆ, ನಾನಿಟ್ಟ ಉಂಗುರ ನಿನ್ನ ಬೆರಳಲ್ಲಿಯೇ ಇದೆ, ಅದರಿಂದ ನೀನೂ ನನ್ನಂತೆ ನನ್ನನ್ನು ಹುಡುಕುತ್ತಿರುತ್ತೀ ಎಂದ, ಗೊತ್ತಾಗುತ್ತೆ - ಎಂದು ಹೇಳುತ್ತಾ, ನಾನು ಯಾರು ಎಂದು ಈಗ ತಿಳಿಯಿತೆ ? ಎಂದು ಉಂಗುರದ ಬೆರಳನ್ನು ತನ್ನ ತುದಿ ಬೆರಳಿನಿಂದ ಮುಟ್ಟಿದ ಕಾಳೀಪ್ರಸಾದ.

ದೇವಿ ಒಂದು ಹೆಜ್ಜೆ ಹಿಂದಿಟ್ಟು, ಉಂಗುರ ಕೊಟ್ಟ ಮಾತ್ರಕ್ಕೆ ನನ್ನ ಹುಡುಕುತ್ತಾ ಏಕೆ ಅಲೆಯುತ್ತೀ ? ಇಂಥಾ ಕಾಣಿಕೆ ಎಷ್ಟೋ ಜನ ಭಕ್ತರು ಕೊಟ್ಟಿರುತ್ತಾರೆ ಅವರು ಭಕ್ತಿಯಿಂದ ನನ್ನ ಪಾದದ ಬಳಿ ಇಟ್ಟು ಹೋಗುತ್ತಾರೆ.

ಅಚ್ಚಾ ಅಚ್ಛಾ-ಅವರ ಭಕ್ತಿಯೇ ಬೇರೆ. ನಾನು ದೇವಿಗಾಗಿ ಪ್ರಾಣ-ವನ್ನಾದರೂ ಕೊಡುವ ಪ್ರೀತಿಸುವ ಭಕ್ತ - ನೋಡು ನನ್ನ ಹೃದಯದಲ್ಲಿ ದೇವಿಯ ಮೂರ್ತಿಯನ್ನು ಸ್ಥಾಪಿಸಿಬಿಟ್ಟಿದ್ದೇನೆ. ಎಂದು ಹೇಳುತ್ತಾ ತನ್ನ

ಜರಿ ಕೋಟಿನ ಗುಂಡಿಯನ್ನು ಬಿಚ್ಚಿ ತನ್ನ ವಿಶಾಲ ಎದೆಯನ್ನು ಮುಂದೆ ಚಾಚಿ ಅವಳ ಹತ್ತಿರ ನಿಂತ.

ದೇವಿಯು ಕಣ್ಣುಗಳನ್ನು ಅರಳಿಸಿ ಅವನ ವಿಶಾಲ ವಕ್ಷಸ್ಥಲವನ್ನು ರೆಪ್ಪೆ ಬಡಿಯದೆ ನೋಡುತ್ತಿದ್ದಳು. ಅಬ್ಬ! ಇವನ ವಿಶಾಲ ದೃಢ-ಎದೆಯಲ್ಲಿ ಎಂತಹ ಪುರುಷ ಲಕ್ಷಣವಿದೆ ? ತಾನು ಒಂದೇ ಸಮ ನೋಡು ತ್ತಿರುವುದು ತಿಳಿದು ನಾಚಿಕೆಯಿಂದ ಮುಖ ತಗ್ಗಿಸಿ ಹಿಂದೆ ಸರಿದಳು.

ಅವಳ ಮನಸ್ಸಿನಲ್ಲಿ ನಾನಾ ವಿಚಾರಗಳು ಮೂಡಿ ಬಂದುವು-ನನ್ನನ್ನು ದೇವಿಯೆಂದೇ ಭಾವನೆಯಿಂದ ಜನರು ನನ್ನಲ್ಲಿ ಭಯ ಭಕ್ತಿಯನ್ನಿಟ್ಟು ಪೂಜಿಸುತ್ತಾರೆಯೇ ವಿನಃ ನನ್ನಲ್ಲಿ ಧೈರ್ಯವಾಗಿ ಒಬ್ಬನಾದರೂ ಪ್ರೀತಿ ಅನ್ನುವ ಮಾತನ್ನಾಡಲು ಭಯಪಡುತ್ತಾರೆ ನನಗೂ 18 ರ ಪ್ರಾಯ. ದೇವಿಯಾಗಿ ಬೇಕಾದಷ್ಟು ಹಣ ಸಂಪಾದಿಸಿದ್ದಾಯಿತು-ಎಲ್ಲಾ ಧರ್ಮದರ್ಶಿ ಗಳ ಇಚ್ಛೆ, ಅಧಿಕಾರದಲ್ಲಿಯೇ ನಡೆಯುತ್ತಿದೆ. ನನಗೂ ಒಬ್ಬ ಪ್ರಿಯಕರನ ಪ್ರೀತಿ ಬೇಕು ಎಂಬುದು ಅವರ ದೃಷ್ಟಿಯಲ್ಲಿ ಇಲ್ಲವೇ ಇಲ್ಲ, ಈ ಯುವಕನ ದಿಟ್ಟತನದ ಮಾತು ನನ್ನ ಮನಸ್ಸನ್ನೇನೋ ಸೆಳೆಯುತ್ತಿದೆ, ಅವನನ್ನೇ ನೋಡುತ್ತಾ-ನನಗಾಗಿ ಪ್ರಾಣಕೊಡುವ ಮಾತು ಹಾಗಿರಲಿ. "ನೀನು ಯಾರು ? ಎಲ್ಲಿದ್ದೀ ? ಏನು ಕೆಲಸ ? ಎಲ್ಲಾ ತಿಳಿಸು"

ಹಾಗೆಲ್ಲಾ ಜಬರ್‌ದಸ್ತಿಯಿಂದ ಕೇಳಿದರೆ ನಾನು ಹೇಳುವವನಲ್ಲ ನಿನ್ನ ಧರ್ಮಕಾರ್ಯಗಳಿಗೆ ಎಷ್ಟು ಕೋಟಿ ಹಣಬೇಕೋ ಕೊಡುವವನು ನಾನು, ಮರ್ಯಾದಿಯಾಗಿ ನಿನ್ನ ರಾಜೇಶ್ವರಿ ಭವನಕ್ಕೆ ನನ್ನನ್ನು ಕರೆಸಿ ಕೊಂಡು ನನ್ನೊಂದಿಗೆ ಮಾತಾಡು-ಆಗ ಎಲ್ಲಾ ಹೇಳುತ್ತೇನೆ. ಇದೋ ನೋಡು ಈ ಬೆಲೆ ಬಾಳುವ ಪಚ್ಚೆ-ಮುತ್ತಿನ ಹಾರವನ್ನು ನಿನಗಾಗಿ ತಂದೆ ನಿನ್ನ ಭವನ - ಛತ್ರ ಊರೆಲ್ಲಾ ಹುಡುಕಿ ಕಡೆಗೆ ಪತ್ತೆ ಮಾಡಿ ಇಲ್ಲಿಗೆ ಬಂದೆ, ಈ ಹಾರವನ್ನು ಈ ದಿನವೇ ನಿನಗೆ ಕೊಡಬೇಕೆಂದು ಹಠ ತೊಟ್ಟೆ ನೋಡು, ಎಂದು ತನ್ನ ಕಿಸೆಯಲ್ಲಿದ್ದ ಅಮೂಲ್ಯ ಮುತ್ತಿನ ಹಾರವನ್ನು ತೆಗೆದು ಕೈಯಲ್ಲಿಟ್ಟುಕೊಂಡು ತೋರಿಸಿದ.

ದೇವಿಗೆ ಕುತೂಹಲ, ಒಂದು ಕಡೆ–ಇವನು ಎಂತಹ ಶ್ರೀಮಂತ ಎನ್ನಿಸಿತು. ನೀನು ಕೊಡಬೇಕೆಂದು ಹಠತೊಟ್ಟು ಬಂದರೆ, ನಾನು ತೆಗೆದು ಕೊಳ್ಳುವುದಿಲ್ಲ ಎಂದರೆ ಏನು ಮಾಡುತ್ತೀ ? ಎಂದು ಸವಾಲ್ ಹಾಕುವಂತೆ ಕೇಳಿದಳು.

ಅದೇ ಮಾಡುವುದು–ಎಂದವನೇ ಕಾಳೀಪ್ರಸಾದ ಅವಳ ಹಿಂಬದಿಗೆ ಹೋಗಿ ಮುತ್ತಿನ ಹಾರವನ್ನು ಅವಳ ಕುತ್ತಿಗೆಗೆ ಹಾಕಿ ಹಾರದ ಕೊಕ್ಕೆ ಯನ್ನು ಭದ್ರವಾಗಿ ಅಮುಕಿ-ಈಗ ನೋಡು ಎಂದ...

ಇದೇನು ಇವನ ಉದ್ಧಟತನ ! ಎಂದು ದೇವಿ ಒಂದು ಕ್ಷಣ ಸ್ಥಬ್ಧಳಾಗಿ ನಿಂತಳು, ನಂತರ ದೂರದಲ್ಲಿ ಕೈಕಟ್ಟಿ ನಿಂತಿದ್ದ ಸೇವಕನನ್ನು ಶೇಖರ ಅವರನ್ನು ಮರ್‍ಯಾದಿಯಿಂದ ನಡೆದುಕೊಳ್ಳುವಂತೆ ಹೇಳು. ಎಂದು ಕತ್ತಿನಲ್ಲಿದ್ದ ಮುತ್ತಿನ ಹಾರವನ್ನು ತೆಗೆಯಲು ನೋಡಿದಳು ಆಗಲಿಲ್ಲ.

ದೇವಿ ನೋಡು-ಹಾಗೆಲ್ಲಾ ಮೊಂಡತನ ಮಾಡಬೇಡ ! ಆ ಹಾರದ ತಿರುಗುಣಿಯೇ ಬೇರೆ ತರಹ! ನೀನು ಏನು ಮಾಡಿದರೂ ತೆಗೆಯಲಾರೆ ನನಗೆ ಮಾತ್ರ ಗೊತ್ತು. ಇದು ಎಲ್ಲರೂ ನಿನ್ನ ಪಾದದ ಬಳಿ ಇಟ್ಟು ಹೋಗುವ ಕಾಣಿಕೆಯಂತಲ್ಲ ! ಇದು ನನ್ನ ಪ್ರೀತಿಯ ಕಾಣಿಕೆ. ಅದಕ್ಕೆ ನಾನೇ ನಿನ್ನ ಕುತ್ತಿಗೆಗೆ ಹಾಕಿದ್ದೇನೆ–ತೆಗೆಯಬೇಡ ಉಂಗುರ ಒಂದು ಸಲ ಮುತ್ತಿನಹಾರ ಒಂದು ಸಲ ನೋಡಿ ನೋಡಿ ನನ್ನನ್ನು ಜ್ಞಾಪಿಸಿಕೋ ಎಂದು ಧೀರನಂತೆ ಕುದುರೆಯ ಬೆನ್ನು ತಟ್ಟುತ್ತಾ ನಿಂತ ಕಾಳೀಪ್ರಸಾದ-

ಸರಿ ಇರಲಿ ಶೇಖರ ಕುದುರೆ ಬಿಚ್ಚಿ ತೆಗೆದುಕೊಂಡು ಬಾ.... ಎಂದು ಹೇಳಿ ದೇವಿಯಿಂದ – ನಿನ್ನನ್ನು ಸರಿಯಾಗಿ ವಿಚಾರಿಸಿಕೊಳ್ಳುತ್ತೇನೆ ನಾಳೆ ಹನ್ನೆರಡು ಗಂಟೆಗೆ ಸರಿಯಾಗಿ ರಾಜರಾಜೇಶ್ವರಿ ಭವನಕ್ಕೆ ಬಾ.... ಅಲ್ಲಿ ನಿನಗೆ ಉತ್ತರ ಹೇಳುತ್ತೇನೆ–ಎಂದು ಕಾಳೀಪ್ರಸಾದನನ್ನು ಒಂದು ಮೋಹಕ ದೃಷ್ಟಿಯಿಂದ ನೋಡಿ ಚಕ್ಕನೆ ಕುದುರೆ ಹತ್ತಿದಳು ದೇವಿ.

ಕುದುರೆ ಎರಡು ಹೆಜ್ಜೆ ಮುಂದಿಡುವಷ್ಟರಲ್ಲಿ ಕಾಳೀಪ್ರಸಾದ ಅದರ ಲಗಾಮನ್ನು ಹಿಡಿದು ನಿಲ್ಲಿಸಿ....ಏ-ದೇವಿ....ನೀನೇನೋ ಅಲ್ಲಿಗೆ ಬಾ ಎಂದು ಹೇಳಿಬಿಟ್ಟೆ. ನಿನ್ನ ಬಾಗಿಲು ಕಾಯುವ ಭಟರಿದ್ದಾರಲ್ಲಾ, ಭಂಡರು

ಹಿಳಕ್ಕೇ ಬಿಡುವುದಿಲ್ಲ. ಹಾಗೇನಾದರೂ ಅವರು ತಡೆದರೆ, ಅವರ ಕಾಲು ಮುರಿದು ಹಿಳಕ್ಕೆ ಬರುತ್ತೇನೆ. ಅಷ್ಟೆ.

"ಹಾಗೇನಿಲ್ಲ, ಎಂದು ದೇವಿ ಲಗಾಮು ಜಗ್ಗಿದಳು" ಕಾಳೀಪ್ರಸಾದ ಹಿಡಿದಿದ್ದ....ಎಲ್ಲಿ ಕೈ ಬಿಡು. ನಾನು ಹೋಗಬೇಕು, ಎಂದು ಮೃದು-ವಾಗಿಯೇ ಕೇಳಿದಳು

ಅವಳು ಇಳಿಬಿಟ್ಟಿದ್ದ ಸುಕೋಮಲವಾದ ಕಾಲನ್ನು ಕೈಗೆ ತೆಗೆದು-ಕೊಂಡು ಕಾಳೀಪ್ರಸಾದ ಪ್ರೇಮಪೂರಿತನಾಗಿ ಚುಂಬಿಸಿದ.

ದೇವಿಯ ಕುದುರೆ ನಾಗಾಲೋಟದಲ್ಲಿ ಓಡಿತು. ಕಣ್ಮರೆಯಾಗುವ-ವರೆಗೂ ಕಾಳೀಪ್ರಸಾದ ಅಲ್ಲಿಯೇ ನಿಂತು ನೋಡುತ್ತಿದ್ದ. ದೇವಿಯ ಹಿಂದೆಯೇ ಶೇಖರನೂ ಹೋದ, ದೇವಿಗೆ ಎದುರಾಗಿ ಒಂದು ಮಾತೂ ಆಡುವವನಲ್ಲ ಆದರೂ ದೇವಿ ಯಾರೊಂದಿಗೂ ಇಷ್ಟು ಮಾತಾಡಲು ಅವಕಾಶ ಕೊಡದವರು ಆ-ಒರಟು-ಅನಾಗರಿಕ ಮನುಷ್ಯನೊಂದಿಗೆ ಸಹನೆ ಯಿಂದ ಮಾತನಾಡಿದರಲ್ಲಾ ! ಏನೋ ಅನುಗ್ರಹ ಹುಂ-ಎಂದುಕೊಂಡ.

ದಣಿದು ಬಂದಿದ್ದ ದೇವಿ ಉಡುಪನ್ನೂ ಬದಲಾಯಿಸದೆ ಹಾಯ್ ಎಂದು ತನ್ನ ರೂಮಿನಲ್ಲಿ ಹಾಸಿಗೆಯ ಮೇಲೆ ಕಾಲು ಚಾಚಿ ಮಲಗಿದಳು. ಆದರೆ ಅವಳ ಮನಸ್ಸೆಲ್ಲಾ ಆ ಧೀರ ಮೋಹಕ ಯುವಕನನ್ನೇ ನೆನೆಯು ತ್ತಿತ್ತು. ತನ್ನ ಕೊರಳನ್ನು ಮುಟ್ಟಿ ನೋಡಿಕೊಂಡಳು. ಅವನೇ ಕೊರಳಿಗೆ ತೊಡಿಸಿದ ಮುತ್ತಿನ ಹಾರ, ಮಧ್ಯೆ ಮಧ್ಯೆ ಬೆಲೆ ಬಾಳುವ ಪಚ್ಚೆಯ-ಮಣಿ. ಆ ಪಚ್ಚೆಯ ಹೊಳಪು ಕಣ್ಣಿಗೆ ತಂಪಾಗಿತ್ತು, ಸರವನ್ನು ಕೈಯಲ್ಲಿ ಎತ್ತಿ ಎತ್ತಿ ನೋಡಿದಳು ಏನೋ ಒಂದು ಹಿತವಾದ ಭಾವನೆ. ಒರಟಾದರೂ ಸೀದಾ ಸಾದಾ ಮನುಷ್ಯ. ಅವನು ನನ್ನ ಕಾಲಿಗೆ ಮುತ್ತಿಡುವಾಗ ಏನೋ ಒಂದು ವಿಧ ರೋಮಾಂಚನವಾಯಿತು., ಅಬ್ಬ! ಅವನ ಧೈರ್ಯವನ್ನು ಮೆಚ್ಚಬೇಕಾದ್ದೇ. ಎಂದು ದೇವಿ ಕಲ್ಪನಾಲೋಕ ದಲ್ಲಿರುವಾಗಲೇ ಧರ್ಮದರ್ಶಿಗಳು ಬಂದರು, ನೇರ ದೇವಿಯ ರೂಮಿಗೆ ಬಂದು ಮಂಚದ ಬಳಿ ಕುಳಿತರು.

ಏಕೆ ! ದೇವಿ ತುಂಬಾ ಆಯಾಸಗೊಂಡಂತಿದೆ. ನಾನು ಆಗಲೇ ಹೇಳಿದ್ದೆ ಕುದುರೆ ಸವಾರಿಯಲ್ಲಿ ಸುತ್ತಬೇಡಿ ಎಂದು ಎಲ್ಲೆಲ್ಲಿ ಸುತ್ತಿದಿರಿ?

ನನಗೇನೂ ಆಯಾಸವಾಗಿಲ್ಲ, ಎಲ್ಲಾ ಹೇಳುತ್ತೇನೆ- ನಿಮಗೇ ತುಂಬಾ ಸುಸ್ತಾಗಿರುವಂತಿದೆ, ಪಾಪ! ನೀವು ಎಲ್ಲಿ ಹೋಗಿದ್ದಿರಿ ?

ಒಳ್ಳೇ ಹುಡುಗಿ....ನನ್ನನ್ನೇ ಸುಸ್ತಾಗಿದ್ದೀರಿ ಎಂದು ಹೇಳಿದಿತಲ್ಲಾ.... ಸರಿಯೇ ! ಸಾಕಾಗಿ ಹೋಯಿತು–ನನಗೂ-ನಮ್ಮ ಛತ್ರದ ಹಿಂಭಾಗದ ಕಟ್ಟಡ ಅರ್ಧಕ್ಕೆ ನಿಂತು ಹೋಗಿತ್ತಲ್ಲಾ, ಅದಕ್ಕೆಲ್ಲಾ ಬೇಕಾದ ಇಟ್ಟಿಗೆ-ಮರದ ಸಾಮಾನು ಎಲ್ಲಾ ಕೊಡಿಸಿ, ಅದಕ್ಕೆಲ್ಲಾ ಸರಿಯಾಗಿ ವ್ಯವಸ್ಥೆ ಮಾಡಿ ಬಂದೆ. ನೋಡು ಇನ್ನು ಇಂತಹ ಯಾವ ಕೆಲಸಕ್ಕೂ ಕೈ ಹಾಕ ಬೇಡ, ಎಂದು ಬೆವರು ಒರೆಸಿಕೊಳ್ಳುತ್ತಾ ಉಡುಪು ಬದಲಾಯಿಸಿ ಪಂಚೆ ಉಟ್ಟುಕೊಂಡರು ಧರ್ಮದರ್ಶಿಗಳು.

ಧರ್ಮದರ್ಶಿಗಳು ಎಂದು ಜನಗಳೆಲ್ಲಾ ಗೌರವಿಸಿದರೂ ದೇವಿಗೆ ಮಾತ್ರ ಸಹೋದರನಂತೆ ಸಲಿಗೆ, ಅವರಿಗೂ ತಂಗಿಯ ಹಾಗೆ ಮಮತೆ ಅನೇಕ ಬಾರಿ ಏಕವಚನದಲ್ಲಿಯೇ ಕರೆಯುತ್ತಿದ್ದರು.

ಧರ್ಮದರ್ಶಿಗಳು ನನ್ನತ್ತ ಗಮನಿಸಲೇ ಇಲ್ಲ ಇತ್ತ ನೋಡಿ-ಎಂದು ತನ್ನ ಕತ್ತಿನಲ್ಲಿದ್ದ ಪಚ್ಚೆ ಮುತ್ತಿನ ಹಾರವನ್ನು ತೋರಿಸಿದಳು. ಕೈಯಲ್ಲಿ ನೋಡಿ–ಇದೆಲ್ಲಿಯದು ? ಇಷ್ಟು ಬೆಲೆ ಬಾಳುವ ಹಾರ ? ಎಲ್ಲಿ ಹೋಗಿ-ದ್ದರಿ? ದೇವಿಯವರು ? ಎಂದು ಹಾಸ್ಯ ಮಾಡುತ್ತಾ ಕೇಳಿದರು.

ನೋಡಿ ನೀವು ಯಾವ ಕೆಲಸಕ್ಕೂ ಇನ್ನು ಕೈಹಾಕಬೇಡ ಎನ್ನುತ್ತೀರಿ. ಆದರೆ ನಮಗೆ ದುಡ್ಡೇ ಪ್ರಾಧಾನ್ಯ ಅಲ್ಲ. ಬಂದ ಹಣವನ್ನು ಸದ್ವಿನಿಯೋಗ ಪಡಿಸಬೇಕು....

ಅಲ್ಲಾ ...ಪಚ್ಚೆ ಹಾರ ಎಲ್ಲಿಯದು ? ಅಂದರೆ ಏನೋ ಉಪದೇಶ ಮಾಡುತ್ತೀರಿ.

ಅದೇ ಈ ವಜ್ರದ ಉಂಗುರ ಕೊಟ್ಟ ಯುವಕ. ಈ ಪಚ್ಚೆ ಮುತ್ತು ಹಾರವನ್ನು ಕೊಟ್ಟ.

ಶಾಂತವಾಗಿ ಮಾತಾಡುತ್ತಿದ್ದವರು ಇದ್ದಕ್ಕಿದ್ದಂತೆ ರೋಷಾ-ವೇಶದಿಂದ ಅವನು ಯಾರು ? ನೀನೇಕೆ ತೆಗೆದುಕೊಂಡೆ ? ಅವನಿಗೆ ಬಹಳ ಸಲಿಗೆಯಾಗಿ ಬಿಟ್ಟಿದೆ, ನೀನು ಇದ್ದ ಕಡೆಗೆ ಹೇಗೆ ಬಂದ ?

ಧರ್ಮದರ್ಶಿಗಳಿಗೆ ಕೋಪ ಬಂದರೆ ಸಾಮಾನ್ಯವಲ್ಲ-- ದೇವಿ ಅವರೊಬ್ಬರಿಗೆ ಮಾತ್ರ ಹೆದರುತ್ತಿದ್ದಳು, ತಲೆತಗ್ಗಿಸಿ ಹೆದರುತ್ತಲೇ.... ಅವನೂ ಕುದುರೆಯ ಮೇಲೆಯೇ ಬಂದ. ಎಲ್ಲೆಲ್ಲೋ ನನ್ನನ್ನು ಹುಡುಕಿ ಕಡೆಗೆ ನಾನಿದ್ದ ಕಡೆಗೆ ಬಂದ ಎಂದಳು.

ನೀನು ಕುದುರೆ ಸವಾರಿಯಲ್ಲಿ ಎಲ್ಲಿ ಹೋಗಿದ್ದೆ, ಸೇವಕರನ್ನು ಕರೆದುಕೊಂಡು ಹೋಗಿರಲಿಲ್ಲವೇ ?

ಜೊತೆಯಲ್ಲಿ ಶೇಖರ ಬಂದಿದ್ದ. ಆ ಯುವಕ ನಾನು ಬೇಡವೆಂದರೂ ಈ ಪಚ್ಚೆ ಹಾರವನ್ನು ಕತ್ತಿಗೆ ಹಾಕಿಬಿಟ್ಟ,

ಅವನು ಯಾರು ? ಎಲ್ಲಿದ್ದಾನೆ ಕೇಳಿದೆಯಾ ? ಇಲ್ಲ ಆ ಯುವಕ ಬಹಳ ಜೋರಾಗಿದಾನೆ. ತುಂಬಾ ಶ್ರೀಮಂತನಂತೆ ಕಾಣುತ್ತಾನೆ- ನಿಮ್ಮ ಧರ್ಮಕಾರ್ಯಗಳಿಗೆ ನಾನೊಬ್ಬನೇ ಕೋಟಿ ರೂಪಾಯಿ ಕೊಡುತ್ತೇನೆ. ಎಲ್ಲರ ಬಳಿ ಕಾಣಿಕೆ ಏಕೆ ಬೇಡುತ್ತೀರಿ ? ಎಂದು ಗತ್ತಿನಿಂದ ಹೇಳಿದ. ಸ್ವಲ್ಪ ಧೈರ್ಯವಾಗಿ ದೇವಿ ಹೇಳಿದಳು.

ಸರಿ ಇರಲಿ, ನಾನು ವಿಚಾರಿಸಿಕೊಳ್ಳುತ್ತೇನೆ ಅವನು ಎಲ್ಲಿದ್ದಾನೆ ?

ಗೊತ್ತಿಲ್ಲ....ಹಾಗೆಲ್ಲಾ ಕೇಳಿದರೆ ನಾನು ಹೇಳುವುದಿಲ್ಲ ಮರ್ಯಾದಿಯಿಂದ ನಿಮ್ಮ ಭವನಕ್ಕೆ ಕರೆಸಿಕೊಳ್ಳಿ, ಹೇಳುತ್ತೇನೆ ಎಂದು ಕುದುರೆ ಏರಿ ಹೊರಟೇ ಬಿಟ್ಟ.

ಧರ್ಮದರ್ಶಿಗಳಿಗೆ ದೇವಿಯ ಮೇಲೆ ಪೂರ್ಣ ಅಧಿಕಾರ. ಕೋಪದಿಂದಲೇ – ನಾವು ಇದುವರೆಗೂ ಮರ್ಯಾದಿಯಾಗಿ ನಡೆದುಕೊಂಡದ್ದನ್ನು ನೀವು ಮಣ್ಣು ಪಾಲು ಮಾಡುತ್ತಿದ್ದೀರಿ. ಜನ ಏನೆಂದುಕೊಳ್ಳುವುದಿಲ್ಲ ?

ಜನ ದೇವಿ ಎಂದು ಕಾಣಿಕೆ ಕೊಡುತ್ತಿದ್ದಾರೆ ಈ ಯುವಕ ಮುಗ್ಧ ಮನಸ್ಸಿನಿಂದ ದೇವಿಗೆ ನನ್ನ ಸರ್ವಸ್ವವನ್ನೂ ಒಪ್ಪಿಸುತ್ತೇನೆ ಎಂದು ಕೊಡುತ್ತಾನೆ, ಎರಡೂ ಒಂದೇ ಧರ್ಮದರ್ಶಿಗಳೇ....ಹಣ ಸಂಪಾದಿಸು-ವುದಕ್ಕಾಗಿ ನಾವು ಮಾಡುತ್ತಿಲ್ಲ ಜನರ ಒಲುಮೆ ಬೇಕು ಧರ್ಮ-ಕಾರ್ಯಕ್ಕಾಗಿ ಹಣ-

ನನಗೆ ನಿಮ್ಮ ಉಪದೇಶ ಬೇಕಾಗಿಲ್ಲ. ಬನ್ನೀ ಊಟ ಮಾಡೋಣ. ಅವನು ಎಲ್ಲಿದ್ದರೂ ಪತ್ತೆ ಮಾಡುತ್ತೇನೆ.

ಅಂತಹ ಕಷ್ಟ ಏನೂ ಇಲ್ಲ ನಾಳೆ 12 ಗಂಟೆಗೆ ನಮ್ಮ ಭವನಕ್ಕೆ ಬರಲು ಹೇಳಿದ್ದೇನೆ. ನೀವೇ ಮಾತಾಡಿ, ಎಂದು ಸಮಾಧಾನವಾಗಿ ಊಟಕ್ಕೆ ಕುಳಿತರು,

ಅಡಿಗೆಯವರು–ಸೇವಕರು ಎಲ್ಲಾ ನಂಬಿಕೆಯುವರಾಗಿದ್ದರು, ಅಡಿಗೆಯ ಹೆಂಗಸು ಶಾಂತಮ್ಮ ದೇವಿಯುನ್ನು ಮಗಳಿನಂತೆ ಪ್ರೀತಿಸುತ್ತಿದ್ದಳು. ದಿನಕ್ಕೊಂದು ಬಗೆ ಅಡಿಗೆ ಮಾಡಿ ಬಡಿಸುತ್ತಿದ್ದಳು, ಯಾವುದಕ್ಕೂ ಕೊರತೆ ಇರಲಿಲ್ಲ, ದೇವಿ ಸರಿಯಾಗಿ ಊಟ ಮಾಡದೇ ಬಡಿಸಿದ್ದನ್ನು ಬೆರಳಿನಲ್ಲಿ ಕೆದಕುತ್ತಾ ಎಲ್ಲೋ ಜ್ಞಾನವಾಗಿದ್ದಳು, ಅವಳ ಯೋಚನೆ ನಾಳೆ ಆ ಯುವಕ ಬಂದಾಗ ಈ ಧರ್ಮದರ್ಶಿಗಳು ಏನು ಹಗರಣ ಮಾಡು-ತ್ತಾರೋ ? ಎಂದೇ. ಅವನಿಗೆ ಏನಾದರೂ ಅಂದು ಅವಮಾನ ಮಾಡ ಬಾರದೆಂದು ಧರ್ಮದರ್ಶಿಗಳಿಗೆ ಹೇಳುವಷ್ಟು ಧೈರ್ಯ ದೇವಿಗೆ ಇಲ್ಲ.

✦ ✦ ✦ ✦

ಕಾಳೀಪ್ರಸಾದ ದೇವಿಯ ಹಂಬಲಿನಲ್ಲಿ ರಾತ್ರಿ ಕಳೆದ. ಎಲ್ಲರೂ ದೇವಿಯೆಂದು ಭಕ್ತಿ ಮಾಡಿದರೆ ಇವನಿಗೆ ಮಾತ್ರ ಅವಳಲ್ಲಿ ಮೋಹ. ಅವಳ ಆಕರ್ಷಣೆ ಇವನನ್ನು ಹುಚ್ಚನನ್ನಾಗಿ ಮಾಡಿತ್ತು. ಹೆಣ್ಣಿನ ಸಂಪರ್ಕವೇ ಇಲ್ಲದೆ ಬೆಳೆದ ಅವನು ಇದ್ದಕ್ಕಿದ್ದಂತೆ ಹೆಣ್ಣಿನ ಸಂಗ–ಸಹವಾಸ ಎಷ್ಟು ಖುಷಿಯುನ್ನು ಕೊಡುತ್ತೆ ? ಮನಸ್ಸು ಹುಚ್ಚು ಕುದುರೆ ಯಂತಾಗಿದೆಯಲ್ಲಾ. ಆ ದೇವಿ ಎಂತಹ ಮೋಹಕ ಹೆಣ್ಣು ! ಅಷ್ಟೇ ಧೀರ–ಧೈರ್ಯದವಳು. ಯಾವಾಗಲೂ ಅವಳ ಜೊತೆಯಲ್ಲಿಯೇ ಇರಬೇಕೆನ್ನಿ ಸುತ್ತಿದೆಯಲ್ಲಾ ! ಎಂದು ರಾತ್ರಿಯಲ್ಲಾ ಅವಳ ನೆನಪಿನಲ್ಲಿಯೇ ಕಳೆದ,

ಮಧ್ಯಾಹ್ನ ಹನ್ನೆರಡು ಗಂಟೆ ಆಗುವುದನ್ನೇ ಕಾದಿದ್ದ. ಹೇಗೋ ಒರಟೊರಟಾಗಿ ಇದ್ದವನು, ಕನ್ನಡಿ ಮುಂದೆ ನಿಂತು ಅಚ್ಚುಕಟ್ಟಾಗಿ ಶೃಂಗಾರ ಮಾಡಿಕೊಂಡ. ಕೆದರಿದ್ದ ಕೂದಲನ್ನು ಬಾಚಿದ. ಹಾಗೂ ಗುಂಗುರು ಕೂದಲು ಹಾರಾಡುತ್ತಿತ್ತು. ಮೊದಲೇ ಸುಂದರ ಯುವಕ. ಈ ದಿನ ತುಂಬಾ ಚೆನ್ನಾಗಿ ಕಾಣುತ್ತಿದ್ದ, ಬೆಲೆ ಬಾಳುವ ಉಡುಪನ್ನು ಹಾಕಿಕೊಂಡ- ಅಜ್ಜಿ ಇವನ ಶೃಂಗಾರವನ್ನೆಲ್ಲಾ ನೋಡುತ್ತಿದ್ದಳು ...

ಸೊಂಟದ ಮೇಲೆ ಕೈಯಿಟ್ಟು ಅವನನ್ನು ತಲೆಯಿಂದ ಕಾಲಿನವರೆಗೂ ಒಂದೇ ದೃಷ್ಟಿಯಿಟ್ಟು ನೋಡಿದಳು.

ಅಜ್ಜೀ....ಏನು ಹಾಗೆ ನೋಡುತ್ತೀ ? ನಾನು ಚೆನ್ನಾಗಿಲ್ಲವಾ ? ಕುಮಾರಾ ! ನಿನ್ನನ್ನು ನೋಡುತ್ತಾ ನಾನು ಮೈ ಮರೆತು ಬಿಡುತ್ತೇನೆ ಕಣಪ್ಪಾ ! ನನ್ನ ತಪ್ಪು ಜಹಗೀರ್‌ದಾರರ ಬೆಲೆ ಬಾಳುವ ಉಡುಪನ್ನು ಒಂದೊಂದು ಸಲ ಹಾಕಿಕೊಳ್ಳುತ್ತಿದ್ದ, ಥೇಟ್ ಹೀಗೆಯೇ ಇದ್ದ. ನವ ಮನ್ಮಥನಂತಿದ್ದೀಯಪ್ಪಾ ! ಅದೇ ನೆನಪು ನನಗೆ, ಏನು ಇಷ್ಟು ಖುಷಿಯಾಗಿ ಎಲ್ಲೋ ಹೊರಟೆಯಲ್ಲಾ ! ನಿನ್ನ ವಿಚಾರ ಒಂದೂ ನನಗೆ ಹೇಳೋಲ್ಲ ! ಏನು ನಿನ್ನ ಕಾರ್ಯಭಾರ–

ಅಚ್ಛಾ–ಅಚ್ಛಾ–ಹೇಳುತ್ತೇನೆ. ಈವತ್ತು ಆ ದೇವಿಯನ್ನು ನೋಡು ವುದಕ್ಕೆ ಅವಳ ಭವನಕ್ಕೆ ಹೋಗುತ್ತಿದ್ದೇನೆ ಅಜ್ಜೀ ಅವಳೇ ಬರುವುದಕ್ಕೆ ಹೇಳಿದಾಳೆ. ಅವಳು ತುಂಬಾ ಚೆನ್ನಾಗಿದ್ದಾಳೆ. ನನಗೆ ಅವಳನ್ನು ನೋಡಬೇಕೆಂದರೆ ಖುಷಿ.

ಏನೋಪ್ಪ ! ಅವಳ ಮನೆ ಹತ್ತಿರ ತುಂಬಾ ಸೇವಕರು ಕಾವಲಿದ್ದಾ ರಂತೆ ಯಾರನ್ನೂ ಒಳಕ್ಕೆ ಬಿಡುವುದಿಲ್ಲವಂತೆ. ನೀನೇನು ಅವಳನ್ನು ನೋಡುವುದು ?

ಅಜ್ಜೀ....ನಾನು ಎಂತಹ ಹಠವಾದಿ ಎನ್ನುವುದು ನಿನಗೆ ಗೊತ್ತಿಲ್ಲ, ಒಳಕ್ಕೆ ಬಿಡದಿದ್ದರೆ ಅವರನ್ನು ಒಂದೇ ಕೈಯಲ್ಲಿ ದಬ್ಬಿ ಹೋಗುತ್ತೇನೆ. ನಾನು ಯಾರಿಗೂ ಹೆದರುವವನಲ್ಲ-ಅಯ್ಯೋ ಬಿಡು ಅಜ್ಜಿ, ನನ್ನ ವಿಚಾರ ನಿನಗೆ ಇನ್ನೂ ಗೊತ್ತಿಲ್ಲ. ಗೊತ್ತಾದರೆ ನಡುಗಿ ಬಿಡುತ್ತೀಯಾ !

ಏನೋ ಇದು–ಸಾಧಾರಣ ಹುಡುಗನಂತೆ ಅಜ್ಜೀ... ಎಂದು ಇರುತ್ತೀ ಇದ್ದಕ್ಕಿದ್ದಂತೆ ಭಯವಾಗುವಂತೆ ಮಾತಾಡುತ್ತೀ—ನೋಡು ಕುಮಾರಾ ! ಇನ್ನು ನಿನ್ನ ಪೂರ್ತಿ ವಿಚಾರ-ನಿನ್ನ ಅಪ್ಪ ಅಮ್ಮ ಯಾರು ? ಎಲ್ಲಿ ಬೆಳೆದೆ ಎಂದು ಹೇಳುವವರೆಗೂ ಈ ಮನೆಗೆ ಬರಬೇಡ–ತಿಳಿಯಿತೇ ?

ಅಜ್ಜಿ ಈಗ ಸುಮ್ಮನಿರು ದೇವಿಯ ಮನೆಗೆ ಹೋಗುವಾಗ ಏನೇನೋ ಕೇಳಬೇಡ. ಒಂದು ದಿನ ಎಲ್ಲಾ ನಿನಗೆ ಹೇಳುತ್ತೇನೆ ಅಚ್ಛಾ ಎಂದು ಕುದುರೆ ಏರಿ ಹೊರಟೇ ಬಿಟ್ಟ.

ರಾಜೇಶ್ವರೀ ಭವನದೊಳಕ್ಕೆ ಹೋಗಲು ಇವನನ್ನು ಯಾರೂ ತಡೆಯಲಿಲ್ಲ, ಕುದುರೆಯನ್ನು ಹೊರಗೆ ಕಟ್ಟಿ ಹಾಕಿದ. ಠೀವಿಯಿಂದ, ಅಲ್ಲಿ ನಿಂತಿದ್ದ ಸೇವಕನಿಗೆ ಕುದುರೆಗೆ ಹುಲ್ಲು ತಂದು ಹಾಕು. ನಿಮ್ಮ ದೇವಿಯು ಕುದುರೆಗೆ ಹುಲ್ಲು ತಂದಿರುತ್ತಲ್ಲಾ ! ಅದೇ ತಂದು ಹಾಕು ಎಂದ.

ಸೇವಕ ಭಯದಿಂದ, ಹುಂ ಹಾಕುತ್ತೇನೆ ಎಂದ.

ನೇರ ಒಳಕ್ಕೆ ಹೋದ ಕಾಳೀಪ್ರಸಾದ, ಮುಂಬಾಗಿಲಿನಲ್ಲಿಯೇ ಧರ್ಮದರ್ಶಿಗಳು ನಿಂತಿದ್ದರು. ಇವನನ್ನು ಸರಿಯಾಗಿ ಗಮನಿಸಿರಲಿಲ್ಲ. ಆ ದಿನ ದೇವಿಗೆ ಉಂಗುರವಿಟ್ಟಾಗ ಇವನೊಬ್ಬ ತರಲೆ ಮನುಷ್ಯನೆಂದು ಬೈದು ಕಳುಹಿಸಿದ್ದರು. ಈದಿನ ಕಾಳೀಪ್ರಸಾದ ಬಂದ ಠೀವಿ ಆ ನಿಲುವು ನಿಲುವಿಗೆ ತಕ್ಕ ಚೆಲುವು, ಇದೆಲ್ಲಾ ನೋಡುತ್ತಾ ಧರ್ಮದರ್ಶಿಗಳು ಈತನಾರೋ ರಾಜಮಹಾರಾಜನೇ ಇರಬೇಕು ಎಂದುಕೊಂಡು ಗೌರವದಿಂದ ನಮಸ್ಕಾರ ಮಾಡಿ ಒಳಗೆ ಬನ್ನಿ ಎಂದರು.

ಕಾಳೀಪ್ರಸಾದ ನೇರ ಹೋಗಿ ಕುರ್ಚಿಯಲ್ಲಿ ಕುಳಿತ. ಸುಸಜ್ಜಿತವಾದ ಪೀಠೋಪಕರಣಗಳು ವಿಶಾಲವಾದ ಸಭಾ ಭವನ-ಗೋಡೆಯಲ್ಲಿ ಚಿತ್ರ ಕಲೆಯ ಸುಂದರವಾದ ದೇವರ ಪಟಗಳು-ಅದನ್ನೇ ತದೇಕವಾಗಿ ನೋಡಿದ. ರಾಧಾ-ಕೃಷ್ಣರ ಮೋಹಕ ಪ್ರೇಮ ಚಿತ್ರ ಮನ ಸೆಳೆಯಿತು.

ಏನು ? ನೀವು ಯಾರು ? ನಿಮ್ಮ ಹೆಸರೇನು ? ಎಲ್ಲಿ ನೀವಿರುವುದು? ನಿಮ್ಮ ಪರಿಚಯವೇ ಇಲ್ಲದೇ ದೇವಿಯ ಬಳಿ ಹೋಗಿ ಮಾತಾಡಿಸಿ ಹಾರ ಕೊಟ್ಟಿರಂತೆ.

ಅಷ್ಟೇ ಸಲೀಸಾಗಿ ದರ್ಪದಿಂದ ನಿಮ್ಮ ದೇವಿಗೆ ಕಾಣಿಕೆ ಕೊಡುವವ-ರೆಲ್ಲಾ ಪರಿಚಯದವರೇ ಬರುತ್ತಾರೇನು ? ಮರು ಪ್ರಶ್ನೆ ಹಾಕಿದ ಕಾಳಿ. ಎಲ್ಲಾ ಕಾಣಿಕೆ ಕೊಡುವಂತಹವನಲ್ಲ ನಾನು, ದೇವಿ ಏನು ಕೇಳಿದರೂ ಕೊಡುವಂತಹ ಧೀರ, ಎಂದ ಕಾಳೀಪ್ರಸಾದ.

ಧರ್ಮದರ್ಶಿಗಳು ಪಚ್ಚೆ ಹಾರವನ್ನು ನೋಡಿದಾಗಲೇ ಇವನು ಯಾರೋ ಕೋಟ್ಯಾಧೀಶ್ವರ, ಇವನ ಪರಿಚಯದಿಂದ ಹಣ ಪಡೆಯಬಹುದು. ದೇವಿಯೂ ಆ ಯುವಕ ಕೋಟ್ಯಾಧೀಶ್ವರನಂತೆ ಕಾಣುತ್ತಾನೆ ನಾಳೆ ಬಂದಾಗ ಅವನನ್ನು ಗೌರವದಿಂದ ಬರಮಾಡಿಕೊಳ್ಳಿ, ನಮ್ಮ ಅನಾಥಾಶ್ರಮಕ್ಕೆ ಅವನಿಂದ ಸಹಾಯವಾಗುತ್ತೆ ಎಂದು ಮೊದಲೇ ಸೂಚನೆ ಕೊಟ್ಟಿದ್ದಳು. ಈಗ ಕಾಳೀಪ್ರಸಾದನ ಧೃಡಕಾಯ, ಧೀರವ್ಯಕ್ತಿತ್ವವನ್ನೂ ಬೆಲೆ ಬಾಳುವ ಅವನ ಉಡುಪನ್ನೂ ನೋಡಿ ಧರ್ಮದರ್ಶಿಗಳು- ನೀವು ರಾಜಮನೆತನದವ ರೆಂದು ಕಾಣುತ್ತೆ.

ಹಾಸ್ಯದ ನಗುವಿನಿಂದ ಭಲೆ ! ನಾನು ಬೆಲೆ ಬಾಳುವ ಒಳ್ಳೆ ಉಡುಪನ್ನು ತೊಟ್ಟು ಬಂದ ಮಾತ್ರಕ್ಕೆ ರಾಜನಾಗಿ ಬಿಡುತ್ತೇನೆಯೇ ? ಇಷ್ಟೇ ನಿಮಗೆ ಗೊತ್ತು, ನಾನು ನಿಮ್ಮ ಕೈಲಿ ಮಾತಾಡುವುದಕ್ಕೆ ಬಂದಿಲ್ಲ. ನಿಮ್ಮ ದೇವಿ ಎಲ್ಲಿ ? ಕರೆಯಿರಿ. ಅವಳೇ ನನ್ನನ್ನು ಬರಹೇಳಿದ್ದು ಅವಳೊಂದಿಗೆ ಮಾತಾಡ ಬೇಕು,

ಅವರೀಗ ಒಳಗೆ ಪೂಜಾಮಂದಿರದಲ್ಲಿದ್ದಾರೆ. ಹನ್ನೆರಡು ಗಂಟೆಗೆ ಸರಿಯಾಗಿ ಪೂಜೆ ಮುಗಿಯುತ್ತೆ, ಬರುತ್ತಾರೆ, ಎಂದು ಧರ್ಮದರ್ಶಿಗಳು ಒಳಕ್ಕೆ ಹೋಗಿ ವಿಷಯ ತಿಳಿಸಿದರು.

ದೇವಿಯು ಅದೇತಾನೇ ಪೂಜೆ ಮುಗಿಸಿ ಒಂದು ತಟ್ಟೆಯಲ್ಲಿ ದ್ರಾಕ್ಷಿ ಸೇಬು, ರಸಬಾಳೆ ಹಣ್ಣು ಲೋಟದಲ್ಲಿ ಹಾಲು ಇವುಗಳನ್ನೆಲ್ಲಾ ಇಟ್ಟ ತಟ್ಟೆಯನ್ನು ಸೇವಕಿಯ ಕೈಯಿಂದ ತೆಗೆಸಿಕೊಂಡು ಬಂದಳು, ಸೇವಕಿ ತಟ್ಟೆಯನ್ನು ಕಾಳೀಪ್ರಸಾದನ ಮುಂದಿನ ಕಾಲುಮಣೆಯ ಮೇಲಿಟ್ಟು ಹೋದಳು. ದೇವಿ ಕಾಳೀಪ್ರಸಾದನನ್ನು ಕಣ್ಣರಳಿಸಿ ನೋಡಿದಳು ಅವನು ಈ ದಿನ ಅವಳಿಗೆ ತುಂಬಾ ಮೋಹಕವಾಗಿ ಕಂಡ. ಕೈ ಮುಗಿಯುತ್ತಾ ನಿಮ್ಮನ್ನು ತುಂಬಾ ಹೊತ್ತು ಕಾಯಿಸಿ ಬಿಟ್ಟೆ ಎಂದಳು.

ನೀನು ತಾನೇ 12 ಗಂಟೆಗೆ ಬರಹೇಳಿದ್ದು ಎಂದು ಅವಳನ್ನು ಅಡಿಯಿಂದ ಮುಡಿಯವರೆಗೂ ತದೇಕವಾಗಿ ನೋಡಿದ.

ಸರಿ–ನೀವು ಗಡಿಯಾರ ನೋಡಿ! ಇದೀಗ 12 ಗಂಟೆ! ನೀವು ಕಾತುರದಿಂದ 10 ನಿಮಿಷ ಮೊದಲೇ ಬಂದಿದ್ದೀರಿ. ನಿಜ-ನಿನ್ನನ್ನು ಬೇಗ ನೋಡಬೇಕೆಂಬ ಕಾತುರ.

ಅಲ್ಲಿಯೇ ತಟ್ಟೆಯಲ್ಲಿದ್ದ ಹಣ್ಣು ಹಾಲನ್ನು ಅವನ ಕೈಗೆ ಕೊಡುತ್ತಾ ತೆಗೆದುಕೊಳ್ಳಿ-ನೋಡಿ ನಿಮ್ಮನ್ನು ನಾವು ಬಹುವಚನದಲ್ಲಿ ಹೇಳುವಂತೆ ದೇವಿಯನ್ನು ನೀವು ಗೌ ರ ವ ದಿ ಂ ದ ಮಾತಾಡಿಸಬೇಕು. ಎಂದರು ಧರ್ಮದರ್ಶಿಗಳು.

ಅಲಕ್ಷ್ಯದಿಂದ – ನನಗೆ ಏಕವಚನ ಬಹುವಚನ ಎಂದರೆ ಏನೆಂದೇ ಗೊತ್ತಿಲ್ಲ, ನನಗೆ ಇವೆಲ್ಲಾ ತಿನ್ನುತ್ತಾ ಕುಳಿತಿರಲು ಪುರಸತ್ತಿಲ್ಲ, ನಾನು ಹೋಗಬೇಕು. ಎಂದು ತಟ್ಟೆಯನ್ನು ದೂರ ಸರಿಸಿದ, ಆ ದಿನ ನನ್ನ ಪರಿಚಯ ಕೇಳಿದಿರಿ, ಇತ್ತನೋಡು - ದೇವಿ! ನಾನೇ ನಿಮ್ಮ ಭವನಕ್ಕೆ ಬಂದಾಗ ನನ್ನ ಪರಿಚಯ ಹೇಳುತ್ತೇನೆ ಎಂದಿದ್ದೆ, ನನ್ನ ಹೆಸರು "ಕಾಳೀಪ್ರಸಾದ" ನಾನು ಒಬ್ಬ ದೊಡ್ಡ ವ್ಯಾಪಾರಿ, ವಜ್ರ–ಪಚ್ಚೆ ಮುತ್ತು ಆಭರಣಗಳನ್ನು ಬೇರೆ ಬೇರೆ ದೇಶದ ರಾಜರಿಗೆ ಕೊಡುವವನು. ನಾನು ಒಂದೇ ಕಡೆ ಇರುವವನಲ್ಲ.

ದೇವಿಗೆ ಅವನನ್ನು ನೇರ ನೋಡಲು ಸಂಕೋಚ, ಅವನು ಹೇಳುವ ಮಾತು ಕೇಳುತ್ತಿದ್ದರೂ ತಾನು ಹೊದ್ದಿದ್ದ ಜರಿ ದುಕೂಲವನ್ನು ಸರಿ-ಪಡಿಸಿಕೊಳ್ಳುವ ನೆಪದಲ್ಲಿ ತಲೆ ತಗ್ಗಿಸಿದಳು. ಧರ್ಮದರ್ಶಿಗಳಿಗೆ ದೇವಿಯ ಈ ರೀತಿಯ ಸಂಕೋಚ ಸ್ವಭಾವ ಹೊಸದು, ತುಂಬಿದ ಸಭೆಯಲ್ಲಿ ಎಂತಹ ಶ್ರೀಮಂತರನ್ನೂ ಲೆಕ್ಕಿಸದೆ ಪ್ರವಚನ ಮಾಡುವ ದೇವಿ ಹೀಗೆ ಕುಳಿತರೆ ಏನೆಂದು ಕೊಳ್ಳುವುದು.

ದೇವಿ, ನೀವೇ ಅವರನ್ನು ಬರುವಂತೆ ಹೇಳಿ ಈಗ ಏನೂ ಮಾತಾಡ ದಿರುವಿರಿ ಏಕೆ? ಅವರೊಂದಿಗೆ ಮಾತಾಡಲು ಇಷ್ಟವಿಲ್ಲವೇ? ನೀವು ಒಳಗೆ ನಡೆಯಿರಿ. ನಾನೇ ಅವರನ್ನು ಕಳುಹಿಸಿ ಬರುತ್ತೇನೆ, ಎಂದು ಸೇವಕಿಯನ್ನು ಕರೆದರು.

ಧರ್ಮದರ್ಶಿಗಳು ಇಷ್ಟೆಲ್ಲಾ ಹೇಳುವುದನ್ನು ಕೇಳಿ ಕಾಳೀಪ್ರಸಾದನಿಗೆ ಕೋಪ ಬರುವಂತಾಯಿತು-ಸ್ವಲ್ಪ ಕಠಿನವಾಗಿಯೇ "ದೇವಿಯ ಮೇಲೆ ನಿಮ್ಮ ಅಧಿಕಾರವೋ ? ಅಥವಾ ದೇವಿ ನಿಮ್ಮನ್ನು ಕಾರ್ಯದರ್ಶಿಗಳಾಗಿ ನೇಮಿಸಿಕೊಂಡಿದ್ದಾರೆಯೋ ? ನಾನು ನಿಮ್ಮೊಂದಿಗೆ ಮಾತನಾಡಲು ಬರಲಿಲ್ಲ. ದೇವಿಯೊಂದಿಗೆ ಮಾತಾಡಬೇಕು. ಧರ್ಮದರ್ಶಿಗಳು-ನಾವು ಯಾರಾದರೂ ಆಗಿರಬಹುದು ಅದೆಲ್ಲಾ ನಿಮಗೇಕೆ ? ಇಲ್ಲಿ ನಿಮ್ಮದೇನೂ ಅಧಿಕಾರ ಇಲ್ಲವಲ್ಲಾ ! ಎಂದು ಅವನನ್ನು ನೇರ ದುರುಗುಟ್ಟಿ ನೋಡುತ್ತಾ .ಹೇಳಿದರು. ಇವರ ಚರ್ಚೆ ದೇವಿಗೆ ಹೆದರುವಂತಾಯಿತು,

ಧರ್ಮದರ್ಶಿಗಳೇ ! ಬಂದವರನ್ನು ನಾವು ಮ ಯಾ ್ ದೆ ಯಿ ಂ ದ ಮಾತಾಡಿಸಬೇಕಾದುದು ನಮ್ಮ ರಾಜರಾಜೇಶ್ವರೀ ಭವನದ ಪದ್ಧತಿಯಲ್ಲವೇ? ಅವರಿಗೆ ಏನು ಗೊತ್ತು ಕೇಳಲಿ ಬಿಡಿ ನಾನೇ ಹೇಳುತ್ತೇನೆ,. ಶ್ರೀಮಂತರೇ .. ಧರ್ಮದರ್ಶಿಗಳೇ ನನಗೆ ಮಾರ್ಗದರ್ಶಕರು. ಅವರು ಏನೇ ಹೇಳಿದರೂ ನನ್ನ ಒಳ್ಳೆಯದಕ್ಕೇ,, ಇರಲಿ, ಈಗ ನಾನೇ ನಿಮಗಾಗಿ ತಂದುಕೊಟ್ಟ ಹಣ್ಣು ಹಾಲನ್ನು ತೆಗೆದುಕೊಂಡರೆ ಮಾತ್ರ ಇನ್ನು ಮುಂದೆಯೂ ನಮ್ಮ ನಿಮ್ಮ ಸ್ನೇಹ ವಿಶ್ವಾಸ ಇರುತ್ತದೆಯೆಂದು ಅರ್ಥ.

ದೇವಿ ಅದೇ ತಾನೇ ದೇವರ ಪೂಜೆ ಮಾಡಿ ಪೂಜಾ ಮಂದಿರದಿಂದ ಹಾಗೆಯೇ ಬಂದಿದ್ದಳು ತಲೆಯ ಕುರುಳು ಕೂದಲು ಬೆನ್ನ ಮೇಲೆಲ್ಲಾ ಹರಡಿತ್ತು, ಹಣೆಗೆ ಕುಂಕುಮ ಪ್ರಸಾದವನ್ನು ತಿಲಕದಂತೆ ಇಟ್ಟಿದ್ದಳು, ಸೀರೆಯ ತುಂಬಾ ಜರಿ ನಕ್ಷತ್ರವಿರುವ ಆಕಾಶ ನೀಲಿ ಸೀರೆಯುಟ್ಟು ತೆಳುವಾದ ಹಳದಿ ರೇಷ್ಮೆಯ ದುಕೂಲವನ್ನು ಹೊದ್ದಿದ್ದಳು. ಅವನು ಕೊಟ್ಟಿದ್ದ ಪಚ್ಚೆ ಮುತ್ತಿನ ಹಾರವನ್ನು ಮೇಲೆ ಕಾಣುವಂತೆ ಹಾಕಿಕೊಂಡಿದ್ದಳು, ಅವನು ತೊಡಿಸಿದ ವಜ್ರದುಂಗುರವೂ ಬೆರಳಿನಲ್ಲಿತ್ತು-ದೇವಿ ತಾನೇ ತಟ್ಟೆಯನ್ನು ಕೈಗೆ ತೆಗೆದುಕೊಂಡು ಅವನ ಹತ್ತಿರ ಬಗ್ಗಿ ಅವನ ಕೈಗೆ ಕೊ ಡು ತ್ತಾ, ನೀವು ನಮ್ಮ ಅತಿಥಿಗಳು ಇದನ್ನು ತೆಗೆದುಕೊಳ್ಳಿ,

ಕಾಳೀಪ್ರಸಾದನಿಗೆ ಸ್ವರ್ಗದ ಅಪ್ಸರೆಯನ್ನು ನೋಡಿದಂತಾಯಿತು. ಅವಳ ರೂಪವನ್ನು ಕಣ್ಣು ತುಂಬಾ ನೋಡಿದ-ಮನಸ್ಸಿನ ತುಂಬಾ ತುಂಬಿ

ಕೊಂಡ, ಅವಳು ತಟ್ಟೆ ಹಿಡಿದಿದ್ದ ಕೈಯ್ಯನ್ನು ಮೃದುವಾಗಿ ಸವರಿ ಆ ಕೈಯ್ಯನ್ನು ತುಟಿಗೆ ಒತ್ತಿಕೊಂಡ. ಉಂಗುರದ ಬೆರಳನ್ನು ಅದುಮಿ ನಂತರ ಅವಳ ಕೈಯಿಂದ ತಟ್ಟೆ ತೆಗೆದುಕೊಂಡ. ಅವನ ಸ್ಪರ್ಶ ಅವಳಿಗೆ ಹಿತವೆನ್ನಿಸಿತು. ಆದರೆ ಧರ್ಮದರ್ಶಿಗಳು ಇದಕ್ಕೆಲ್ಲಾ ಅವಕಾಶ ಕೊಡುವುದಿಲ್ಲ-ವೆಂದು ಅವಳಿಗೆ ಭಯ.

ಕಾಳೀಪ್ರಸಾದ–"ನೋಡು ದೇವಿ, ನೀನು ಕೊಟ್ಟಿದ್ದಕ್ಕೆ ತಿನ್ನುತ್ತೇನೆ, ಇದೇ ನಮ್ಮ ಸ್ನೇಹ ಬಂಧ ಎಂದು ಅವಳನ್ನೇ ನೋಡುತ್ತಾ ಹಣ್ಣು ಹಾಲು ತೆಗೆದುಕೊಂಡ.

ಅವನ ಆ ನೋಟ ಪ್ರೇಮಪೂರಿತವಾಗಿದ್ದುವು – ಕಾಣಿಕೆಯಿಲ್ಲದೆ ದೇವಿಯ ಬಳಿ ಬರಬಾರದೆಂದು ಈ ದಿನ ಈ ಚೀಲದ ತುಂಬಾ ನಾಣ್ಯವನ್ನು ತಂದಿದ್ದೇನೆ. ತೆಗೆದುಕೋ, ಎಂದು ಎದ್ದು ಅವಳ ಹತ್ತಿರ ಬಂದು ಕೊಟ್ಟ. ಅದು ಒಂದು ಸಣ್ಣ ಕೈ ಚೀಲದ ತುಂಬಾ ನಾಣ್ಯಗ-ಳಿದ್ದುವು. ಅವಳು ಅದನ್ನು ತೆಗೆದುಕೊಂಡು ಹಾಗೆಯೆ ಧರ್ಮದರ್ಶಿಗಳ ಕೈಗೆ ಕೊಟ್ಟಳು. ಕಾಳೀಪ್ರಸಾದನಿಗೆ ಇದು ಸರಿ ಬರಲಿಲ್ಲ ಇವಳಿಗೆ ಇವನು ಯಾವ ಸೀಮೆ ಯಜಮಾನ ? ಎಂದುಕೊಂಡು ಇರಲಿ-ಎಂದು ಹೊರಟು ಬಿಟ್ಟ. ದೇವಿ ಕಣ್ಣಿನ ಸನ್ನೆಯಿಂದಲೇ ಕಾಳೀಪ್ರಸಾದನನ್ನು ಬೀಳ್ಕೊಟ್ಟಳು.

ದೇವಿಯ ಸಂತೋಷ ಮುಖಭಾವದಲ್ಲಿ ಎದ್ದು ಕಾಣುತ್ತಿತ್ತು, ಒಳಗೆ ದೇವರ ಬಳಿ ಕೈ ಮುಗಿದು ನಿಂತು–ರಾಜರಾಜೇಶ್ವರೀ ಕಾಪಾಡು-ಕಾಪಾಡು-ಎಂದಳು, ಧರ್ಮದರ್ಶಿಗಳು ಒಳಗೆ ಹೋಗಿ, ದೇವಿ ಏನು ಬೇಡಿಕೊಳ್ಳುತ್ತಿರುವುದು ? ತುಂಬಾ ಖುಷಿಯಾಗಿರುವಂತಿದೆ ? ಎಂದು ಕೇಳಿದರು.

ನಿಮಗೆ ಮಾತ್ರ ಖುಷಿ ಇಲ್ಲವೋ ? ನೂರಾರು ಜನ ಕೊಡುವಷ್ಟು ಹಣವನ್ನು ಒಬ್ಬರೇ ಕೊಟ್ಟಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದೆ.

ಅದು ಸರಿ, ಆದರೆ ಅವನು ಬಹಳ ಒರಟು ಮನುಷ್ಯ ಯಾರನ್ನೂ ಲಕ್ಷಿಸುವುದಿಲ್ಲ. ಅವನೊಂದಿಗೆ ಸಲಿಗೆಯಾಗಿ ನಡೆದುಕೊಳ್ಳಬೇಡಾ ಹುಷಾರು.

ಏನೂ ಭಯ ಪಡಬೇಡಿ, ನಿಮಗಿಂತ ಹೆಚ್ಚಾಗಿ ನನ್ನನ್ನು ರಕ್ಷಣೆ ಮಾಡುತ್ತಾರೆಂಬ ನಂಬಿಕೆ ನನಗಿದೆ. ಮಾತು ಒರಟಾದರೂ ಸೀದಾ ಮನುಷ್ಯ. ಇರಲಿ ಆ ಹಣವನ್ನು ಯಾವುದಕ್ಕೆ ಉಪಯೋಗಿಸಬೇಕೆಂದಿರು ವಿರಿ ? ಎಂದು ಕೇಳಿದಳು,

ಅನಾಥ ಮಕ್ಕಳಿಗೆ ವಿದ್ಯಾಶಾಲೆ ಕಟ್ಟಿಸಬೇಕೆಂದು ತಾನೇ ನಿಮ್ಮ ಆಸೆ. ಅದಕ್ಕೆ 2 ಲಕ್ಷ. ಹಣವಾದರೂ ಬೇಕು, ಇದರ ಜೊತೆ ಇನ್ನೂ ಬೇಕಲ್ಲಾ !

ಆಯಿತು–ಅದೂ ಆ ಯುವಕನೇ ಕೊಡುತ್ತಾನೆ, ಅವನನ್ನು ಸ್ನೇಹ ದಿಂದ ಬರಮಾಡಿಕೊಂಡರೆ ಏನೆಲ್ಲಾ ಕೊಡಬಲ್ಲ.

❋ ❋ ❋ ❋

ಈಗ ಕಾಳೀಪ್ರಸಾದನಿಗೆ ತನ್ನ ಗುಹೆಯಲ್ಲಿ ಕೂಡಿ ಹಾಕಿರುವ ರಾಶಿ ನಿಧಿಗೆ ಒಂದು ದಾರಿ ಸಿಕ್ಕಿದಂತಾಯಿತು. ದೇವಿಯು ತನ್ನಮೇಲೆ ಪ್ರೀತಿ ಇಟ್ಟಿದ್ದಾಳೆ ಎನ್ನುವುದು ನನಗೂ ಸ್ವಲ್ಪ ಅರ್ಥವಾಗುತ್ತಿದೆ. ಇಲ್ಲದಿದ್ದರೆ ನಾನು ಅವಳ ಕೈ ಹಿಡಿದಾಗ ಸುಮ್ಮನಿರುತ್ತಿದ್ದಳೇ ? ನನಗಾಗಿ ಹಣ್ಣು ಕೊಟ್ಟಾಗ ಅವಳ ಕಣ್ಣಿನ ನೋಟ....ನನಗೆ ಇಷ್ಟ ನೀನು, ಎಂದು ಹೇಳುವಂತಿತ್ತು. ಆ ದರಬೇಸಿ ಧರ್ಮದರ್ಶಿ ಯಾರೋ ? ಎಂದು ಯೋಚಿಸುತ್ತಾ ಅಜ್ಜಿ ಮನೆಗೆ ಬಂದ. ಉಡುಪನ್ನು ಬಿಚ್ಚಿ ಅಜ್ಜಿಯ ಆ ಚಿಕ್ಕ ಮನೆಯಲ್ಲಿ ಎಲ್ಲೀ ಅಂದರೆ ಅಲ್ಲಿ ಬಿಸಾಕಿದ, ಅಜ್ಜೀ....ಇವತ್ತು ಬೆಳಗ್ಗೆಯೇ ಸ್ನಾನ ಮಾಡಿದೆನಲ್ಲಾ ! ಈಗ ಊಟಕ್ಕೆ ಹಾಕು....

ಅಜ್ಜಿ ಕೋಪದಿಂದಲೇ ನೀನು ಯಾವ ಸರದಾರ ? ಯಾವ ಜಹಗೀರ್‌ದಾರ ? ಬಟ್ಟೆ ಬಿಚ್ಚಿ ಎಲ್ಲೀ ಅಂದರೆ ಅಲ್ಲಿ ಬಿಸಾಕಿದ್ದೀಯಲ್ಲಾ! ಮನೆಯಲ್ಲಿ ಊಟಕ್ಕೆ ಕೂರಲು ಜಾಗವಿಲ್ಲಾ,

ಅಚ್ಛಾ–ಅಚ್ಛಾ ಲೋ–ಯಂಕಾ : ಅಜ್ಜಿಗೆ ಕೋಪ ಬಂದುಬಿಟ್ಟಿದೆ. ಬೇಗ ನನ್ನ ಡ್ರೆಸ್ಸೆಲ್ಲಾ ಮಡಚಿ ಇಡೋ ಅಜ್ಜಿಯನ್ನು ಸಮಾಧಾನ ಮಾಡುತ್ತಾ ತಾನು ತಂದಿದ್ದ ಬುಟ್ಟಿ ತುಂಬ ಹಣ್ಣನ್ನು ಅಜ್ಜಿ ಕೈಲಿ ಕೊಟ್ಟು, ತಕೋ ಹಣ್ಣು ತಿಂದರೆ ಒಳ್ಳೆಯದು ತಿನ್ನು ಅಜ್ಜೀ ಸಾಕು ನಿನ್ನ ಬೂಟಾಟಿಕೆ–ಬಾ ಊಟಕ್ಕೆ.

ಆದಿರಲಿ–ಈ ಚಿಕ್ಕ ಮನೇಲಿ ನನ್ನ ಸಾಮಾನಿಗೇ ಜಾಗ ಸಾಲದು. ಬಟ್ಟೆ ಬಿಚ್ಚಿ ಬಿಸಾಕಿದರೆ ಬೈತೀಯಾ–ಉದ್ದಕ್ಕೆ ಕಾಲು ನೀಡಿ ಮಲಗಿದರೆ ಬೈತೀಯಾ....ಅದಕ್ಕೇ ಅಜ್ಜೀ ಆ ದೊಡ್ಡ ಮನೆ ಬೀಗ ತೆಗೆ. ಎಲ್ಲಾ ಕ್ಲೀನ್‌ಮಾಡಿಸಿ ಒಂದು ಕೊಠಡಿ ನನ್ನದಾಗಿ ಇಟ್ಟುಕೊಳ್ಳುತ್ತೇನೆ.

ಕುಮಾರಾ ! ನಿಂದೇಕೋ ಅತಿಯಾಯಿತು. ಇದು ಜಹಗೀರ್‌ದಾರರ ವಂಶದ ಮನೆ–ಇದರಲ್ಲಿ ನಿನ್ನ ಯಜಮಾನಿಕೆ ಏನೂ ಬೇಡ ಸುಮ್ಮನಿರು.

ಅಜ್ಜೀ! ಈವತ್ತಲ್ಲದಿದ್ದರೆ ಮುಂದೆಯಾದರೂ ನಾನು ಜಹಗೀರ್‌ದಾರ ಆಗಿಯೇ ಆಗುತ್ತೇನೆ, ನೋಡ್ತಿರು....

ಆಗಪ್ಪಾ ! ಸಂತೋಷ, ಯಾವೂರಿಗೆ ಆಗ್ತೀಯೋ ? ನಾಕಾಣೆ ಅಜ್ಜೀ ಇವತ್ತು ನನಗೆ ತುಂಬಾ ಖುಷಿ, ದೇವಿ ತನ್ನ ಮನೆಗೆ ಕರೆಸಿಕೊಂಡಿದ್ದಳು ಹೋಗಿದ್ದೆ. ಹಣ್ಣು–ಹಾಲು ಎಲ್ಲಾ ಕೊಟ್ಟಳು ನನ್ನ ಕಂಡರೆ ಅವಳಿಗೆ ಇಷ್ಟ ಹುಂ ಅಚ್ಚಾ ಅಚ್ಚ್ಛ–ಊಟ ಹಾಕು ಎಂದು ತಟ್ಟೆಮುಂದೆ ಕುಳಿತ....

ಅಜ್ಜಿಗೆ ಗೊತ್ತಿಲ್ಲ ಇವನ ವ್ಯವಹಾರ ಒಂದೂ ಅರ್ಥವಾಗದೆ ಇವನೆಲ್ಲಿ ಬಂದು ಸೇರಿಕೊಂಡ ? ಆದರೆ ನನ್ನನ್ನು ಅಷ್ಟೇ ಪ್ರೀತಿ ಮಾಡುತ್ತಾನೆ. ಮನೆಗೆ ಬರಬೇಡ ಅಂದರೂ ಬಿಡುವುದಿಲ್ಲ. ಒಂದು ಸಮಯ ನಮ್ಮ ವಂಶದ ಮಗುವೇ ಇವನೋ ? ದೈವೇಚ್ಛೆ–ಎಂದುಕೊಂಡಳು.

ಈಗ ಕಾಳೀಪ್ರಸಾದನಿಗೆ ಗುಹೆಗೆ ಹೋಗಿ ನಿಧಿಯನ್ನು ತರುವ ಯೋಚನೆ. ಆದರೆ ಈಗ ಇವನ ಜೊತೆ ಅನುಯಾಯಿಗಳು ಯಾರೂ ಇಲ್ಲ, ಇತ್ತೀಚೆಗೆ ಪಟ್ಟಣದ ವಾತಾವರಣ ಅವನ ಮೈಗಂಟಿದೆ, ಒಬ್ಬನೇ ದಟ್ಟ ಕಾಡಿನಲ್ಲಿ ನುಸುಳಿ ಗುಹೆಯೊಳಗೆ ಹೋಗುವಷ್ಟು ಧೈರ್ಯವಿಲ್ಲ. ಆದರೆ ಈಗ ದೇವಿಗಾಗಿ ನಿಧಿ ಹೊತ್ತು ತರಬೇಕು. ಅವಳಿಗೆ ಬೇಕು ಬೇಕೆಂದಷ್ಟು ಕೊಡಬೇಕು. ಅವಳ ಪ್ರೀತಿ ನನಗೆ ಬೇಕು. ಅವಳಿಗೋಸ್ಕರ ಏನು ಮಾಡಲೂ ಸಿದ್ಧ-ಎಂದುಕೊಂಡು ಆ ದಿನ ರಾತ್ರಿಯೇ ಗಾಢ ಕತ್ತಲಿನಲ್ಲಿ ಹೊರಟು ಬಿಟ್ಟ.

ಪಳಗಿದ ದಾರಿಯಲ್ಲಿ ಹೆಜ್ಜೆ ಅಳತೆ ಪ್ರಕಾರ ತಮ್ಮ ಗುಹೆ ಸಿಕ್ಕಿತು. ಆದರೆ ಗುಹೆಗೆ ಮುಚ್ಚಿದ್ದ ಬಂಡೆ ಸರಿಸಿ ಗುಹೆಯೊಳಗೆ ಹೋಗಬೇಕಾದರೆ ಬಹಳ ಕಷ್ಟಪಟ್ಟು ಸರಿಸಿದ. ಅವನು ಭೀಮಬಲದಂತೆ ಪಳಗಿದವನು. ಕಂದೀಲು ದೀಪಹಚ್ಚಿ ನೋಡಿದ-ತನ್ನ ಅಪ್ಪ ದೇವೀಪ್ರಸಾದ ಸಭೆ ನಡೆಸುತ್ತಿದ್ದ ಪ್ರಾಂಗಣ, ಕಸ ಕಡ್ಡಿಗಳಿಂದ ತುಂಬಿತ್ತು. ಆದರೂ ಹಿಂದಿನ ನೆನಪು. ಅಲ್ಲೇ ಎತ್ತರದ ಬಂಡೆಯ ಮೇಲೆ ಸ್ವಲ್ಪ ಹೊತ್ತು ಕುಳಿತ, ಮನುಷ್ಯರ ಶಬ್ದವೇ ಇಲ್ಲ. ಮರದ ಗಾಳಿ ಸು....ಯ್ ಶಬ್ದ ಜೀರುಂಡೆಗಳ ಜೀರ್-ಜೀರ್ ಸದ್ದು. ಅಬ್ಬ ಎಷ್ಟು ಭಯಂಕರ. ? ಅವನ ಎದೆ ನಡುಗಿತು. 25 ವರ್ಷ ಈ ಭಯಂಕರ ಕಾಡಿನಲ್ಲಿ ಬೆಳೆದೆನಲ್ಲಾ! ಎಂದು ಭಂಡ ಧೈರ್ಯ ಮಾಡಿ ಕಡೆಗೆ ದೀಪ ಹಿಡಿದು ಗುಹೆಯ ನಿಧಿ ಕಡೆಗೆ ಹೊರಟ.

ದೇವಿಪ್ರಸಾದ ತೋರಿಸಿದ್ದಂತೆ ಕಾಳೀ ವಿಗ್ರಹವನ್ನು ತಿರುಗಿಸಿ ದೀಪದ ಬೆಳಕಿನಲ್ಲಿ ಒಳಕ್ಕೆ ಇಳಿದ, ನಿಧಿಯನ್ನು ತುಂಬಿಕೊಂಡು ಹೋಗಲು ದೊಡ್ಡ ಚೀಲವನ್ನೇ ತಂದಿದ್ದ ಚೀಲಕ್ಕೆ ಹಣ, ಒಡವೆ ಎಲ್ಲಾ ತುಂಬಿಕೊಂಡ. ಇನ್ನೇನು ಮೇಲಕ್ಕೆ ಹತ್ತಬೇಕು....ಎನ್ನುವಷ್ಟರಲ್ಲಿ ಎಲ್ಲಿತ್ತೋ ಘಟಸರ್ಪ ಬುಸುಗುಟ್ಟುತ್ತಾ ಹೆಡೆಯೆತ್ತಿತು. ಕಾಳೀಪ್ರಸಾದನಿಗೆ ಕೈ ಕಾಲು ಗಡ ಗಡ ನಡುಗಿತು, ಇನ್ನು ತನ್ನ ಕತೆ ಮುಗಿಯಿತು ಎಂದುಕೊಂಡನು ಕೈಯ್ಯಲ್ಲಿದ್ದ ದೊಣ್ಣೆಯನ್ನು ಎತ್ತಿ ಹಾವಿನ ಹೆಡೆಗೆ ಸರಿಯಾಗಿ ಹೊಡೆದ. ಹಾವೂ ರೋಷದಿಂದ ಅವನ ಕಾಲನ್ನು ಕಚ್ಚಿ ಸೇಡು ತೀರಿಸಿಕೊಂಡು ಸತ್ತಿತು. ಕಾಳೀಪ್ರಸಾದನಿಗೆ ಹಾವಿನ ವಿಷ ಎಷ್ಟು ಹೊತ್ತಿನವರೆಗೆ ಏರುತ್ತದೆ? ಎಂದು ಚೆನ್ನಾಗಿ ಗೊತ್ತು ಹೇಗೋ ಸಾಹಸದಿಂದ ನಿಧಿ ತುಂಬಿದ್ದ ಚೀಲವನ್ನು ಹೊತ್ತು ಬೇಗ ಬೇಗ ಹೊರಕ್ಕೆ ಬಂದ. ಚೀಲವನ್ನು ಒಂದು ಕಡೆ ಹಾಕಿ ದೀಪದ ಬೆಳಕಿನಲ್ಲಿ ಬಂಡೆಯ ಸಂದಿಯುಲ್ಲಾ ಹುಡುಕಿದ. ಹಾವು ಕಡಿದರೆ ಔಷಧಿ ಹಸಿರು ಸಿಕ್ಕಿತು. ಹಾವು ಕಡಿದ ಕಡೆ ಚಾಕುವಿನಿಂದ ಗಾಯ ಮಾಡಿ ರಕ್ತ ತೆಗೆದ. ಅಷ್ಟಕ್ಕೆ ಕಣ್ಣು ಕತ್ತಲಿಟ್ಟಂತಾಯಿತು. ಅದೇ ಸೊಪ್ಪನ್ನು ಬಾಯಿಗೆ ತುರುಕಿಕೊಂಡು ಅಗಿದು ನುಂಗಿಬಿಟ್ಟ. ಜ್ಞಾನತಪ್ಪಿ ಹಾಗೆಯೇ ಮಲಗಿಬಿಟ್ಟ, ಕೇಳುವವರಾರು ? ಬೇಕೆಂದೇ ದೇವಿಪ್ರಸಾದ

ಆ ಕಾಡಿನ ಬಂಡೆಯ ಸಂದಿ, ಸಂದಿಯಲ್ಲಾ ವಿಷ ತೆಗೆಯುವ ಸೊಪ್ಪಿನ ಗಿಡವನ್ನು ಯಥೇಚ್ಛವಾಗಿ ಬೆಳಸಿದ್ದ, ಅಲ್ಲಿ ಇದ್ದವರಿಗೆಲ್ಲಾ ಹಾವು ಕಚ್ಚುವುದು ಸಾಮಾನ್ಯ ಕೂಡಲೇ ಔಷಧಿ ಮಾಡಿಕೊಂಡು ಹುಷಾರಾಗಿ ಬಿಡುತ್ತಿದ್ದರು, ಆದರೆ ನಿಧಿ ಕಾಯುವ ಸರ್ಪವೋ ಏನೋ ? ಕಾಳೀಪ್ರಸಾದ ನಿಧಿಯನ್ನು ಹೊತ್ತುಕೊಂಡು ಹೋಗದಂತೆ ಅಡ್ಡ ಬಂದಿತು.

ಕಾಳೀಪ್ರಸಾದ ಜ್ಞಾನವಿಲ್ಲದೇ ಹಾಗೆಯೇ ಬಿದ್ದಿದ್ದ. ಮುಂಜಾನೆಯ ತಂಪುಗಾಳಿ ಬೀಸಿತು, ಮಂಜಿನ ತುಂತುರು ಮೈಮೇಲೆ ಬಿದ್ದು ಮೈ ತಣ್ಣಗಾದ ಹಾಗಾಯಿತು. ಔಷಧಿಯ ಸಾರ ಮೈಯಲ್ಲಿ ಊರಿ ಜ್ಞಾನ ಬಂತು. ಕಣ್ಣು ತೆರೆದು ನೋಡಿದರೆ ದಟ್ಟಕಾಡು ಆಗತಾನೇ ಸೂರ್ಯನ ಕೆಂಪು ಛಾಯೆ ಮರಗಿಡಗಳ ಮೇಲೆ ಹರಡುತ್ತಿತ್ತು. ಏಳುವುದಕ್ಕೆ ಪ್ರಯತ್ನ ಪಟ್ಟ, ಕಾಲುಗಳು ಕುಸಿಯುವಂತಾಯಿತು. ಸುತ್ತಲೂ ಕಣ್ಣಾಡಿಸಿದ ನಿಧಿಯ ಚೀಲ ಅಲ್ಲಿಯೇ ಬಿದ್ದಿತ್ತು. ಮತ್ತೆ ಹಾಗೆಯೇ ತಲೆ ಕೆಳಗೆ ಹಾಕಿ ಮಲಗಿಬಿಟ್ಟ ವಿಷದ ಸೋಂಕು ಚೆನ್ನಾಗಿ ಹೋದಮೇಲೆ ಮೈ ಹಗುರ ವಾಯಿತು. ಆಗ ತನ್ನ ಅಪ್ಪ ದೇವೀಪ್ರಸಾದನನ್ನು ನೆನಸಿಕೊಂಡು ಮನದಣಿಯ ಅತ್ತ. ಅವನು ಎಲ್ಲರನ್ನೂ ಕಾಪಾಡುವುದಕ್ಕಾಗಿಯೇ ವಿಷ ತೆಗೆಯುವ ಹಸಿರನ್ನು ಎಲ್ಲೆಲ್ಲಿಯೂ ಬೆಳೆಸದಿದ್ದರೆ ಇಂದು ನಾನು ಇಲ್ಲಿಯೇ ಹೆಣವಾಗಿ ಬಿದ್ದಿರುತ್ತಿದ್ದೆ. ನಾವು ಬಿಟ್ಟಮೇಲೆ ಇಲ್ಲಿ ಒಂದು ನರಪಿಳ್ಳೆಯೂ ಬಂದಿಲ್ಲ.

ಕಾಳೀಮಾತಾ ನೀನೇ ಕಾಪಾಡಿದೆ ನಿನ್ನನ್ನು ಮರೆಯುವುದಿಲ್ಲ, ಎಂದು ಮೆಲ್ಲಗೆ ಎದ್ದು ನದಿಯಲ್ಲಿ ನೀರು ಕುಡಿದು ಸುಧಾರಿಸಿಕೊಂಡ, ಹಸಿರೆಲೆಯ ದೊನ್ನೆಯಲ್ಲಿ ನೀರು ತುಂಬಿಕೊಂಡು ಬಂದು ಕಾಳಿದೇವಿಯ ಮೇಲೆ ಸುರಿದು ಹೂವನ್ನಿಟ್ಟ. ಕತ್ತಿಯಿಂದ ತನ್ನ ಹೆಬ್ಬೆಟ್ಟನ್ನು ಸೀಳಿ ರಕ್ತವನ್ನು ಕಾಳಿಕಾದೇವಿಯ ಹಸ್ತದ ಮೇಲೆ ಸುರಿದು. ತಾಯೇ ಕ್ಷಮಿಸು, ಇನ್ನು ಇದೇ ಕಡೆ ಇಲ್ಲಿಗೆ ಮತ್ತೆ ಬರುವುದಿಲ್ಲ, ನನ್ನನ್ನು ಸದಾ ಕಾಪಾಡು. ಆ ದೇವಿಯ ರೂಪದಲ್ಲಿ ನೀನಿದ್ದೀಯೇ ಎಂದು ತಿಳಿದಿದ್ದೇನೆ. ಅವಳ ಸ್ನೇಹ ಕೊಡು ಎಂದು ನಮಸ್ಕಾರ ಮಾಡಿ ಅಲ್ಲಿಯೇ ಅವಳ ಪಾದದಡಿ ತಲೆ ಯಿಟ್ಟು ಮಲಗಿಬಿಟ್ಟ. ಹಾಗೆಯೇ ನಿದ್ದೆಯ ಜೋಂಪು, ಒಂದು ಕನಸು

ಕಾಳೀದೇವಿ ಪ್ರತ್ಯಕ್ಷ, ಸೌಮ್ಯ ಭಾವ, ಕಿರೀಟ, ಹಾರ, ಅಲಂಕಾರ, ಅಲ್ಲಿ ದೇವಿ ಅಲಂಕರಿಸಿಕೊಂಡು ಪೀಠದಲ್ಲಿ ಕುಳಿತಿದ್ದ ರೀತಿಯಲ್ಲಿ ಕಾಳಿಕಾದೇವಿ ಕಂಡಳು. ಕಾಳೀಪ್ರಸಾದ ಏಳು. ಇನ್ನು ನೀನು ದರೋಡೆ-ಕೊಲೆ ಮಾಡ ಬೇಡ. ಜಹಗೀರ್‌ದಾರರ ವಂಶವನ್ನು ಬೆಳೆಸಿ ಧರ್ಮಪಾಲನಾಗಿರು.... ಎಂದಂತಾಯಿತು. ತಟ್ಟನೆ ಎದ್ದ - ಸುತ್ತಲೂ ನೋಡುತ್ತಾನೆ ಆ ದೇವಿ ಎಲ್ಲಿದ್ದಾಳೆ ? ಇದೇ ಕಾಳೀಕಾದೇವಿಯೇ ಕಂಡಿದ್ದು ಎಂದು ಭಕ್ತಿಯಿಂದ ನಮಸ್ಕರಿಸಿ, ತಾಯೇ ನೀನು ಹೇಳಿದಂತೆಯೇ ನಡೆದುಕೊಳ್ಳುತ್ತೇನೆ ಎಂದು ನಿಧಿಯ ಚೀಲವನ್ನು ಎತ್ತಿಕೊಂಡು ಸ್ವಲ್ಪದೂರ ನಡೆದ ಎರಡು ದಿನದಿಂದ ಹೊಟ್ಟೆಗೆ ಏನೂ ಇಲ್ಲದೆ ಮುಂದೆ ನಡೆಯಲಾಗಲಿಲ್ಲ.

ಅಲ್ಲಿಯ ಮರಗಿಡಗಳಲ್ಲಿ ಕಾಡು ಹಣ್ಣುಗಳು ಯಥೇಚ್ಛವಾಗಿ ತೂಗಿ ಬಾಗಿತ್ತು. ಬೇಕಾದಷ್ಟು ಹಣ್ಣು ಕಿತ್ತು ತಿಂದ. ನಂತರ ಅಲ್ಲಿ ಹರಿಯುತ್ತಿದ್ದ ನೀರಿನ ಝರಿಯ ಹತ್ತಿರಹೋಗಿ ನೀರು ಕುಡಿದ. ಅಲ್ಲಿಯೇ ಬಂಡೆಯ ಮೇಲೆ ಕುಳಿತ. ಮೇಲಿಂದ ನೀರು ಧುಮುಕಿ ಆಳವಾದ ಪ್ರಪಾತಕ್ಕೆ ಬೀಳುತ್ತಲೇ ಇತ್ತು. ಇಲ್ಲಿಯೇ ದೇವಿಪ್ರಸಾದ ಮೇಲಿಂದ ಪ್ರಪಾತಕ್ಕೆ ಬಿದ್ದಿದ್ದು ; ಅಪ್ಪಾ ! ಇದೋ ನಿನಗೆ ಕಡೆಯ ನಮಸ್ಕಾರ. ಮತ್ತೆ ನಾನು ಈ ಜಾಗಕ್ಕೆ ಬರಲಾರೆ, ಎಂದು ಅತ್ತ. ತಾಯಿಯ ಮಡಿಲಿನಂತೆ ತನ್ನನ್ನು ಪೋಷಣೆ ಮಾಡಿದ ಕಾಡು ಇಂದು ಅವನಿಗೆ ಭಯಂಕರವಾಗಿ ಕಂಡಿತು, ಇನ್ನು ಒಂದು ಘಳಿಗೆ ಅಲ್ಲಿ ನಿಲ್ಲಲಾರದೆ ಹೊರಟು ಬಿಟ್ಟ.

ಹೊತ್ತು ತಂದ ನಿಧಿಯನ್ನು ಯಾರಿಗೂ ಕಾಣದೆ ಕಡೆ ಜೋಪಾನ ಮಾಡಿ ಕುದುರೆ ಏರಿ ಊರಿನ ಕಡೆ ಹೊರಟ, ಅವನು ಊರು ಬಿಟ್ಟು ಒಂದು ವಾರವಾಗಿತ್ತು. ಯಾವಾಗ ದೇವಿಯನ್ನು ಕಂಡೇನೋ ಎಂದು ತಲ್ಲಣಿಸಿದ, ಇವನ ವೇಷ ಬದಲಾವಣೆಯಂತೂ ನೋಡಿದ್ದವರಿಗೂ ಗುರುತು ಹಿಡಿಯಲಾಗುತ್ತಿರಲಿಲ್ಲ.

ಇತ್ತ ದೇವಿಯೂ ಪ್ರತಿದಿನ ಕಾಳೀಪ್ರಸಾದನನ್ನು ನಿರೀಕ್ಷಿಸಿದಳು. ಅವಳಿಗೆ ಯಾವುದರಲ್ಲಿಯೂ ಅಪೇಕ್ಷೆ ಇರಲಿಲ್ಲ. ಇದೇನು ಒಂದು ವಾರ ಎಲ್ಲಿಗೆ ಹೋದ ? ವ್ಯಾಪಾರಕ್ಕೆ ಎಲ್ಲಿಗಾದರೂ ಹೋಗಿರಬಹುದು

ಆದರೆ ಅವನಿಗಾದರೂ ನನ್ನ ಮೇಲೆ ತುಂಬಾ ಪ್ರೀತಿಯಿದೆ ನೋಡಲು ಬಂದೇ ಬರುತ್ತಿದ್ದ. ಒಂದು ವೇಳೆ ಅವನಿಗೇನಾದರೂ ಅಪಾಯವಾಗಿದ್ದರೆ ? ಆ ಯೋಚನೆಯೇ ಅವಳಿಗೆ ಮೈ ನಡುಗುವಂತಾಯಿತು, ರಾಜರಾಜೇಶ್ವರೀ ತಾಯೇ ಅವನನ್ನು ಕಾಪಾಡು, ಎಂದು ಪ್ರಾರ್ಥಿಸಿದಳು. ಧರ್ಮದರ್ಶಿ ಬೇರೆ ಹಂಗಿಸುತ್ತಿದ್ದರು, ದೇವಿ... ನೋಡಿದೆಯಾ ಆ ಯುವಕ ಠಕ್ಕ ನಿನಗೆ ಮೋಸ ಮಾಡುತ್ತಾನೆಂದು ನಾನು ಆಗಲೇ ಹೇಳಲಿಲ್ಲವೇ ? ಅವಳು ಏನೂ ಉತ್ತರ ಕೊಡದೆ ಸುಮ್ಮನಿರುತ್ತಿದ್ದಳು, ಆದರೆ ಅವಳಿಗೆ ಯಾವುದರಲ್ಲಿಯೂ ಆಸಕ್ತಿಯಿರಲಿಲ್ಲ,

ಇತ್ತ ಅಜ್ಜಿಗಂತೂ ತುಂಬಾ ಯೋಚನೆಯಾಯಿತು, ಒಂದು ವಾರ ದಿಂದ ಬರದೆ ಎಲ್ಲಿ ಹೋದ ಇವನು ? ಹೋಗುವ ಜಾಗವನ್ನೂ ಹೇಳದೆ ಹೋದ ಎಂದು ಯಂಕನನ್ನು ಕಳುಹಿಸಿ ಊರೆಲ್ಲಾ ಹುಡುಕಿಸಿ- ದಳು. ಲೋ ಯಂಕಾ ! ಯಾವಾಗಲೂ ಆ ದೇವಿಯ ಮಾತನ್ನೇ ಆಡುತ್ತಿದ್ದ, ಅವಳ ಮನೆ-ಛತ್ರ ಎಲ್ಲಾ ನೋಡಿಕೊಂಡು ಬಾ. ಎಂದು ಕಳುಹಿಸಿದಳು. ಅವನನ್ನು ಕಾಣದಿದ್ದರೆ ಅಜ್ಜಿಗೆ ಏನೋ ಕಳೆದುಕೊಂಡಂತೆ.

ಇದ್ದಕ್ಕಿದ್ದಂತೆ ಅಜ್ಜಿಮನೆ ಬಾಗಿಲಲ್ಲಿ ಕುದುರೆಯಿಂದ ಇಳಿದ ಕಾಳೀಪ್ರಸಾದ, ಈಗ ಅವನ ಉಡುಪಂತೂ ಥೇಟ್ ಮಿಲ್ಟ್ರಿಯವರಂತೆ ಅಜ್ಜಿ ಎಂದು ಕೂಗುತ್ತಾ ಒಳಕ್ಕೆ ಬಂದ... ಅಜ್ಜಿ ಒಳಗೆ ಅಡಿಗೆ ಮಾಡುತ್ತಾ ಇದ್ದವಳು ಬಗ್ಗಿ ನೋಡಿದಳು. ಕಣ್ಣಿನ ಬೆಳಕಿಗೆ ಕೈ ಅಡ್ಡ ಇಟ್ಟು ಅವನನ್ನೇ ನೋಡಿದಳು. ಏನೋ ಆಶ್ಚರ್ಯವನ್ನು ಕಂಡಂತೆ ಏನೋ ಪ್ರಮೋದ-ನೀನು ಬದುಕಿದ್ದೀಯೇನೋ ? ಯಾರು ? ನೀನು? ಹಾಂ-ನನ್ನ ತಮ್ಮ ಪ್ರಮೋದನೇ-ಎಂದು ಅವನ ಮೈಯೆಲ್ಲಾ ಸವರಿ ಏನೋ ಬಡ ಬಡಿಸಿದಳು.

ಅಜ್ಜೀ-ನಾನು-ಕುಮಾರ, ಏನೇನೋ ಹೇಳುತ್ತಿದ್ದೀಯಲ್ಲಾ ? ಅಯ್ಯೋ ! ಕುಮಾರ ನಿನ್ನ ಹಾಗೇ ಮಿಲ್ಟ್ರಿ ಡ್ರೆಸ್ಸಿನಲ್ಲಿ ಬಂದರೆ ನನ್ನ ತಮ್ಮ ಪ್ರಮೋದ ಹೀಗೇ ಇದ್ದ. ನೀನಂತೂ ಅಚ್ಚು ಮಾಡಿದ

ಪ್ರಮೋದನೇ–ಎಂದು ಏನೋ ಕೌತುಕವನ್ನು ಕಂಡಂತೆ ಮಾತಾಡುತ್ತಲೇ ಇದ್ದಳು.

ಕಾಳೀಪ್ರಸಾದ ಒಳಗೆ ಹೋಗಿ ಉಡುಪನ್ನು ಬದಲಾಯಿಸಿ ಪಂಚೆ ಉಟ್ಟು ಬಂದ. ಅಜ್ಜೀ ; ಯಾವ ಪ್ರಮೋದ ನನ್ನ ಹಾಗೇ ಇದ್ದ ? ಅದೇ ಕಣಪ್ಪಾ ! ನನ್ನ ತಮ್ಮ ಕೊಲೆಯಾದ ಎಂದು ಹೇಳಿದೆನಲ್ಲಾ ಅವನೇ, ಮೈ ಮುಚ್ಚಿ ತುಂಬು ತೋಳಿನ ಷರಟನ್ನು ಹಾಕಿ ಕೊಳ್ಳುತ್ತಾ ಹೋಗಲಿ ಬಿಡು ಅಜ್ಜೀ ಅವನ ಹಾಗೇ ಇರುವ ನಾನೇ ಅವನ-ಮಗ ನೆಂದು ತಿಳಿ ...

ಅಜ್ಜೀ ಗಲಿ–ಬಿಲಿಗೊಂಡಳು–ಹಾಂ....ಇರಬಹುದೇ ? ಕುಮಾರಾ ! ಅವನ ಮಗು ಸತ್ತು ಹೋಯಿತಲ್ಲೋ ನಿಜ ಹೇಳು ಕಂದಾ ನಿನ್ನ ತಂದೆ––ತಾಯಿ ಯಾರು ?

ಅಜ್ಜೀ ಆವತ್ತೇ ಹೇಳಿದೆನಲ್ಲಾ-ನಾನು ತಬ್ಬಲಿ, ನಾನು ಎಳೆ ಮಗುವಾಗಿದ್ದಾಗಲೇ ನನ್ನ ಅಪ್ಪ–ಅಮ್ಮ ಹೋದರು, ನಾನು ಎಲ್ಲೋ ಬೆಳೆದೆ . ಅಚ್ಚಾ-ಲೋ ಯಂಕಾ, ಬೇಗ ಸ್ವಲ್ಪ ಬಿಸಿ ನೀರು ಕಾಯಿಸೋ ಸ್ನಾನ ಮಾಡಬೇಕು.

ಸರಿ ಕಣಪ್ಪಾ ! ಕುಮಾರಾ ಒಂದು ವಾರ ಪತ್ತೆ ಇಲ್ಲದೆ ಎಲ್ಲಿ ಹೋಗಿದ್ದೆಯೋ ? ಯಂಕನ್ನ ಕಳುಹಿಸಿ ಊರೆಲ್ಲಾ ಹುಡುಕಿಸಿದೆ-

ಅಜ್ಜೀ-ನಾನು ಮತ್ತೆ ಬದುಕಿ ನಿನ್ನ ಮುಂದೆ ನಿಂತಿದ್ದೀನಲ್ಲಾ ಅದೇ ನಿನ್ನ ಆಶೀರ್ವಾದ. ನನ್ನ ಕೆಲಸ ಕಾರ್ಯದಲ್ಲಿ ನಾನು ಕಾಡು ಮೇಡು ಓಡಾಡಬೇಕು. ಕಾಶ್ಮೀರ್ ಕಣಿವೆಗೆ ಹೋಗಿದ್ದೆ, ಅಲ್ಲಿ ನನಗೆ ಹಾವು ಕಚ್ಚಿತು.

ಅಜ್ಜಿ ಗಾಬರಿಯಿಂದ ಹಾಂ....ಹೌದೇನೋ ? ಆಮೇಲೆ ಔಷಧಿ ಮಾಡಿಕೊಂಡು ಬದುಕಿ ಬಂದೆ–

ಇನ್ನು ಹಾಗೆಲ್ಲಾ ಹೋಗಬೇಡಪ್ಪಾ, ನೀನು ಮನೆಗೆ ಬರದಿದ್ದರೆ ನನ್ನ ಜೀವ ತಲ್ಲಣಿಸುತ್ತೆ....

ಕಾಳೀಪ್ರಸಾದನಿಗೆ ದೇವಿಯನ್ನು ಕಾಣುವ ಕಾತುರ ಒಬ್ಬ ಸಾಹಿತಿಯಂತೆ ದೊಗಳೆ ಪೈಜಾಮ-ಜುಬ್ಬಾ-ಹಾಕಿಕೊಂಡು ಒಂದು ಚೀಲ ಬಗಲಿಗೆ ತಗುಲಿಸಿ ಹೊರಟ. ಊರೆಲ್ಲಾ ಸುತ್ತಾಡಿದ, ಕೆಲವು ಕಡೆ "ಪ್ರಕಟಣೆ" ಎಂಬ ಬೋರ್ಡ್ ಹಾಕಲಾಗಿತ್ತು. ಅದೇನೆಂದು ಗಮನಿಸಿದ. ಈ ದಿನ ಸಂಜೆ ರಾಜರಾಜೇಶ್ವರೀ ಭವನದ ಸಭಾಂಗಣದಲ್ಲಿ ದೇವಿಯವರ ಪ್ರವಚನವಿದೆ. ಸಾರ್ವಜನಿಕರು ಬರಬಹುದು ಎಂದು ಇತ್ತು, ಕಾಳೀಪ್ರಸಾದನಿಗೆ ತುಂಬಾ ಖುಷಿಯಾಯಿತು. ಇನ್ನೇನು ಮೊದಲು ದೇವಿಯನ್ನು ಅಲ್ಲೇ ನೋಡುವುದೆಂದು ಕಾತುರನಾದ.

ಮನೆಗೆ ಬಂದು ಉಡುಪು ಬದಲಾಯಿಸಿದ. ಕಾಶ್ಮೀರಿ ತರಹ ನಾಜೂಕಾಗಿ ಚಮಕಿ ಕುಸುರಿ ಕೆಲಸ ಮಾಡಿದ ಲಾಂಗ್ ಕೋಟ್ ಬಿಗಿಯಾಗಿ ಹಾಕಿಕೊಳ್ಳುವ ಪೈಜಾಮ, ಚಮಕಿ ಹೊಲಿದ ಟೋಪಿ. ಹೀಗೆ ಥೇಟ್ ಕಾಶ್ಮೀರಿ ಶ್ರೀಮಂತರಂತೆ ಕೈಲಿ ವಾಕಿಂಗ್‌ಸ್ಟಿಕ್ ಹಿಡಿದು ಹೊರಟ. ಬಾಗಿಲ ಬಳಿ ಬಂದು ಲೋ-ಯಂಕಾ· ಕುದುರೆಯನ್ನು ಬಿಚ್ಚಿ ತಾ, ಎಂದ. ಕಣ್ಣು ಕೋರೈಸುವ ಕುಮಾರನ ರೂಪವನ್ನು ಕಣ್ಣರಳಿಸಿ ನೋಡಿದಳು. ಅಜ್ಜಿ ಅವನು ಕಣ್ಮರೆಯಾಗುವವರೆಗೂ.

ರಾಜೇಶ್ವರೀ ಭವನದ ಹತ್ತಿರ ಜನರು ಕಾದು ನಿಂತಿದ್ದರು. ಸೇವಕರು ಹೊರ ಬಾಗಿಲನ್ನು ತೆಗೆದು ಕ್ರಮಪ್ರಕಾರ ಒಳಗೆ ಬಿಟ್ಟು ಶಿಸ್ತಿನಿಂದ ಕೂರಿಸುತ್ತಿದ್ದರು. ಸೇವಕರಿಗೆ ಕಾಳೀಪ್ರಸಾದನ ಪರಿಚಯವಿತ್ತು. ಆದರೆ ಯಾರನ್ನೂ ಪೀಠ (ಕುರ್ಚಿ) ಹಾಕಿ ಕೂರಿಸುವಂತಿಲ್ಲ ಅದು ದೇವಿಯ ಅಪ್ಪಣೆ ಸಭಾಂಗಣ ತುಂಬಿದರೆ ಮಿಕ್ಕವರು ಹೊರಗಡೆಯೇ ನಿಂತು ಕೇಳುತ್ತಿದ್ದರು. ಕಾಳೀಪ್ರಸಾದ ಕೆಳಗೆ ಕುಳಿತುಕೊಳ್ಳಲು ಇಷ್ಟಪಡದೆ ಹೊರಗಡೆಯೇ ನಿಂತ.

ದೇವಿ ವೇದಿಕೆಗೆ ಬಂದು ಎಲ್ಲರಿಗೂ ಕೈಮುಗಿದು ಎತ್ತರದ ಪೀಠದಲ್ಲಿ ಕುಳಿತಳು. ಈದಿನ ಜರಿಯ ಪೀತಾಂಬರ ಉಟ್ಟು ಮೇಲೊಂದು ತೆಳುವಾದ ದುಕೂಲ ಹೊದ್ದಿದ್ದಳು.

ಸಭಿಕರೇ! ಈದಿನ ಪ್ರವಚನ ಕೆಲವು ಪವಿತ್ರ ಕ್ಷೇತ್ರಗಳ ವಿಚಾರವಾಗಿ ತಿಳಿಸಬೇಕೆಂದಿದ್ದೇನೆ. ಮೊದಲು ಮಾತೃದೇವೋಭವ, ಎಲ್ಲರೂ

ಒಟ್ಟಿಗೆ ಮಾತೃದೇವೋಭವ ಎಂದು ಉಚ್ಚರಿಸಿದರು. ನಾವು ಯಾವ ದೇವಿಯ ದರ್ಶನ ಮಾಡಿದರೂ ತಾಯಿ ಮೊದಲ ದೇವರು ಏಕೆಂದರೆ ಒಬ್ಬ ಮನುಷ್ಯ ತನಗೆ ಇಷ್ಟವಾದ ಪತ್ನಿಯನ್ನೂ, ಹೆಣ್ಣು ಪತಿಯನ್ನು ಆರಿಸಿ ಕೊಳ್ಳಬಹುದು ಬೇಡವೆಂದರೆ ಬಿಟ್ಟು ಬೇರೆಯವಳನ್ನು ಪಡೆದು ಕೊಳ್ಳಬಹುದು. ಆದರೆ ತಾಯಿಯ ವಿಷಯದಲ್ಲಿ ಹೀಗೆ ಮಾಡಲು ಸಾಧ್ಯವೇ ಇಲ್ಲ. ಒಬ್ಬಳ ಗರ್ಭವಾಸದಲ್ಲಿದ್ದು ಅವಳಿಂದಲೇ ಜನಿಸಿದ ಮಗುವಿಗೆ ಆ ಘಳಿಗೆಯಿಂದ ಅವಳೇ ತಾಯಿ, ಸಾಕು ತಾಯಿಗೆ ಹೆತ್ತ ತಾಯಿಯ ರಕ್ತ ಸಂಬಂಧ ಎಂದಿಗೂ ಬಾರದು ಆದ್ದರಿಂದ ಹೆತ್ತ ತಾಯಿಗೇ ಮಾತೃದೇವೋಭವ, ಎನ್ನುವುದು.

ಎಲ್ಲರೂ ಹರ್ಷೋದ್ಗಾರ ಮಾಡಿ ಚಪ್ಪಾಳೆ ತಟ್ಟಿದರು. ಇದನ್ನು ಕೇಳಿದ ಮೇಲೆ ಕಾಳೀಪ್ರಸಾದನ ಮನಸ್ಸು ತಾಯಿಗಾಗಿ ಹಂಬಲಿಸಿತು.

ನನ್ನ ಪ್ರಿಯ ಬಂಧುಗಳೇ ಈ ದಿನ ನಾನು ಒಂದು ಅಪೂರ್ವ ಘಟನೆಯನ್ನು ನಿಮಗೆ ತಿಳಿಸಬೇಕೆಂದಿದ್ದೇನೆ. ನಮ್ಮ ಭಾರತದ ದಕ್ಷಿಣದ ತುಟ್ಟತುದಿಯಲ್ಲಿ ಕನ್ಯಾಕುಮಾರಿದೇವಿ ನೆಲಸಿದ್ದಾಳೆ–ಇಲ್ಲಿ ಮೂರು ಸಮುದ್ರ ಗಳ ಸಂಗಮವಾಗುತ್ತದೆ. ಇಲ್ಲಿ ಸೂರ್ಯಾಸ್ತದ ರಮಣೀಯ ಸೌಂದರ್ಯ ವನ್ನು ಕಾಣಲು ಅದೃಷ್ಟಬೇಕು ಇದೊಂದು ಪವಿತ್ರ ಯಾತ್ರಾ ಸ್ಥಳ. ಈ ಕನ್ಯಾಕುಮಾರಿಯ ವಿಚಾರವಾಗಿ ಅನೇಕ ವಿಧ ಸ್ಥಳ ಪುರಾಣಗಳಿವೆ.

ಇದೊಂದು ಪುರಾಣ ಕಥೆ ಪೂರ್ವಕಾಲದಲ್ಲಿ ಬಾಣಾಸುರನೆಂಬ ರಾಕ್ಷಸ ಮೂರುಲೋಕಗಳನ್ನೂ ಜಯಿಸಿ ಭಯಂಕರ ಹಾವಳಿ ಮಾಡಿ ಎಲ್ಲರನ್ನೂ ಗೋಳಾಡಿಸುತ್ತಿದ್ದ. ಅವನಿಗೆ ಬ್ರಹ್ಮನಿಂದ ವರ-ಒಬ್ಬ ಕನ್ಯೆ ಯಿಂದಲೇ ನನಗೆ ಮರಣವಾಗಬೇಕು ಎಂದು. ಇವನ ಉಪಟಳವನ್ನು ತಾಳಲಾರದೇ ತ್ರಿಮೂರ್ತಿಗಳೂ ದೇವಿ ಪರಾಶಕ್ತಿಯನ್ನು ಪ್ರಾರ್ಥಿಸಿದರು. ದೇವಿಯು ಪ್ರತ್ಯಕ್ಷಳಾಗಿ ತಾನೇ ಬಾಣಾಸುರನನ್ನು ಕೊಂದು ಲೋಕ ರಕ್ಷಣೆಮಾಡುವುದಾಗಿ ಅಭಯಕೊಟ್ಟಳು. ದೇವಿ ಕನ್ಯೆಯಾಗಿ ಕನ್ಯಾಕುಮಾರಿ ಯನ್ನು ತಲುಪಿ ತಪಸ್ಸು ಮಾಡತೊಡಗಿದಳು. ಕ್ರಮೇಣ ಯೌವ್ವನವತಿ–ಯಾದಳು. ಅವಳ ಸೌಂದರ್ಯವನ್ನು ಮೆಚ್ಚಿ . ಶುಚೀಂದ್ರಮ್

ದೇವಾಲಯದ ದೇವ ಪರಮ ಶಿವನು ಅವಳನ್ನು ವಿವಾಹವಾಗಲು ನಿಶ್ಚಯಿಸಿದ ದೇವಿಯೂ ಸಮ್ಮತಿಸಿದಳು. ಮದುವೆಯ ಶುಭಮುಹೂರ್ತ ಸರಿಯಾಗಿ ರಾತ್ರಿ 12 ಗಂಟೆಗೆ ಎಂದು ನಿಶ್ಚಯವಾಯಿತು ಮದುವೆಯ ಆ ಶುಭ ದಿನ ಮದುಮಗ ಪರಮಶಿವನು ಹರ್ಷೋತ್ಸಾಹದಿಂದ ಕನ್ಯಾ ಕುಮಾರಿಗೆ ಹೊರಟನು. ಆದರೆ ದೇವತೆಗಳಿಗೆಲ್ಲಾ ಇದರಿಂದ ಸಂತೋಷ ವಾಗಲಿಲ್ಲ. ದೇವಿಯು ಮದುವೆಯಾಗಿಬಿಟ್ಟರೆ ಬಾಣಾಸುರನ ವಧೆಯಾಗುವ ಹಾಗಿಲ್ಲ. ಅವಳು ಕನ್ಯೆಯಾಗಿಯೇ ಇರಬೇಕು. ನಾರದರೇ! ಇದಕ್ಕೆ ಏನಾದರೂ ಉಪಾಯಮಾಡಿ ಎಂದು ನಾರದರ ಮೊರೆ ಹೊಕ್ಕರು. ಮುಹೂರ್ತಕ್ಕೆ ಇನ್ನೂ ಬೇಕಾದಷ್ಟು ವೇಳೆ ಇರುವಾಗಲೇ ನಾರದರು ಕೋಳಿಯ ರೂಪದಲ್ಲಿ ಬಂದು ಕೂಗಿ ಬೆಳಗಾಯಿತೆಂದು ಸೂಚನೆ ಕೊಟ್ಟರು. ಪಾಪ ! ಪರಮಶಿವನು ಮುಹೂರ್ತ ಮೀರಿಹೋಯಿತೆಂದು ಶುಚೀಂದ್ರಕ್ಕೆ ಮತ್ತೆ ತೆರಳಿದನು. ಮದುವೆಯ ಹೆಣ್ಣು. ಶಿವನು ಎಷ್ಟಕ್ಕೂ ಬಾರದಿದ್ದು ದನ್ನು ಕಂಡು ತಾನು ಕನ್ಯೆಯಾಗಿಯೇ ಇರಲು ನಿಶ್ಚಯಿಸಿದಳು. ಅವಳಿಂದ ಬಾಣಾಸುರನ ವಧೆಯಾಯಿತು. ಮ ದು ವೆ ಗಾ ಗಿ ಮಾಡಿದ್ದ ಅಕ್ಷತೆ ಫಲಾಹಾರದ ಸಾಮಾನುಗಳೂ ಅಲ್ಲೆಲ್ಲಾ ಎರಚಾಡಿ ಮರಳಾಗಿ ಪರಿವರ್ತಿ ಸಿತು. ಇಂದಿಗೂ ಅಲ್ಲಿಯ ಮರಳು ವಿವಿಧ ವರ್ಣಗಳಲ್ಲಿದೆ.

ಪರಶುರಾಮರು ಒಂದು ಬಾರಿ ದಕ್ಷಿಣಕ್ಕೆ ತಪಸ್ಸಿಗೆ ಬಂದವರು ವಿಗ್ರಹ ರೂಪದಲ್ಲಿದ್ದ ದೇವಿ ಸುಂದರ ಕನ್ಯೆಯನ್ನು ಪ್ರತಿಷ್ಠಾಪನೆ ಮಾಡಿ-ದರು, ಇಂದಿಗೂ ಆ ದೇವಿಯ ದರ್ಶನ ಮಾಡಿದ ಭಕ್ತಾದಿಗಳು ಜೀವನ ಪಾವನವೆನ್ನುತ್ತಾರೆ. ವಿವೇಕಾನಂದರು ಸಿದ್ಧಿ ಪಡೆದ ಸ್ಥಳ-ಕನ್ಯಾಕುಮಾರಿ.

ಹೀಗೆ-ದೇವಿಯು ಹೇಳುತ್ತಿರುವಾಗ ಕನ್ಯಾಕುಮಾರಿಯ ಪುರಾಣ ಕಥೆಯನ್ನು ಅಲ್ಲಿ ಕೇಳುತ್ತಿದ್ದ ಸಭಿಕರು ಭಕ್ತಿಪರವಶರಾಗಿ ತುಟಿ-ಪಿಟಕ್ಕೆನ್ನದೆ ಕೇಳುತ್ತಿದ್ದರು.

ಮಹಾಜನರೇ! ಮತ್ತೊಂದು ವಿಷಯ ನಿಮಗೆ ತಿಳಿಸಬೇಕಾದ್ದು ಅವಶ್ಯ ಆ ದೇವಿಯ ಅನುಗ್ರಹವೇ ನನ್ನ ಶಕ್ತಿ ಬಾಲ್ಯದಲ್ಲಿ ನಾನೂ ನಮ್ಮ ಅಣ್ಣನೂ ಬಹಳ ಕಷ್ಟ ದೆಸೆಯಲ್ಲಿದ್ದೆವು. ಕನ್ಯಾಕುಮಾರಿಗೆ ಆಕಸ್ಮಿಕವಾಗಿ ಹೋದೆವು. ನಾನು ದೇವಿಯನ್ನು ಮೊರೆಹೊಕ್ಕು ಬೇಡಿದೆ, "ಮಗೂ ನಿನಗೆ

ಬೇಕಾದಷ್ಟು ಐಶ್ವರ್ಯ ಬರುತ್ತದೆ ಆದರೆ ನೀನು ಅನಾಥ ಮಕ್ಕಳಿಗೂ ಬಡವರಿಗೂ ಧರ್ಮಕಾರ್ಯಕ್ಕೂ ವಿನಿಯೋಗಿಸಬೇಕು. ನನ್ನ ಆಶಯದಂತೆ ನೀನೇ ದೇವಿ ರಾಜರಾಜೇಶ್ವರಿಯಾಗಿ ಲೋಕ ಕಲ್ಯಾಣ ಮಾಡು " ಎಂಬ ವಾಣಿ ಆಗ ಕೇಳಿಸಿತು. ದೇವಿಯ ಅಪ್ಪಣೆಯಂತೆ ನಿಮ್ಮಿಂದ ಪಡೆದ ಕಾಣಿಕೆಯನ್ನು ಸದುಪಯೋಗ ಪಡಿಸುತ್ತಿದ್ದೇನೆ, ಎಂದು ಸಭೆಗೆ ಕೈಮುಗಿದಳು. ಜನರು ರಾಜರಾಜೇಶ್ವರಿ ದೇವಿಗೆ ಶುಭವಾಗಲಿ ಎಂದು ಹರಸಿದರು.

ಇದೆಲ್ಲಾ ಕೇಳಿಸಿಕೊಂಡು ಹೊರಗೇ ನಿಂತಿದ್ದ ಕಾಳೀಪ್ರಸಾದನ ಮೈ ರೋಮಾಂಚನವಾಯಿತು, ಇದೇನು ಇವಳಿಗೂ ದೇವಿಯ ವರಪ್ರಸಾದ. ನನಗೂ ಸಹ ಕಾಳೀಮಾತೆಯ ಅನುಗ್ರಹ. ಅಯ್ಯೋ.. ಈಗಲೇ ದೇವಿಯ ಹತ್ತಿರ ಹೋಗಿ ಹೇಳಬೇಕಲ್ಲಾ ಎಂದು ಕಾತುರನಾಗಿ ಒಳಕ್ಕೇ ಬಂದು ದೇವಿಯ ವೇದಿಕೆಯ ಹತ್ತಿರ ನಿಂತು ಕೈಮುಗಿದ. ದೇವಿ ಅತ್ತನೋಡಿ-ದಳು. ಕಾಳೀಪ್ರಸಾದ ಈದಿನ ಸ್ವರ್ಗದಿಂದಿಳಿದ ಗಂಧರ್ವನಂತೆ ಕಂಡ ಅವನನ್ನು ಕಂಡೇನೇ ಎಂದಿದ್ದ ದೇವಿಗೆ ಮನಸ್ಸು ಆನಂದತುಂದಿಲ-ವಾಯಿತು. ತನ್ನ ಸೇವಕಿಯನ್ನು ಹತ್ತಿರ ಕರೆದು ಆ ಶ್ರೀಮಂತರನ್ನು ವೇದಿಕೆಗೆ ಬಂದು ಹಿಂಭಾಗದಲ್ಲಿ ಕುಳಿತಿರುವಂತೆ ಹೇಳು ಎಂದಳು-ಅವಳೊಂದಿಗೆ ಕಾಳೀಪ್ರಸಾದ ಅವಳು ಹೇಳಿದಂತೆ ಹೋಗಿ ಕುಳಿತ,

ದೇವಿ ಪ್ರವಚನ ಮಾಡುವ ಮುಖ್ಯ ವಿಷಯ ಇನ್ನೂ ಇತ್ತು ಈಗ ಕಾಳೀಪ್ರಸಾದನನ್ನು ಕಂಡ ನಂತರ ವಿಷಯವನ್ನು ಹೇಳಲು ಉತ್ಸಾಹ ವುಂಟಾಯಿತು.

ಮಹಾಜನರೇ ! ಇನ್ನೊಂದು ಮುಖ್ಯ ವಿಷಯವನ್ನು ತಿಳಿಸಬೇಕಾ-ಗಿದೆ. ಅದು ಈಗ ನಾವಿರುವ ಈ ಸಿಂಧೂಪುರ್ ವಿಚಾರ. ಇದು ಒಂದು ಪುಣ್ಯ ಕ್ಷೇತ್ರ. ಹಿಂದೆ ಪರಶುರಾಮನು ತನ್ನ ಪಾಪ ಪರಿಹಾರಕ್ಕಾಗಿ ಭೂದಾನ ಮಾಡಲು ವರುಣ ದೇವರನ್ನು ಕೇಳಿಕೊಂಡರಂತೆ. ವರುಣದೇವರ ಅಪ್ಪಣೆ ಪಡೆದು ಇದೇ ಈ ಭೂಭಾಗದಲ್ಲಿ ನಿಂತು ತನ್ನ ಪರಶು ( ಕೊಡಲಿಯನ್ನು ) ದಕ್ಷಿಣ ದಿಕ್ಕಿಗೆ ಜೋರಾಗಿ ಎಸೆದರಂತೆ, ಅದು ಕನ್ಯಾಕುಮಾರಿಯಲ್ಲಿ ಬಂದು ಬಿತ್ತು. ಆ ಭೂಭಾಗವನ್ನು ವರುಣದೇವರಿಂದ

ಪಡೆದು ದಾನಮಾಡಿದರಂತೆ. ಈ ಸಿಂಧೂಪುರ್ ಪ್ರದೇಶದಲ್ಲಿ ಪರಶು-ರಾಮನು ನಿಂತು ಕೊಡಲಿಯನ್ನು ಎಸೆದದ್ದರಿಂದ ಈ ಊರಿಗೆ ಪರಶುರಾಮ ಕ್ಷೇತ್ರ ಎಂದೂ ಹೆಸರಿದೆ. ಈ ಕ್ಷೇತ್ರ ಜಹಗೀರ್‌ದಾರರ ವಂಶಕ್ಕೆ ಸೇರಿದ್ದು. ಇಲ್ಲಿರುವ ಪರಶುರಾಮ ಬೆಟ್ಟದಲ್ಲಿ ಜಹಗೀರ್‌ದ್ದಾರರ ವಂಶದವರೇ ಪರಶುರಾಮ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಪ್ರದೇಶ ಪುಣ್ಯ ಭೂಮಿ, ನಾವು ಇಲ್ಲಿ ವಾಸಿಸಲು ಪುಣ್ಯ ಮಾಡಿದ್ದೇವೆ. ಮಹಾ ಜನರೇ ನೀವುಗಳೆಲ್ಲಾ ಪುಣ್ಯ ಭಾಗಿಗಳು—ಎಂದು ಹೇಳಿ ಕೈಮುಗಿದು ಒಳಕ್ಕೆ ನಡೆದಳು ದೇವಿ.

ಸಭೆ ಮುಗಿದು ಹೊರಡುವಾಗ ಜನರು ದೇವಿಯ ವಿಚಾರವನ್ನೇ ಮಾತನಾಡಿಕೊಳ್ಳುತ್ತಾ ಹೋಗುತ್ತಿದ್ದರು. ದೇವಿಗೆ ಕನ್ಯಾಕುಮಾರಿಯ ವರಪ್ರಸಾದದಿಂದಲೇ ಇಷ್ಟು ಐಶ್ವರ್ಯ ಬಂದಿದ್ದು. ಮುಟ್ಟಿದ್ದು ಚಿನ್ನ. ಆ ದಾನ ಧರ್ಮ ಎಲ್ಲಾ ಅವರು ಹೇಳಿದಂತೆಯೇ.

ದೇವಿಯು ಸಭಾಂಗಣದಿಂದ ಒಳಕ್ಕೆ ಬಂದಕೂಡಲೇ ಕುರ್ಚಿಯಲ್ಲಿ ಕುಳಿತಿದ್ದ ಕಾಳೀಪ್ರಸಾದನನ್ನು ನೋಡಿದಳು ಅವನು ಯಾವುದೋ ಚಿಂತನೆ ಯಲ್ಲಿದ್ದ ದೇವಿಗೆ ಅವನನ್ನು ನೇರ ನೋಡಲು ಏನೋ ಸಂಕೋಚ. ಇದೇ ಪ್ರೇಮಾಂಕುರದ ಸಂಕೇತ, ಕಾಳೀಪ್ರಸಾದ ತಲೆ ಎತ್ತಿ ನೇರ ನೋಡಿದ. ಅವನಿಗೆ ಯಾವ ಹಾವ ಭಾವ ಅಭ್ಯಾಸವಿಲ್ಲ. ಅಬ್ಬ ! ಎಷ್ಟು ಹೊತ್ತು ನನ್ನನ್ನು ಕಾಯಿಸಿಬಿಟ್ಟೆ ದೇವಿ, ! ನಿನ್ನನ್ನು ಬೇಗ ನೋಡಿ ಮಾತನಾಡಿಸ ಬೇಕೆಂದು ಬಂದೆ.

ಈಗ ದೇವಿ ಹಂಗಿಸುವ ಸ್ವರದಲ್ಲಿ ಹೇಳಿದಳು ಅಹಾ ! ಅಷ್ಟು ಕಾತುರವಿರುವವರು ಒಂದು ವಾರದಿಂದ ಇತ್ತಕಡೆ ಸುಳಿಯಲಿಲ್ಲವೇಕೆ ? ನೀನು ಕರೆಸಿಕೊಳ್ಳಲಿಲ್ಲ ಏಕೆ ?

ನೀವಿರುವ ಸ್ಥಳವನ್ನು ಸರಿಯಾಗಿ ತಿಳಿಸಿದ್ದರೆ ತಾನೇ ?

ಹೋಗಲಿ, ನಾನು ಬರಲಿಲ್ಲವಲ್ಲಾ ಎಂದು ನಿನಗೆ ವ್ಯಸನವಾಯಿತೇ?

ಅದು ನನಗೆಗೊತ್ತಿಲ್ಲ ! ನಮ್ಮ ಸೇವಕರನ್ನು ಕಳುಹಿಸಿ ಎಲ್ಲೆಲ್ಲೋ ಹುಡುಕಿಸಿದೆ.

ಈಗ ಕಾಳೀಪ್ರಸಾದ-ಸರಿ, ನಾನು ಬಂದಿದ್ದೇನಲ್ಲಾ ಬಾ. ಕುಳಿತು ಮಾತನಾಡೋಣ, ಎಂದು ಅವಳ ಹತ್ತಿರ ಬಂದು ಅವಳ ಕೈ ಹಿಡಿದುಕೊಂಡ.

ಅವಳು ಕೈ ಕೊಸರಿಕೊಂಡು ದೂರ ಸರಿದಳು. ಪಿಸುದನಿಯಲ್ಲಿ ಇಲ್ಲಿ ಬೇಡ ಎಲ್ಲಾದರೂ ದೂರ ಹೋಗಿ ಮಾತಾಡೋಣ, ಎಂದಳು.

ಅಷ್ಟರಲ್ಲಿ ಸೇವಕಿ ಮಿಠಾಯಿ- ತಿಂಡಿಗಳು ಹಾಲು ಎಲ್ಲಾ ತೆಗೆದು-ಕೊಂಡು ಬಂದಳು. ಸೇವಕಿಗೂ ದೇವಿಯಲ್ಲಿ ತುಂಬಾ ಪ್ರೀತಿ, ಅವಳು ಹೇಳುವುದಕ್ಕೆ ಮೊದಲೇ ಒಳಗೆ ಹೋಗಿ ಕಾಳೀಪ್ರಸಾದನಿಗಾಗಿ ತಂದಿಟ್ಟಳು, ಕಾಳೀಪ್ರಸಾದನ ರೂಪ, ಐಶ್ವರ್ಯ, ಧೀರತ್ವ-ಇದೆಲ್ಲಾ ಕಂಡ ಸೇವಕಿ ಮಮತಾಗೆ–ಅಬ್ಬ–ಎಂತಹ ರೂಪ ! ನಮ್ಮ ದೇವಿ ಮದುವೆಯಾದರೆ ಇವರನ್ನೇ ಆಗಬೇಕು. ಜೋಡಿ-ಆಹಾ-ಬಲು ಚೆನ್ನ ಅವರು ಪ್ರೇಮಿಗಳಾಗಲಿ ಎಂದು ಹಾರೈಸಿದಳು.

ಧರ್ಮದರ್ಶಿಗಳು ಕಾಳೀಪ್ರಸಾದನನ್ನು ಸೂಕ್ಷ್ಮವಾಗಿ ಗಮನಿಸಿ ಇವನು ದೇವಿಗಾಗಿ ಏನುಬೇಕಾದರೂ ಮಾಡಬಲ್ಲ. ಇಂತಹವನ ಕೂಡಿಯಾಟ ಇರಲಿ, ಮುಂದೆ ನೋಡೋಣ, ಎಂದು ಮನಸ್ಸಿನಲ್ಲಿ ಯೋಚಿಸಿ ಅವರಿಬ್ಬರನ್ನೂ ಮಾತಾಡಲು ಬಿಟ್ಟು ಅವರೂ ಹೊರಗೆ ಹೋದರು. ಆದರೆ ಹೋಗುವ ಮೊದಲು ದೇವಿಯನ್ನು ಹತ್ತಿರ ಕರೆದು ಅವನಿಗೆ ಸಲಿಗೆ ಕೊಡಬೇಡ ಹುಷಾರು, ಎಂದು ಹೇಳಿ ಹೋದರು.

ದೇವಿ ಫಲಾಹಾರದ ತಟ್ಟೆಯನ್ನು ಕೈಗೆತ್ತಿಕೊಂಡು ತೆಗೆದುಕೊಳ್ಳಿ ಎಂದು ಕಾಳೀಪ್ರಸಾದನ ಮುಂದೆ ಹಿಡಿದಳು, ಕಾಳೀಪ್ರಸಾದನ ಹುಬ್ಬು ಗಂಟಿಕ್ಕಿತು. ಅವನ ಸ್ವಾಭಾವಿಕ ಕೋಪ ಉಕ್ಕಿತು, ನಿನ್ನ ಮನೆ ತಿಂಡಿಗಾಗಿ ಗತಿಗೆಟ್ಟು ನಾ ಬರಲಿಲ್ಲ. ಒಳಕ್ಕೆ ಕರೆಯದೇ ಇಲ್ಲಿಯೇ ತಿಂದು ಹೋಗು, ಎನ್ನುತ್ತೀಯಾ ? ನನಗೆ ಬೇಡ ಎಂದು ದರ್ಪದಿಂದ ತಟ್ಟೆಯನ್ನು ತಳ್ಳಿಬಿಟ್ಟ-ಎಲ್ಲಾ ಕೆಳಗೆ ಚೆಲ್ಲಿತು.

ಇವನು ಇಂತಹ ರೋಷಗಾರನೆಂದು ತಿಳಿದಿರಲಿಲ್ಲ. ಅವಳು ಎಂದೂ ಯಾರಿಂದಲೂ ಅಪಮಾನ ಪಟ್ಟವಳಲ್ಲ ಎಲ್ಲರೂ ಮರ್ಯಾದೆಯಿಂದ ನಡೆದುಕೊಳ್ಳುವವರೇ ! ಆದರೆ ಈ ಧೀರ ಯಾರಿಗಾಗಿಯೂ ಭಯಪಡು ವವನಲ್ಲ. ಇವನೇ ಪುರುಷ ಶ್ರೇಷ್ಠ ಎಂದು ಮನಸ್ಸಿನಲ್ಲಿ ಅಂದುಕೊಂಡರೂ, ದೇವಿಗೆ ತನಗಾದ ಅಪಮಾನದಿಂದ ದುಃಖ ಉಕ್ಕಿಬಂತು, ಹಾಗೆಯೇ ಮುಖ ತಗ್ಗಿಸಿ ಒಂದೂ ಮಾತನಾಡದೇ ಒಳಕ್ಕೆ ಹೊರಟು ಹೋದಳು.

ಕಾಳೀಪ್ರಸಾದನಿಗೆ ತಾನು ಮಾಡಿದ್ದು ತಪ್ಪಾಯಿತು ಅನಿಸಿತು. ಈಗ ಅವಳನ್ನು ಹೇಗೆ ಮಾತಾಡಿಸಲಿ ಎಂದು ತವಕಿಸಿದ. ಸೇವಕರೆಲ್ಲಾ ಹೊರ ಗಿದ್ದರು. ಸೇವಕಿ ಮಮತಾ ಅಲ್ಲಿಯೇ ಒಳ ಬಾಗಿಲ ಬಳಿ ನಿಂತಿದ್ದಳು. ಅವಳಿಗೆ ಎಲ್ಲಾ ಗೊತ್ತಾಗಿತ್ತು

ಕಾಳೀಪ್ರಸಾದ ಅವಳನ್ನೇ ಕೇಳಿದ, ದೇವಿ ಎಲ್ಲಿದ್ದಾಳೆ ?

ಅವರು ತಮ್ಮ ಕೊಠಡಿಯಲ್ಲಿ ಮಲಗಿದ್ದಾರೆ.

ಆತುರದಿಂದ ಹೋಗಿ ನೋಡಬಹುದೇ ?

ಅದು ಸಾಧ್ಯವಿಲ್ಲ. ನೀವು ಹೊರಡಬಹುದು.

ನಾನು ದೇವಿಯನ್ನು ಮಾತಾಡಿಸದೇ ಹೋಗುವವನಲ್ಲ. ನಿಮ್ಮ ದೇವಿಯನ್ನು ಕೇಳಿಕೊಂಡು ಬಾ.

ಇವನ ರೋಷವನ್ನು ನೋಡಿದ್ದಳು ಆ ಸೇವಕಿ–ಇವನು ಹಠವಾದಿ ಎಂದು ದೇವಿಯ ಕೊಠಡಿಗೆ ಹೋಗಿ ಕೇಳಿದಳು. ಬರಹೇಳು ಎಂದಳು ದೇವಿ.

ಕಾಳೀಪ್ರಸಾದ ಕೊಠಡಿಗೆ ಬಂದು ನೋಡಿ ದಂಗಾದ ಮಂಚದ ಮೇಲೆ ಮೆತ್ತನ್ನ ಹಾಸಿಗೆ, ದೇವಿ ಮುಖ ಮುಚ್ಚಿ ಬೋರಲಾಗಿ ಮಲಗಿದ್ದಳು. ಅವನಿಗೆ ಹಿಂದು ಮುಂದು ಯೋಚಿಸುವಷ್ಟು ನಿಧಾನವಿರಲಿಲ್ಲ, ನೇರ ಮಂಚದ ಬಳಿ ನಿಂತು ಅವಳ ತಲೆಯನ್ನು ನೇವರಿಸಿದ. ಅವಳು ತಲೆ ಎತ್ತದೆ ಅಳುತ್ತಿದ್ದಳು. ದೇವಿ ಧೈರ್ಯವಂತೆ ಜನ ಸಮೂಹವನ್ನೇ ತನ್ನ ಪ್ರಭಾವದಿಂದ ಹಿಡಿತದಲ್ಲಿಡಬಲ್ಲವಳು. ಆದರೆ ! ಅವಳು ಹೆಣ್ಣು, ಅವಳಿಗೂ ತನ್ನನ್ನು ತುಂಬಾ ಪ್ರೀತಿಸುವ ಧೀರ ಯುವಕನ ಅಪೇಕ್ಷೆ ಇತ್ತು. ವಿಧಿ ವಿಲಾಸವೋ ? ಕಾಳೀಪ್ರಸಾದನನ್ನು ಮೆಚ್ಚಿ ಪ್ರೀತಿಸಿದಳು. ಅವನನ್ನು ಮತ್ತೆ ಕಂಡೇನೇ ? ಎಂದು ತವಕಿಸಿದಳು, ಆದರೆ ಇಂದು ಕಾಳೀಪ್ರಸಾದನ ಕೋಪ–ತನ್ನನ್ನು ನಿರ್ಲಕ್ಷಿಸಿ ತಟ್ಟೆಯನ್ನು ತಳ್ಳಿ ಅವಮಾನಿಸಿದುದು ಅವಳಿಗೆ ತುಂಬಾ ದುಃಖವಾಯಿತು. ಏನೂ ಮಾತಾಡಲಿಲ್ಲ.

ಕಾಳೀಪ್ರಸಾದ ಬೇಡಿಕೊಳ್ಳುವ ಸ್ವಭಾವದವನಲ್ಲ–ದೇವಿ ಇದೋ ನೋಡು ನಾನು ನಿನ್ನ ಜೊತೆ ತುಂಬಾ ಮಾತನಾಡಬೇಕೆಂದು ಬಂದೆ ಆದರೆ ನೀನು ಹೀಗೆ ಮಲಗಿ ಮುಖ ತೋರಿಸದಿದ್ದರೆ ನಾನು ಹೊರಟು ಹೋಗುತ್ತೇನೆ.

ದೇವಿ ಅವನಾಗಿಯೇ ಪ್ರೀತಿಸಿ ಎಬ್ಬಿಸಲಿ, ಎಂದಿದ್ದಳು. ಕಾಳೀಪ್ರಸಾದನಿಗೆ ಹೇಗೆ ಪ್ರೀತಿಸಬೇಕೆಂಬುದೇ ಗೊತ್ತಿಲ್ಲ. ಮಲಗಿದ್ದಂತೆಯೇ ಮುಖವನ್ನು ಅವನ ಕಡೆ ತಿರುಗಿಸಿ ನೋಡಿದಳು. ಕಳ್ಳ-ಕಪಟವಿಲ್ಲದ ಸುಂದರ ಮುಖ ಅಷ್ಟೇ ಹರವಾದಿ.

ಈಗ ಕಾಳೀಪ್ರಸಾದ ಅವಳ ಮುಖವನ್ನು ನೋಡಿದ. ಸೊರಗಿದ ಮುಖ ಅತ್ತು, ಕಣ್ಣು ಕೆಂಪಾಗಿದ್ದಿತು. ಅವನು ಪಕ್ಕನೆ ನಕ್ಕುಬಿಟ್ಟ. ಅವಳ ಕೆನ್ನೆಯನ್ನು ತನ್ನ ಒರಟು ಕೈಯಿಂದ ತಟ್ಟಿ, ನೀನು ಇನ್ನೆಂತಹ ದೇವಿಯಪ್ಪಾ ! ದೇವಿ ಎಲ್ಲಾದರೂ ಅಳುತ್ತಾರೆಯೇ ? ನೀನು ತುಂಬಾ ಧೈರ್ಯವಂತೆ ಎಂದಿದ್ದೆ.

ದೇವಿಗೆ ತುಂಬಾ ನಾಚಿಕೆಯಾಯಿತು. ಅವಳು ಪುನಃ ಹಾಗೆಯೇ ಮುಖ ಮುಚ್ಚಿಕೊಂಡು, ನೀವೇಕೆ ಒಂದು ವಾರದಿಂದ ಬರಲಿಲ್ಲ ? ಈಗ ಬಂದಾಗಲೂ ಎಷ್ಟು ಒರಟಾಗಿ ನಡೆದುಕೊಂಡಿರಿ ? ಒಂದು ಪ್ರೀತಿಯ ಮಾತೂ ಬೇಡವೇ ?

ಎಲ್ಲಿ ತಲೆ ಎತ್ತಿ ನನ್ನನ್ನು ನೋಡು–ಹೌದು ನಾನು ಒರಟು ಮನುಷ್ಯ. ಆದರೆ ನಿನ್ನನ್ನು ಎಷ್ಟು ಪ್ರೀತಿಸುತ್ತೇನೆ ಎಂದರೆ. ಎಲ್ಲಿ ಹೋದರೂ ನಿನ್ನದೇ ಜ್ಞಾನ.

ದೇವಿಗೆ ಸಮಾಧಾನವಾಯಿತು. ಎದ್ದು ಕುಳಿತು, ಇಷ್ಟು ದಿನ ಎಲ್ಲಿ ಹೋಗಿದ್ದಿರಿ ? ಅದನ್ನು ತಿಳಿಸಬೇಕೆಂದೇ ಬಂದೆ. ಎಂದು ಕಾಳೀಪ್ರಸಾದ ಹೇಳುತ್ತಿದ್ದಂತೆಯೇ ಧರ್ಮದರ್ಶಿಗಳು ಹೊರ ಬಾಗಿಲಲ್ಲಿ ಬರುತ್ತಿದ್ದುದನ್ನು ಕಂಡು ಮಮತಾ ಬೇಗ ಬಂದು ದೇವಿಗೆ ತಿಳಿಸಿದಳು.

ದೇವಿ, ಕಾಳೀಪ್ರಸಾದನ ಕೈಯ್ಯನ್ನು ಚುಂಬಿಸಿ ಈಗ ನೀವು ಹೋಗಿ. ನಾಳೆ ಮಕ್ಕಳ ಊಟದ ಛತ್ರದ ಬಳಿ ನಾನೇ ಬರುತ್ತೇನೆ. ಬೆಳಗ್ಗೆ 8 ಗಂಟೆಗೇ, ಅಲ್ಲಿಯ ವ್ಯವಸ್ಥಾಪಕರನ್ನು ಕಾಣಬೇಕು. ಎಂದು ಮೆಲ್ಲಗೆ ಹೇಳಿ ಮುಖ ತೊಳೆಯಲು ಒಳಕ್ಕೆ ಹೋದಳು.

ಮಮತಾ ಕಾಳೀಪ್ರಸಾದನನ್ನು ಬೇರೆ ಕಡೆಯಿಂದ ಹೊರಕ್ಕೆ ಕಳುಹಿಸಿದಳು. ಧರ್ಮದರ್ಶಿಗಳ ವಹಿವಾಟು ಸ್ವಭಾವ ಎಲ್ಲಾ ಅಲ್ಲಿರುವವರಿಗೆ ಗೊತ್ತು. ಅವರು ತುಂಬಾ ಒಳ್ಳೆಯವರೇ. ಅವರನ್ನು ಕಂಡರೆ ಸೇವಕರಿ–

ಗೆಲ್ಲಾ ಗೌರವ, ದೇವಿಯನ್ನು ಮಾತ್ರ ತಮ್ಮ ಭದ್ರ ಕೋಟೆಯೊಳಗೇ ಜೋಪಾನ ಮಾಡುತ್ತಿದ್ದರು ಧರ್ಮದರ್ಶಿಗಳು. ಅವಳು ದೇವಿಯಾಗೇ ಇರಬೇಕು. ಮದುವೆಯಾಗಬಾರದು ಎಂಬುದು ಅವರ ಅಭೀಷ್ಟ. ಇದೊಂದಕ್ಕಾಗಿ ದೇವಿ ಅವರನ್ನು ದೂಷಿಸುತ್ತಿದ್ದಳು. ಯಾವತ್ತಿಗೂ ಇವರ ಆಸರೆಯಲ್ಲಿಯೇ ಇರುವುದು ದೇವಿಗೆ ಇಷ್ಟವಾಗುತ್ತಿರಲಿಲ್ಲ. ತನ್ನನ್ನು ಸರಿಯಾಗಿ ಕಾಪಾಡುವ–ಪ್ರೀತಿಸುವ ಯುವಕನೊಬ್ಬ ಬೇಕು ಎಂದು ಆಸೆ ಪಟ್ಟಳು. ಆದರೆ ಧರ್ಮದರ್ಶಿಗಳ ಕಟ್ಟು ಪಾಡಿನಲ್ಲಿ ಕಾಳೀಪ್ರಸಾದನನ್ನು ಧೈರ್ಯವಾಗಿ ಪ್ರೀತಿಸುವುದಕ್ಕೆ ಹೆದರುತ್ತಿದ್ದಳು,

ಕಾಳೀಪ್ರಸಾದನ ಮನಸ್ಸು ಕುದುರೆಯಂತೆಯೇ ವೇಗವಾಗಿ ಓಡು-ತ್ತಿತ್ತು. ಈ ಹೆಣ್ಣು ಇನ್ನೆಂತಹ ಮೋಡಿ ಮಾಡಿದಳು. ಅವಳು ಮುತ್ತು ಕೊಟ್ಟಾಗ ಕೈಗೆ ಎಷ್ಟು ಹಿತವಾಗಿತ್ತು ? ಆದರೆ ಪಾಪ! ನನಗಾಗಿ ಅತ್ತು ಬಿಟ್ಟಳು. ಅವಳ ಪ್ರವಚನವನ್ನು ಕೇಳಿದಾಗಿನಿಂದಲೂ ಅವಳು ಹೇಳಿದ ಒಂದೊಂದು ವಿಷಯವೂ ನನ್ನ ತಲೆಯಲ್ಲಿ ಅಚ್ಚೊತ್ತಿ ನಿಂತಿದೆ. ಅವಳು ಪರಶುರಾಮನ ಕ್ಷೇತ್ರ ಇದೆಂದು ಹೇಳಿದಳು. ಜಹಗೀರ್‌ದಾರರ ವಂಶಸ್ಥರ ವಿಷಯ ಹೇಳುವಾಗ ನನಗೆ ಎಷ್ಟು ಕಾತುರವಾಯಿತು. ಎಲ್ಲಾ ಹೇಳಿ ಬಿಡಲೇ ಎನ್ನಿಸಿತು. ಅವಳಿಗೆ ದೇವಿ ಕನ್ಯಾಕುಮಾರಿಯ ವರ ! ಅಬ್ಬ– ಏನೇನು ಆಶ್ಚರ್ಯ ವಿಚಾರಗಳನ್ನು ಹೇಳಿದಳು. ಎಲ್ಲದಕ್ಕಿಂತ ತಾಯಿಯೇ ದೇವರು. ಅದೆಂತದ್ದೋ ! ದೇವೋಭವ, ಅಂದಳು. ಅಂತಹ ದೇವರಂತಹ ತಾಯಿ ನನಗಿಲ್ಲವಲ್ಲ. ಅವಳಿಗೂ ಇಲ್ಲವೇನೋ ? ಎಂದುಕೊಂಡೇ ಅಜ್ಜಿ ಮನೆಗೆ ಬಂದ. ಈ ದಿನ ನನ್ನ ತಾಯಿಯ ಫೋಟೊ ನೋಡಲೇಬೇಕು ಎಂದುಕೊಂಡ.

ಅಜ್ಜೀ ಬಾ....ಇಲ್ಲಿ. ನಿನಗೆ ನಮಸ್ಕಾರ ಮಾಡಬೇಕು ಈ ಕುರ್ಚೀಲಿ ಕೂತುಕೋ ಅಜ್ಜಿ ಕಕ್ಕಾ-ಬಿಕ್ಕಿಯಾಗಿ ಒಳಗಿಂದ ಬಂದಳು. ಏನಪ್ಪಾ ನಿನ್ನ ಅಬ್ಬರ ? ರಾಜಕುಮಾರ ?

ಇರಲಿ ಅಜ್ಜೀ. ಎಂದು ಅಜ್ಜಿಯ ಕಾಲಿಗೆ ನಮಸ್ಕಾರ ಮಾಡಿದ. ನೋಡು ಅಜ್ಜೀ ! ಈ ದಿನ ದೇವಿಯ ಪ್ರವಚನ ಕೇಳಿದೆ. ಅವಳು

ತಾಯಿಯೇ ದೇವರು, ಎಂದಳು. ನನಗೆಲ್ಲಿ ತಾಯಿ ಇದಾಳೆ. ನೀನೇ ನನ್ನ ತಾಯಿ ನೀನೇ ನನಗೆ ದೇವರು

" ಆ ದೇವಿ ಇದೆಲ್ಲಾ ಹೇಳುತ್ತಾಳೆಯೋ ?

ಹೌದು ಅಜ್ಜೀ ! ಅವಳು ತುಂಬಾ ಜಾಣೆ, ನನ್ನನ್ನು ಪ್ರೀತಿಸುತ್ತಾಳೆ ಎಂದು ಹೇಳುತ್ತಲೇ ಅವನು ಉಡುಪನ್ನು ಬದಲಾಯಿಸಿದ.

ಏನು ನಿನ್ನ ದರ್ಬಾರೋ ! ಬಾ ಊಟ ಮಾಡು.

ಇರಲಿ, ಮೊದಲು ಪೆಟ್ಟಿಗೆಯಲ್ಲಿ ನಿನ್ನ ತಮ್ಮ ತಮ್ಮನ ಹೆಂಡತಿ ಫೋಟೋ ಇದೆ ಅಂದೆಯಲ್ಲಾ, ತೆಗೀ ಅಜ್ಜಿ, ನೋಡಬೇಕು, ಅಂದ.

ನೋಡು ಕುಮಾರ, ನೀನು ಏನೇನುಕ್ಕೋ ಹಠ ಮಾಡಬೇಡ ಅದು ತೆಗೆಯುವುದಕ್ಕಾಗುವುದಿಲ್ಲ-ಅಂದಳು.

ಅಜ್ಜೀ ನನ್ನ ಹಠ ನಿನಗೆ ಗೊತ್ತು, ಬೀಗದ ಕೈ ಕೊಡು ಇಲ್ಲಿ. ನಾನು ನೋಡಬೇಕು, ಎಂದು ಹಠವಾಗಿ ಹೇಳಿದ.

ಇದೆಲ್ಲಾ ನನಗೇನು ಗ್ರಹಚಾರವೋ ಎಂದು ಗೊಣಗುಟ್ಟುತ್ತಾ ಅಜ್ಜಿ ಆ ದೊಡ್ಡ ಮನೆ ಬೀಗದ ಕೈ ಕೊಟ್ಟಳು. ಆ ಕೊಠಡಿಯಲ್ಲಿರುವ ಪೆಟ್ಟಿಗೆಯಲ್ಲಿವೆ ನೋಡಪ್ಪಾ ! ನಾನಂತೂ ನೋಡಲಾರೆ,

ಕಾಳೀಪ್ರಸಾದ ಬೀಗ ತೆಗೆದು ಯಂಕನ ಜೊತೆ ಒಳಗೆ ಹೋಗಿ ಧೂಳೆಲ್ಲಾ ತೆಗೆಸಿ ಶುಚಿ ಮಾಡಿಸಿದ. ಅಜ್ಜಿ ಹೇಳಿದ ಪೆಟ್ಟಿಗೆ ಒಂದು ರೂಮಿನಲ್ಲಿತ್ತು, ಚಾಕಟ್ಟಾದ ದೊಡ್ಡ ಮರದ ಪೆಟ್ಟಿಗೆ. ಮೇಲಿನ ಧೂಳು ಒರೆಸಿ ಪೆಟ್ಟಿಗೆ ಬಾಗಿಲು ತೆರೆದ. ಪೆಟ್ಟಿಗೆಯಲ್ಲಿ ಎಲ್ಲಾ ದೊಡ್ಡ ದೊಡ್ಡ ಪಟಗಳೇ ತುಂಬಿದ್ದುವು, ಒಂದೊಂದಾಗಿ ಎಲ್ಲಾ ಪಟಗಳನ್ನೂ ತೆಗೆದ ಅದಕ್ಕೂ ಧೂಳು ಮುಚ್ಚಿತ್ತು, ರಾಜರ ಅರಮನೆಗಳಲ್ಲಿ ಚಿತ್ರಕಾರರಿಂದ ಬರೆಸುವ ಫೋಟೋಗಳಂತಿತ್ತು ಎಲ್ಲಾ ಹೊರಕ್ಕೆ ತಂದು ಧೂಳು ಒರೆಸಿದ, ಅಜ್ಜೀ ನೀನು ಬರಲೇಬೇಕು ಇವುಗಳು ಯಾರು ! ಯಾರ ಫೋಟೋ ಹೇಳಜ್ಜೀ ಎಂದು ಬೇಡಿಕೊಳ್ಳುವಂತೆ ಕೇಳಿದ.

ಅಯ್ಯೋ ! ಕುಮಾರಾ ! ನೀನು ನನ್ನನ್ನು ಯಾವ ತರದಲ್ಲಿಯೂ. ಬಿಡುವುದಿಲ್ಲಪ್ಪಾ ! ಎಲ್ಲಿ—ಇದೂ—ಜಹಗೀರ್‌ದಾರ್ - ಪ್ರತಾಪ ಪಾಟೀಲ್ ಅಂತ. ಅವರೇ ನಮ್ಮ ತಾತ. ನೋಡು ಜಹಗೀರ್‌ದಾರರ ಉಡುಪಿನಲ್ಲಿ

ಒಳ್ಳೆ ಮಹಾರಾಜರಂತೆಯೇ ಇದ್ದಾರೆ, ಅವರ ದರ್ಪ ಅವರ ಮುಖದಲ್ಲಿಯೇ ಕಾಣುತ್ತೆ.

ದೊಡ್ಡ ಸೈಜಿನ ಚಿನ್ನದ ಕಟ್ಟು ಹಾಕಿದ ಪಟ. ಮುದ್ದಾದ ದಂಪತಿಗಳ ಫೋಟೋ-ಸುಂದರವಾದ ಕಣ್ಣುಗಳು. ತಿದ್ದಿದ ಮೂಗು ಬಾಯಿ, ನವ ಯೌವನದ ಆ ಜೋಡಿ ನೋಡಿ ಕಾಳೀಪ್ರಸಾದ ಅಬ್ಬ.... ಇಬ್ಬರೂ ಎಷ್ಟು ಚೆನ್ನಾಗಿದಾರೆ ? ಅಂದ.

ಕುಮಾರಾ ! ಇವರೇ ಪರಶುರಾಮ, ಸಿರಿದೇವಿ ನಮ್ಮ ತಂದೆ ತಾಯಿ ಪ್ರಮೋದ-ಸತ್ತು ಹೋದನಲ್ಲಾ ಅವನೂ ಇವರ ಮಗ, ನೋಡಿದೆಯಾ ! ನಮ್ಮ ವಂಶದವರು ಹೇಗಿದಾರೆ ?

ಈಗ ಕಾಳೀಪ್ರಸಾದನಿಗೆ ತನ್ನ ತಂದೆ-ತಾಯಿಯರನ್ನು ನೋಡುವ ಕಾತುರ. ಅವರ ಮದುವೆಯ ಸಂದರ್ಭದ ಫೋಟೋ. ನಿರ್ಮಲ ಸರ್ವಾಲಂಕಾರ ಭೂಷಿತೆಯಾಗಿ ಕೈಯಲ್ಲಿ ವರಮಾಲೆ ಹಿಡಿದು ನಿಂತಿದಾಳೆ. ಪ್ರಮೋದ ಜರಿಯ ಪೋಷಾಕು ಧರಿಸಿ ಮಾಲೆ ಹಿಡಿದು ನಿಂತಿರುವುದು-ಸೀತಾ ಕಲ್ಯಾಣದ ದೃಶ್ಯದಂತಿದೆ.

ನೋಡಿದೆಯಾ ಕುಮಾರಾ ! ಇನ್ನೂ ಬಾಳಿ ಬದುಕುವ ಮುನ್ನವೇ ಕೊಲೆಗಡುಕರು ಕೊಂದರಲ್ಲಾ ಇದೇ ನನ್ನ ತಮ್ಮ ಪ್ರಮೋದ-ಈ ಮುದ್ದು ಹೆಣ್ಣು ನಿರ್ಮಲ.

ಕಾಳೀಪ್ರಸಾದ ತಾನು ಏನುಮಾಡುತ್ತಿದ್ದೇನೆ! ಎನ್ನುವ ಪರಿವೆಯಿಲ್ಲದೆ ಪಟವನ್ನು ಎದೆಗವುಚಿಕೊಂಡು-ಅಮ್ಮಾ, ಎಂದು ಕೂಗುತ್ತಾ ಅತ್ತುಬಿಟ್ಟ.

ಅಯ್ಯೋ ! ಕಂದಾ ಇರು. ಇನ್ನೂ ಇವರ ಫೋಟೋ ಬೇರೆ-ಬೇರೆ ತರಹ ತೆಗೆಸಿಕೊಂಡಿದಾರೆ ನೋಡು.

ಪ್ರಮೋದ ಜಹಗೀರ್‌ದಾರರ ಡ್ರೆಸ್ಸಿನಲ್ಲಿ ಮಿಲ್ಟ್ರಿ ಉಡುಪಿನಲ್ಲಿ, ಕುದುರೆ ಸವಾರಿಯಲ್ಲಿ, ನಿರ್ಮಲಾನನ್ನು ಅಪ್ಪಿ ಮುದ್ದಾಡುವಂತೆ, ಕಡೆಗೆ ಮಗು ಹುಟ್ಟಿ ನಾಮಕರಣ ಮಾಡುವಾಗ ನಿರ್ಮಲಾ ಮಗುವನ್ನು. ತೊಡೆಯಮೇಲೆ ಮಲಗಿಸಿಕೊಂಡಿರುವುದು, ಪ್ರಮೋದ ಅದರ ತಲೆಯನ್ನು ಸವರುತ್ತಿರುವುದು ಆ ಫೋಟೋವನ್ನು ನೋಡಿ ಅಜ್ಜಿ ಬಿಕ್ಕಿ-ಬಿಕ್ಕಿ ಅತ್ತಳು

ನೋಡೋ ಕುಮಾರಾ ! ಕೃಷ್ಣನಂತಿರುವ ಈ ಮುದ್ದು ಮಗುವೇ ನನ್ನ ತಮ್ಮ ಪ್ರಮೋದನ ಮಗು, ನಾಮಕರಣದ ದಿನ ತೆಗೆದಿದ್ದು. ಈಗ ಈ ಮೂರು ರತ್ನಗಳೂ ಇಲ್ಲ. ಈ ಪಟ ನೋಡಿದಾಗಲೆಲ್ಲಾ ನನ್ನ ಹೊಟ್ಟೆ ಉರಿಯುತ್ತಪ್ಪಾ ! ಅದಕ್ಕೇ ಒಳಗೆ ಹಾಕಿಟ್ಟೆ, ಎಂದು ಅಳುತ್ತಾ ಹಾಗೆಯೇ ಸೊಪ್ಪಾಗಿ ಮಲಗಿ ಬಿಟ್ಟಳು ಮುದುಕಿ.

ಕಾಳೀಪ್ರಸಾದ ಒಂದೇ ಸಮ ತನ್ನ ತಂದೆ-ತಾಯಿಯನ್ನು ನೋಡಿದ. ಅಯ್ಯೋ ! ಅಮ್ಮಾ ನೀನು ಎಷ್ಟು ಚೆನ್ನಾಗಿದ್ದೀ ? ತಾಯಿಯೇ ದೇವ ರೆಂದು ಹೇಳಿದರಲ್ಲಾ. ಈ ದೇವರನ್ನು ಇನ್ನೆಲ್ಲಿ ನೋಡಲಿ ? ಈ ಮಗು .... ನಾನೇ ! ಎಷ್ಟು ಸುಂದರ ಮಗು, ಮೃದುವಾಗಿ ಬೆಳೆಯುವ ಬದಲು ಒರಟಾಗಿ ಕ್ರೂರಿಯಾಗಿ ಬೆಳೆದೆ, ಪಾಪ ಅಜ್ಜಿ.

ಅಜ್ಜಿಯನ್ನು ಸಮಾಧಾನ ಮಾಡಿ, ದುಃಖ ಪಡಬೇಡ ಅಜ್ಜೀ. ಪರಶುರಾಮರ ಕೃಪೆಯಿದ್ದರೆ ಆ ಮಗು ಬದುಕಿ ಬಂದೇ ಬರುತ್ತಾನೆ. ಜಹಗೀರ್‌ದಾರ್ ವಂಶ ಬೆಳಗುತ್ತಾನೆ. ಎಂದು ಭರವಸೆಯ ಮಾತನ್ನಾಡಿದ.

ಅವನ ತಲೆಯನ್ನು ನೇವರಿಸಿ, ಜಹಗೀರ್‌ದಾರರ ವಂಶದವರ ಮೇಲೆ ನಿನಗೆಷ್ಟು ಅಕ್ಕರೆಯಪ್ಪಾ ! ನೀನಾದರೂ ಚೆನ್ನಾಗಿರಪ್ಪಾ ಎಂದು ಅಕ್ಕರೆಯಿಂದ ಅವನಿಗೆ ಊಟ ಬಡಿಸಿದಳು ಅಜ್ಜಿ.

ಇತ್ತ ಕಾಳೀಪ್ರಸಾದನಿಗೆ ದೇವಿಯ ಮೋಹ ಸೆಳೆಯುತ್ತಿತ್ತು. ಬೆಳಗಾಗುವುದನ್ನೇ ಕಾಯುತ್ತಿದ್ದ ಎಂಟು ಗಂಟೆಗೆ ಸರಿಯಾಗಿ ರಾಜರಾಜೇಶ್ವರಿ ಛತ್ರದ ಹತ್ತಿರ ಬಂದ. ಆ ವೇಳೆಗಾಗಲೇ ದೇವಿ ಕಾರಿನಲ್ಲಿ ಬಂದು ಛತ್ರ ದೊಳಗೆ ವ್ಯವಸ್ಥಾಪಕರ ಕೈಲಿ ಮಾತಾಡುತ್ತಿದ್ದಳು. ಅಲ್ಲಿರುವ ಸೇವಕರೇ ಮೊದಲಾಗಿ ವ್ಯವಸ್ಥಾಪಕರವರೆಗೂ ದೇವಿಯಲ್ಲಿ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಕಾಳೀಪ್ರಸಾದ ಬಂದಕೂಡಲೇ ಹೊರ ಬಾಗಿಲಲ್ಲೇ ನಿಂತಿದ್ದ ಸೇವಕ ತಾವು ಒಳಗೆ ದಯಮಾಡಿ ಬರಬೇಕು ನಮ್ಮ ದೇವಿ-ಯವರು ಹೇಳಿದ್ದಾರೆ-ಎಂದು ಒಳಗೆ ಕರೆದೊಯ್ದ.

ದೇವಿಯೂ ಒಂದು ಕುರ್ಚಿಯಲ್ಲಿ ಕುಳಿತಿದ್ದಳು. ಛತ್ರದ ಮ್ಯಾನೇಜರ್ ದೂರ ಕೈಕಟ್ಟಿ ನಿಂತಿದ್ದರು. ಕಾಳೀಪ್ರಸಾದನನ್ನು ಬನ್ನಿ ಕುಳಿತುಕೊಳ್ಳಿ ಎಂದು ದೇವಿ ಮತ್ತೊಂದು ಕುರ್ಚಿ ತೋರಿಸಿದಳು.

ಸ್ವಾಮಿ–ಶಿವಪ್ರಕಾಶರೇ ! ನಾನು ಹೇಳಿದೆನಲ್ಲಾ ಇವರೇ- ವಜ್ರಪಡಿ ವ್ಯಾಪಾರಿಗಳು. ಇವರು ನಮ್ಮ ಛತ್ರಕ್ಕೆ ಧನಸಹಾಯ ಮಾಡುವವರಾಗಿ ದ್ದಾರೆ - ಬಡಮಕ್ಕಳಿಗೆ ಎರಡು ವೇಳೆಯೂ ಊಟದ ವ್ಯವಸ್ಥೆ ಮಾಡ ಬೇಕಾಗುತ್ತದೆ, ನೀವು.

ಆಗಲಿ ದೇವಿಯವರೇ ! ನಿಮ್ಮ ಕೃಪೆ ದೊಡ್ಡದು. ದಾನಿಗಳಾದ ಶ್ರೀಮಂತರ ಪರಿಚಯವಾದದ್ದು ಸಂತೋಷ ಎಂದು ಕೈಮುಗಿದರು ವ್ಯವಸ್ಥಾಪಕರು. ಕಾಳೀಪ್ರಸಾದನೂ ಕೈಮುಗಿದ ಒಂದೂ ಮಾತಾಡಲಿಲ್ಲ.

ದೇವಿ ಬಂದಿರುವ ವಿಷಯ ತಿಳಿದು ಭಿಕ್ಷುಕರ ಸಾಲೇ ಹೊರಗೆ ಕಾದು ನಿಂತಿದ್ದರು. ಕಾರಿನ ಬಳಿ ವ್ಯವಸ್ಥಾಪಕರನ್ನು ಕರೆದು ನೋಡಿ ಕಾರಿನಲ್ಲಿ ಒಂದು ಡಬ್ಬಿ ಇಟ್ಟಿದೇನೆ. ಅದರಲ್ಲಿರುವ ದುಡ್ಡನ್ನು ಈ ಭಿಕ್ಷುಕರಿಗೆ ಹಂಚಿಬಿಡಿ. ಬನ್ನೀ ಶ್ರೀಮಂತರೇ.....ಪರಶುರಾಮ ದೇವರ ದರ್ಶನ ಮಾಡಿಬರೋಣ ಎಂದು ಕಾಳೀಪ್ರಸಾದನನ್ನು ಕಾರಿನ ಹಿಂದಿನ ಸೀಟಿನಲ್ಲಿ ಕೂರಿಸಿ ತಾನೇ ಕಾರು ನಡೆಸುತ್ತಾ ಹೊರಟಳು.

ಪರಶುರಾಮ ಬೆಟ್ಟದ ಬುಡದಲ್ಲಿ ಕಾರು ನಿಂತಾಗ, ಓ ಹೋ ಇದೇ ಬೆಟ್ಟಕ್ಕೋ ! ನಾನು ಆ ದೇವರನ್ನು ನೋಡಿದ್ದೇನೆ. ನೀನೇ ಹೋಗಿ ಬಾ-ಎಂದ ಗತ್ತಿನಿಂದ ಕಾಳೀಪ್ರಸಾದ.

ದೇವಿಗೆ ಅವಮಾನವಾದಂತಾಯಿತು. ಎಲ್ಲರ ಮೇಲೂ ಅಧಿಕಾರ ಮಾಡುವ ನಾನು ಇವನ ಒಂದೊಂದು ಮಾತಿಗೂ ಸೋಲುತ್ತಿದ್ದೇನಲ್ಲಾ! ಮತ್ತೆ ಕಾರಿನ ಒಳಗೆ ಹೋಗಿ ಕುಳಿತು, ಅವನನ್ನು ನೋಡದೆಯೇ-ಸರಿ ನಾನೂ ಹೋಗುವುದಿಲ್ಲ. ಬನ್ನೀ ವಾಪಸ್ ಹೋಗೋಣ ಅಂದಳು.

ಕಾಳೀಪ್ರಸಾದ ಅವಳ ಕೈಯನ್ನು ತೆಗೆದುಕೊಂಡು ಬಲವಾಗಿ ಅನೇಕ ಬಾರಿ ಚುಂಬಿಸಿದ. ದೇವಿಗೆ ರೋಮಾಂಚನವಾಯಿತು. ಬಿಡಿ ಎಲ್ಲಾ ನೋಡುತ್ತಾರೆ ಕೈ ಹಿಂದಕ್ಕೆ ತೆಗೆದುಕೊಂಡಳು.

ಅಚ್ಛಾ–ಅಚ್ಛಾ-ನೋಡು ಹುಡುಗೀ. ನಾನು ಎಲ್ಲರಂತೆ ಕೈಮುಗಿದು ಬೇಡುವವನಲ್ಲ. ನಿನ್ನನ್ನು ರಕ್ಷಿಸುವ ಧೀರ. ನಿನ್ನೊಬ್ಬಳನ್ನೇ ಬೆಟ್ಟಕ್ಕೆ ಹತ್ತಿಸುತ್ತೇನೆಯೇ ! ಬಾ, ಹೋಗೋಣ ಅಂದ,

ದೇವಿಗೆ ಸಂತೋಷದ ಜೊತೆ ಸಂಕೋಚವೂ ಆಯಿತು. ನಾವಿಬ್ಬರೇ ಹೋಗುವುದೇ ? ಎಂದು ಮನಸ್ಸು ಸ್ವಲ್ಪ ಹಿಂಜರಿಯಿತು. ಆದರೆ ಎಷ್ಟೋ ವಿಷಯ ಅವನೊಂದಿಗೇ ಮಾತಾಡಬೇಕು. ಎಂದು ಯೋಚಿಸುತ್ತಾ ಬೆಟ್ಟದ ಮೆಟ್ಟಿಲ ಹತ್ತಿರ ಇಬ್ಬರೂ ಬಂದರು.

ಏಯ್ ಲಡಕೀ... ಏನು ಮಾತಾಡದೇ ಹೋಗುತ್ತಿದ್ದೀ ? ಎಂದು ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಮೆಟ್ಟಿಲು ಹತ್ತತೊಡಗಿದ.

ಅವನ ಒರಟು ಕೈಯಲ್ಲಿ ತನ್ನ ಮೃದು ಹಸ್ತ. ಎಷ್ಟು ಭದ್ರತೆ ? ಎಷ್ಟು ಹಿತ ಎಂದು ದೇವಿಗೆ ಇಷ್ಟವಾದರೂ....ಎಲ್ಲಿ ಕೈ ಬಿಡಿ-ನಿಮ್ಮ ಜೊತೆ ತುಂಬಾ ಮಾತಾಡಬೇಕು. ಬೆಟ್ಟದ ಮೇಲೆ ಕುಳಿತು ಮಾತಾಡೋಣ ಕೋಪಿಸಬೇಡಿ.

ಒಂದೊಂದು ಮೆಟ್ಟಿಲನ್ನು ಹತ್ತುವಾಗಲೂ ಸ್ವರ್ಗ ಸುಖದಂತೆ ತೇಲುತ್ತಾ ಹೋಗುತ್ತಿದ್ದರು. ಸಾಲು ಮರಗಳ ತಂಪು. ತಣ್ಣನೆ ಬೀಸುವ ಮಂದ ಮಾರುತ. ಹೆಚ್ಚು ಜನ ಸಂಚಾರವಿಲ್ಲದ ವಾತಾವರಣ. ಪ್ರೇಮಿಗಳ ಮಧುರ ಸ ಮಾ ಗ ಮ. ದೇವಿಗೆ ಸಂಕೋಚವಾದರೂ ಕಾಳೀಪ್ರಸಾದ ಅವಳನ್ನು ಹತ್ತಿರ ಸೆಳೆದುಕೊಂಡು ಬಿಗಿಯಾಗಿ ಅಪ್ಪಿ ಆಗಾಗ ಮುದ್ದಿಸುತ್ತಾ ಅವಳ ಮುಖದ ಚೆಲುವನ್ನೇ ನೋಡುತ್ತಾ ಹತ್ತುತ್ತಿದ್ದ.

ದೇವಿ ಸ್ವಲ್ಪ ದೂರ ಸರಿದು-ನೋಡಿ ನೀವು ಈಗ ಹತ್ತಿರ ಬರಬಾರದು.

ಓಹೋ ! ಇದು ದೇವಿಯವರ ಅಪ್ಪಣೆಯೋ ! ನಾನಂತೂ ನಿನ್ನನ್ನು ದೇವಿ ಎಂದು ಕರೆಯುವುದಿಲ್ಲ.

ಸರಿ ಏನೆಂದು ಕರೆಯುತ್ತೀರಿ ?

ಅವಳ ಹತ್ತಿರ ಹೋಗಿ ಕಿವಿಯ ಹತ್ತಿರ ಬಗ್ಗಿ-ನನ್ನ ಮುದ್ದು ಮೋತೀ ಎಂದು.

ದೇವಿ ಗಟ್ಟಿಯಾಗಿ ನಕ್ಕುಬಿಟ್ಟಳು ಇಲ್ಲಿ ನಮ್ಮ ಕಡೆಯಲ್ಲಿ ನಾಯಿಗಳಿಗೆ ಮೋತೀ, ಎಂದು ಕರೆಯುತ್ತಾರೆ-ಥೂ ...ನಾನು ನಾಯಿಯೇ ?

ಸರಿ ನಿನಗಿಷ್ಟವಾದ ಬೇರೆ ಹೆಸರು ಹೇಳುತ್ತೇನೆ ತಾಳು.

ಆ ವೇಳೆಗೆ ಬೆಟ್ಟದ ಮೇಲಿಂದ ಯಾರೋ ಇಬ್ಬರು ಗಂಡಸರು ಇಳಿದು ಬರುತ್ತಿದ್ದರು, ಯಾರೋ ಬೇರೆ ಊರಿನವರಿರಬೇಕು ಇವರ ಗುರುತಿಲ್ಲದೆ ಮುಂದೆ ಇಳಿದು ಹೋದರು.

ಕಾಳೀಪ್ರಸಾದ ಸರ ಸರನೆ ಮೆಟ್ಟಲು ಹತ್ತುತ್ತಿದ್ದ. ಅವನ ಸಮಕ್ಕೆ ನಡೆದು ದೇವಿಗೆ ಕಾಲು ಸೋತು ಹೋಯಿತು. ಒಂದು ಮರದ ಕೆಳಗೆ ಕುಳಿತು ಬಿಟ್ಟಳು. ಹಿಂದಿರುಗಿ ನೋಡುತ್ತಾನೆ, ದೇವಿ ಕುಳಿತು ಬಿಟ್ಟಿದ್ದಾಳೆ. ಪುನಃ ಇಳಿದು ಕೆಳಗೆ ಬಂದ. ಅವಳ ಮುಂದೆ ಬಗ್ಗಿ ಹಾಸ್ಯ ಮಾಡುತ್ತಾ ಅಚ್ಛಾ! ಇಷ್ಟೇನಾ ನಿನ್ನ ತಾಕತ್ತು? ಪಾಪ! ನಿನ್ನ ಹೂವಿನಂಥಾ ಕಾಲಿಗೆ ನೋವಾಯಿತೇ? ಅವಳ ಕಾಲನ್ನು ಮೃದುವಾಗಿ ಸವರಿದ,

ಅಲ್ಲಿ ಯಾರೂ ಇಲ್ಲದ್ದು ನೋಡಿ ಕಾಳೀಪ್ರಸಾದನ ಮುಖವನ್ನು ತನ್ನ ಬೊಗಸೆಯಲ್ಲಿ ತುಂಬಿಕೊಂಡು ಅವನ ಕೆನ್ನೆ-ತುಟಿಗೆಲ್ಲಾ ಪ್ರೀತಿಯಿಂದ ಮುತ್ತಿಟ್ಟಳು ದೇವಿ.

ಆ ಹಾ ಅಷ್ಟೊಂದು ಪ್ರೀತಿಯೇ ನನ್ನ ಮೇಲೆ? ಇಲ್ಲೇ ಕೂತರೆ ಹೇಗೆ? ಬಾ-ನಿನ್ನನ್ನು ಎತ್ತಿಕೊಂಡು ಒಂದು ನಿಮಿಷಕ್ಕೆ ಮೇಲೆ ಹತ್ತಿ ಬಿಡುತ್ತೇನೆ, ಎಂದು ಅವಳನ್ನು ಅನಾಮತ್ತು ಎತ್ತಿಕೊಂಡೇಬಿಟ್ಟ.

ಅವನಿಂದ ಕೊಸರಿಕೊಂಡು ಕೆಳಗಿಳಿದಳು, ಈಗ ಇವೆಲ್ಲಾ ಬೇಡ, ನಡಿಯಿರಿ. ಎಂದು ಮುಂದೆ ಹೊರಟಳು ಆದರೆ ಅವಳ ಮನಸ್ಸು ಹಿಗ್ಗಿತು, ಅಬ್ಬ ಭುಜ ಬಲ ಪರಾಕ್ರಮಿ ಪುರುಷ. ಇವನು ಯಾರಿರ-ಬಹುದು? ಸರಿಯಾಗಿ ತಿಳಿದುಕೊಳ್ಳದೇ ಇವನನ್ನು ಪ್ರೀತಿಸಿಬಿಟ್ಟೆನಲ್ಲಾ! ಎಂದು ಭಯಪಟ್ಟಳು.

ಆ ವೇಳೆಗೆ ಬೆಟ್ಟದ ಮೇಲಿನ ದೇವಸ್ಥಾನ ಸಿಕ್ಕಿತು; ದೇವಸ್ಥಾನದಲ್ಲಿ ಅರ್ಚಕರು ಸ್ತೋತ್ರ ಹೇಳುತ್ತಾ ಪೂಜೆ ಮಾಡುತ್ತಿದ್ದರು.

ಬನ್ನಿ ಬನ್ನೀ....ದೇವರಿಗೆ ಮಂಗಳಾರತಿ ಮಾಡುತ್ತೇನೆ. ಕಾಳೀಪ್ರಸಾದ ನನ್ನು ಸರಿಯಾಗಿ ನೋಡುತ್ತಾ! ಓ-ಈ ಯುವಕ ಶ್ರೀಮಂತರು ಒಂದು ಸಲ ಬಂದಿದ್ದರು. ಈಗ ಜೊತೆಯಾಗಿ ಬಂದಿದ್ದೀರಿ. ಇಬ್ಬರಿಗೂ ಶುಭ-

ವಾಗಲಿ, ಎಂದು ಹರಸಿ ಮಂಗಳಾರತಿ ಮಾಡಿದರು. ಯಥಾಪ್ರಕಾರ ಅರ್ಚನೆ ಯಾರ ಹೆಸರಿನಲ್ಲಿ ಮಾಡಲಿ ? ತಾಯೀ ? ಎಂದರು.

ದೇವಿ ಕಾಳೀಪ್ರಸಾದನ ಮುಖ ನೋಡುತ್ತಾ-ರಾಜಸಿಂಹ, ಎಂದು ಇವರ ಹೆಸರಿನಲ್ಲಿ ಮಾಡಿ–ಎಂದಳು,

ಇಲ್ಲ–ಇಲ್ಲ ಇವಳ ಹೆಸರು ಸಿರಿದೇವಿ ಇವಳ ಹೆಸರಿನಲ್ಲಿ ಮಾಡಿ ಎಂದ.

ಅರ್ಚಕರು ಬೊಚ್ಚುಬಾಯಿ ಬಿಟ್ಟು ಗಟ್ಟಿಯಾಗಿ ನಗುತ್ತಾ ಒಳ್ಳೆ ಹುಡುಗರು–ಇಬ್ಬರ-ಹೆಸರಿನಲ್ಲಿಯೂ ಮಾಡುತ್ತೇನೆ. ನಿಮ್ಮ ದಾಂಪತ್ಯ ಸದಾ ಸುಖವಾಗಿರಲಿ....ಎಂದು ಹರಸಿದರು.

ದೇವಿಗೆ ಆಶ್ಚರ್ಯ ಸಂತೋಷ ಎರಡೂ ಆಯಿತು. ಅರ್ಚಕರು ಹಣ್ಣು ಹೂವು ಪ್ರಸಾದ ಎಲ್ಲಾ ಕೊಟ್ಟು ಇವತ್ತು ದೇವರ ದರ್ಶನಕ್ಕೆ ನೀವು ಅಪರೂಪವಾಗಿ ಬಂದಿದ್ದೀರಿ. ಪರಶುರಾಮ ಸತ್ಯದ ದೇವರು, ಹರಸಿಕೊಳ್ಳಿ-ನಿಮ್ಮ ಅಭೀಷ್ಟವೆಲ್ಲಾ ನೆರವೇರುತ್ತೆ. ದೇವಿ ಕಾಳೀಪ್ರಸಾದ ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿ ನಕ್ಕರು.

ನೋಡಿದಿರಾ! ಬರೀದಿನಗಳಲ್ಲಿ ಈ ಬೆಟ್ಟ ಹತ್ತಿ ಯಾರು ಬರುತ್ತಾರೆ? ರಥೋತ್ಸವ, ಪರ್ವದಿನಗಳಲ್ಲಿ ಜನ ತುಂಬಿರುತ್ತಾರೆ. ಈ ದಿನ ಯಾರೂ ಬರಲಿಲ್ಲ. ದೈವಚಿತ್ತ ನಿಮ್ಮಿಬ್ಬರನ್ನು ಕರೆಸಿಕೊಂಡ.

ತೆಗೆದುಕೊಳ್ಳಿ ದಕ್ಷಿಣೆ ತಾಂಬೂಲ, ಎಂದು ದೇವಿ ಒಂದು ಹಿಡಿ ತುಂಬಾ ಬೆಳ್ಳಿ ರೂಪಾಯಿ ತಟ್ಟೆಯಲ್ಲಿಟ್ಟಳು. ಕಾಳೀಪ್ರಸಾದ ಹಣದ ಥೈಲಿಯನ್ನೇ ತಂದಿದ್ದ ಅವನು ಒಂದು ಬೊಗಸೆ ನಾಣ್ಯವನ್ನಿಟ್ಟ.

ಅರ್ಚಕರಿಗೆ ಸಂತೋಷವಾಯಿತು. ನನ್ನ ಬಡ ಸಂಸಾರವನ್ನೇ ಉದ್ಧಾರ ಮಾಡಿದಿರಿ, ಜಹಗೀರ್‌ದಾರ್ ಮನೆಯವರು ಇದ್ದಾಗ ಹೀಗೆಯೇ ತಟ್ಟೆ ತುಂಬ ದಕ್ಷಿಣೆ ಕೊಡುತ್ತಿದ್ದರು. ಹುಂ–ಇನ್ನೆಲ್ಲಿ ? ಎಂದು ದೇವರ ಕೈಯಲ್ಲಿ ಮುಟ್ಟಿಸಿ ಕುಂಕುಮ ಪ್ರಸಾದ ಕೊಟ್ಟರು.

ಇದೂ ಜಹಗೀರ್‌ದಾರರ ಮನೆಯ ದಕ್ಷಿಣೆಯೇ ಎಂದು ತಿಳಿದು ಕೊಳ್ಳಿ. ನಾವು ಸ್ವಲ್ಪ ವಿಶ್ರಾಂತಿ ಪಡೆದು ಹೋಗುತ್ತೇವೆ, ಮುಂದೆ ನಡೆದ ಕಾಳೀಪ್ರಸಾದ.

ದೇವಿ ಖುಷಿಯಿಂದ ಹೀಗೆ ಬನ್ನಿ ಎಂದು ಕಾಳೀಪ್ರಸಾದನ ಕೈ ಹಿಡಿದು ಬೆಟ್ಟದ ಹತ್ತಿರ ಬಂಡೆಯ ಬಳಿ ಕರೆದುಕೊಂಡು ಹೋದಳು. ಇಬ್ಬರೂ ಬಂಡೆಯ ಮೇಲೆ ಪಕ್ಕ–ಪಕ್ಕದಲ್ಲಿ ಕುಳಿತರು. ಕಾಳೀಪ್ರಸಾದ ಅವಳ ಸುತ್ತ ತೋಳು ಬಳಸಿ, ಈಗ ಹೇಳು ನಿನ್ನ ಹೆಸರು ಸಿರಿ-ಎಂದರೆ ಚೆನ್ನಾಗಿಲ್ವಾ !?

ಆ ಹಾ–ಹಾ ! ನಾನು ಹೇಳಿದ್ದು, ರಾಜಾಸಿಂಹ ನಿಮಗೆ ಸರಿಯಾಗಿ-ಲ್ಲವಾ ಆ ಹೆಸರು ?

ಸರಿ ನೀನು ನನ್ನನ್ನು ಹಾಗೆಯೇ ಕರಿ, ಬರೀ ರಾಜಾ ಎಂದು ಕರಿ ಸಾಕು. ನಾನೂ ದೇವಿ, ಅನ್ನೋದನ್ನ ಬಿಟ್ಟು ಬರೀ ಸಿರಿ ಅನ್ನುತ್ತೇನೆ. ನೀನು ನನ್ನ ಮುದ್ದು ಸಿರಿ....

ಅವನ ಅಪ್ಪುಗೆಯಲ್ಲಿ ದೇವಿ ತನ್ನ ಸ್ಥಾನವನ್ನೇ ಮರೆತು ಅವನ ಎದೆಯಮೇಲೆ ತಲೆಯಿಟ್ಟು ತನ್ಮಯಳಾದಳು. ಅವನ ಕೇಶ ಕಪೋಲ ಅವಳ ಕೆನ್ನೆಯನ್ನು ಸವರಿತು. ಅವನ ಬಿಸಿಯುಸಿರು ಮುಖದ ಮೇಲೆಲ್ಲಾ ಹರಿದಾಡಿತು. ದೇವಿ ಎಚ್ಚೆತ್ತು ದೂರ ಸರಿದು, ನನ್ನನ್ನು ನೀವು ಪ್ರೀತಿಸುತ್ತೀರಾ ? ಎಂದು ತಲೆ ತಗ್ಗಿಸಿ ಗಿಡದ ಒಂದೊಂದೇ ಎಲೆ ಕೀಳುತ್ತಾ ಕೇಳಿದಳು.

ಅವಳ ಹತ್ತಿರ ಸರಿದು ಪ್ರೀತಿ ಎಂದರೆ ಏನು ? ಮುಗ್ಧನಾಗಿ ಕೇಳಿದ. ನೀವು ಒಂದುವಾರ ಬರಲಿಲ್ಲವಲ್ಲಾ ! ಏಕೆ ?

ಅಯ್ಯೋ ! ಅದಾ ! ನಿನಗೆ ಬೇಗ ಹೇಳಬೇಕೆಂದೇ ಬಂದೆ ಆದರೆ ಇದುವರೆಗೆ ಹೇಳುವುದಕ್ಕೇ ಸಮಯ ಸಿಕ್ಕಲಿಲ್ಲ,

ಒಂದುವಾರ ನನ್ನನ್ನು ನೋಡಲಿಲ್ಲವಲ್ಲಾ ! ಅದಕ್ಕೇ ನಿಮಗೆ ನನ್ನ ಮೇಲೆ ಪ್ರೀತಿ ಇಲ್ಲಾ ಅಂದದ್ದು.

ಒಂದುವಾರ ಬರದಿದ್ದರೆ ಪ್ರೀತಿ ಎಲ್ಲಿಗೆ ಹೊರಟು ಹೋಗುತ್ತೇ? ನಾನು ಆದಿನ ಸತ್ತೇ ಹೋಗಿದ್ದರೆ ಪ್ರೀತಿಯೂ ಹೊರಟು ಹೋಗುತ್ತಿತ್ತು.

ದೇವಿ ಅವನ ಬಾಯಿಯನ್ನು ಕೈಯಿಂದ ಮುಚ್ಚಿ-ಬಿಡುತ್ತು, ಅನ್ನಿ ಹಾಗೆಂದರೆ ಏನು ? ಬಿಡುತು. ಅಂದರೆ ಹಾವು ಕಚ್ಚದೇ ಬಿಟ್ಟುಬಿಡುತಾ? ಗಾಬರಿಯಿಂದ- ಏನು ಹಾವು ಕಚ್ಚಿತೇ ?

ಹೌದು ನಾನು ಸತ್ತು ಒಂದು ವಾರವಾಗ ಬೇಕಿತ್ತು. ವ್ಯಾಪಾರಕ್ಕಾಗಿ ಕಾಡು ಮೇಡು ಅಲೆಯಬೇಕಾಗುತ್ತೆ ಒಂದು ಕಾಡಿನ ಗುಹೆಯಲ್ಲಿ ಕಚ್ಚಿತ್ತು, ನಾನೇ ಔಷಧಿ ಮಾಡಿಕೊಂಡು ಬದುಕಿ ಬಂದೆ.

ಅಯ್ಯೋ ನನ್ನ ರಾಜಾ ! ಸಧ್ಯ ! ದೇವರು ಕಾಪಾಡಿದ.

ದೇವರಲ್ಲ, ನಾನು ಪೂಜಿಸುತ್ತಿದ್ದ ಕಾಡಿನ ಕಾಳೀಮಾತೆ ಕಾಪಾಡಿದಳು. ನೋಡಿದೆಯಾ ! ನನ್ನ ಪ್ರೀತಿ ! ನಿನಗಾಗಿ ಬದುಕಿ ಬಂದೆ. ನನ್ನ ಮುದ್ದು ಸಿರಿಗಾಗಿ, ಹಾಗೆಯೇ ಅವಳ ತೊಡೆಯ ಮೇಲೆ ತಲೆಯಿಟ್ಟು ಅಬ್ಬ ! ನೀನು ಎಷ್ಟು ಚೆಂದ. ನನ್ನ ಪ್ಯಾರಿ-ಬುಲ್-ಬುಲ್, ತಲೆ ಎತ್ತಿ ಮುದ್ದಿಸಿದ,

ಹಾಗೆಯೇ ಅವನ ತಲೆಯ ಕುರುಳಿನಲ್ಲಿ ಕೈ ಆಡಿಸುತ್ತಾ-ರಾಜಾ ನೀವು ಮಾತು ಮಾತಿಗೆ ಹಿಂದಿ ಹೇಳುತ್ತೀರಲ್ಲಾ ನೀವು ಯಾವ ಜನ ?

ಜಾತಿ-ಜನ ತಿಳಿದ ಮೇಲೆ ನನ್ನನ್ನು ಬಿಟ್ಟುಬಿಡುತ್ತೀಯಾ ? ತಲೆ ಎತ್ತಿ ಅವಳ ಕಣ್ಣನ್ನೇ ನೋಡುತ್ತಾ ಕೇಳಿದ.

ದೇವರ ಮುಂದೆ ಒಪ್ಪಿಕೊಂಡದ್ದಾಯಿತು ನಾವಿಬ್ಬರೂ ಜೋಡಿ ಎಂದು ಇನ್ನೇಕೆ ಬಿಡುವ ಮಾತ್ತು ಹಾಗೆಯೇ ನೀವೂ ಕೂಡ.,

ಸರಿ ನನಗೆ ತಂದೆ ತಾಯಿ ಇಲ್ಲ. ಎಲ್ಲೋ ದುಷ್ಟರ ಮಧ್ಯೆ ಬೆಳೆದೆ, ನಾನೂ ದುಷ್ಟ- ಎಂದೇ ತಿಳಿ.

ಆಹಾ ! ಇಷ್ಟು ಸರಳ ಸುಂದರ ಮುಖ, ನನ್ನ ರಾಜ ದುಷ್ಟನಾಗಲು ಸಾಧ್ಯವೇ ಇಲ್ಲ ನೀನು ಒಳ್ಳೆಯ ಮನೆತನದಲ್ಲಿ ಹುಟ್ಟಿರಬಹುದು.

ಆ ಹಾ ! ನನ್ನ ಮುದ್ದು ಸಿರಿಗೆ ಎಷ್ಟು ಬುದ್ಧಿ ಇದೆ ! ನಾನೂ ನನ್ನ ಮನೆತನ ನನ್ನ ತಂದೆ-ತಾಯಿಯರನ್ನು ಪತ್ತೆ ಮಾಡುವುದಕ್ಕಾಗಿಯೇ ಹುಡುಕಾಡುತ್ತಿದ್ದೇನೆ.

ಸರಿ ಒಳ್ಳೆಯದಾಗಲಿ, ಹಾಗೆಯೇ ನಮ್ಮಿಬ್ಬರ ಪ್ರೀತಿ ಎಂದೂ ಶಾಶ್ವತ. ನಿನ್ನನ್ನು ಬಿಟ್ಟಿರಲಾರೆ ರಾಜಾ, ಅವನ ಕೈಯನ್ನು ಭದ್ರವಾಗಿ ಹಿಡಿದುಕೊಂಡಳು.

ಅಲ್ಲಿಯೇ ಸಣ್ಣಗೆ ಹರಿಯುತ್ತಿದ್ದ ನೀರಿನ ಝರಿಯಲ್ಲಿ ಇಬ್ಬರೂ ಬೊಗಸೆ ನೀರು ಕುಡಿದು ದಣಿವಾರಿಸಿಕೊಂಡರು ಒಬ್ಬರಿಗೊಬ್ಬರು ನೀರನ್ನು ಎರಚಿ ಚೆಲ್ಲಾಟವಾಡಿದರು. ಆ ವೇಳೆಗೆ ಬಿಸಿಲೇರಿತ್ತು, ದೇವಿ ಘಾಬರಿ–ಯಿಂದ ರಾಜಾ-ನಡಿ-ನಡಿ ತುಂಬಾ ಹೊತ್ತಾಯಿತು. ಇನ್ನು ಆ ಧರ್ಮದರ್ಶಿಗಳು ನನಗೆ ತರಾಟೆಗೆ ತೆಗೆದುಕೊಳ್ಳುತ್ತಾರೆ.

ಕಾಳೀಪ್ರಸಾದನಿಗೆ ಆ ಕೋಪ ಎಲ್ಲಿ ಅಡಗಿತ್ತೋ ? ಕಣ್ಣುಗಳಲ್ಲಿ ಕೆಂಡ ಕಾರುತ್ತಾ ! ಯಾವನು ಆ ಧರ್ಮದರ್ಶಿ ? ಅವನು ನಿನ್ನ ಮೇಲೆ ಏನು ಅಧಿಕಾರ ಮಾಡುತ್ತಾನೆ ? ನನಗೆ ಅದು ಮಾತ್ರ ಸಹಿಸುವುದಿಲ್ಲ, ಅವನನ್ನು ಮೊದಲು ಓಡಿಸು ಇಲ್ಲದಿದ್ದರೆ ನಾನೇ ಬುದ್ಧಿ ಕಲಿಸುತ್ತೇನೆ, ಎಂದು ಅವಳ ಭುಜವನ್ನು ಅದುಮಿದ.

ಅಬ್ಬ ! ಒಂದೇ ನಿಮಿಷದಲ್ಲಿ ಕಾಳೀಪ್ರಸಾದ ಆಗಿಬಿಡುತ್ತೀಯಲ್ಲಾ. ಸ್ವಲ್ಪ ನಿಧಾನಿಸು. ನನ್ನ ವಿಷಯವನ್ನೆಲ್ಲಾ ನಾನೂ ತಿಳಿಸಬೇಕು. ಅವರೇ ನನ್ನನ್ನು ಕಾಪಾಡುತ್ತಿರುವವರು. ಹಾಗೆಲ್ಲಾ ಅವರನ್ನು ದ್ವೇಷಿಸಬೇಡ.

ಅವಳು ಬೆಟ್ಟದಿಂದ ಧಡ–ಧಡನೆ ಇಳಿಯಲು ಪ್ರಾರಂಭಿಸಿದಳು. ನೋಡು ನಿನಗೆ ಎಷ್ಟು ಆತುರ ? ನಾನು ನಿನ್ನನ್ನು ಬಿಟ್ಟಿರಲಾರೆ ಸಿರೀ ... ನಾವು ಹೀಗೆಯೇ ಇದ್ದು ಬಿಡೋಣ. ಅವಳನ್ನು ತಬ್ಬಿಕೊಂಡೇ ಮುಂದೆ ನಡೆದ.

ಇತ್ತ ಧರ್ಮದರ್ಶಿಗಳು, ಕೋಪಾವಿಷ್ಟರಾಗಿದ್ದರು, ಕಾಲನ್ನು ಅಪ್ಪಳಿಸುತ್ತಾ ಭವನದ ಸುತ್ತಾ ಓಡಾಡುತ್ತಿದ್ದರು. ಸೇವಕಿ ಮಮತಾಳನ್ನು ಕರೆದು-ದೇವಿ ಒಬ್ಬಳೇ ಏಕೆ ಹೋದಳು ? ನಿನಗೆಲ್ಲಿ ಹೋಗಿತ್ತು ಬುದ್ಧಿ? ಜೊತೆಯಲ್ಲಿ ನೀನೇಕೆ ಹೋಗಲಿಲ್ಲ ? ಎಂದು ಅವಳನ್ನು ದಬಾಯಿಸಿದರು.

ಅವಳು ಗಡ ಗಡನೆ ನಡುಗುತ್ತಾ ಛತ್ರದ ಬಳಿ ಹೋಗಿ ಬರುತ್ತೇನೆ

ಹಾಗೆಯೇ ಪರಶುರಾಮ ಬೆಟ್ಟಕ್ಕೂ ಹೋಗಿ ಬರುತ್ತೇನೆ, ಎಂದು ಹೇಳಿಯೇ ಹೋದರು.

ಒಬ್ಬಳೇ ಏಕೆ ಹೋದಳು ? ಬರಲಿ,

ಕಾರು ಬಂದು ಬಾಗಿಲಲ್ಲಿ ನಿಂತಿತು. ದೇವಿ ಒಬ್ಬಳೇ ಒಳಕ್ಕೆ ಬಂದಳು. ಅವಳಿಗೆ ಭಯ. ಧರ್ಮದರ್ಶಿಗಳಿಗೆ ಕೋಪ ಬಂದಿದೆಯೆಂದು ಏನೂ ಮಾತನಾಡದೆ ತನ್ನ ರೂಮಿನೊಳಕ್ಕೆ ಹೋಗಿ ಮಂಚದ ಮೇಲೆ ಮಲಗಿದಳು. ಮಮತಾ ಒಳಕ್ಕೆ ಬಂದು ಅಮ್ಮಾ ! ತಿಂಡಿ-ಹಾಲು ತಂದು ಕೊಡಲೇ ? ಎಂದು ಹೇಳುತ್ತಾ. ಅವರಿಗೆ ತುಂಬಾ ಕೋಪ ಬಂದು ಬಿಟ್ಟಿದೆ ಎಂದು ಮೆಲ್ಲನೆ ಹೇಳಿದಳು, ಧರ್ಮದರ್ಶಿಗಳು ದಿಟ್ಟ ನಿಲುವಿನಲ್ಲಿ ದೇವಿಯ ಮುಂದೆ ನಿಂತು ದರ್ಪದಿಂದ ಏನು ! ದೇವಿಯವರು ಸ್ವತಂತ್ರ-ವಾಗಿ ಎಲ್ಲಿ ಬಂದರೆ ಅಲ್ಲಿ–ಒಬ್ಬರೇ ಹೊರಟಂತೆ ಕಾಣುತ್ತೆ.

ದೇವಿ ಒಂದೂ ಮಾತಾಡಲಿಲ್ಲ. ತಲೆ ತಗ್ಗಿಸಿ ಮಂಚದ ಮೇಲೆ ಹಾಗೆಯೇ ಕುಳಿತಿದ್ದಳು. ನಿಮಗೆ ಏನಾದರೂ ಅಪಾಯವಾದರೆ ನಾವು ತಾನೇ ಅನುಭವಿಸಬೇಕು, ಒಬ್ಬರೇ ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದಿರಿ ?

ಪರಶುರಾಮ ಬೆಟ್ಟಕ್ಕೆ ಹೋಗಿದ್ದೆ ಆ ಶ್ರೀಮಂತ ಕಾಳೀಪ್ರಸಾದ ದೇವರ ದರ್ಶನ ಮಾಡಬೇಕೆಂದು ನನ್ನ ಜೊತೆಯಲ್ಲಿ ಬಂದಿದ್ದರು.

ಅದೇ ಬೇಡ ಅನ್ನುವುದು. ಅವನನ್ನು ನಂಬುವುದಕ್ಕಾಗುವುದಿಲ್ಲ.

ದೇವಿ ಸ್ವಲ್ಪ ತಲೆ ಎತ್ತಿ ಧೈರ್ಯವಾಗಿ ಅವರು ಅಂತಹವರಲ್ಲ ಅವರು ಜೊತೆಗಿದ್ದುದರಿಂದಲೇ ಧೈರ್ಯವಾಗಿ ಹೋದೆ.

ನೀವು ಒಬ್ಬರೇ ಎಲ್ಲಿಗೆ ಹೋದರೂ ಪರವಾಗಿಲ್ಲ. ಅವನ ಜೊತೆ ಹೋಗಕೂಡದು. ಕಟ್ಟು ನಿಟ್ಟಾಗಿ ಹೇಳಿ ಧರ್ಮದರ್ಶಿಗಳು ಹೊರಕ್ಕೆ ಹೊರಟು ಹೋದರು,

ದೇವಿಗೆ ಮಮತಾ ಬರೀ ಸೇವಕಿಯಲ್ಲ ಆತ್ಮೀಯ ಗೆಳತಿ ಯಾರಿಗೂ ಹೇಳದೇ ಇರುವ ವಿಷಯವನ್ನು ಮಮತಾ ಕೈಲಿ ಹೇಳಿಕೊಳ್ಳು ತ್ತಿದ್ದಳು. ಅವಳಿಗೂ ದೇವಿಯ ಭವಿಷ್ಯದ ವಿಷಯದಲ್ಲಿ ಅಪಾರ ಆಸಕ್ತಿ.

ನಮ್ಮ ಧರ್ಮದರ್ಶಿಗಳ ಕಟ್ಟುಪಾಡಿನಲ್ಲಿ ದೇವಿ ಮದುವೆಯಾಗದೆಯೇ ಉಳಿದುಬಿಟ್ಟರೆ ? ಎಷ್ಟೇ ಐಶ್ವರ್ಯವಿದ್ದರೂ ಒಂದು ಪ್ರೀತಿಯ ಸಂಧ ಸುಖ ಇದ್ದಂತೆ ಆಗುತ್ತದೆಯೇ ಎಲ್ಲರಿಗೂ ಬೇಕಾದಷ್ಟು ದಾನ . ಧರ್ಮ ಸಹಾಯ ಮಾಡುತ್ತಾರೆ. ಆ ರಾಜರಾಜೇಶ್ವರಿಯೇ ಅವರಿಗೆ ಸಹಾಯ ಮಾಡಬೇಕು. ಎಂದು ಯೋಚಿಸುವಳು. ಅದಕ್ಕೆ ತಕ್ಕಂತೆ ದೇವಿಯ ಎಲ್ಲಾ ಕೆಲಸಕ್ಕೂ ಮಮತಾಳ ಸಹಕಾರ ಇದ್ದೇ ಇರುತ್ತಿತ್ತು. ದೇವಿಯು ಕಾಳೀಪ್ರಸಾದನ ಮೇಲೆ ಮನಸ್ಸಿಟ್ಟಿರುವುದು ಅವಳಿಗೂ ಗೊತ್ತು, ಏಕೆ ? ನಿಮ್ಮ ಶ್ರೀಮಂತ ಯುವಕ ಬರಲೇ ಇಲ್ಲವಲ್ಲಾ ! ಎಂದು ತಮಾಷಿಯೂ ಮಾಡುತ್ತಿದ್ದಳು.

ಕಾಳೀಪ್ರಸಾದ ದೇವಿಯ ಜೊತೆಗೆ ಕಳೆದ ಆ ಅಮೃತ ಘಳಿಗೆಯನ್ನು ನೆನೆಸಿಕೊಂಡು ಪುಳಕಿತನಾಗುತ್ತಿದ್ದ ಅಬ್ಬ ! ಅವಳ ಸಹವಾಸದಲ್ಲಿ ನಾನು ಭೂಮಿಯ ಮೇಲೆ ಇದ್ದೇನೆಂದೇ ಅನಿಸಲಿಲ್ಲ, ಅವಳ ಮೃದು ಸ್ಪರ್ಶ ಎಷ್ಟು ಹಿತವಾಗಿತ್ತು ! ಅವಳ ಹೊಳಪಿನ ಕಣ್ಣುಗಳು ನನ್ನನ್ನು ಸೆರೆಹಿಡಿದು ಬಿಟ್ಟುವು, ಹೆಣ್ಣು ಎಷ್ಟು ಆಕರ್ಷಕ ವ್ಯಕ್ತಿ ! ಹೆಣ್ಣನ್ನೇ ಕಾಣದ ನಾನು ಪೂರಾ ಅವಳ ವಶನಾಗಿಬಿಟ್ಟೆ. ಅಯ್ಯೋ ! ನನ್ನ ಸಿರಿ ನಿನ್ನನ್ನು ಇನ್ನು ಒಂದು ಘಳಿಗೆಯೂ ಬಿಟ್ಟಿರಲಾರೆ ? ಯಾರಲ್ಲಿ ನನ್ನ ವಿರಹ ಹೇಳಿ-ಕೊಳ್ಳಲಿ ? ಅಜ್ಜಿಗಂತೂ ಇದೆಲ್ಲಾ ಏನೂ ಗೊತ್ತಾಗೋಲ್ಲ.

ದಣಿದು ಮನೆಗೆ ಬಂದಿದ್ದ ಕಾಳೀಪ್ರಸಾದನನ್ನು ನೋಡಿ ಅಜ್ಜಿ ಏನಪ್ಪಾ ! ರಾಜಾಧಿರಾಜ! ಈ ಮುದುಕಿಯನ್ನೇಕೆ ಹೀಗೆ ಗೋಳಾಡಿಸುತ್ತೀ?

ನಾನೇನು ತಪ್ಪು ಮಾಡಿದೆ ಅಜ್ಜೀ ! ತುಂಬಾ ಸುಸ್ತು ನೀರು ಕೊಡು ಅಂದ. ಅದಕ್ಕೇ ಹೇಳೋದು ಕಣೋ ಎಲ್ಲಿ ಅಲೆಯುತ್ತೀಯೋ? ಇಲ್ಲಿ ನಾನು ಅಡಿಗೆ ಮಾಡಿ ಕಾದು ನಾನೂ ಊಟ ಮಾಡದೇ ಕುಳಿತಿ-ದ್ದೇನೆ. ಏಳು ಊಟ ಮಾಡು.

ಅಜ್ಜೀ ನಿನ್ನ ಪ್ರೀತಿಗೆ ನಾನು ಸೋತಿದ್ದೇನೆ ಅಜ್ಜೀ. ಈವತ್ತು

ಪರಶುರಾಮ ಬೆಟ್ಟಕ್ಕೆ ಹೋಗಿದ್ದೆ, ಆ ದೇವಿ ಜೊತೆಯಲ್ಲಿ ಅವಳು ನನ್ನನ್ನು ಪ್ರೀತಿಸುತ್ತಾಳೆ, ಅಜ್ಜೀ.

ಅಜ್ಜಿ ತುಂಬಾ ಭಯ ಪಟ್ಟವಳಂತೆ, "ಹಣೆಯ ಮೇಲೆ ಕೈಯಿಟ್ಟು" ಅಯ್ಯೋ ಕುಮಾರಾ! ಯಾವ ಯಾವ ಗ್ರಹಚಾರ ಹೊತ್ತು ಬರುತ್ತೀಯೋ! ಮಹರಾಯಾ? ಆ ದೇವಿಯನ್ನು ಎಲ್ಲಾ ಪೂಜಿಸುತ್ತಾರೆ. ಅವಳೆಲ್ಲಿ? ಗೊತ್ತು ಗುರಿಯಿಲ್ಲದ ಪರದೇಶಿ ನೀನೆಲ್ಲಿ?

ಅನ್ನ ಕಲೆಸುತ್ತಾ ಇದ್ದವನು ಥೂ... ಏನಜ್ಜಿ ನೀನು? ನಾನ್ಯಾಕೆ ಪರದೇಸಿ? ನೀನಿಲ್ಲವೇ? ನಿಮ್ಮ ತಾಯಿ ಹೆಸರು, ಸಿರಿದೇವಿ—ಎಂದು ಹೇಳಿದ್ದೆಯಲ್ಲಾ! ಅದು ನನಗೆ ಇಷ್ಟವಾಯಿತು. ಅವಳನ್ನು ನಾನು ಸಿರೀ.. ಅಂದೇ ಕರೆದೆ. ಮುದ್ದು-ಮುದ್ದು ಅವಳು ನನ್ನ ಸಿರಿ.

ಇದೇನೋ ಏನೇನೋ ಹೇಳ್ತೀ? ಈ ಮನೆಗೆ ಅವಳು ಯಾರೋ?

ಅದೃಷ್ಟ ಇದ್ದರೆ ಅವಳು ಈ ಮನೆಗೇ ಬರುತ್ತಾಳೆ ನೋಡ್ತಿರು ಅಜ್ಜೀ!

ಬೇಗ ಬೇಗ ಊಟ ಮಾಡಿ ಹೊರಟು ಬಿಟ್ಟ.

ಅಜ್ಜಿಗೆ ಇವನ ಮಾತು ಒಂದೂ ಅರ್ಥವಾಗದೆ ತಲೆ ಕೆಟ್ಟು ಹೋಯಿತು.

ದೇವಿ ಎರಡು ದಿನ ಹೊರಕ್ಕೇ ಬರಲಿಲ್ಲ ಧರ್ಮದರ್ಶಿಗಳ ಕೋಪಕ್ಕೆ ಭಯ ಪಟ್ಟಳು ನನ್ನ ರಾಜಾನ ಹೇಗೆ ನೋಡುವುದು? ಅವಳ ಮನಸ್ಸು ತಲ್ಲಣಿಸಿತು. ಸ್ಥಿಮಿತ ತಪ್ಪಿ ಹಾಸಿಗೆಯಲ್ಲಿ ಮಲಗಿ ಒದ್ದಾಡಿದಳು. ಒಂದು ಕ್ಷಣವೂ ಅವನ ನೆನಪಿಲ್ಲದೆ ಇರಲಾರಳು. ಮಮತಾ ಏನು ಮಾಡಲಿ? ಆ ಯುವಕ ಎಲ್ಲಿರಬಹುದು ನಿನಗೆ ಗೊತ್ತೇ? ಎಂದು ಮಮತಾ ಕೈಲಿ ತನ್ನ ಹಂಬಲವನ್ನು ತೋಡಿಕೊಂಡಳು.

ದೇವಿ ಈಗ ನಾವು ಎಲ್ಲೂ ಹೋಗುವುದಕ್ಕಾಗುವುದಿಲ್ಲ. ನಮ್ಮ ಸೇವಕರಿಗೆ ಅಪ್ಪಣೆ ಮಾಡಿದ್ದಾರೆ ಯಾರನ್ನೂ ಒಳಕ್ಕೆ ಬಿಡಬೇಡಿ ಎಂದು ಧರ್ಮದರ್ಶಿಗಳು ನಾವೂ ಹೋಗುವಹಾಗಿಲ್ಲ.

ದೇವಿಗೆ ನಿಜವಾಗಿಯೂ ಧರ್ಮದರ್ಶಿಗಳ ಮೇಲೆ ತುಂಬಾ ಸಿಟ್ಟು ಬಂದಿತು. ಅವರು ಬರಲಿ ನಾನೇ ಮಾತಾಡುತ್ತೇನೆ.

ಅಷ್ಟರಲ್ಲಿ ಕಾಳೀಪ್ರಸಾದ ನಿಧಿಯನ್ನಿಟ್ಟು ಕಡೆಗ ಹೋಗಿ ಸ್ವಲ್ಪ ಹಣ ಒಡವೆ ಎಲ್ಲಾ ತರಲು ಹೋಗಿದ್ದ ಮರುದಿನವೇ ಶುಕ್ರವಾರ, ದೇವಿಯು ಪೀಠಕ್ಕೆ ಕುಳಿತುಕೊಳ್ಳುವ ದಿನ.

ದೇವಿ ರಾಜರಾಜೇಶ್ವರಿ ಪೂಜೆ ಮಾಡಿ ದೇವಿ ನನ್ನ ರಾಜ ಈ ದಿನವಾದರೂ ಬರುವಂತೆ ಮಾಡು ಎಂದು ಪ್ರಾರ್ಥಿಸಿದಳು. ಧರ್ಮದರ್ಶಿಗಳು ಎಲ್ಲಾ ಸಿದ್ಧತೆ ಮಾಡಿದರು ಆದರೆ ದೇವಿ ಮಾತ್ರ ಮನಸೋತು ಸುಮ್ಮನೆ ಕುಳಿತಿದ್ದಳು. ಧರ್ಮದರ್ಶಿಗಳು ಬಂದು, ಯಾಕೆ ದೇವಿ ಜನ ಕಾಯುತ್ತಿದ್ದಾರೆ, 'ಬೇಗ ಸಿದ್ಧವಾಗಿ,

ಅವಳು ಕುಳಿತಲ್ಲಿಂದ ಏಳದೆ ಧರ್ಮದರ್ಶಿಗಳೇ, ನೋಡಿ ಇದುವರೆಗೆ ನಾನು ನಿಮ್ಮ ಒಂದು ಮಾತನ್ನೂ ಮೀರಿ ನಡೆದಿಲ್ಲ. ಆದರೆ ಈಗ ನನ್ನ ಇದೊಂದು ಇಷ್ಟಕ್ಕೆ ವಿರೋಧ ಮಾಡಬೇಡಿ. ನಾನು ಆ ಕಾಳೀಪ್ರಸಾಧ ಯುವಕನನ್ನು ಮದುವೆಯಾಗುತ್ತೇನೆ. ಇದಕ್ಕೆ ಅಡ್ಡಿ ಮಾಡಬೇಡಿ. ಅವನನ್ನು ಮರ್ಯಾದೆಯಿಂದ ಕಾಣಬೇಕು. ಇಲ್ಲದಿದ್ದರೆ ನಾನು ಇನ್ನೆಂದೂ ಸಭೆಯ ಪೀಠಕ್ಕೆ ಬರುವುದಿಲ್ಲ. ಎಂದು ಹಠವಾಗಿ ಹೇಳಿದಳು.

ಏಕೋ ದೇವಿಯ ಈ ರೀತಿಯ ವರ್ತನೆ ಧರ್ಮಧರ್ಶಿಗಳಿಗೆ ಹೊಸದು ತಾನೂ ಹಠಮಾಡಬಾರದೆಂದು ಅಲ್ಲಾಮ್ಮ ದೇವಿ-ಎಲ್ಲಾ ನಿಮ್ಮ ಒಳ್ಳೆಯದಕ್ಕೇ ನಾನು ಮಾಡುತ್ತಿರುವುದು ಆ ಅಲಮಾರಿಯನ್ನು ಮೆಚ್ಚಿದ್ದೀರಾ ?

ಪರವಾಗಿಲ್ಲ ಅವರಲ್ಲಿ ನನಗೆ ನಂಬಿಕೆಯಿದೆ.

ಕ್ಷಣಕ್ಕೆ ದೇವಿಯ ಹಠವನ್ನು ಬಗ್ಗಿಸುವುದಕ್ಕಾಗುವುದಿಲ್ಲವೆಂದು ತಿಳಿದು ಧರ್ಮದರ್ಶಿಗಳು ಅಲ್ಲಾ ! ಇದುವರೆಗೂ ಎಷ್ಟೋ ಧರ್ಮಕಾರ್ಯಗಳನ್ನು ಮಾಡಿ ಈಗ ನಿಲ್ಲಿಸಿ ಬಿಟ್ಟರೆ ಜನ ಏನೆಂದುಕೊಳ್ಳುತ್ತಾರೆ ?

ಇಲ್ಲ ಧರ್ಮದರ್ಶಿಗಳೇ ! ಮದುವೆಯಾದ ಮೇಲೆ ಇನ್ನೂ ಅನೇಕ ಒಳ್ಳೆ ಕಾರ್ಯಗಳು ನಡೆಯುತ್ತೆ, ಅವರೂ ಜೊತೆ ಜೊತೆಗೆ ಸಹಕರಿಸುತ್ತಾರೆ.

ಸರಿ ನಿಮ್ಮ ಇಷ್ಟಕ್ಕೆ ಅಡ್ಡಿ ಬರುವುದಿಲ್ಲ, ಆದರಿಂದ ನಿಮಗೆ ಒಳ್ಳೆಯದಾದರೆ ಸರಿ. ಬನ್ನಿ ಪೀಠಕ್ಕೆ ಎಂದು ಹೊರಕ್ಕೆ ಹೊರಟು ಹೋದರು ಧರ್ಮದರ್ಶಿಗಳು,

ಕಾಳೀಪ್ರಸಾದ ಬಂದಾಗ ದೇವಿ ಪೀಠದಲ್ಲಿ ಕುಳಿತಿದ್ದಳು. ಜನರ ಗುಂಪು ಹೋಗುವವರೆಗೂ ಕಾಳೀಪ್ರಸಾದ ಕಾದಿದ್ದ ನಂತರ ಹಣದ ಗಂಟನ್ನು ದೇವಿಯ ಕೈಗೆ ಕೊಡುತ್ತಾ ಸಿರಿ....ಇದು ನಿನ್ನ ಧರ್ಮಕಾರ್ಯ ಗಳಿಗೆ ಉಪಯೋಗಿಸಿಕೋ ಎಂದು ಕೈಮುಟ್ಟಿ ಕೊಟ್ಟ. ಇದು ಧರ್ಮದರ್ಶಿ ಗಳ ಕೈಗೇ ಕೊಡಿ ಅವರೇ ಎಲ್ಲಾ ನೋಡಿಕೊಳ್ಳುತ್ತಿರುವವರು. ಇಷ್ಟ-ವಿಲ್ಲದಿದ್ದರೂ ಅವರ ಕೈಗೆ ಹಣದ ಚೀಲ ಕೊಟ್ಟ. ಆಗ ಧರ್ಮದರ್ಶಿ-ಗಳಿಗೆ ಆಶ್ಚರ್ಯವಾಯಿತು ಇವನು ಬಹಳ ದೊಡ್ಡ ಶ್ರೀಮಂತನೇ ಇರ ಬಹುದು, ಎಂದುಕೊಂಡರು.

ಈಗ ಕಾಳೀಪ್ರಸಾದನೊಡನೆ ದೇವಿ ಧಾರಾಳವಾಗಿ ಮಾತಾಡಿದಳು· ರಾಜಾ ! ಸಧ್ಯ ಬಂದೆಯಲ್ಲ ! ನಾಳೆಯೇ ನಾವು ಕಾವೇರಿ ದರ್ಶನಕ್ಕೆ ಹೊರಡೋಣ ರಡಿಯಾಗಿ ಬಂದುಬಿಡು.

ನಿನ್ನ ಧರ್ಮದರ್ಶಿಗಳು ಬರುತ್ತಾರೋ ? ಅಸಮಾಧಾನದಿಂದ ಕೇಳಿದ ಯಾರಾದರೂ ಬರಲಿ. ನಿಂಗ್ಯಾಕೆ ? ನನ್ನ ಜೊತೆ ಬಾ, ಅಷ್ಟೇ ಎಂದು ದೇವಿ ಒಳಕ್ಕೆ ಹೋದಳು,

ಧರ್ಮದರ್ಶಿಗಳು ಅಲ್ಲೇ ಇದ್ದುದರಿಂದ ಕಾಳೀಪ್ರಸಾದ ಒಳಕ್ಕೆ ಹೋಗಲಿಲ್ಲ, ನಾಳೆ ಹೊರಡುವುದೇ ? ಆ ಕಾವೇರಿ ಎಲ್ಲಿದೆಯೋ ಎಂದು ಕೊಂಡೇ ನಡೆದ.

ದೇವಿಯ ಹಿಂದೆಯೇ ಧರ್ಮದರ್ಶಿಗಳೂ ಒಳಕ್ಕೆ ಹೋದರು. ದೇವಿ ! ಎಲ್ಲಿಗೆ ಹೊರಡಲು ಸಿದ್ಧತೆ ?

ಧರ್ಮದರ್ಶಿಗಳೇ ದಯವಿಟ್ಟು ನನ್ನನ್ನು ಕ್ಷಮಿಸಿ, ನೀವು ದಕ್ಷಿಣ ದಿಕ್ಕಿನಕಡೆ ತಲೆಯಿಟ್ಟು ಮಲಗಲೂ ಇಷ್ಟಪಡದೆ ದ್ವೇಷಿಸುತ್ತಿರುವಿರೋ-ಆ ಕಡೆ. ಶ್ರೀರಂಗ ಪಟ್ಟಣ ಮೈಸೂರು ಕಡೆ ಹೋಗಿ ಕಾವೇರಿಯಲ್ಲಿ

ಯಿಂದು ಮನದಣಿಯ ಸಂತೋಷ ಪಡಬೇಕೆಂದಿದ್ದೇನೆ, ಕಾಲಾಯ ತಸ್ಮೈ ನಮಃ, ಕಾಲವು ಬಹಳ ಬದಲಾಗಿದೆ ಹೋಗೋಣ ನೀವೂ ಬರುತ್ತೀರಾ?

ಧರ್ಮದರ್ಶಿಗಳು ದೇವಿಯನ್ನು ತದೇಕವಾಗಿ ಅಡಿಯಿಂದ ಮುಡಿಯ ವರೆಗೆ ನೋಡಿ ಅವಳ ತಲೆಯಮೇಲೆ ಕೈ ಇಟ್ಟು ನೇವರಿಸುತ್ತಾ- ಮೌನ ವಾಗಿ ಶೂನ್ಯದತ್ತ ನೆಟ್ಟ ನೋಟದಿಂದ ನಿಂತರು. ಅವರ ಕಣ್ಣಲ್ಲಿ ಪಟ-ಪಟನೆ ನೀರು ಉದುರಿತು ದೇವಿಗೂ ಕಣ್ಣಲ್ಲಿ ನೀರು ಬಂತು. ಅವರ ಕೈ ತೆಗೆದು ಕಣ್ಣಿಗೊತ್ತಿಕೊಂಡಳು. ಅವರ ಕಣ್ಣೀರನ್ನು ಒರೆಸಿದಳು. ಗತಕಾಲ ವನ್ನು ಮರೆತುಬಿಡಿ, ನೀವೇ ನನ್ನ ತಂದೆ-ತಾಯಿ-ಬಂಧು ಬಳಗ ದೈವ. ಎಲ್ಲಾ ಇನ್ನು ನೀವು ನೊಂದುಕೊಂಡರೆ ನನಗೂ ದುಃಖವಾಗುತ್ತೆ, ಏನೋ ಬಾಲ್ಯದ ನೆನಪು, ಒಂದು ಸಲ ಹೋಗಿ ಬರೋಣವೆಂದು ಕುತೂಹಲ.

ದೇವಿ ! ನಾನಂತೂ ಖಂಡಿತ ಆ ಕಡೆ ಬರುವುದಿಲ್ಲ. ನೀನು ಬೇಕಾದರೆ ಹೋಗಿ ಬಾ. ಕಾಳೀಪ್ರಸಾದನಲ್ಲಿ ನಿನಗೆ ನಂಬಿಕೆ ಇದ್ದರೆ ಜೊತೆಯಲ್ಲಿ ಕರೆದುಕೊಂಡು ಹೋಗು. ಕಾರಿನಲ್ಲಿ ಹೋಗಿ ಬಾ.. ಮಹಂತಾಳನ್ನು ಜೊತೆಗೆ ಕರೆದುಕೋ.

ತಾವು ಎತ್ತಿ ಆಡಿಸಿದ ಬಾಲೆ ಇಂದು ನವ ಯೌವ್ವನವತಿಯಾಗಿ ಪ್ರತ್ಯಕ್ಷ ಲಕ್ಷ್ಮಿಯಂತೆ ಶೋಭಿಸುವ ದೇವಿಯನ್ನು ನೋಡಿ ದೀನದಯಾಳರು ಹೃದಯ ತುಂಬಿ ಮನಸ್ಸಿನಲ್ಲಿಯೇ ಶುಭಾಶೀರ್ವಾದ ಮಾಡಿದರು.

❋ ❋ ❋ ❋ ❋ ❋

ಕಾಳೀಪ್ರಸಾದ ದೇವಿಯ ಪಕ್ಕದಲ್ಲಿ ಕುಳಿತು ಕಾರಿನಲ್ಲಿ ಹೋಗುತ್ತಿದ್ದರೆ ಅವನಿಗೆ ಪ್ರಪಂಚವೇ ಸುಂದರ ವೆನಿಸುತ್ತಿತ್ತು. ಸಿರೀ....ನನ್ನ ಮುದ್ದು ಸಿರಿ ಯಾವಾಗಲೂ ನಾವು ಹೀಗೇ ಒಟ್ಟಿಗೆ ಇರಬೇಕು. ಎಂದು ಅವಳನ್ನು ಎಡೆ ಬಿಡದೆ ಮುದ್ದಿಸುತ್ತಿದ್ದ. ದೇವಿ ಮಾತ್ರ ಪ್ರತಿಕ್ರಿಯೆ ಯಿಲ್ಲದೆ, ಹೊರಗಿನ ಪ್ರದೇಶವನ್ನು ಕಾರಿನ ಕಿಟಕಿಯ ಮೂಲಕ ನೋಡುತ್ತಾ ಕುಳಿತಿದ್ದಳು.

ಕಾಳೀಪ್ರಸಾದನಿಗೆ ಕೋಪ ಬರಲು ಶುರುವಾಯಿತು, ಅವಳ ಮುಖ ವನ್ನು ತನ್ನ ಕಡೆಗೆ ತಿರುಗಿಸುತ್ತಾ !. ಏನು ಹುಡುಗೀ ! ನಾನು ಮುದ್ದು

ಮಾಡಿದಷ್ಟೂ ನಿನಗೆ ಜಂಭ ಜಾಸ್ತಿಯಾಯಿತು. ನನ್ನ ಕೈಲಿ ಮಾತಾಡಲು ಇಷ್ಟವಿಲ್ಲದಿದ್ದರೆ ಹೇಳಿ ಬಿಡು. ನಾನು ಇಳ್ಳೆ ಇಳಿದು ಯಾವುದಾದರೂ ಕಾಡಿಗೆ ಹೋಗಿ ಸೇರಿಕೊಳ್ಳುತ್ತೇನೆ.

ಇಷ್ಟು ಹೇಳುತ್ತಿದ್ದಂತೆಯೇ ದೇವಿ ಬಳ–ಬಳನೆ ಅಳುತ್ತಾ ಅವನ ಎದೆಯಲ್ಲಿ ಮುಖ ಹುದುಗಿಸಿ-ರಾಜಾ ! ನನ್ನ ರಾಜಾ ! ಸ್ವಲ್ಪ ಶಾಂತ-ವಾಗಿರು. ಈ ಶ್ರೀರಂಗಪಟ್ಟಣ ಹತ್ತಿರವಾಗುತ್ತಿದ್ದಂತೆ ನಾನು ನನ್ನ ಬೇರೆಯೇ ಜನ್ಮವನ್ನು ನೆನೆಸಿಕೊಳ್ಳುತ್ತೇನೆ. ಆ ನೆನಪು ನನ್ನನ್ನು ಬಾಲ್ಯದ ಕಡೆಗೆ ಎಳೆಯುತ್ತಿದೆ ಆಗ ನಾನು ಶಿಲೆಯಾಗಿಬಿಡುತ್ತೇನೆ.

ಅಯ್ಯೋ ! ಸಿರಿ . ನಿನ್ನ ಬಾಲ್ಯದ ಕಷ್ಟ ಏನೆಂದು ನನಗೆ ಗೊತ್ತಿಲ್ಲ, ನಿನ್ನ ಮೇಲೆ ಕೋಪಿಸಿದುದು ತಪ್ಪಾಯಿತು, ಏನು ಹೇಳು ಎಂದು ಅವಳನ್ನು ಅಪ್ಪಿ ಕುಳಿತ.

ಹೇಳುತ್ತೇನೆ ನಿನಗೆ ಎಲ್ಲಾ ಹೇಳುತ್ತೇನೆ ರಾಜಾ !

ಶ್ರೀರಂಗ ಪಟ್ಟಣದ ಕೋಟೆಯ ಬಳಿ ಡ್ರೈವರ್ ಕಾರನ್ನು ನಿಲ್ಲಿಸಿದ. ದೇವಿ ಜಗ್ಗನೆ ಇಳಿದು ಸೊಂಟದ ಮೇಲೆ ಕೈಯಿಟ್ಟು ಆ ಪ್ರದೇಶವನೆಲ್ಲಾ ನಿಂತಲ್ಲಿಂದಲೇ ನೋಡಿದಳು ಒಂದು ವಿಧ ಆತ್ಮೀಯತೆಯು ಆನಂದ-ವಾಯಿತು.

ದೇವಿ ಅಲ್ಲಿಂದ ಹೊರಡುವಾಗ ಬೇಕೆಂದೇ ಸಕಲಾಭರಣಗಳನ್ನೂ ಹಾಕಿಕೊಂಡೇ ಬಂದಿದ್ದಳು. ನಕ್ಷತ್ರ ಸರಿಗೆ ತುಂಬಿದ ಜರಿ ಸೀರೆಯುಟ್ಟು ಕೆತ್ತನೆ ಕೆಂಪಿನ ನಡುಪಟ್ಟಿಯನ್ನು ಕಟ್ಟಿದ್ದಳು. ಅವಳ ರೂಪಕ್ಕೆ ತಕ್ಕ ಅಲಂಕಾರ ಮನಮೋಹಕವಾಗಿತ್ತು. "ಬಾ ರಾಜಾ : ನನ್ನ ಜೊತೆಯಲ್ಲಿಯೇ ಇರು ಒಂದು ಸಲ ಇಲ್ಲೆಲ್ಲಾ ಸುತ್ತಾಡಿ ಬರೋಣ " ಡ್ರೈವರ್, ನೀವು ಹೋಗಿ ತಿಂಡಿ ತಿಂದು ಬನ್ನಿ, ಮುಮ್ತಾ ನೀನು ಕಾರಿನ ಒಳಗಡೆಯೇ ಕುಳಿತಿರು, ಎಂದು ಹೇಳಿ ಹೊರಟಳು ಕಾಳೀಪ್ರಸಾದನೂ ಸಹ ಬೆಲೆ ಬಾಳುವ ಉಡುಪನ್ನು ಧರಿಸಿದ್ದ. ಇವರ ಸುಂದರ ಜೋಡಿಯನ್ನು ನೋಡಿ ಯಾರೋ ರಾಜಮನೆತನದವರಿರಬೇಕೆಂದು ಜನ ನಿಂತು ನೋಡು ತ್ತಿದ್ದರು.

ದೇವಿ ಕಾವೇರಿಯ ತೀರಕ್ಕೆ ತನ್ನ ರಾಜನನ್ನೂ ಕರೆದುಕೊಂಡು ಬಂದಳು. ಎಂತಹ ಸುಂದರ ದೃಶ್ಯ ? ಕಾವೇರಿಯು ಝುಳ_ಝುಳನೆ ಮಂಜುಳ ನಾದದಿಂದ ಹರಿಯುತ್ತಿದ್ದಳು ಧಬ-ಧಬನೆ ಧುಮುಕುವ ಆಡಂಬರವಿಲ್ಲ ತಿಳಿಯಾಗಿ ಮೆಲ್ಲನೆ ಬಳುಕುತ್ತಾ ಬಂಡೆಗಳನ್ನು ಬಳಸಿ ತೇಲುತ್ತಾ ಹರಿಯುವ ಕಾವೇರಿ ಮೃದು ಹಾಸಿನಿಯೋ ಎಂಬಂತಿದ್ದಳು. ಶ್ರೀರಂಗನಾಥನನ್ನು ಸುತ್ತಿ ಬಳಸಿ ಹರಿಯುವ ಕಾವೇರಿ ತಾಯಿ ರಂಗನಾಥನ ಸೇವೆ ಸತತವಾಗಿ ಮಾಡುತ್ತಿರುವಳೋ ! ಎಂಬಂತಿತ್ತು. ದೇವಿ ನೀರಿನ ಬಳಿ ಹೋಗಿ ಕಾವೇರಿಯ ನೀರನ್ನು ಬೊಗಸೆಯಲ್ಲಿ ತುಂಬಿ ಚೆಲ್ಲಾಡಿದಳು. ಆಗ ಅವಳ ಆನಂದ ಅಷ್ಟಿಷ್ಟಲ್ಲ, ಮುಖ ತೊಳೆದು ಬೊಗಸೆಯಲ್ಲಿ ತುಂಬಿ ನೀರು ಕುಡಿದಳು.

ಬಾ ರಾಜಾ ನಮ್ಮ ಕಾವೇರಿ ನೀರು, ಅಮೃತ, ಕುಡಿ. ನಿಮ್ಮ ಉತ್ತರ ದೇಶದಲ್ಲಿ ಇಂತಹ ಸಿಹಿನೀರು ಎಲ್ಲಿ ಸಿಗಬೇಕು ? ಅವನ ಕೈ ಹಿಡಿದು ತನ್ನ ಕೈಯಾರೆ ಅವನಿಗೆ ನೀರು ಕುಡಿಸಿದಳು.

ದೇವಿಯ ವಿಚಿತ್ರ ವರ್ತನೆಯನ್ನು ನೋಡಿ ಕಾಳೀಪ್ರಸಾದ ಮೂಕ-ನಂತಾಗಿದ್ದ ಏನು ಕೇಳಲೂ ಅವನಿಂದಾಗಲಿಲ್ಲ.

ರಾಜಾ ! ಈ ಕಾವೇರಿಯನ್ನೂ ರಂಗನಾಥಸ್ವಾಮಿಯನ್ನೂ ನಾನು ಎಂದೂ ಮರೆಯಲಾರೆ, ಬಾ. ಮಿಂದು ಮಡಿಯುಟ್ಟು ದೇವಸ್ಥಾನಕ್ಕೆ ಹೋಗೋಣ.

ಸಿರಿ ನೀನು ನನ್ನನ್ನು ಮಂತ್ರ ಮುಗ್ಧನನ್ನಾಗಿ ಮಾಡುತ್ತಿದ್ದೀಯೇ! ನನಗೆ ಯಾವ ದೇವಸ್ಥಾನಕ್ಕೆ ಹೋಗಿಯೂ ಅಭ್ಯಾಸವಿಲ್ಲ,

ರಾಜಾ : ನನ್ನ ಜೀವವೇ ನೀನು ಇನ್ನು ಮೇಲೆ ನಾನಿದ್ದ ಕಡೆ ನೀನು ಅಗಲಿರುವುದು ಸಾಧ್ಯವಿಲ್ಲ, ಬಾ, ಬಾ. ನನ್ನ ಜೊತೆ.

"ಆಭರಣಗಳನ್ನೆಲ್ಲಾ ತೆಗೆದು ಡ್ರೈವರ್ ಹತ್ರ ಕೊಟ್ಟು ಬಾ ಮಮತಾ ಕಾವೇರಿಯಲ್ಲಿ ಸ್ನಾನಮಾಡೋಣ ' ಎಂದು ದೇವಿ ಖುಷಿಯಿಂದ ಕುಣ-ಯುತ್ತಾ ಹೊರಟಳು. ಮಮತಾಗೂ ಅದೇ ಬೇಕಾಗಿತ್ತು. ಮಂಜುಳ ನಿನಾದದಿಂದ ಹರಿಯುವ ಕಾವೇರಿ ತಿಳಿನೀರಿನಲ್ಲಿ ಮಮತಾ ಜೊತೆ ಮಿಂದು

ಮುಳುಗಿ ಎದ್ದು ಮನದಣಿಯ ಈಜಾಡಿ ಇಬ್ಬರೂ ಖುಷಿಪಟ್ಟರು.

ಇವರ ಜಲಕ್ರೀಡೆಯನ್ನು ನೋಡುತ್ತಾ ಕಾಳೀಪ್ರಸಾದ ಮೆಟ್ಟಿಲ ಮೇಲೆಯೇ ಕುಳಿತಿದ್ದ. ದೇವಿಗೆ ಅವನ ಮೇಲೆ ಸಿಟ್ಟು ಬಂದಿತು ರಾಜಾ! ನೀನೆಂಥ ಗಂಡಸು ? ನೀರಿಗೆ ಇಳಿಯುವುದಕ್ಕೆ ಹೆದರುತ್ತೀಯಾ ? ಬಾ, ಸ್ನಾನಮಾಡು. "

ಹೆಣ್ಣು ತನ್ನನ್ನು ಜರಿದದ್ದು ಕಾಳೀಪ್ರಸಾದ ಸಹಿಸುವನೇ ? ಇದೋ ಬಂದೆ ತಾಳು, ಎಂದಿದ್ದೇ ಮೇಲುಡಿಗೆ ಬಿಚ್ಚಿ ನೀರಿಗೆ ಧುಮುಕಿದ. ಅವನು ಯಾರ ಮುಂದೆಯೂ ಮೇಲಿನ ಅಂಗಿಯನ್ನು ಮಾತ್ರ ತೆಗೆಯುತ್ತಿರಲಿಲ್ಲ. ನೀರಿನಲ್ಲಿ ಮುಳುಗಿ ಈಜಾಡಿದ ದೇವಿಯನ್ನು ಅಪ್ಪಿ ನೀರಿನಲ್ಲಿ ತೇಲಾಡಿದ ಅವಳನ್ನು ಬೆನ್ನಿನಲ್ಲಿ ಎತ್ತಿಕೊಂಡೇ ನಡು ನೀರಿನವರೆಗೆ ಈಜಾಡಿದ ದೇವಿಗೆ ಭಯವಾಯಿತು ಅಬ್ಬ ! ಇವನ ಶಕ್ತಿ ಅಸಾಧ್ಯ " ರಾಜಾ ! ಸಾಕು ನೀನೂ ನೀರಿಗೆ ಬಂದು ನನ್ನ ಜೊತೆ ಆಡಲಿ ಎಂದೆ, ನಿನ್ನಂಥಾ ಸಾಹಸಿ ಇನ್ನಿಲ್ಲ. ಬಾ, ನಿನ್ನೊಡನೆ ಸ್ನಾನ ಸಾಕಪ್ಪಾ " ಅಂದಳು ಅವಳನ್ನು ಎತ್ತಿಕೊಂಡೇ ದಡಕ್ಕೆ ಬಂದ, ಮಮತಾ ನೋಡಿ ನೋಡಿ ಆನಂದ ಪಟ್ಟಳು. ಅವಳಿಗೂ ಬಾಲ್ಯದ ನೆನಪು ಸವಿಯಾಗಿತ್ತು.

ಶ್ರೀರಂಗನಾಥ ದೇವಸ್ಥಾನಕ್ಕೆ ಮೂವರೂ ಬಂದರು.

ಶ್ರೀರಂಗ ಪಟ್ಟಣದ ದೇವಸ್ಥಾನ ಬಹಳ ದೊಡ್ಡದು, ಬೃಹದಾಕಾರದ ಕಂಬಗಳಿಂದ ಕೂಡಿದ ಎತ್ತರವಾದ ಪ್ರಾಂಗಣ. ಪ್ರಸಿದ್ಧ ಯಾತ್ರಾಸ್ಥಳ. ಕಾವೇರಿಯಲ್ಲಿ ಮಿಂದು ರಂಗನಾಥನ ದರ್ಶನಕ್ಕೆ ಯಾತ್ರಾರ್ಥಿಗಳು ಸದಾ ಕಾಲವೂ ಬರುತ್ತಿರುತ್ತಾರೆ. ಶ್ರೀರಂಗಪಟ್ಟಣ ಐತಿಹಾಸಿಕವಾಗಿಯೂ ಪ್ರಸಿದ್ಧವಾದ ಊರು ಟಿಪ್ಪೂಸುಲ್ತಾನನು ತನ್ನ ರಾಜಧಾನಿಯನ್ನಾಗಿ ಮಾಡಿ–ಕೊಂಡು ಮೈಸೂರನ್ನು ಆಳಿದ ಗಂಡುಗಲಿ. ಶ್ರೀರಂಗಪಟ್ಟಣದಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಿಸಿ ಶತ್ರುಗಳನ್ನು ತಡೆಗಟ್ಟಿದ ಧೀರ ಮೈಸೂರು ಹುಲಿ, ಎಂದೇ ಬಿರುದು ಪಡೆದನು. ಇಂಗ್ಲೀಷರ ಅಪಾರ ಸೈನ್ಯವನ್ನು ಎರಡು ಬಾರಿ ಸೋಲಿಸಿ ಹಿಮ್ಮೆಟ್ಟಿಸಿದ ಪ್ರತಾಪಿ, ಇಂದು ನಾವು ಅಂತಹ ದೇಶ ಭಕ್ತನನ್ನು ನೆನೆಸಿಕೊಳ್ಳಬೇಕು. ಇಲ್ಲಿ ಟಿಪ್ಪುವಿನ ಅರಮನೆ ಸಹ ಇದೆ

ರಾಜಾ, ಇದೆಲ್ಲಾ ತಿಳಿದುಕೋ ! ಈ ಶ್ರೀರಂಗ ಪಟ್ಟಣ ನನ್ನ ಆತ್ಮೀಯ ಸ್ಥಳ.

ಶ್ರೀರಂಗನಾಥ ದೇವಸ್ಥಾನ ಪುರಾತನವಾದದ್ದು, ಶ್ರೀರಂಗನಾಥ ಬೃಹದಾಕಾರನಾಗಿ ಮಲಗಿರುವ ನೋಟ ನಯನ ಮನೋಹರ. ತನ್ನ ತೋಳನ್ನು ತಲೆ ದಿಂಬಿಗೆ ಆನಿಸಿ ಅದರ ಮೇಲೆ ತಲೆಯಿಟ್ಟು ಒಂದು ಮಗ್ಗುಲಾಗಿ ಮಲಗಿರುವ ರಂಗನಾಥ ಯೋಗ ನಿದ್ರೆಯುಲ್ಲಿರುವನೋ ಎಂಬಂತಿದೆ. ದೇವಿ ರಂಗನಾಥ ಸ್ವಾಮಿಯನ್ನು ಹತ್ತಿರದಿಂದ ದರ್ಶನ ಮಾಡಿ ಕೈಮುಗಿದು ಬೇಡಿದಳು. ಸ್ವಾಮಿ....ನಿನ್ನ ಮಾಯೆ ! ಅಮೃತ, ಯಾವುದೂ ಶಾಶ್ವತವಲ್ಲ. ನಿನ್ನ ದಯೆ ಬಂದರೆ ಬಡವ ಬಲ್ಲಿದನಾಗಬಲ್ಲ, ಎಂದು ಭಕ್ತಿ ಪರವಶಳಾಗಿ ಹಾಡಿದಳು.

ಕಣ್ಣಾಳಿದ್ಯಾತಕೋ ಕಾವೇರಿ ರಂಗನ ನೋಡದ
ಕಣ್ಣಾಳಿದ್ಯಾತಕೋ ॥
ಜಗತಿ ನೊಳಗೆ ಮಂಗಳಮೂರುತಿ
ರಂಗ ಶ್ರೀ ಪಾದಂಗಳ ನೋಡದ
ಕಣ್ಣಾಳಿದ್ಯಾತಕೋ ಕಸ್ತೂರಿ ರಂಗನ ನೋಡದ

ಕಣ್ಮುಚ್ಚಿ ಭಕ್ತಿಪರವಶಳಾಗಿ ಹಾಡಿದಳು. ಸುಶ್ರಾವ್ಯ-ಸುಮಧುರ ಕಂಠ. ಅಲ್ಲಿ ನೆರೆದಿದ್ದ ಭಕ್ತಾದಿಗಳು ಆನಂದ ಪರವಶರಾದರು. ಕಾಳೀ-ಪ್ರಸಾದ ಅಲ್ಲಿಯೇ ಇದ್ದು ದೇವಿಯ ವಿವಿಧ ಅದ್ಭುತ ಶಕ್ತಿಗೆ ಡಂಗಾದ. ಮಮತಾ ಕೂಡ ದೇವರಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದಳು ನನ್ನ ದೇವಿಯನ್ನು ಬಾಳಿನಲ್ಲಿ ಸದಾ ಸಂತೋಷವಾಗಿಟ್ಟಿರು ಸ್ವಾಮಿ ಎಂದು. ಅರ್ಚಕರು ಕುಂಕುಮಾರ್ಚನೆ ಮಾಡಿ ಪ್ರಸಾದ ಕೊಟ್ಟು ನೀವು ದಂಪತಿಗಳು ಸುಖವಾಗಿರಿ ಎಂದು ಹರಿಸಿದರು.

ದೇವಿ-ಅರ್ಚಕರಿಗೆ ನೂರು ರೂಪಾಯಿ ಕಾಣಿಕೆ ಕೊಟ್ಟು ಸ್ವಾಮಿ ! ಅನೇಕ ವರ್ಷಗಳ ನಂತರ ನನಗೆ ರಂಗನಾಥನ ಪ್ರಸಾದ ದೊರಕುತ್ತಿದೆ. ನಮಗೆ ಮೂರು ಜನಕ್ಕೆ ಆಗುವಷ್ಟು ಏನಾದರೂ ಪ್ರಸಾದ ಕೊಟ್ಟುಬಿಡಿ ಇಂದು ಬೇರೆ ಏನೂ ತಿನ್ನುವುದಿಲ್ಲ ಎಂದಳು.

ಅರ್ಚಕರು ಪೊಂಗಲು–ದಧಿಯೋದನ–ಪುಳಿಯೋಗರೆ ಪ್ರಸಾದಗಳನ್ನು ಮೂರು ಹಚ್ಚಿದ ಎಲೆಯಲ್ಲಿ ತುಂಬಿ ಕೊಟ್ಟರು.

ನೀವು ಯಾವ ಕಡೆಯವರಮ್ಮಾ ?

ಸ್ವಾಮಿ ! ನಾವು ಈ ಕಡೆಯವರೇ–ಆದರೆ ಉತ್ತರ ಪ್ರದೇಶದಲ್ಲಿ ಈಗ ವಾಸ ಮಾಡುತ್ತಿದ್ದೇವೆ

ಸ್ವಾಮಿ ! ಈ ಊರಲ್ಲಿ ಕೇಶವಮೂರ್ತಿ ...ರಾಮಮೂರ್ತಿ ಎಂದು ಇದ್ದರಲ್ಲಾ ! ನಿಮಗೆ ಗೊತ್ತೇ ?

ಏಕೆ ಗೊತ್ತಿಲ್ಲ ? ನಾನು 40 ವರ್ಷದಿಂದ ವಾಸಮಾಡುತ್ತಿದ್ದೇನೆ- ಅದೇ ಅಣ್ಣ ತಮ್ಮಂದಿರು ಗದ್ದೆ ತೋಟ ಎಲ್ಲಾ ಇತ್ತಲ್ಲಾ ಅವರೇ ತಾಯಿ ?

ಹೌದು ಅವರು ಈಗಿದಾರೆಯೇ ?

ಅಯ್ಯೋ ! ಕತೆ ಕೇಶವಮೂರ್ತಿ ಅವನ ಹೆಂಡತಿಯೂ ಸತ್ತು ಹೋದರು. ಧರ್ಮಿಷ್ಟರು ಅವರ ತಮ್ಮ ಗದ್ದೆ–ಹೊಲ ತೋಟ ಎಲ್ಲಾ ಕಳೆದುಕೊಂಡು ಭಿಕಾರಿಯಾಗಿದ್ದಾರೆ.

ಕೇಶವಮೂರ್ತಿಗೆ ಇಬ್ಬರು ಮಕ್ಕಳಿದ್ದರಲ್ಲವೇ ಅರ್ಚಕರೇ ?

ಹೌದಮ್ಮ ಅವರು ರಾಮಮೂರ್ತಿಯ ಹೆಂಡತಿ ಮಹಾ ಕೇಡಿಗಿ, ಆ ಮಕ್ಕಳನ್ನು ಗೋಳು ಗುಟ್ಟಿಸಿ 'ಕಡೆಗೆ - ಎಲ್ಲೋ ಯಾತ್ರೆಗೆ ಮಕ್ಕಳನ್ನೂ ಕರೆದುಕೊಂಡು ಹೋಗಿ ಆ ಮಕ್ಕಳು ಸಮುದ್ರದಲ್ಲಿ ಮುಳುಗಿ ಸತ್ತು ಹೋದರು. ಎಂದು ಹೇಳುತ್ತಿದ್ದರಮ್ಮಾ .

ಮಾಡಿದ್ದುಣ್ಣೋ ಮಾರಾಯ–ಅರ್ಚಕರೇ ಹುಂ....ಎಂದು ಅವರು ಕೊಟ್ಟ ಪ್ರಸಾದವನ್ನು ದೇವಸ್ಥಾನದ ಪಡಸಾಲೆಯಲ್ಲಿ ಕುಳಿತು ಮೂವರೂ ತಿಂದರು.

ಏನು ಸಿರಿ ! ಗುರುತಿರುವಂತೆ ವಿಚಾರಿಸುತ್ತೀಯಲ್ಲಾ, ಅವರೆಲ್ಲಾ ಯಾರು ?

ರಾಜಾ ಅದೆಲ್ಲಾ ಹೇಳ ಬೇಕೆಂದೇ ನಿನ್ನನ್ನು ಇಲ್ಲಿಗೆ ಕರೆತಂದದ್ದು, ನೀನು ಬೇಕಾದರೆ ಹೊರಗೆ ಓಡಾಡಿ ಬಾ, ನಾನೂ ಮಮತಾ ಇಲ್ಲಿರುತ್ತೇವೆ.

ಬೇಡ ಸಿರಿ ! ನಾನೆಲ್ಲೂ ನಿನ್ನ ಬಿಟ್ಟು ಹೋಗುವುದಿಲ್ಲ ಎಂದು ಅಲ್ಲೇ ಕುಳಿತ. ಮಮತಾ ನಮ್ಮ ಕಂಬದಾಟ ಮರೆತೆಯಾ ? ಬಾ, ಸ್ವಲ್ಪ ಹೊತ್ತು ಆಡೋಣ. ಎಂದು ಚಿಕ್ಕ ಹುಡುಗಿಯಂತೆ ದೇವಿ ಮಮತಾ ಜೊತೆ ಕಂಬಗಳ ಸುತ್ತ ಓಡಾಟ ಬಚ್ಚಿಟ್ಟುಕೊಳ್ಳುವ ಆಟ, ಅದು ನಿನ್ನ ಕಂಬ, ಇದು ನನ್ನ ಕಂಬ, ಎಂದೆಲ್ಲಾ ಖುಷಿಯಿಂದ ಮಕ್ಕಳಾಡುವಂತೆ ಆಡಿದಳು.

ಕಾಳೀಪ್ರಸಾದ ಅವಳನ್ನು ಅಪ್ಪಿ ಹಿಡಿದು ಸಿರಿ ! ಏಕೆ ಹೀಗಾ-ಡುತ್ತೀ ? ನೀನು ಮೊದಲಿನಂತಿಲ್ಲಿ, ನನಗೆ ಭಯವಾಗುತ್ತಿದೆ, ಬಾ-ಹೋಗೋಣ ಎಂದ.

ಭಯ ಏಕೆ ? ರಾಜಾ ! ನಾನು ಆಡಿ ಕುಣಿದು ಕುಪ್ಪಳಿಸಿದ ಜಾಗ ಇದು, ಮತ್ತೆ ಮರುಕಳಿಸುತ್ತಿದೆ. ಎಂದಳು, ದೇವರ ದರ್ಶನಕ್ಕೆ ಬರುವಾಗ ದೇವಿ ಆಭರಣಗಳನ್ನು ತೆಗೆದಿಟ್ಟು ನಿರಾಡಂಬರವಾಗಿ ಬಂದಿದ್ದಳು. ಕಾರಿನ ಬಳಿ ಬಂದು ಮತ್ತೆ ಎಲ್ಲಾ ಒಡವೆ ವಸ್ತುಗಳನ್ನೂ ಧರಿಸಿ ಪೀತಾಂಬರ-ವನ್ನುಟ್ಟಳು. ಕಾರು ಹೊರಟಾಗ ಒಂದು ಮನೆಯ ಮುಂದೆ ನಿಲ್ಲಿಸುವಂತೆ ಹೇಳಿದಳು ಡ್ರೈವರಿಗೆ.

ಅದೊಂದು ಹಳೆಯ ಮಾದರಿಯ ಕಂಬಸಾಲು ಮನೆ, ಮುಂಬಾಗಿಲು ಸ್ವಲ್ಪ ತೆರೆದಿತ್ತು. ಕಾರಿನಲ್ಲಿ ಕುಳಿತಿದ್ದಂತೆಯೇ ದೇವಿ ಒಳಗೆ ಯಾರಿದ್ದಾರೆ, ಕೂಗು ಡ್ರೈವರ್ ಎಂದಳು, ಬಡಕಲು ಮೈ-ಹರಕಲು ಸೀರೆಯುಟ್ಟ ಹೆಂಗಸು ಬಾಗಿಲಿಂದ ಬಗ್ಗಿ ನೋಡಿ, ಯಾರು ಎಂದಳು. ಮತ್ತೆ ಮನೆ ಮುಂದೆ ಕಾರು ನಿಂತಿರುವುದು ನೋಡಿ, ಬನ್ನಿ-ಬನ್ನಿ ಯಾರು ನೀವು ?

ದೇವಿ ಕಾರಿನಿಂದ ಇಳಿದು ಒಳಕ್ಕೆ ಹೋಗಿ ಮನೆಯ ಸುತ್ತಾ ಕಣ್ಣಾಡಿಸಿದಳು. ಝಗ-ಝಗಿಸುವ ರತ್ನಾಭರಣಗಳನ್ನು ಧರಿಸಿ ಪ್ರತ್ಯಕ್ಷ ಲಕ್ಷ್ಮಿಯಂತಿದ್ದ ದೇವಿಯನ್ನು ನೋಡಿ ಆ ಹೆಂಗಸು, "ಯಾರೋ ನೀವು ಶ್ರೀಮಂತರು, ಕುಳಿತುಕೊಳ್ಳಿ" ಎಂದು ಒಂದು ಮುರಕಲು ಕುರ್ಚಿ-ಯನ್ನು ತೋರಿಸಿದಳು.

ಇರಲಿ, ನಾವು ರಾಜಾಶ್ವಾಸದವರು ನಾವು ಇಲ್ಲಿ ಗದ್ದೆ-ತೋಟ ಕೊಂಡುಕೊಳ್ಳಲು ಬಂದಿದ್ದೇವೆ. ಎಷ್ಟು ಲಕ್ಷವಾದರೂ ಸರಿ-ನಿಮ್ಮಲ್ಲಿದ್ದರೆ ಹೇಳಿ, ಎಂದಳು.

ಮಂಚದ ಮೇಲೆ ಗೊರಕುತ್ತಾ ಖಾಯಿಲೆ ಮಲಗಿದ್ದ ಆ ಹೆಂಗಸಿನ ಗಂಡ, ಯಾರೇ ಅದೂ? ಒಳಕ್ಕೆ ಕರೆಯೇ ಎಂಡ.

ದೇವಿ ತಾನೇ ಒಳಗೆ ಹೋಗಿ ನೋಡಿ ಅವರ ಸ್ಥಿತಿಗೆ ಮರುಗಿದಳು. ಆತ–ನೀವು ಯಾರೋ ಪುಣ್ಯಾತ್ಮರು. ಗದ್ದೆ ಕೊಂಡುಕೊಳ್ಳುತ್ತೇವೆ ಎಂದು ಬಂದಿದ್ದೀರಿ ನಮ್ಮ ದುರಾದೃಷ್ಟ ನಮಗಿದ್ದ ಗದ್ದೆ ತೋಟ ಎಲ್ಲಾ ನನ್ನ ಪಾಪಿ ಗಂಡು ಮಕ್ಕಳು ಕಳೆದು ಬಿಟ್ಟರವ್ವಾ ಕುಡುಕ ಮಕ್ಕಳು, ಎಂದು ಅತ್ತು ಬಿಟ್ಟರು.

ಏನೋ ನಿಮ್ಮ ಸ್ಥಿತಿ ನೋಡಿ ದುಃಖವಾಗುತ್ತದೆ. ಕಾಲಚಕ್ರ ಉರುಳುತ್ತಾ ಇರುತ್ತೆ ಹೋಗಲಿ ಬಿಡಿ. ಡ್ರೈವರ್ ರಾಜನ್ನ ಸ್ವಲ್ಪ ಹಣ ತೆಗೆದುಕೊಂಡು ಇಲ್ಲಿ ಬರ ಹೇಳು ಅಂದಳು.

ಕಾಳೀಪ್ರಸಾದ ಬಂದವನೇ ಸಿರಿ! ಇಲ್ಲಿ ಯಾಕೆ ಬಂದೆ. ಇಲ್ಲೇನು ಕೆಲಸ, ಬಾ, ಹೋಗೋಣ ಅಂದ.

ಹೋಗೋಣ ರಾಜಾ. ಆ ಹಣ ಕೊಡಿಲ್ಲಿ ಅಂದು. ಒಂದು ತಟ್ಟೆಯಲ್ಲಿ ಹಣ ತುಂಬಿಟ್ಟು ಏನೋ ನಿಮ್ಮ ಕಷ್ಟಕಾಲಕ್ಕೆ ಸ್ವಲ್ಪ ಸಹಾಯ ತೆಗೆದುಕೊಳ್ಳಿ,, ಎಂದು ಆ ಮನುಷ್ಯನ ಕೈಗೆ ಕೊಟ್ಟಳು.

ತಾಯೀ ನೀನು ಯಾರೋ! ನಮ್ಮ ಭಾಗದ ದೇವರು. ಚೆನ್ನಾಗಿರವ್ವಾ ತಾಯಿ, ಎಂದು ಹೇಳುತ್ತಿದ್ದಂತೆಯೇ ದೇವಿ ಬಂದು ಕಾರಿನಲ್ಲಿ ಕುಳಿತಳು. ದೇವಿಯ ಕಣ್ಣು ತೇವವಾಗಿತ್ತು. ಮಮತಾ ಕೂಡಾ ಜೊತೆಯಲ್ಲಿಯೇ ಇದ್ದು ಆ ಮನೆಯವರನ್ನು ನೋಡಿ ಕಣ್ಣೀರಿಟ್ಟಳು.

ಬಾ ಮಮತಾ, ಕಾವೇರಿ ತೀರದಲ್ಲಿ ಸ್ವಲ್ಪ ಕುಳಿತು ಮಾತಾಡೋಣ. ನನ್ನ ರಾಜನಿಗೆ ಎಲ್ಲಾ ಹೇಳಬೇಕು. ಕಾವೇರೀ ನೀರಿನ ಹತ್ತಿರ ಹಾಸು ಬಂಡೆಯ ಮೇಲೆ ಬಂದು ಕುಳಿತಳು ದೇವಿ. ಬಾ. ರಾಜಾ! ನನ್ನ ಬಳಿ ಕುಳಿತುಕೋ....

ದೇವಿ: ನಾನು ಹೋಗಿ ಸುತ್ತಾಡಿಕೊಂಡು ಬರಲೇ ? ಎಂದಳು ಮಮತಾ, ಬೇಡ-ಬೇಡ ನೀನು ಇರಲೇಬೇಕು.

ರಾಜಾ ನೀನು ನನ್ನ ವಿಷಯವನ್ನೆಲ್ಲಾ ಕೇಳಿದ ಮೇಲೆ ನನ್ನ ಕೈ ಬಿಡಕೂಡದು. ಹಾಗೆಂದು ಕಾವೇರಿ ಜಲಮುಟ್ಟಿ ಮಾತುಕೊಡು.

ಸಿರೀ....ನೀನೇನು ಹುಚ್ಚಾಗಿ ಆಡುತ್ತಿದ್ದೀಯಲ್ಲಾ! ನಾನು ಒಂದು ಸಲ ಮಾತುಕೊಟ್ಟರೆ ಆಯಿತು. ಮಾತಿಗೆ ತಪ್ಪುವ ಪಟ್ಟಣದ ಜನರಂತಲ್ಲ, ನಾವು.

ಹಾಗಾದರೆ ನೀನು ಕಾಡಿನವನೇ ರಾಜಾ ! ಎಂದು ಅವನ ಕೆನ್ನೆ-ತಟ್ಟಿದಳು. ಹೌದು, ಸಿರಿ ನಾನು ಕಾಡಿನಲ್ಲಿಯೇ ಬೆಳೆದವನು. ನೀನೂ ಸಹ ನನ್ನ ವಿಚಾರವನ್ನು ಕೇಳಿದ ಮೇಲೆ ನನ್ನನ್ನು ಬಿಡುವುದಿಲ್ಲವೆಂದೇ ನೀರು ಮುಟ್ಟಿ ಪ್ರತಿಜ್ಞೆ ಮಾಡು,

ರಾಜಾ! ನೀನು ಏನೇ ಆಗಿದ್ದರೂ ನೀನೇ ನನ್ನ ಪ್ರಾಣ. ನೀನಿಲ್ಲದೇ ನಾನು ಇರಲಾರೆ-ಸಿರಿ ದೇವಿಯು ಕೈಯನ್ನು ತನ್ನ ಕೈಯೊಳಗೆ ಭದ್ರವಾಗಿ ಹಿಡಿದು, ಕೇಳು ಸಿರೀ ! ಕೇಳು "ನಾನೊಬ್ಬ ದರೋಡೆಕೋರ ... ಕೊಲೆಗಾರ, ಡಕಾಯಿತರ ಮಧ್ಯೆ ಕಾಡಿನಲ್ಲಿಯೇ ಬೆಳೆದು ದೊಡ್ಡವನಾದವ, ಸಿರಿ ಕೇಳು-ನನ್ನನ್ನು ಬೆಳೆಸಿದ ಅಪ್ಪ ಹೇಳುತ್ತಿದ್ದ–ಮಗನೇ ! ....ನೀನೆಂದೂ ಹೆಣ್ಣಿನ ಮೋಹಕ್ಕೆ ಸಿಲುಕಬೇಡ" ಎಂದು-ಆದರೆ ದೇವಿ ಇದೋ ಇದೀಗ ನನ್ನ ದರ್ಪವೆಲ್ಲಾ ಅಡಗಿ ನಿನ್ನ ಆಕರ್ಷಣೆಯಲ್ಲಿ ಮುಳುಗಿ ಹೋಗಿದ್ದೇನೆ ಸಿರೀ ಹೆಣ್ಣಿನ ಮೋಹ ಇಷ್ಟು ಶಕ್ತಿಶಾಲಿ, ಎಂದು ನಾನು ತಿಳಿದಿರಲಿಲ್ಲ. ಈಗಲೂ ನಾನು ಬೆಳೆದ ವಾತಾವರಣ ನೆನೆಸಿಕೊಂಡರೆ ದುಃಖವಾಗುತ್ತೆ.

ಬೆಟ್ಟ, ಗುಡ್ಡ, ಕಾಡಿನ ಮಧ್ಯೆ ಮನ ಬಂದಂತೆ ಅಲೆಯುತ್ತಿದ್ದೆ, ದರೋಡೆ-ಕೊಲೆಯೇ ನಮ್ಮ ಕಸುಬಾಗಿತ್ತು. ಆದರೆ ಈಗ ಆ ಜೀವನ ಅಸಹ್ಯವೆನಿಸಿದೆ. ನನ್ನ ಹೆತ್ತವರನ್ನು ಪತ್ತೆ ಹಚ್ಚಲು ಹೊರಟಿದ್ದೇನೆ ಸಿರೀ ಒಂದಾನೊಂದು ದಿನ ಅದು ನಿನಗೆ ತಿಳಿಯುತ್ತದೆ ಸಿರೀ... ಈಗ ನಾನೊಬ್ಬ ಅನಾಥ–ಎಂದು ಹೇಳುತ್ತಿದ್ದಂತೆಯೇ ಕಾಳೀಪ್ರಸಾದನಿಗೆ ದುಃಖ

ಒತ್ತರಿಸಿ ಬಂದು ದೇವಿಯ ತೊಡೆಯಲ್ಲಿ ಮುಖ ಹುದುಗಿಸಿ ಬಿಕ್ಕಿ–ಬಿಕ್ಕಿ ಅಳತೊಡಗಿದ.

ರಾಜಾ ! ದುಃಖಿಸಬೇಡ. ನಿನ್ನ ಕಥೆಯನ್ನೆಲ್ಲಾ ಹೇಳಿಬಿಟ್ಟೆ ಆದರೂ ನಿನ್ನ ಮೇಲಿನ ಪ್ರೀತಿ ನನಗೇನೂ ಕಮ್ಮಿಯಾಗೋಲ್ಲ, ಪಶ್ಚಾತ್ತಾಪವೇ ಮನುಷ್ಯನನ್ನು ಪಾವನ ಮಾಡುತ್ತದೆ ಎಂದು ಅವನ ತಲೆ ನೇವರಿಸಿದಳು,

ರಾಜಾ! ನಾನು ನಿನ್ನನ್ನು ಇಲ್ಲಿಯವರೆಗೂ ಕರೆದುಕೊಂಡು ಬಂದಿದ್ದು ನನ್ನ ಕಥೆಯನ್ನು ಹೇಳುವುದಕ್ಕೇ....ಈ ಶ್ರೀರಂಗ ಪಟ್ಟಣ ನಾನು ಹುಟ್ಟಿ ಬೆಳೆದ ಊರು. ಕಾವೇರಿ ಆಸರೆಯಲ್ಲಿ ಸಮೃದ್ಧವಾಗಿ ಭತ್ತ ಬೆಳೆಯುವ ಗದ್ದೆ ತೋಟ ಇಲ್ಲಿ ಪ್ರಸಿದ್ಧಿ. ನಮ್ಮ ತಂದೆಗೆ ಇದೇ ಊರಿನಲ್ಲಿ 10 ಎಕರೆ ಗದ್ದೆ ತೋಟ ಎಲ್ಲಾ ಇತ್ತು ನಮ್ಮ ತಂದೆಗೆ ಒಬ್ಬನೇ ತಮ್ಮ ಅದೇ ನಮ್ಮ ಚಿಕ್ಕಪ್ಪ. ತಮ್ಮನ ಮೇಲೆ ತುಂಬಾ ಪ್ರೀತಿ. ಅಣ್ಣ ತಮ್ಮಂದಿರು ರಾಮ ಲಕ್ಷ್ಮಣರಂತೆ ಇದ್ದರು. ನಮ್ಮ ತಂದೆಯೇ ತಮ್ಮನಿಗೆ ಮದುವೆ ಮಾಡಿದರು. ಆ ವೇಳೆಗೆ ನಮ್ಮ ತಂದೆಗೆ ಒಂದು ಗಂಡು ಒಂದು ಹೆಣ್ಣು ಮಕ್ಕಳಾಗಿದ್ದುವು. ನಮ್ಮ ಚಿಕ್ಕಮ್ಮ ಮನೆಗೆ ಕಾಲಿಟ್ಟ ಕೂಡಲೇ ಮನೆಯಲ್ಲಿ ಒಡಕು ಶುರುವಾಯಿತು. ಏನೇ ಆದರೂ ನಮ್ಮ ತಾಯಿ ತುಂಬಾ ತಾಳ್ಮೆ....ಎಲ್ಲಾ ಸಹಿಸಿಕೊಂಡು ಹೋಗುತ್ತಿದ್ದರು. ಮನೆಯಲ್ಲಿ ದಿನಸಿ ಧಾನ್ಯ ತುಂಬಿರುತ್ತಿತ್ತು. ಒಂದೊಂದು ಸಲ ಫಸಲು ಮಾರಿದಾಗಲೂ ಕೈ ತುಂಬಾ ಹಣ, ನಮ್ಮ ತಂದೆ ತಮ್ಮನಿಗೂ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ತಮ್ಮನನ್ನು ಬಹಳ ಮುದ್ದಿನಿಂದ ಸಾಕಿದರು. ನಮ್ಮ ತಂದೆ ತಾಯಿ.

ಈ ಮಮತಾ ಯಾರೂ ಅಂತ ರಾಜಾ ! ನಮ್ಮ ಬೀದಿಯಲ್ಲಿ ಕಡೇ ಮನೆಯಲ್ಲಿ ರಾಘವೇಂದ್ರ ಎಂದು ಒಬ್ಬರು ಮೇಷ್ಟ್ರು ಇದ್ದರು. ಇವಳು ಅವರ ಮೊದಲ ಹೆಂಡತಿ ಮಗಳು. ಮೇಷ್ಟ್ರು ಆಕಸ್ಮಿಕ ಸತ್ತು ಹೋದರು. ಮಮತಾಗೆ ಬಲತಾಯಿ ಹಿಂಸೆ ಶುರುವಾಯಿತು. ಅವಳು ನಮ್ಮ ಮನೆಗೇ ಹೆಚ್ಚಾಗಿ ಬರುತ್ತಿದ್ದಳು, ನಮ್ಮ ತಾಯಿ ದಯಾಮಯಿ

ಮಮತಾಳನ್ನೂ ನಮ್ಮ ಮನೆಯಲ್ಲಿಯೇ ಇಟ್ಟುಕೊಂಡು ನಮ್ಮಜೊತೆಯಲ್ಲಿ ಸಾಕಿದರು, ಇವಳು ನನ್ನ ಬಾಲ್ಯದ ಆತ್ಮೀಯ ಗೆಳತಿ....

ಮಮತಾ ಕಣ್ಣೀರು ಒರೆಸಿಕೊಳ್ಳುತ್ತಾ........ ಹೌದು ರಾಜಾ ! ಇವರ ಋಣವನ್ನು ಈ ಜನ್ಮದಲ್ಲಿ ನಾನು ತೀರಿಸಲಾರೆ ಎಂದಳು.

ಮೈಸೂರಿಗೆ ಹತ್ತಿರ ನಂಜನಗೂಡು ದಿವ್ಯಕ್ಷೇತ್ರ. ಅಲ್ಲಿ ನಂಜುಂಡೇಶ್ವರ ದೇವಸ್ಥಾನ ಬಹಳ ದೊಡ್ಡದು, ನಮ್ಮ ತಂದೆ ತಾಯಿ ನಮ್ಮ ಅಣ್ಣನಿ-ಗಾಗಿ ಹರಕೆ ಮಾಡಿಕೊಂಡಿದ್ದರು ನಂಜನಗೂಡಿಗೆ ಬಂದು ಮುಡಿ ಕೊಡುವುದಾಗಿ ನಾನು ನಮ್ಮ ಅಣ್ಣ ನಮ್ಮ ತಂದೆ ತಾಯಿ ನಾಲ್ಕು ಜನ ನಂಜನಗೂಡಿಗೆ ಹೋದೆವು. ಕಪಿಲಾ ನದಿ ತುಂಬಿ ಹರಿಯುತ್ತಿತ್ತು. ಸ್ನಾನ ಮಾಡಲು ನೀರಿಗೆ ಇಳಿದರು. ಮೇಲಿನಿಂದ ಪ್ರವಾಹ ಬಂತೋ ! ಏನಾಯಿತೋ, ನಮಗಂತೂ ಒಂದೂ ಗೊತ್ತಾಗಲಿಲ್ಲ ಅಮ್ಮ ಅಪ್ಪ ಇಬ್ಬರೂ ಕೊಚ್ಚಿಕೊಂಡು ಪ್ರವಾಹದಲ್ಲಿ ಬಹಳದೂರ ಹೋಗಿಬಿಟ್ಟರು. ನಾನು ನಮ್ಮ ಅಣ್ಣ ಗಾಬರಿಯಿಂದ ಅಮ್ಮಾ-ಅಪ್ಪಾ ! ಎಂದು ಕೂಗಿಕೊಂಡೆವು, ಆ ವೇಳೆಗೆ ಜನ ಜಮಾಯಿಸಿದರು. ಅಯ್ಯೋ ! ಪಾಪ ಮಕ್ಕಳು-ಎಂದು ನಮಗೆ ಸಮಾಧಾನ ಹೇಳಿದರು.

ಆಗ ನಮ್ಮ ಅಣ್ಣನಿಗೆ 7 ವರ್ಷ, ನನಗೆ 5 ವರ್ಷ ರಾಜಾ! ಕೇಳು ನಾವು ಪೂರಾ ತಬ್ಬಲಿಯಾದೆವು. ನಮ್ಮ ಚಿಕ್ಕಪ್ಪ ಚಿಕ್ಕಮ್ಮನ ಪೋಷಣೆಗೆ ಬಂದು ಬಿದ್ದೆವು. ಆ ವೇಳೆಗೆ ಅವರಿಗೂ ಇಬ್ಬರು ಗಂಡು ಮಕ್ಕಳಿದ್ದರು. ನಮ್ಮನ್ನು ಕಂಡರೆ ಚಿಕ್ಕಮ್ಮನಿಗೆ ಆಗುತ್ತಿರಲಿಲ್ಲ. ಅವಳ ಮಕ್ಕಳಿಗೇ ಒಂದು ನಮಗೇ ಒಂದು ಮಾಡುತ್ತಿದ್ದಳು, ಮನೆಯ ಚಾಕರಿ-ಯೆಲ್ಲಾ ನಾವು ಮಾಡಿದರೂ ಒಂದು ತುತ್ತು ಅನ್ನ ಹಾಕಬೇಕಾದರೆ ಚಿತ್ರ ಹಿಂಸೆ ಮಾಡಿ ಹಾಕುತ್ತಿದ್ದಳು. ನಮ್ಮ ಚಿಕ್ಕಪ್ಪ ಸ್ವಲ್ಪ ಕನಿಕರ ತೋರಿಸಲೂ ಬಿಡುತ್ತಿರಲಿಲ್ಲ, ಅವಳ ಕೈಗೊಂಬೆಯಾಗಿದ್ದರು ನಮ್ಮ ಚಿಕ್ಕಪ್ಪ. ಆಸ್ತಿ ಪೂರಾ ನಮ್ಮದೇ ಆಗಬೇಕೆಂದು ಚಿತಾವಣೆ ಮಾಡು-ತ್ತಿದ್ದಳು. ಈ ಮಕ್ಕಳು ನಮ್ಮ ಶತ್ರುಗಳು ಇವ್ರೂ ಅಲ್ಲಿಯೇ ಸಾಯ್ಬಾರದಗಿತ್ತೇ ? ಅಪ್ಪನ ಆಸ್ತಿಗೆ ಹಕ್ಕು ಪಡೆಯಲು ಉಳಿದುಕೊಂಡಿವೆ

ಶನಿಗಳು. ಎಂದು ನಮ್ಮ ಎದುರಿನಲ್ಲಿಯೇ ಬೈದು ತಲೆ ಮೇಲೆ ಮೊಟ್ಟು ತ್ತಿದ್ದಳು, ಒಂದು ತುತ್ತು ಅನ್ನಕ್ಕಾಗಿ ನಾವು ಬೇಡಿಕೊಳ್ಳಬೇಕಾಗಿತ್ತು ಈ ಚಿತ್ರ ಹಿಂಸೆಯಲ್ಲಿಯೇ ಒಂದು ವರ್ಷ ಕಳೆಯಿತು, ಚಿಕ್ಕಮ್ಮನ ದ್ವೇಷ ಹೆಚ್ಚುತ್ತಲೇ ಇತ್ತು,

ಇದ್ದಕ್ಕಿದ್ದಂತೆ ಚಿಕ್ಕಮ್ಮ ದಕ್ಷಿಣದ ಕಡೆ ಯಾತ್ರೆಗೆಂದು ಹೊರಟಳು. ಚಿಕ್ಕಪ್ಪ ನನಗೆ ಬರುವುದಕ್ಕಾಗುವುದಿಲ್ಲ ಗದ್ದೆ ಕೆಲಸವಿದೆ, ಎಂದು ಹೆಂಡತಿಗೆ ಹೇಳುತ್ತಿದ್ದುದನ್ನು ಕೇಳಿಸಿಕೊಂಡೆವು, ಸಧ್ಯ ಸ್ವಲ್ಪ ದಿನವಾದರೂ ಚಿಕ್ಕಮ್ಮನ ಕಾಟ ತಪ್ಪುತ್ತಲ್ಲಾ ! ಎಂದು ಸಂತೋಷಪಟ್ಟೆವು. ಆದರೆ ವಿಧಿಯ ಕೈವಾಡ ಬೇರೆಯೇ ಆಗಿತ್ತು, ಚಿಕ್ಕಮ್ಮ ನಮ್ಮನ್ನೂ ಕರೆದುಕೊಂಡು ಹೊರಟಳು. ಇಲ್ಲಿ ಯಾರು ಇವರಿಗೆ ಊಟ ಮಾಡಿ ಹಾಕುತ್ತಾರೆ ? ಎಂದು ಹೇಳಿ ಅವಳ ಮಕ್ಕಳನ್ನೂ ನಮ್ಮ ಜೊತೆ ಕರೆದುಕೊಂಡು ಹೊರಟಳು.

ರೈಲಿನಲ್ಲಿ ಹೋಗುವಾಗ ನಮ್ಮ ಖುಷಿ ಅಷ್ಟಿಷ್ಟಲ್ಲ. ಚಿಕ್ಕಮ್ಮ ಏನೂ ಬೈಯ್ಯದೆ ಅಲ್ಲಲ್ಲೆ ಊಟ ತಿಂಡಿ ಕೊಡುತ್ತಿದ್ದಳು ಬಹುದೂರ ಪ್ರಯಾಣ ಮಾಡಿದೆವು. ಯಾವುದೋ ಊರಿನಲ್ಲಿಳಿದು ನಮ್ಮನ್ನೂ ಇಳಿಸಿ ಸಮುದ್ರ ತೀರಕ್ಕೆ ಕರೆದುಕೊಂಡು ಹೋದಳು. ಬನ್ನೀ ಮಕ್ಕಳೇ ಸಮುದ್ರ ಅಲೆ ಎಷ್ಟು ಚೆನ್ನಾಗಿದೆ ? ನೋಡಿ ಎಂದು ಹೇಳುತ್ತಲೇ ನಮ್ಮನ್ನು ಸಮುದ್ರಕ್ಕೆ ತಳ್ಳಿ ತಾನು ತನ್ನ ಮಕ್ಕಳೊಂದಿಗೆ ಹೊರಟು ಹೋದಳು.

ರಾಜಾ ! ಕೇಳು ದೈವ ಶಕ್ತಿಯೇ ಬೇರೆಯಾಗಿತ್ತು, ಅಲೆಯಲ್ಲಿ ತೇಲುತ್ತಾ ಮುಳುಗುತ್ತಾ ಮತ್ತೆ ನಾನು ನಮ್ಮ ಅಣ್ಣ ಅಲೆಯೊಂದಿಗೆ ದಡಕ್ಕೆ ಬಂದು ಬಿದ್ದೆವು, ಚಿಕ್ಕಮ್ಮನ ಪತ್ತೆಯೇ ಇಲ್ಲ ಅಲ್ಲೆಲ್ಲಾ ಹುಡುಕಾಡಿದೆವು, ಭೋರ್ಗರೆವ ಸಮುದ್ರದ ಅಲೆ ಅಪ್ಪಳಿಸುವುದನ್ನು ಬಿಟ್ಟರೆ ಮತ್ತೇನೂ ಕಣ್ಣಿಗೆ ಕಾಣದು ನಮ್ಮ ಸ್ಥಿತಿ ಬಾಣಲಿಯಿಂದ ಬೆಂಕಿಗೆ ಬಿದ್ದ ಗಾದೆಯಂತಾಯಿತು. ಕಾಣದ ಊರು ಎಲ್ಲಿಗೆ ಹೋಗುವು ದೆಂದೇ ಗೊತ್ತಾಗಲಿಲ್ಲ. ಉಡಲು ಬೇರೆ ಬಟ್ಟೆಯಿಲ್ಲ ಹಸಿವು ಒಂದು ಕಡೆ

ನಾನು ಇನ್ನೂ ಚಿಕ್ಕವಳು ಭಯದಿಂದ ಗೋಳೋ ಎಂದು ಅಳಲು ಶುರು ಮಾಡಿದೆ, ನಮ್ಮ ಅಣ್ಣ ನನ್ನನ್ನು ಸಮಾಧಾನ ಮಾಡಿ ಕರೆದುಕೊಂಡು ರೈಲ್ವೇ ಸ್ಟೇಷನ್ ಬಳಿ ಬಂದ.

ಚಿಕ್ಕಮ್ಮಾ-ಚಿಕ್ಕಮ್ಮಾ ! ಎಂದು ಎಲ್ಲಾ ರೈಲಿನ ಬಳಿಯೂ ನಿಂತು ಕೂಗಿಕೊಂಡೆವು, ಬೇಕೆಂದೇ ನಮ್ಮನ್ನು ಸಾಯಿಸಲು ಬಂದವಳು ಇಲ್ಲೇಕೆ ಇರುತ್ತಾಳೆ ? ರಾಜಾ ! ಅಂದಿನಿಂದ ಕಂಗಾಲಿಗಳಾದೆವು. ಈ ಮಮತಾ ಸದಾ ನಮ್ಮ ಜೊತೆ ಅಂಟಿಕೊಂಡೇ ಬಂದಳು. ಆದರೆ ಚಿಕ್ಕಮ್ಮ ಅವಳನ್ನು ರೈಲಿನಿಂದ ಇಳಿಸಿ ಅಲ್ಲಿಯೇ ಬಿಟ್ಟು ಬಂದಿದ್ದಳು ಸಮುದ್ರ ತೀರಕ್ಕೆ. ಮಮತಾ ಅಳುತ್ತಾ ಅಲ್ಲಿಯೇ ಕು ಳಿ ತಿ ದ್ದ ಳು. ನಮ್ಮನ್ನು ಕಂಡದ್ದೇ ದೇವೀ.... ರಂಗಣ್ಣಾ ! ಚಿಕ್ಕಮ್ಮ ಎಲ್ಲಿ ! ಎಂದಳು, ನನ್ನ ಹೆಸರು ಲಕ್ಷ್ಮೀದೇವಿ ನಮ್ಮ ಅಣ್ಣನ ಹೆಸರು ರಂಗನಾಥ, ನಮ್ಮ ತಂದೆ ತಾಯಿ ಪ್ರೀತಿಯಿಂದ ಇಟ್ಟ ಹೆಸರು.

ರೈಲಿನಲ್ಲಿ ಬಹುದೂರ ಬಂದಿದ್ದರಿಂದ ಅದು ಯಾವ ಊರೆಂದೇ ನಮಗೆ ಗೊತ್ತಾಗಲಿಲ್ಲ. ಹಸಿವು ತಾಳಲಾರದೇ ರೈಲಿನಲ್ಲಿ ಕುಳಿತ ಪ್ರಯಾಣಿಕರನ್ನು ಬೇಡಿ ಕೊಟ್ಟಿದ್ದನ್ನು ತಿನ್ನುತ್ತಿದ್ದೆವು. ರಾತ್ರಿಯಾದರೆ ಚಳಿಯಲ್ಲಿ ನಡುಗುತ್ತಾ ರೈಲ್ವೆಸ್ಟೇಷನ್ನಿನಲ್ಲಿಯೇ ಮಲಗುತ್ತಿದ್ದೆವು. ನಮ್ಮ ಅಣ್ಣ ಮಾತ್ರ ನನ್ನನ್ನು ತಟ್ಟಿ ಪಕ್ಕದಲ್ಲಿ ಮಲಗಿಸಿಕೊಳ್ಳುತ್ತಿದ್ದ. ನನ್ನನ್ನು ಕಂಡರೆ ತುಂಬಾ ಪ್ರೀತಿ, ನನಗೆ ನಡೆಯುವುದಕ್ಕಾಗದಿದ್ದರೆ ಎಷ್ಟೋ ಸಲ ಎತ್ತಿಕೊಂಡೇ ಹೋಗುತ್ತಿದ್ದ. ಪಾಪ ! ಮಮತಾ ಕೂಡ ನಮ್ಮನ್ನೇ ನಂಬಿ ಬಂದವಳು. ಅವಳನ್ನೂ ಸುಧಾರಿಸುತ್ತಿದ್ದ. ನಂತರ ಊರೊಳಗೆ ಹೋಗಿ ಭಿಕ್ಷೆ ಬೇಡುತ್ತಿದ್ದೆವು ಭಾಷೆ ತಿಳಿಯದ ಊರು. ಜನ ಬೈದು ಗದರಿ ಕಳುಹಿಸುತ್ತಿದ್ದರು. ತಿರಿದು ತಿಂದು ಅಭ್ಯಾಸವಾಗಿ ಸ್ವಲ್ಪ ಧೈರ್ಯ ಬಂತು ನಮ್ಮ ಅಣ್ಣನಿಗೆ.

ಲೇ ನಾನು ಎಲ್ಲಾದರೂ ಕೂಲಿ ಮಾಡಿ ತರುತ್ತೇನೆ, ನೀವು ಒಂದು ಕಡೆ ಇಬ್ಬರೂ ಕುಳಿತಿರಿ, ಎಂದು ನಮ್ಮನ್ನು ಒಂದು ಕಡೆ ಕೂರಿಸಿ, ಕೂಲಿ ಕೆಲಸ ಕೊಡಿ, ಎಂದು ಊರೆಲ್ಲಾಸುತ್ತಾಡಿದ. ಆದರೆ 8 ವರ್ಷದ

ಹುಡುಗನಿಗೆ ಯಾರು ಕೆಲಸ ಕೊಡುತ್ತಾರೆ? ಸುತ್ತಾಡಿ ಸುಸ್ತಾಗಿ ಬಂದ, ಭಿಕ್ಷೆ ಬೇಡಿ ಅವನೇ ತಂದಿದ್ದ ಅನ್ನವನ್ನು ಮೂರು ಜನವೂ ಹಂಚಿ ತಿಂದೆವು.

ದೇವಿಯ ದುಃಖದ ಕಥೆಯನ್ನು ಕೇಳುತ್ತಾ ಕಾಳೀಪ್ರಸಾದನ ಕಣ್ಣಲ್ಲಿ ನೀರು ಬಂತು. ತಾನೇ ಯೋಚಿಸಿಕೊಂಡ, ನನಗೇನು ಕಷ್ಟವಿತ್ತು ನನ್ನನ್ನು ದೇವಿಪ್ರಸಾದ ಎಷ್ಟು ಚೆನ್ನಾಗಿ ಸಾಕಿದ! ಎಂದು.

ಸಿರೀ! ನಿನ್ನ ಕಷ್ಟವನ್ನು ಕೇಳಿದರೇ ದುಃಖವಾಗುತ್ತೆ, ಹೇಗೆ ಇಂತಹ ಐಶ್ವರ್ಯ ನಿನಗೆ ಬಂತೋ ಆಶ್ಚರ್ಯ ಎಂದ.

ಹೌದು ರಾಜಾ! ಅದು ದೈವ ಕೃಪೆ. ಆದರೆ ನಾವು ಪಟ್ಟ ಪಾಡನ್ನು ಎಂದೂ ಮರೆಯಲಾರೆವು, ಏನಾದರೂ ತಡೆಯಬಹುದು, ಹೊಟ್ಟೆ ಹಸಿವನ್ನು ಮಾತ್ರ ತಾಳಲಾಗದು. ಹಾಗೆಯೇ ದಿನ ಕಳೆಯುವು ದರಲ್ಲಿ ನಾವು ಹಾಕಿಕೊಂಡಿದ್ದ ಬಟ್ಟೆಯೆಲ್ಲಾ ಹರಿದು ಚಿಂದಿಯಾಯಿತು. ಮಾಸಿದ ತಲೆ, ಚಿಂದಿ ಬಟ್ಟೆಯಲ್ಲಿ ಕಂಗಾಲಿಗಳ ಗುಂಪಿನಲ್ಲಿ ಬೆರೆತು ಹೋದೆವು, ಅಲ್ಲೊಂದು ಪಾಳು ಬಿದ್ದ ಛತ್ರದಲ್ಲಿ ಕಂಗಾಲಿಗಳ ಗುಂಪೇ ಇತ್ತು ಅವರೆಲ್ಲರಿಗೆ ಒಬ್ಬ ಯಜಮಾನ. ಎಲ್ಲರೂ ಬೇಡಿ ತಂದದ್ದನ್ನು ಅವನ ಬಳಿ ಕೊಡಬೇಕು ಅವನು ಎಲ್ಲರಿಗೂ ಹಂಚುತ್ತಿದ್ದ. ಏನೂ ಸಿಕ್ಕದೆ ಬರೀ ಕೈಲಿ ಬಂದವರನ್ನು ಬೈಯ್ಯುತ್ತಿದ್ದ ಚಿಕ್ಕ ಮಕ್ಕಳಾದ ನಮ್ಮನ್ನು ನೋಡಿ, ಬನ್ನಿ, ಬನ್ನೀ, ನಮ್ಮ ಗುಂಪಿಗೆ ನಿಮ್ಮನ್ನೂ ಸೇರಿಸಿಕೊಳ್ಳು ತ್ತೇವೆ ನಿಮಗೆ ಬೇಡುವ ರೀತಿಯನ್ನು ಕಲಿಸುತ್ತೇನೆ. ಅಂದ ಅವನ ಭಾಷೆಯೇ ಬೇರೆ ತಮಿಳಿರಬಹುದು. ಅವನ ಕೈ ಕೆಳಗೆ ತಯಾರಾಗಿ ಭಿಕ್ಷೆ ಬೇಡಿ ತಂದು ಕೊಡುತ್ತಿದ್ದೆವು.

ಒಂದು ದಿನ ಒಂದು ಭಯಂಕರ ದೃಶ್ಯವನ್ನು ನೋಡಿಬಿಟ್ಟೆವು. ಒಬ್ಬ ಸಣ್ಣ ಹುಡುಗನ ಕೈ–ಕಾಲು ಕಟ್ಟಿಹಾಕಿ ಅವನ ಕಣ್ಣುಗಳಿಗೆ ಏನೋ ಔಷಧಿಯನ್ನು ಹಾಕಿಬಿಟ್ಟ ಆ ಹುಡುಗ ವಿಲಿ–ವಿಲಿ ಒದ್ದಾಡುತ್ತಾ ಕಿರುಚಿ ಕೊಳ್ಳುತ್ತಿದ್ದ. ಅವನ ಕಣ್ಣು ಸುಟ್ಟುಹೋಗಿ ಕುರುಡನಾದ. ನಾವು

ಮರೆಯಲ್ಲಿದ್ದು ಈ ದೃಶ್ಯವನ್ನು ನೋಡಿಬಿಟ್ಟೆವು, ಮಾರನೇ ಬೆಳಗ್ಗೆ ವೇಳೆಗೆ ಆ ಹುಡುಗನನ್ನು ನಮಗೆ ಕಾಣದೆ ಬಚ್ಚಿಟ್ಟಿದ್ದ, ನಾನು ಭಯದಿಂದ ಗಡ ಗಡನೆ ನಡುಗುತ್ತಿದ್ದೆ, ಬೆಳಗ್ಗೆ ಭಿಕ್ಷೆಗೆಂದು ಹೊರಟೆವು. ನಮ್ಮ ಅಣ್ಣನನ್ನು ತಬ್ಬಿಕೊಂಡು ಅಳುತ್ತಲೇ ಇದ್ದೆ, ಅಣ್ಣಾ ! ಆ ಭಿಕ್ಷುಕನನ್ನು ನೋಡಿದರೆ ನನಗೆ ಭಯವಾಗುತ್ತೆ. ಎಲ್ಲಾದರೂ ಹೊರಟು ಹೋಗೋಣ ನಡೀ ಅಣ್ಣಾ ! ಅಂದೆ,

ನಾವು ಮೂರು ಜನವೂ ರೈಲ್ವೇ ಸ್ಟೇಷನ್ನಿಗೆ ಬಂದೆವು. ಯಾವುದೋ ರೈಲು ಹೊರಟಿತ್ತು. ಬೇಗ ಆ ರೈಲನ್ನು ಹತ್ತಿ ಬಿಟ್ಟೆವು. ಕೆಲವು ಸ್ಟೇಷನ್ ದಾಟಿದ ನಂತರ ಚೆಕ್ಕಿಂಗ್ ಮಾಸ್ಟರ್ ಬಂದು ಕಂಗಾಲಿಗಳಾದ ನಮ್ಮನ್ನು ಬೈದು ಬೆನ್ನಮೇಲೆ ಬಾರಿಸಿ ರೈಲು ನಿಂತ ಕಡೆ ಕೆಳಗೆ ಇಳಿಸಿದ. ಹೀಗೆಯೇ ಕಳ್ಳತನದಿಂದ ರೈಲು ಹತ್ತಿ ಮುಂದಿನ ಊರುಗಳಿಗೆ ಹೋಗಿ ಭಿಕ್ಷೆ ಬೇಡುತ್ತಿದ್ದೆವು. ಹಾಗೆಯೇ ಊರ ಬರುತ್ತಾ ಭಾರತದ ದಕ್ಷಿಣಕ್ಕೆ ತುಟ್ಟತುದಿಯ ವರೆಗೂ ಬಂದು ಬಿಟ್ಟಿದ್ದೆವು. ವಿಶಾಲವಾದ ದಕ್ಷಿಣ ಸಮುದ್ರ ನಮಗೆ ಕಾಣುತ್ತಿತ್ತು. ಅಲ್ಲಿ ಓಡಾಡುವ ಜನರನ್ನು ವಿಚಾರಿಸಿದೆವು, ಈ ಸಮುದ್ರ ತೀರದಲ್ಲಿ ಕನ್ಯಾಕುಮಾರಿ ದೇವಿ ಇದ್ದಾಳೆ. ಅವಳ ಮಹಿಮೆ ಅಪಾರ, ನಾವು ಆ ದೇವಿಯ ದರ್ಶನಕ್ಕೆ ಹೋಗುತ್ತಿದ್ದೇವೆ ಎಂದರು, ನಾವೂ ಅವರ ಜೊತೆಯಲ್ಲಿ ಹೊರಟೆವು. ರಾಜಾ ! ಗಮನವಿಟ್ಟು ಕೇಳು, ಆ ದೇವಿಯ ಸನ್ನಿಧಿ, ಆ ಪ್ರಶಾಂತ ವಾತಾವರಣ ನಮಗೆ ಎಷ್ಟೋ ಸಂತೋಷವನ್ನುಂಟು ಮಾಡಿತು.

ಕನ್ಯಾಕುಮಾರಿ ದೇವಿ....ನೀನು ಎಷ್ಟು ಸುಂದರ-ನಯನ ಮನೋಹರ ನೀನು ನನ್ನ ಭಾಗ್ಯದೇವಿ, ನಮೋ ನಮಃ ಎಂದು ಕಣ್ಮುಚ್ಚಿ ಧ್ಯಾನಿಸಿ

ರಾಜಾ ! ಮುಂದೆ ಕೇಳು. ಸಮುದ್ರ ತೀರದಲ್ಲಿ ಬಹು ಪುರಾತನ ದೇವಾಲಯವಿದೆ, ಮಂದಿರದ ಸುತ್ತ ಎತ್ತರವಾದ ಪ್ರಹರಿ ಇದೆ ಗರ್ಭ-ಗುಡಿಯಲ್ಲಿ ದೇವಿಯ ಸುಂದರ ವಿಗ್ರಹವಿದೆ. ಮೂರ್ತಿಯು ಪೂರ್ವಾಭಿ-ಮುಖವಾಗಿದೆ. ದೇವಿಯ ಎಡಗೈಯಲ್ಲಿ ಒಂದು ಮಾಲೆಯಿದೆ. ಆ ತಾಯಿ ಧರಿಸಿರುವ ಮೂಗುತಿಯಲ್ಲಿರುವ ಅಮೂಲ್ಯವಾದ ವಜ್ರದ ಕಾಂತಿ ಮಿಂಚಿ

ನಂತೆ ಹೊಳೆಯುತ್ತದೆ ಚಲುವಿನ ಪ್ರತಿಮೆಯಾದ ಕನ್ಯಾಕುಮಾರಿ ದೇವಿಯನ್ನು ಅಮೂಲ್ಯವಾದ ಆಭರಣಗಳಿಂದ ಅಲಂಕರಿಸುತ್ತಾರೆ. ರಾಜಾ ! ಆ ದೇವಿಯ ದರ್ಶನವೇ ಒಂದು ಆನಂದ.

ಆ ಸ್ಥಳವನ್ನು ಬಿಟ್ಟು ಎಲ್ಲಿಗೂ ಹೋಗುವುದೇ ಬೇಡ ಎನ್ನಿಸಿ ಬಿಟ್ಟಿತು ನಮಗೆ, ನಾವು ಪ್ರತಿದಿನ ಸಮುದ್ರ ಸ್ನಾನ ಮಾಡಿ ದೇವಿಯ ಪ್ರದಕ್ಷಿಣೆ ನಮಸ್ಕಾರ ಧ್ಯಾನ ಮಾಡುತ್ತಾ ಕುಳಿತು ಬಿಡುತ್ತಿದ್ದೆವು. ಅಲ್ಲಿಗೆ ಬರುವ ಭಕ್ತಾದಿಗಳು ನಮಗೆ ಏನು ಭಿಕ್ಷೆ ನೀಡುತ್ತಾರೋ ! ಅದರಿಂದಲೇ ನಮ್ಮ ಜೀವನ. ರಾತ್ರಿ ದೇವಿಯ ನೆನಪಿನಲ್ಲಿ ಭಕ್ತಿಯಿಂದ ನಮಸ್ಕರಿಸಿ ಅಲ್ಲೇ ಮೂವರೂ ಮಲಗುತ್ತಿದ್ದೆವು. ಹಾಗೆ ಎಷ್ಟು ದಿನ ಕಳೆಯಿತೋ! ನಮಗೇ ಗೊತ್ತಿಲ್ಲ ರಾಜಾ, ಒಂದು ದಿನ ರಾತ್ರಿ—ನನಗೊಂದು ಕನಸಾಯಿತು, ಕನ್ಯಾಕುಮಾರಿಯು ನಿಜವಾದ ಸುಂದರ ಕನ್ಯೆಯಾಗಿ ಗರ್ಭಗುಡಿಯಿಂದ ನಡೆದು ಬರುತ್ತಿದ್ದಾಳೆ. ನನ್ನ ಬಳಿ ಬಂದು ತನ್ನ ಅಮೃತ ಹಸ್ತದಿಂದ ನನ್ನ ತಲೆಯನ್ನು ನೇವರಿಸಿ ಮಕ್ಕಳೇ ! ನೀವು ಬಹಳ ಕಷ್ಟವನ್ನು ಅನುಭವಿಸಿದ್ದೀರಿ—ಇಲ್ಲಿ ಬಂದು ನನ್ನನ್ನು ಭಕ್ತಿಯಿಂದ ಆರಾಧಿಸಿದ್ದೀರಿ, ನನ್ನನ್ನು ನಂಬಿದವರನ್ನು ಕಾಪಾಡುತ್ತೇನೆ. ಪುಟ್ಟ ಬಾಲೆ ನೀನೆಷ್ಟು ಕಷ್ಟವನ್ನು ಅನುಭವಿಸಿದೆ ? ಇನ್ನು ನೀನು ನಾನು ಹೇಳಿದಂತೆ ನಡೆದುಕೋ ನಿನ್ನಲ್ಲಿ ನನ್ನ ಅಂಶವನ್ನು ಇಡುತ್ತೇನೆ. ನೀನೇ ರಾಜರಾಜೇಶ್ವರಿ ದೇವಿ ! ಭಾರತದ ಉತ್ತರದಲ್ಲಿ ಪರಶುರಾಮ ಕ್ಷೇತ್ರವಿದೆ. ಅಲ್ಲಿ ಹೋಗಿ ನೆಲೆಸು. ನಿನಗೆ ಸಕಲೈಶ್ವರ್ಯವೂ ಬರುತ್ತದೆ ಬಡವರಿಗೂ ಲೋಕಕ್ಕೂ ಉಪಕಾರ ಮಾಡು,, ಎಂದು ದೇವಿ ನನ್ನೊಂದಿಗೆ ಮಾತನಾಡಿದಳು.

ಬೆಳಗ್ಗೆ ಎದ್ದಕೂಡಲೇ ರಾತ್ರಿ ಬಿದ್ದ ಕನಸನ್ನು ನೆನೆಸಿಕೊಂಡು ಕನ್ಯಾಕುಮಾರಿ ದೇವಿಯ ಬಳಿ ಓಡಿದೆ ತಾಯೀ! ನೆನ್ನೆಯ ಕನಸು ನಿಜವೇ? ನೀನು ಹೇಳಿದಂತೆ ಎಲ್ಲಾ ನಿಜವಾಗುತ್ತದೆಯೇ ? ಎಂದು ಮುಗ್ಧಳಾಗಿ ಅವಳನ್ನು ಕೇಳುತ್ತಾ ಕೈಮುಗಿದು ನಿಂತಿದ್ದೆ. ನಮ್ಮ ಅಣ್ಣ ನನ್ನನ್ನು ಹುಡುಕುತ್ತಾ ಬಂದ. ಅವನು ಆಶ್ಚರ್ಯದಿಂದ ಲಕ್ಷ್ಮೀ ಏಕಮ್ಮ ! ಎದ್ದು ಬಂದು ಬಿಟ್ಟೆ ? ಬೆಳಕು ಹರಿಯುವ ಮೊದಲೇ ? ನನ್ನ ಕನಸಿನ ವಿಚಾರ

ಎನ್ನು ಹೇಳಿ ಅವನನ್ನು ಅಪ್ಪಿಕೊಂಡೆ ಸಂತೋಷದಿಂದ– ಅವನಿಗೆ ರೋಮಾಂಚನವಾಯಿತು. ಏನು ಆಶ್ಚರ್ಯ ? ನನಗೂ ಕನಸು ಬಿತ್ತು. ಅದರಲ್ಲಿ ದೇವಿಯು ಮಾತಾಡಿದಳು ಮಗೂ ಇನ್ನು ನಿನಗೆ ಕಷ್ಟ ಕಳೆಯಿತು. ನಿನ್ನ ತಂಗಿಯೇ–ರಾಜರಾಜೇಶ್ವರಿ ದೇವಿ. ಅವಳ ಸೇವೆ ಮಾಡುತ್ತಾ ಅವಳನ್ನು ಕಾಪಾಡು ನೀನು ಇನ್ನು ಮೇಲೆ ದೀನದಯಾಳುಶರ್ಮ ಎಂದು ದೇವಿ ಹೇಳಿದಳು,

ಹೀಗೆ ನಾವು ಮಾತಾಡುತ್ತಿದ್ದಂತೆಯೇ ಸೂರ್ಯ ಕಿರಣ ಪೂರ್ವದಿಂದ ಪಸರಿಸಿತು, ನನ್ನ ಮುಖ ಅಪೂರ್ವ ಕಳೆಯಿಂದ ಕೂಡಿದೆಯೆಂದು ಮಮತಾ ಹೇಳುತ್ತಾ, ಹೌದು ನೀನು ದೇವಿಯೇ ದೇವಿ–ದೇವಿ ಎಂದು ಬಿಕ್ಕುತ್ತಾ ನನ್ನ ಕಾಲ ಬಳಿ ತಲೆಯಿಟ್ಟು ನಮಸ್ಕರಿಸಿದಳು.

ನೋಡು ರಾಜಾ ! ದೇವಿಯ ಅನುಗ್ರಹ ಈ ರೀತಿ ಆಯಿತು ನಮ್ಮ ಚಿಕ್ಕಮ್ಮ ನಮ್ಮನ್ನು ಕೊಲ್ಲಲು ಕಳತಂದಿದ್ದು ಒಳ್ಳೆಯದೇ ಆಯಿತಲ್ಲವೇ ? ಇಲ್ಲದಿದ್ದರೆ ನಮ್ಮ ಜೀವಮಾನ ಪೂರ್ತಾ ಅವಳ ಹಿಂಸೆಯಿಂದ ಬಾಳ ಬೇಕಾಗಿತ್ತು ನಾವು ಸತ್ತೇ ಹೋಗಿದ್ದೇವೆಂದು ಅಂಜಿದಳು.

ರಾಜಾ ಈಗ ತಿಳಿಯಿತೇ ! ಮಾಡಿದ್ದುಣ್ಣೋ ಮಹರಾಯಾ! ಎಂದು ನಾನು ಮನೆಯ ಮುಂದೆ ಕಾರು ನಿಲ್ಲಿಸಿ ಮನೆಯೊಳಗೆ ಹೋಗಿದ್ದೆನಲ್ಲಾ! ಅದೇ ನಮ್ಮ ತಂದೆ ಮನೆ ಭಿಕಾರಿಯಂತೆ ಬಂದಳಲ್ಲಾ ! ಅವಳೇ ನಮ್ಮ ಚಿಕ್ಕಮ್ಮ. ಖಾಯಿಲಿ ಮಲಗಿದ್ದವರು ನಮ್ಮ ಚಿಕ್ಕಪ್ಪ. ನೋಡಿ ನನಗೆ ದುಃಖವಾಯಿತು ನಿರ್ಗತಿಕರಾಗಿದ್ದಾರೆ. ಹೋಗಲಿ ಪಾಪ ! ಎಂದು ತಟ್ಟೆಯಲ್ಲಿ ಹಣ ಕೊಟ್ಟಿದ್ದು ನೋಡಿದೆಯಲ್ಲಾ,

ಸುಮ್ಮನೇ ಕೇಳುತ್ತಿದ್ದ ಕಾಳೀಪ್ರಸಾದ ಈ ಮಾತನ್ನು ಕೇಳಿದ್ದೇ ಕೋಪಾವಿಷ್ಟನಾದ–ದೇವಿಯ ಭುಜವನ್ನು ಹಿಡಿದಲುಗಿಸಿ ಸಿರೀ ! ಈಗ ಈ ಮಾತು ಹೇಳುತ್ತಿದ್ದೀಯಾ ? ನೀನು ಆ ಮನೆಯಲ್ಲಿಯೇ ಅವಳು ನಿನ್ನ ಚಿಕ್ಕಮ್ಮನೆಂದು ಹೇಳಬೇಕಾಗಿತ್ತು, ಅವಳನ್ನು ಹಾಗೆಯೇ ಹೊಸಕಿ ಹಾಕಿಬಿಡುತ್ತಿದ್ದೆ.

ರಾಜಾ : ಶಾಂತನಾಗು,, ಈಗೇಕೆ ಅವರ ಮೇಲೆ ಸೇಡು ? ನಾವು ಯಾರೆಂದೇ ಅವರಿಗೆ ತಿಳಿಯದು, ದೇವಿಯ ಆಜ್ಞೆ–ಎಲ್ಲರಿಗೂ ಉಪಕಾರ ಮಾಡಬೇಕು.

ದೇವಿಯ ಈ ಘನತೆಗೆ ಕಾಳೀಪ್ರಸಾದ ಮರುಳಾದ. ಸಿರೀ ನೀನು ಅಪಾರ ಮಹಿಮಳು, ಖಂಡಿತ ನಿನ್ನಲ್ಲಿ ದೇವಿಯ ಶಕ್ತಿಯಿದೆ. ನೀನು ಬಹಳ ಎತ್ತರದಲ್ಲಿದ್ದೀಯೆ, ನಿನ್ನನ್ನು ಪಡೆಯುವ ಯೋಗ್ಯತೆ ನನಗಿಲ್ಲ ನಿನ್ನಲ್ಲಿ ಅಲ್ಪನಾಗಿ ನಡೆದುಕೊಂಡೆ, ನನ್ನನ್ನು ಕ್ಷಮಿಸು ಎಂದು ಕೈಮುಗಿದ.

ದೇವಿ ಇನ್ನೂ ಅವನ ಹತ್ತಿರ ಸರಿದು ಪ್ರೀತಿಯಿಂದ ಅವನ ಕೈಹಿಡಿದು ರಾಜಾ ಏಕೆ ಹೀಗೆಲ್ಲಾ ಹೇಳುತ್ತೀ ? ತಪ್ಪು ಮಾಡದ ಮಾನವನೇ ಇಲ್ಲ. ಅದನ್ನು ತಿದ್ದಿಕೊಂಡು ನಡೆಯುವವನೇ ಮಾನವಶ್ರೇಷ್ಠ. ನೀನೂ ಸಹ ನಿನ್ನ ಕ್ರೂರತನವನ್ನು ಬಿಟ್ಟು ಪರಿವರ್ತನೆಯಾಗಿದ್ದೀ, ಇರಲಿ. ಬಾ. ಬಾ, ಒಂದು ಸಲ ಶ್ರೀರಂಗಪಟ್ಟಣ ಸುತ್ತಿ ಹೋಗೋಣ,

ಸಿರೀ ಪೂರ್ತಿ ಹೇಳು ನಿನಗೆ ಹೇಗೆ ಇಷ್ಟು ಐಶ್ವರ್ಯ ಬಂತು ಕನ್ಯಾಕುಮಾರಿಯಿಂದ ಎಲ್ಲಿಗೆ ಹೋದಿರಿ ?

ರಾಜಾ ! ನಾವು ದೇವಿಯ ಅಪ್ಪಣೆಯಂತೆ ಭಾರತದ ಉತ್ತರದ ಕಡೆ ಹೊರಡುವ ರೈಲಿನಲ್ಲಿ ಕುಳಿತು ಹೊರಟು ಬಿಟ್ಟೆವು ಉತ್ತರ ಭಾರತದ ಮಧ್ಯಪ್ರದೇಶಕ್ಕೆ ಬಂದಾಗ ರೈಲಿನಿಂದ ಇಳಿದು ಅನೇಕರನ್ನು ಕೇಳಿಕೊಂಡು ಅದೇ ಸಿಂಧೂಪೂರ್‌ಗೆ ಬಂದೆವು. ಇದೇ ಪರಶುರಾಮ ಕ್ಷೇತ್ರ ಇಲ್ಲಿ ಪರಶುರಾಮ ಬೆಟ್ಟವಿದೆ ಎಂದರು. ಮನೆ ಮಠವಿಲ್ಲದ ನಾವು ಒಂದು ದೇವಸ್ಥಾನದ ಪ್ರಾಕಾರದಲ್ಲಿ ಕನ್ಯಾಕುಮಾರಿ ದೇವಿಯ ಪ್ರತಿಮೆಯನ್ನಿಟ್ಟು-ಕೊಂಡು ಭಕ್ತಿಯಿಂದ ಪೂಜೆ ಮಾಡುತ್ತಿದ್ದೆವು ನಾನು ಆಗಿನ್ನೂ 10 ವರ್ಷದ ಬಾಲೆ. ನಮ್ಮ ಅಣ್ಣನಿಗೆ 12 ವರ್ಷ ಅಲ್ಲಿಗೆ ಬಂದ ಭಕ್ತಾದಿಗಳು ನಾನು ಪೂಜೆ ಮಾಡಿದ ಕುಂಕುಮ ಪ್ರಸಾದವನ್ನು ಕೇಳುತ್ತಿದ್ದರು ರಾಜಾ ! ಆ ದೇವಿಯ ಮಹಿಮೆ ಸುಳ್ಳಾಗಲಿಲ್ಲ. ದಿನ ದಿನಕ್ಕೆ ಭಕ್ತಾದಿ-ಗಳು ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಅವರು ಬೇಡಿದ್ದು ನಡೆಯುತ್ತಿತ್ತು. ಹೀಗೆಯೇ ಅಪಾರ ಐಶ್ವರ್ಯ ಬಂತು ರಾಜೇಶ್ವರಿ ಭವನ ನಿರ್ಮಾಣ

ವಾಯಿತು. ಇಷ್ಟಕ್ಕೂ ನನ್ನ ಜೊತೆಯಲ್ಲಿಯೇ ಇದ್ದು ನನ್ನನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ನೋಡಿಕೊಂಡು ರಕ್ಷಣೆ ಮಾಡುತ್ತಿರುವ ಆ ಧರ್ಮ ದರ್ಶಿಗಳು ಯಾರೆಂದು ತಿಳಿದೆ ರಾಜಾ ! ಅವರೇ ನಮ್ಮ ಅಣ್ಣ-ದೇವಿಯು ಅಪ್ಪಣೆಕೊಟ್ಟಂತೆ ದೀನದಯಾಳು ಶರ್ಮ

ಕೇಳುತ್ತಿದ್ದಂತೆಯೇ ಕಾಳೀಪ್ರಸಾದ ಆಶ್ಚರ್ಯ ಚಕಿತನಾದ...ದೇವಿ ....ನೀವು ನಿಜವಾಗಿಯೂ ಮಹಾ ಪುರುಷರು ನನ್ನನ್ನು ಕ್ಷಮಿಸು–

ಕಾಳೀಪ್ರಸಾದ ಪೂರ್ತಿ ಪರಿವರ್ತನೆಯಾಗಿ ಬಿಟ್ಟಿದ್ದ. ಹಿಂದಿನ ಡಕಾಯಿತಿ ಜೀವನ ನೆನೆಸಿಕೊಂಡ ಕೂಡಲೇ ಗಡ ಗಡನೆ ನಡುಗುತ್ತಿದ್ದ. ಇಂಥಾ ದೇವಿಯ ಪ್ರೀತಿ ನನಗೆ ದೊರಕಬೇಕಾದರೆ ಅದೂ ನಾನು ಪೂಜಿಸುತ್ತಿದ್ದ ನಮ್ಮ ದೇವಿ ಕಾಳಿಯ ಅನುಗ್ರಹವೇ,, ಎಂದುಕೊಂಡ,

ಊರಿಗೆ ಬಂದಕೂಡಲೇ ಅಜ್ಜೀ, ನಾಳೆಯೇ ಈ ನಮ್ಮ ಮನೆಗೆ ಸುಣ್ಣ ಬಣ್ಣ ಮಾಡಿಸಬೇಕು, ಅಜ್ಜೀ ನಾಳೆ ಈ ಬಾಗಿಲೆಲ್ಲಾ ತೆಗೆದು ಬಿಡು ಎಂದು ಖುಷಿಯಿಂದ ಹೇಳುತ್ತಲೇ ಬಂದ ಕಾಳೀಪ್ರಸಾದ.

ಅಜ್ಜಿಗೆ ಅವನನ್ನು ನೋಡಿದ ಕೂಡಲೇ ಕೋಪ ವಿಪರೀತ ಬಂದು ಬಿಟ್ಟಿತು ಅಯ್ಯೋ ! ಪಾಪಿ ಇಷ್ಟು ದಿವಸ ಎಲ್ಲಿ ಹಾಳಾಗಿ ಹೋಗಿ–ದ್ದೆಯೋ ? ಹಾಗೆಯೇ ನೀನು ಬರದೇ ಹೋಗಿದ್ದರೇ ಚೆನ್ನಾಗಿತ್ತು,,

ಅಜ್ಜೀ ...ಅಜ್ಜೀ ಹೀಗೆಲ್ಲಾ ಏಕೆ ಶಾಪ ಹಾಕುತ್ತೀ ? ನೀನು ಮಾತ್ರ ನನ್ನನ್ನು ಬೈಯ್ಯಬೇಡ,, ನಿನಗೆ ಏನು ಸಾಮಾನು ಬೇಕು ಹೇಳು ಈಗ ತಂದು ಹಾಕ್ತೀನಿ,

ಸಾಮಾನಿನ ಮನೆ ಹಾಳಾಯ್ತು, ನೀನು ಹೋಗಿ ಒಂದು ವಾರ ವಾಯ್ತು ಅಷ್ಟರಲ್ಲಿ ಏನೇನು ಅನಾಹುತವಾಗಿದೆ ಎಂದು ನಿನಗೇನು ಗೊತ್ತು?

ಗಾಬರಿಯಿಂದ ಏನಾಯ್ತು ಅಜ್ಜೀ ಹೇಳು ಎಂದ.

ನೀನು ಇಲ್ಲಿ ಬಂದು ಸೇರಿದ್ದೇ ನನಗೆ ಗ್ರಹಚಾರ....ಈ ಊರಿನ ಮುಖಂಡರೆಲ್ಲಾ ಸೇರಿ ನಿಜಾಮರಿಗೆ ಕಾಗದ ಬರೆದು, ಜಹಗೀರ್‌ದಾರರ ಮನೆಗೆ ಯಾವನೋ ಮೋಸಗಾರ ಯುವಕ ಬಂದು ಸೇರಿಕೊಂಡಿದ್ದಾನೆ

ಅವನೇ ಅಧಿಕಾರಿಯಂತೆ ನಮ್ಮನ್ನು ದಬಾಯಿಸುತ್ತಾನೆ, ತಾವು ನೇರ ಬಂದು ವಿಚಾರಿಸಬೇಕು,, ಎಂದು ಬರೆದಿದ್ದರಂತೆ–ಇನ್ನು ಒಂದು ವಾರ ದಲ್ಲಿ ನಿಜಾಮರು ನೇರ ಬರುತ್ತಾರಂತೆ. ಈ ಮನೆಯನ್ನೂ ಅವರ ವಶಕ್ಕೆ ತೆಗೆದುಕೊಂಡು ಆ ಯುವಕನನ್ನೂ ಸೆರೆ ಹಿಡಿದುಕೊಂಡು ಹೋಗುತ್ತಾರೆ, ಅಜ್ಜೀ, ನೀನೂ ಈ ಮನೆ ಬಿಟ್ಟು ಹೋಗಬೇಕಾಗುತ್ತೆ., ಎಂದು ಮೊನ್ನೆ ಊರಿನ ಮುಖಂಡ ಬಂದು ಹೇಳಿ ಹೋದ ಕಣೋ . ಇನ್ನೇನು ಗತಿ,, ಎಂದು ಅಜ್ಜಿ ಗೋಳೋ ಎಂದು ಅತ್ತಳು.

ಕಾಳೀಪ್ರಸಾದ ಗಹ–ಗಹಿಸಿ ನಗುತ್ತಾ,, ಇಷ್ಟೇ ತಾನೇ ನೀನು ಅಳಬೇಡ ಎಲ್ಲಾ ಒಳ್ಳೆಯದಕ್ಕೆ, ನಿಜಾಮರು ಬರುವುದು ಒಳ್ಳೆಯದೇ ಆಯಿತು,, ಅಂದ.

ನಮ್ಮ ಜಹಗೀರ್‌ದಾರರ ವಂಶ ಅಧಿಕಾರ ಎಲ್ಲಾ ಹಾಳಾಗಿ ಹೋಯಿತು. ಉಳಿದಿರುವುದು ಇದೊಂದು ಮನೆ ಅದನ್ನೂ ಕಿತ್ತುಕೊಳ್ಳು- ತ್ತಾರಂತೆ "ಎಲ್ಲಾ ನನ್ನ ಗ್ರಹಚಾರ" ಎಂದು ಅಜ್ಜಿ ಅವನ ಮುಖ ವನ್ನೂ ನೋಡದೆ ಒಳಕ್ಕೆ ಹೊರಟು ಹೋದಳು.

ಕಾಳೀಪ್ರಸಾದ ಅಜ್ಜಿಯ ಹಿಂದೆಯೇ ಹೋದ. ಅಜ್ಜೀ ಇಲ್ಲಿ ಬಾ: ನೀನು ಈ ಕುರ್ಚಿ ಮೇಲೆ ಕುಳಿತುಕೋ,, ನಿಧಾನವಾಗಿ ನಾನು ಹೇಳುವು ದನ್ನು ಕೇಳಿಸಿಕೋ ನಿನ್ನ ತಮ್ಮ ಪ್ರಮೋದ ಪಾಟೀಲನ ಮಗು ಸತ್ತಿಲ್ಲ ಬದುಕಿ ದೊಡ್ಡವನಾಗಿದ್ದಾನೆ,, ಎಂದು ನಾನು ಪದೇ ಪದೇ ನಿನಗೆ ಹೇಳುತ್ತಿದ್ದೆನಲ್ಲವೇ, ಅಜ್ಜೀ ! ಅವನೇ ಈಗ ಈ ಜಹಗೀರ್‌ದಾರರ ಮನೆಯ ಆಡಳಿತವನ್ನು ವಹಿಸಿಕೊಳ್ಳುತ್ತಾನೆ.

ಅಜ್ಜಿಗೆ ಗಾಬರಿ, ಸ ೦ ತೋ ೯ ಷ ಎರಡೂ ಆಗಿ ಏನೋ ನೀನು ಹೇಳುವುದು ನಿಜವೇನೋ ಕುಮಾರಾ ? ಎಲ್ಲಿ ಅವನು ?

ಅಜ್ಜೀ ಜಹಗೀರ್‌ದಾರರ ಮನೆಯ ಪೈಕಿ ನೀನೊಬ್ಬಳು ಉಳಿದಿದ್ದೀ! ನೀನು ತಿಳಿದಿದ್ದನ್ನು ಹೇಳಿದರೆ ಸಾಕು,

ಅದೇನೋ ಒಗಟಿನಂತೆ ಮಾತನಾಡುತ್ತೀ... ನಮ್ಮ ವಂಶದ ಚರಿತ್ರೆ ಯನ್ನೆಲ್ಲಾ ನಿನಗೆ ಹೇಳಿದೆನಲ್ಲಾ ! ಅದರಿಂದ ಏನು ಪ್ರಯೋಜನ ?

ಅಜ್ಜೀ ಅದರಿಂದಲೇ ಪ್ರಯೋಜನವಾಯಿತು "ನೀನು ಏನು ಹೇಳಿದೆ ? ನಿನ್ನ ತಮ್ಮ, ತಮ್ಮನ ಹೆಂಡತಿ ಕೊಲೆಯಾದ ದಿನ ಮಗುವನ್ನೂ ಎತ್ತಿಕೊಂಡು ಹೋಗಿ ಏನು ಮಾಡಿಬಿಟ್ಟರೋ ? ಎಂದೆಯಲ್ಲವೆ" ನಿನ್ನ ತಮ್ಮನ ಹೆಂಡತಿ ಸಾಯುವ ಸಮಯದಲ್ಲಿ ಆ ದರೋಡೆಕೋರರನ ಕಾಲು ಹಿಡಿದು ಅಣ್ಣಾ ! ಮಗುವನ್ನು ಕೊಲ್ಲಬೇಡ–ಸಾಕು.. ಎಂದು ಹೇಳಿ ಪ್ರಾಣ ಬಿಟ್ಟಳಂತೆ. ಅವನೇ ಆ ಮಗುವನ್ನು ಸಾಕಿದ, ಈಗ್ಗೆ 25 ವರ್ಷ ಹಿಂದೆ ತಾನೇ ಈಗ ಆ ಮಗ 25 ವರ್ಷದವನಾಗಿ ಬಂದಿದಾನೆ.

ಎಲ್ಲಿ ! ಎಲ್ಲಿ ? ಕುಮಾರಾ ಅವನು ? ಕರಿ.... ನೋಡಬೇಕು.

ಅಜ್ಜೀ ನೋಡಿದರೆ, ನೀನು ಅವನ ಗುರುತನ್ನು ಹೇಗೆ ಹಿಡಿಯುತ್ತೀ ? ಅವನೇ ಎಂದು ?

ನನಗೆ ಗೊತ್ತಾಗುತ್ತೆ ಕಣೋ ಆ ಮಗುವಿಗೆ ಬೆನ್ನಿನ ಮೇಲೆ ನಮ್ಮ ದೇವರು ಪರಶುರಾಮರ ಕೊಡಲಿ ಮಚ್ಚೆ ಇದೆ. ಅದು ಎಂದೂ ಅಳಿಸಿ ಹೋಗುವುದಿಲ್ಲ. ಅವನನ್ನು ಕರೆದು ಕೊಂಡು ಬಾ,, ನಾನು ಗುರುತಿಸುತ್ತೇನೆ–

ಕಾಳೀಪ್ರಸಾದ ಬಾ ನೋಡು ಅಜ್ಜೀ ಎಂದು ತನ್ನ ಮೇಲಂಗಿಯನ್ನು ಬಿಚ್ಚಿ ತೆರೆದ ಬೆನ್ನಿನ ಭಾಗವನ್ನು ಅಜ್ಜಿಗೆ ತೋರಿಸಿದ.... ಆಶ್ಚರ್ಯ ಅವನ ಬೆನ್ನಿನ ಮೇಲೆ ಕೊಡಲಿ ಆಕಾರದ ಕಪ್ಪು ಮಚ್ಚೆ ಚೆನ್ನಾಗಿ ಕಾಣುತ್ತಿತ್ತು, ಅಜ್ಜಿ ಅವನ ಬೆನ್ನು ಸವರಿ–ಸವರಿ ನೋಡಿದಳು.

ಅಯ್ಯೋ ; ನನ್ನ ಕಂದಾ : ನೀನು ನನ್ನನ್ನು ಎಷ್ಟು ಪ್ರೀತಿ ಮಾಡಿದರೂ ನಾನು ಅರ್ಥಮಾಡಿಕೊಳ್ಳಲಿಲ್ಲ ಮೋಸ ಹೋದೆ ; ದೇವರ ದಯೆ,, ನಮ್ಮ ವಂಶ ಬೆಳಗಿತು ಎಂದು ಸಂತೋಷ ಭರದಲ್ಲಿ ಅವನನ್ನು ಅಪ್ಪಿ ಮುದ್ದಾಡಿದಳು.

ಅಷ್ಟೇ ಅಲ್ಲ ಅಜ್ಜೀ....ಮಗುವಿನ ನಾಮಕರಣದ ದಿನ ನಮ್ಮ ವಂಶದ ಹೆಸರಿನ ಪರಶುರಾಮ ಫಲಕವನ್ನು ನೀವು ಹಾಕಿದ್ದು.. ಇದೋ ನೋಡು ಈಗಲೂ ನನ್ನ ಕೊರಳಿನಲ್ಲಿದೆ ನನ್ನನ್ನು ಸಾಕಿದ ತಂದೆ ಇದನ್ನು ಜೋಪಾನವಾಗಿಟ್ಟುಕೋ ಇದೇ ನಿನಗೆ ರಕ್ಷೆ .. ಎಂದು ನಾನು ದೊಡ್ಡವ

ನಾದ ಮೇಲೂ ಹೇಳುತ್ತಿದ್ದ. ನೋಡು ಅಜ್ಜೀ ಫಲಕ....ಇದರಲ್ಲಿ ಧರ್ಮಪಾಲ ಪಾಟೀಲ್ ಎಂದು ಹೆಸರಿದೆ ನೋಡು. ಮತ್ತು ಜಹಗೀರ್‌-ದಾರರ ಮುದ್ರೆಯೂ ಇದೆ.. ಅಜ್ಜಿಗೆ ಇನ್ನು ಯಾವ ವಿಧ ಸಂದೇಹವೂ ಉಳಿಯಲಿಲ್ಲ. ಕಂದಾ ನೀನು ಧರ್ಮಪಾಲನಾಗಿ ನೂರು ವರ್ಷ ಬಾಳು. ಇನ್ನು ನಿಜಾಮರು ಬರಲಿ,, ನಮ್ಮ ವಂಶದ ಜಹಗೀರ್ ಅಧಿಕಾರ ನಿನಗೇ ಬರುತ್ತೆ.

ಸರಿ ಅಜ್ಜೀ ಇನ್ನು ನೀನು ನೆಮ್ಮದಿಯಾಗಿರು, ನಾನೆಲ್ಲಾ ಏರ್ಪಾಡು ಮಾಡುತ್ತೇನೆ. ಮೊದಲು ಈ ಮನೆಗೆ ಸುಣ್ಣ ಬಣ್ಣ ಮಾಡಿ ಅದ್ಧೂರಿ-ಯಾಗಿ ಅಲಂಕರಿಸಬೇಕು.

ಸರಿಯಪ್ಪಾ, ಇನ್ನು ನೀನು ಏನು ಬೇಕಾದರೂ ಮಾಡು, ನಾನು ಅಡ್ಡಿ ಮಾಡುವುದಿಲ್ಲ.

ಅಜ್ಜೀ ನಾನು ಹುಟ್ಟಿದ ಮನೆಯನ್ನು ಕಂಡು ಹಿಡಿಯಲು ಎಷ್ಟು ಕಷ್ಟ ಪಟ್ಟೆ ಗೊತ್ತಾ ?

ಹೇಗೆ ಬಂದ್ಯೋ ಕಂದಾ! ಇದೇ ಮನೆ ಅಂತ ಹೇಗೆ ಗೊತ್ತಾಯಿತು?

ಅದೇ ಅಜ್ಜೀ ನನ್ನನ್ನು ತೆಗೆದುಕೊಂಡು ಹೋಗಿ ಸಾಕಿದ ಅಪ್ಪ ದರೋಡೆಕೋರನಾದರೂ ತುಂಬಾ ಒಳ್ಳೆಯವನು, ನನ್ನನ್ನು ತನ್ನ ಮಗನಂತೆಯೇ ಪ್ರೀತಿಯಿಂದ ಸಾಕಿದ, ಅವನು ಸಂಪಾದಿಸಿದ ಸಕಲ ಐಶ್ವರ್ಯವನ್ನೂ ನನಗೇ ಕೊಟ್ಟ, ಕಡೆಗೆ ಒಂದು ದಿನ ನನ್ನ ಜನ್ಮ ರಹಸ್ಯವನ್ನು ಹೇಳಿ, ಈ ಊರಿನ ಹೆಸರನ್ನು ಮಾತ್ರ ಹೇಳಿದ, ಕಡೆಗೆ ಕಾಳೀಪ್ರಸಾದ ನಿನಗೆ ಇಷ್ಟ ಬಂದ ರೀತಿಯಲ್ಲಿ ಬದುಕು—ಎಂದು ಹೇಳಿ ಬಿಟ್ಟು ಎತ್ತರದ ಬಂಡೆಯಿಂದ ನದಿಯಲ್ಲಿ ಬಿದ್ದು ಪ್ರಾಣ ಬಿಟ್ಟ. ಅಜ್ಜೀ ನನ್ನನ್ನು 25 ವರ್ಷ ಪ್ರೀತಿಯಿಂದ ಸಾಕಿದ ಆ ತಂದೆಯನ್ನು ಹೇಗೆ ಮರೆಯಲಿ ಅಜ್ಜೀ,, ಎಂದು ಮುಖಕ್ಕೆ ಎರಡೂ ಕೈ ಮುಚ್ಚಿ ಬಿಕ್ಕಿ-ಬಿಕ್ಕಿ ಅತ್ತ.

ಅಯ್ಯೋ ! ಕುಮಾರಾ ! ಅವನು ನಿಜವಾಗಿಯೂ ನಮ್ಮ ಭಾಗದ ದೇವರಪ್ಪಾ ! ಹೀಗೆ—ನಾನು ದರೋಡೆಕೋರರ ಮಧ್ಯೆ ಬೆಳೆದೆ, ಆದರೆ ಇಲ್ಲಿಗೆ ಬಂದು ನಿನ್ನಿಂದ ಈ ಮನೆಯ ವಿಷಯವೆಲ್ಲಾ ತಿಳಿದ ಮೇಲೆ

ಅಯ್ಯೋ ! ಇಂತಹ ಉತ್ತಮ ಸಂಸ್ಕೃತಿಯ ಮನೆಯಲ್ಲಿ ಹುಟ್ಟಿ ದರೋಡೆಕೋರನಾದೆನೇ ! ಎಂದು ಬಹಳ ಸಂಕಟಪಟ್ಟೆ. ಹಾಗೆ ಕ್ರೂರಿಯಾಗಿ ಬೆಳೆದವನು–ಇಷ್ಟು ಒಳ್ಳೆಯವನಾಗಿ ಪರಿವರ್ತನೆಯಾಗಿದ್ದು ನಿನ್ನ ಪ್ರೀತಿಯಿಂದ ಅಜ್ಜೀ.

ಅಬ್ಬ ! ಪರಶುರಾಮ ದೇವರ ಸತ್ಯ ಅಪಾರ, ಪರಶುರಾಮ ಫಲಕವೇ ನಮ್ಮ ಮನೆಯ ನಿಶಾನೆ–

ಅಜ್ಜೀ ! ನಿನಗೆ ಇನ್ನೂ ಒಂದು ಸಂತೋಷದ ವಿಷಯವನ್ನು ಹೇಳುತ್ತೇನೆ ಈ ಊರಿನಲ್ಲಿ ದೇವಿ,, ಎಂದು ಜನರೆಲ್ಲಾ ಕೊಂಡಾಡು– ತ್ತಾರಲ್ಲಾ ! ಅಜ್ಜೀ ! ಅವಳು ನಿಜವಾಗಿ ರಾಜರಾಜೇಶ್ವರೀ ದೇವಿಯೇ- ಅವಳನ್ನೇ ನಾನು, ಸಿರಿ ಎಂದು ಹೇಳಿದ್ದು, ಅವಳು ನನ್ನನ್ನು ತುಂಬಾ ಪ್ರೀತಿಸುತ್ತಾಳೆ. ಅವಳೇ ಆ, ಸಿರಿಯೇ ಈ ಮನೆಗೆ ಸೊಸೆಯಾಗಿ ಬರು ತ್ತಾಳೆ, ನಿನ್ನ ಆಶೀರ್ವಾದ ಇದ್ದರೆ ಅವಳನ್ನೇ ಮದುವೆಯಾಗುತ್ತೇನೆ.

ಅಬ್ಬ ! ಇದೇನು ಪವಾಡ ? ಕುಮಾರಾ ! ನಾನು ಇಷ್ಟು ಸಂತೋಷವನ್ನು ತಡೆಯಲಾರೆ....ಆ ಪರಶುರಾಮದೇವರನ್ನು ಹೇಗೆ ಕೊಂಡಾಡಲೀ ? ಎಂದು ಭಕ್ತಿಯಿಂದ ಕಣ್ಮುಚ್ಚಿ ಕುಳಿತುಬಿಟ್ಟಳು.

ಊರಿನಲ್ಲೆಲ್ಲಾ ಹೈದರಾಬಾದಿನಿಂದ ನಿಜಾಮರು ಬರುತ್ತಾರೆ ಜಹಗೀರ್‌ದಾರರ ಮನೆಯ ವಿಚಾರವಾಗಿ ತನಿಖೆ ಮಾಡುತ್ತಾರೆ,, ಎಂದು ಸಮಾಚಾರ ಹರಡಿತು, ಕಾಳೀಪ್ರಸಾದ ಜಹಗೀರ್‌ದಾರರ ಮನೆಯನ್ನು ಸುಣ್ಣ ಬಣ್ಣ ದೀಪಾಲಂಕಾರಗಳಿಂದ ಅರಮನೆಯಂತೆ ಅಲಂಕರಿಸಿದ. ಜಹಗೀರ್‌ದಾರರು ದರ್ಬಾರಿಗೆ ಕುಳಿತುಕೊಳ್ಳುತ್ತಿದ್ದ ದೊಡ್ಡ ಹಾಲಿನಲ್ಲಿ ಪೀಠೋಪಕರಣಗಳನ್ನೆಲ್ಲಾ ಜೋಡಿಸಿ ಸಿದ್ಧಪಡಿಸಿದ. ಹೈದರಾಬಾದಿನ ನಿಜಾಮರನ್ನು ಜಹಗೀರ್‌ದಾರರ ಮನೆಗೇ ಆಹ್ವಾನಿಸಿರುವುದರಿಂದ ಊರಿನ ಮುಖಂಡರೆಲ್ಲಾ ಜಹಗೀರ್‌ದಾರರ ಮನೆಯಲ್ಲಿಯೇ ಬಂದು ಸೇರಬೇಕೆಂದು ವಿಚಾರ ಪತ್ರಿಕೆ ಪ್ರಕಟಿಸಿ ಹಂಚಿಸಿದ. ಮನೆ ತುಂಬಾ ಆಳು ಕಾಳು ಕೆಲಸಕ್ಕೆ ಸಿದ್ಧವಾದರು, ನಿಜಾಮರು ಬರುವ ದಾರಿಯುದ್ದಕ್ಕೂ ಚಪ್ಪರ ತಳಿರು– ತೋರಣ ದೀಪಾಲಂಕಾರಗಳಿಂದ ಅಲಂಕರಿಸಿ ಸಿದ್ಧಪಡಿಸಿದ. ಈ ಆಡಂಬರ

ವನ್ನೆಲ್ಲಾ ನೋಡಿ ಜನರು ಮೂಗಿನ ಮೇಲೆ ಬೆರಳಿಟ್ಟರು. ಜಹಗೀರ್-ದಾರರ ಮನೆಯ ವೈಭವ ಮತ್ತೆ ಶುರುವಾಗಿರುವಂತಿದೆಯಲ್ಲಾ ಎಂದು ಆಶ್ಚರ್ಯ ಪಟ್ಟರು.

ಇದೆಲ್ಲಾ ಸಿದ್ಧತೆ ಕಾರ್ಯದಲ್ಲಿಯೂ ದೇವಿಯನ್ನು ನೋಡದೆ ಇರಲಾರ ಒಂದು ದಿನ ತಡವಾಗಿ ಹೋದರೆ ದೇವಿಗೆ ಕೋಪ ; ಅವನನ್ನು ಕಂಡಿದ್ದೇ - ದೇವಿ ರಾಜಾ ನಮ್ಮ ಮನೆಯಲ್ಲಿ ಕಂಬಗಳಿವೆ. ತಾಳು ನಿನ್ನನ್ನು ಕಂಬಕ್ಕೆ ಕಟ್ಟಿಹಾಕಿ ಬಿಡುತ್ತೇನೆ. ಆಗ ಎಲ್ಲಿಯೂ ಹೋಗಲಾರೆ. ಎಂದು ಹುಸಿ ಮುನಿಸಿನಿಂದ ಅವನನ್ನು ಅಪ್ಪಿ ಮುದ್ದಿಸುತ್ತಿದ್ದಳು.

ನನ್ನ ಮುದ್ದು ಸಿರೀ! ತಾಳು ಸ್ವಲ್ಪ, ತಾಳು ನೀನು ನನ್ನ ಜೊತೆಯೇ ಇರಲು ಕಾಲ ಬರುತ್ತಿದೆ. ಈಗ ಹೈದರಾಬಾದ್ ನಿಜಾಮರು ಜಹಗೀರ್-ದಾರರ ಮನೆಯ ಆಡಳಿತವನ್ನು ನೋಡಲು ಬರುತ್ತಾರೆ, ಅದಕ್ಕಾಗಿ ನಾನು ಆ ಮನೆಯ ಸಿದ್ಧತೆಯನ್ನು ಮಾಡುತ್ತಿದ್ದೇನೆ ನನಗೆ ಪುರಸತ್ತೇ ಇಲ್ಲ.

ಏನು ರಾಜಾ! ನೀನು ಹೇಳುವ ಮಾತು! ಜಹಗೀರ್‌ದಾರರ ಮನೆಯ ಆಡಳಿತಕ್ಕೂ ನಿನಗೂ ಏನು ಸಂಬಂಧ?

ಏನು ಸಂಬಂಧ ಎನ್ನುವುದು ಆಮೇಲೆ ತಿಳಿಯಬೇಕಾಗಿದೆ. ನಿಜಾಮರು ಬಂದ ದಿನ ನೀನು ನನ್ನ ಜೊತೆಯಲ್ಲಿ ಬರಬೇಕು, ಅಷ್ಟು ಕೃಪೆ ಮಾಡು ಸಾಕು.

ನಿನಗೆ ತಿಳಿಯಿತಲ್ಲಾ! ರಾಜಾ ; ಎಲ್ಲದಕ್ಕೂ ನಮ್ಮ ಅಣ್ಣನ ಅಪ್ಪಣೆ ಬೇಕು.

ಯಾರ ಅಪ್ಪಣೆಯನ್ನೂ ನಾನು ಕೇಳುವುದಿಲ್ಲ ಬಂದು ನಿನ್ನನ್ನು ಎಳೆದುಕೊಂಡು ಹೋಗುತ್ತೇನೆ

ನಿಜಾಮರು ಬರುವ ದಿನ ಊರಿನ ಜನ ಸಾಲುಗಟ್ಟಿ ನಿಂತಿದ್ದರು ಕಾಳೀಪ್ರಸಾದ ಠಾಕು ಠೀಕಾಗಿ ಬೆಲೆ ಬಾಳುವ ಉಡುಪನ್ನು ಧರಿಸಿ, ತಟ್ಟೆಯಲ್ಲಿ ಹಾರ–ತುರಾಯಿ – ಜರಿಯ ಶಿರಪಾಗು. ನಾಣ್ಯಗಳು, ಇವನ್ನೆಲ್ಲಾ ಇಟ್ಟುಕೊಂಡು ಅವರು ಬರುವ ದಾರಿ ಊರಿನ ಮಧ್ಯಭಾಗ ಚಪ್ಪರದಲ್ಲಿ ಕಾದಿದ್ದ, ಸಿರಿಯೂ ಕೂಡ ಸರ್ವಾಲಂಕಾರ ಭೂಷಿತಳಾಗಿ ಕಾರಿನಲ್ಲಿ ತನ್ನ ರಾಜನ ಜೊತೆ ಸಿದ್ಧವಾಗಿ ಕುಳಿತಿದ್ದಳು,

ನಿಜಾಮರು ತಮ್ಮ ಆಸ್ಥಾನದ ಸಾಮಂತರೊಂದಿಗೆ ಪಹರೆಯ ಸಿಪಾಯಿಗಳು ಅಂಗರಕ್ಷಕರೊಂದಿಗೆ ವಾಹನಗಳಲ್ಲಿ ಬಂದಿಳಿದರು. ಊರಿನ ಮುಖಂಡರೂ ಸಹ ಅಲ್ಲಿ ಬಂದು ಕಾದಿದ್ದರು. ಆದರೆ ಮೊದಲೇ ಕಾಳೀಪ್ರಸಾದ ನಿಜಾಮರಿಗೆ ಹಸ್ತಲಾಘವವನ್ನು ಕೊಟ್ಟು ಹಾರ ಹಾಕಿ ತಟ್ಟೆಯನ್ನು ಅವರ ಕೈಗೆ ಕೊಟ್ಟ. ನಿಜಾಮರು ಈ ಸಿರಿವಂತ ಯಾವ ರಾಜನಿರಬಹುದು,, ಎಂದುಕೊಂಡು-ತಾವು ಯಾರು ? ಎಂದರು.

ನಾನು ಜಹಗೀರ್‌ದಾರ್ ಪ್ರಮೋದ ಪಾಟೀಲರ ಮಗ, ಪರಶುರಾಮ ಪಾಟೀಲರ ಮೊಮ್ಮಗ......ಎಂದ.

ಹಾಂ...ಇದೇನು ನೀವು ಹೇಳುತ್ತಿರುವುದು ಹೊಸದಲ್ಲವೇ ? ಎಂದು ಒಂದು ರೀತಿ ಆಕ್ಷೇಪಿಸುವಂತೆ ಕೇಳಿದರು ನಿಜಾಮರು.

ಕಾಳೀಪ್ರಸಾದ ತುಂಬಾ ವಿನಯದಿಂದ ತಾವೆಂದರು ದಯ-ಮಾಡಿಸಬೇಕು ವಿಚಾರಣೆಯಾಗಲಿ,. ಜಹಗೀರ್‌ದಾರ್ ಪ್ರತಾಪದೇವ್-ಪಾಟೀಲ್‌ರವರ ಮನೆಯಲ್ಲಿಯೇ ಎಲ್ಲಾ ಏರ್ಪಾಡಾಗಿದೆ. ತಾವು ದಯವಿಟ್ಟು ಅಲ್ಲಿಗೆ ದಯಮಾಡಿಸಬೇಕು,

ಊರಿನ ಮುಖಂಡರು ಪಿತೂರಿ ಮಾತನ್ನು ಹೇಳಲು ಕಾದಿದ್ದರು, ಆದರೆ ನಿಜಾಮರು ಎಲ್ಲಾ ಅಲ್ಲಿಗೇ ಬನ್ನಿ ವಿಚಾರಣೆಯಾಗುತ್ತೆ ಅಂದರು. ಈಗಿನ ನಿಜಾಮರು ಅವರ ತಂದೆಯ ಕಾಲದಿಂದಲೂ ಜಹಗೀರ್‌ದಾರರ ಮನೆಯ ವಂಶ ವಹಿವಾಟನ್ನು ತಿಳಿದಿದ್ದರು. ಅವರಂತೆ ಕರವಸೂಲಿಮಾಡಿ ನಿಜಾಮರಿಗೆ ನಿಯತ್ತಿನಿಂದ ತಂದೊಪ್ಪಿಸುತ್ತಿದ್ದರು, ಅಷ್ಟೇ ಧರ್ಮಕಾರ್ಯ ಗಳನ್ನೂ ಮಾಡುತ್ತಿದ್ದರು. ಅವರ ನಂತರ ಜಹಗೀರಿನ ಹಣದ ಬಾಬ್ತು ನಿಂತೇ ಹೋಗಿತ್ತು. ಈಗ ಮತ್ತೆ ಆ ದರ್ಬಾರ್ ಹಾಲಿಗೆ ಬಂದು ಕುಳಿತಾಗ ನಿಜಾಮರಿಗೆ ಅವರನ್ನು ನೆನೆಸಿಕೊಳ್ಳುವಂತಾಯಿತು. ನಿಜಾಮರಿ-ಗಾಗಿ ಪಾನೀಯ ಫಲಾಹಾರಗಳನ್ನು ಯಥೇಚ್ಛವಾಗಿ ನೀಡಿ ಗೌರವಿಸಿದ ಕಾಳೀಪ್ರಸಾದ,

ನೆರೆದ ಸಭೆಯಲ್ಲಿ ನಿಜಾಮರು ಯುವಕರೇ ! ನೀವು ಜಹಗೀರ್‌ದಾರರ ಮನೆಯಲ್ಲಿ ಬಂದು ಸೇರಿಕೊಂಡು ಮೋಸಮಾಡುತ್ತಿದ್ದೀರಿ ಎಂದು ಈ

ಊರಿನ ಮುಖಂಡರಿಂದ ನಮಗೆ ದೂರು ಬಂದಿದೆ ! ನೀವು ಯಾರು ? ನಿಜ ತಿಳಿಯಬೇಕಾಗಿದೆ.

ಖಾವಂದರು ಪರಿಶೀಲಿಸಬೇಕು. ನಾನು ಜಹಗೀರ್‌ದಾರರ ಮೊಮ್ಮಗ ನಾಮಕರಣದ ದಿನ ಕೊಲೆಯಾದ ಪ್ರಮೋದ್‌ಪಾಟೀಲರ ಮಗ,

ಮಗುವೂ ಕೊಲೆಯಾಗಿಹೋಯಿತು ಎಂದು ನಮಗೆ ಪತ್ರ ಬಂದಿತ್ತಲ್ಲಾ,

ಇಲ್ಲ ...ಖಾವಂದರೇ....ಆ-ದರೋಡೆಕೋರ ಮಗುವನ್ನು ಕೊಲ್ಲದೆ ಸಾಕಿದ ಅನಾಥಾಶ್ರಮದಲ್ಲಿ ಬಿಟ್ಟು ಪ್ರೀತಿಯಿಂದ ನನ್ನನ್ನು ಬೆಳಸಿದ, ಅವನು ಸಾಯುವ ಮೊದಲು ಈ ಮನೆಯ ಗುರುತನ್ನು ಹೇಳಿ ಅದೇ ನಮ್ಮ ತಂದೆಯ ಮನೆ....ಎಂದು ಹೇಳಿದ್ದರಿಂದ ನಾನು ಹುಡುಕಿಕೊಂಡು ಬಂದೆ–

ನೀನು ಅವರ ಮಗನೇ ಎನ್ನುವುದಕ್ಕೆ ಏನು ಸಾಕ್ಷಿ ? ಎಂದರು ನಿಜಾಮರು. ಇದೆ–ಖಾವಂದರು ತಿಳಿಯಬೇಕು--ಎಂದು ಕಾಳೀಪ್ರಸಾದ– ಅಜ್ಜಿ ಇದೆಲ್ಲಾ ಕೇಳಿಸಿಕೊಂಡು ಹಿಂದೆ ಕುಳಿತಿದ್ದವರನ್ನು ಭರ್ಜರಿ ಶಾಲು ಹೊದಿಸಿ ಮರ್ಯಾದೆಯಿಂದ ಕರೆದುಕೊಂಡು ಬಂದು ನಿಜಾಮರ ಬಳಿ ತೋರಿಸುತ್ತಾ ಇವರು ಜಹಗೀರ್‌ದಾರ್ ಪರಶುರಾಮಪಾಟೀಲರ ಮಗಳು ನಮ್ಮ ತಂದೆ ಪ್ರಮೋದರ ಅಕ್ಕ–ಇವರಿಗೆ ಎಲ್ಲಾಗೊತ್ತು.

ಅಜ್ಜಿ ನಿಜಾಮರಿಗೆ ಕೈಮುಗಿದು, ಹೌದು ಇವನು ನನ್ನ ತಮ್ಮನ ಮಗ-ಇವನು ಹುಟ್ಟಿದಾಗಿನಿಂದಲೂ ಇವನ ಬೆನ್ನಿನಮೇಲೆ ಕೊಡಲಿ ಆಕಾರದ ಮಚ್ಚೆ ಇದೆ ಈಗ ತಾವು ಗಮನಿಸಬೇಕು-ಎಂದು ಕಾಳೀಪ್ರಸಾದ ಬಟ್ಟೆ ತೆಗೆದು ಬೆನ್ನು ತೋರಿಸಿದ, ನಿಜಾಮರಿಗೆ ಆಶ್ಚರ್ಯವಾಯಿತು. ಅಚ್ಛಾ– ಅಚ್ಛಾ ಈ ಮಗುವಿನ ನಾಮಕರಣ-ಆಹ್ವಾನ ಪತ್ರದಲ್ಲಿ ಈ ವಿಷಯ ಬರೆದಿದ್ದರು. ಠೀಕ್ .. ಹೈ ಅಂದರು.

ಕಾಳೀಪ್ರಸಾದ ಹುಜೂರ್ ! ಮತ್ತೊಂದು ಸಾಕ್ಷಿ. ಇದೋ ನೋಡಿ ಎಂದು ತನ್ನ ಕೊರಳಿನಲ್ಲಿದ್ದ ಪರಶುರಾಮ ಫಲಕವನ್ನು ತೋರಿಸಿದ. ಅದರಲ್ಲಿ ಧರ್ಮಪಾಲಪಾಟೀಲ್, ಜಹಗೀರ್‌ದಾರ್ ಎಂಬ ಸೀಲೂ ಇತ್ತು.

ಅಜ್ಜಿ ಅಲ್ಲಿಯೇ ನಿಂತಿದ್ದು ಹೇಳಿದಳು ಈ "ಪರಶುರಾಮ ಫಲಕವೇ"

ನಮ್ಮ ವಂಶದ ಗುರುತು ಇದನ್ನು ನಾವು ಅವನ ನಾಮಕರಣದ ದಿನ ಹಾಕಿದ್ದು ಇವನನ್ನು ಸಾಕಿದ ಪುಣ್ಯಾತ್ಮ ಅದನ್ನು ಹಾಗೆಯೇ ಉಳಿಸಿದ್ದಾನೆ ಖಾವಂದರು ಒಪ್ಪಿಕೊಳ್ಳಬೇಕು ಅಂದಳು,

ನಿಜಾಮರಿಗೆ ತುಂಬಾ–ತುಂಬಾ ಖುಷಿಯಾಗಿಬಿಟ್ಟಿತು. ಊರಿನ ಮುಖಂಡರನ್ನೆಲ್ಲಾ ಕರಿತು ಮಾತನಾಡಿದರು. ನಮಗೆ ಜಹಗೀರ್‌ದಾರರ ವಂಶ ಉಳಿದಿರುವುದು ತುಂಬಾ ಖುಷಿಯಾಯಿತು. ಈ ದಿನವೇ ನಾನು ನಿಮ್ಮೆಲ್ಲರ ಎದುರು ಈ ಧರ್ಮಪಾಲ ಪಾಟೀಲ್‌ರವರಿಗೆ ಅಧಿಕಾರವನ್ನು ವಹಿಸಿಕೊಡುತ್ತೇನೆ. ಇವರೇ ಇಂದಿನಿಂದ ಇಲ್ಲಿಯ ಜಹಗೀರ್‌ದಾರರು ನೀವುಗಳೆಲ್ಲಾ ಅವರ ಅಧಿಕಾರದಲ್ಲಿ ಸಹಕರಿಸಿ ನಡೆಯಬೇಕು, ಹಿಂದಿನಂತೆಯೇ ಅವರ ವಂಶಕ್ಕೆ ಕರ ( ತೆರಿಗೆ ) ಕೊಡಬೇಕು ನೀವುಗಳು–ಎಂದು ಹೇಳಿ ತಾವು ತಮ್ಮ ಕೈಯಿಂದಲೇ ಹಾರಹಾಕಿ ಹಸ್ತಲಾಘವ ಕೊಟ್ಟು, ಧರ್ಮಪಾಲಪಾಟೀಲ್ ಜಹಗೀರ್‌ದಾರರಿಗೆ ಶುಭವಾಗಲಿ ಎಂದು ಹೇಳಿ ಜಹಗೀರ್‌ದಾರರ ಪೀಠದ ಮೇಲೆ ಅವನನ್ನು ಕೂರಿಸಿ ತಮ್ಮ ಹೆಸರಿನ ಮುದ್ರೆ ಉಂಗುರವನ್ನು ಕೊಟ್ಟರು. ಅಲ್ಲಿ ಬಂದಿದ್ದವರೆಲ್ಲಾ ಧರ್ಮಪಾಲ ಜಹಗೀರ್‌ದಾರರಿಗೆ ಜಯವಾಗಲಿ ಎಂದು ಒಕ್ಕೊರಲಿನಿಂದ ಕೂಗಿದರು,

ಅಜ್ಜಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಇದುವರೆಗೂ ತೆರೆಯ ಮರೆಯಲ್ಲಿ ಹಿಂದೆ ಕುಳಿತಿದ್ದ ದೇವಿಗೆ ಆಶ್ಚರ್ಯವೋ ಆಶ್ಚರ್ಯ, ನಾನು ಪ್ರೀತಿಸಿದ ಯುವಕ ಸಾಮಾನ್ಯನಲ್ಲ ಜಹಗೀರ್‌ದಾರ–ಅಂದರೆ ಈ ಊರಿಗೆ ರಾಜ, ನನ್ನ ರಾಜ ರಾಜನೇ ಎಂದು ಖುಷಿ ಪಟ್ಟಳು.

ಅಷ್ಟರಲ್ಲಿ ಕಾಳೀಪ್ರಸಾದ ಅವಳ ಬಳಿ ಬಂದು ಬಾ ನೀನೂ–ನಿಜಾಮರಿಗೆ ಇಬ್ಬರೂ ಸೇರಿ ಕಾಣಿಕೆ ಒಪ್ಪಿಸೋಣ ಎಂದು ಅವಳನ್ನು ಸಭೆಗೆ ಕರೆತಂದ–ಅಲ್ಲಿ ನೆರೆದಿದ್ದ ಜನರಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ ಇದೇನು ನಮ್ಮ ದೇವಿ ಇಲ್ಲಿ ಎಂದು,,

ತಟ್ಟೆಯಲ್ಲಿ ನಾಣ್ಯಗಳು ಒಂದು ವಜ್ರದಹಾರ ಇಟ್ಟು ಸಿರಿ–ಮತ್ತು ರಾಜ–ಇಬ್ಬರೂ ಸೇರಿ ನಿಜಾಮರಿಗೆ ಮರ್ಯಾದೆಯಾಗಿ ತಟ್ಟೆ ಒಪ್ಪಿಸಿ-

ಖಾವಂದರೇ !....ಇವಳು ನನ್ನ ಪತ್ನಿಯಾಗುವವಳು, ಮದುವೆಗೆ ಆಹ್ವಾನ ಕಳುಹಿಸುತ್ತೇನೆ ಎಂದ,

ನಿಜಾಮರು ದೇವಿಯನ್ನು ನೋಡಿ, ಬಹುತ್ ಖೂಬ್ ಸೂರತ್ ಲಡಕೀ ಅಚ್ಛಾ ಸಂತೋಷವಾಗಿ ಶಾದಿ ಮಾಡಿಕೊಳ್ಳಿ ನಿಮಗೆ ಮದುವೆಯ ಉಡುಗೊರೆ ಕಳುಹಿಸುತ್ತೇನೆ ಎಂದರು. ಕಾಳೀಪ್ರಸಾದನು ನಿಜಾಮರೊಂದಿಗೆ ಪೆಚ್ಚು ಹಿಂದಿಯಲ್ಲೇ ಮಾತಾಡುತ್ತಿದ್ದುದು ಅವರಿಗೆ ಬಲು ಇಷ್ಟವಾ-ಯಿತು. ಅವನನ್ನು ಆಲಿಂಗಿಸಿ ತುಮ್ ಅಚ್ ಸೇ ಧರ್ಮಪಾಲಪಾಟೀಲ್ ಹೊ-ಎಂದು ಹೇಳಿ ಹೊರಟು ಬಿಟ್ಟರು.

ಇಷ್ಟಾದ ನಂತರ ದೇವಿಯನ್ನು ಕೈ ಹಿಡಿದು ಕರೆ ತಂದು ಅಜ್ಜಿಯ ಪಾದಕ್ಕೆ ನಮಸ್ಕರಿಸಲು ಹೇಳಿದ.

ರಾಜಾ ಇವರು ಯಾರು ? ಎಂದು ಕೇಳಿದಳು.

ಇವಳು ನನ್ನ ಸರ್ವಸ್ವ, ಪ್ರೀತಿಯ ಅಮ್ಮ ಎಂದು ಹೇಳಿ ಅಜ್ಜಿಯ ಪಾದಕ್ಕೆ ಇಬ್ಬರೂ ನಮಸ್ಕರಿಸಿದರು-ಅಜ್ಜೀ ನೋಡು ಇವಳೇ ನನ್ನ ಸಿರಿ, ಈ ಜಹಗೀರ್‌ದಾರರ ಮನೆಯ ಸೊಸೆ....ಸಂತೋಷವಾಗಿ ಬಾಳಿರಿ ಎಂದು ಅಜ್ಜಿ ಭ್ರಮೆಗೊಂಡಳು,

ಏನು ? ಎಲ್ಲರೂ ಭಕ್ತಿಯಿಂದ ದೇವಿ,, ಎಂದು ನಮಸ್ಕರಿಸುವ ಈ ತಾಯಿ ನಿನ್ನನ್ನು ಮದುವೆಯಾಗುತ್ತಾಳೆಯೇ ? ಇದೇನು ಈ ಸಿರಿದೇವಿ ನಮ್ಮ ಮನೆಯ ಸೊಸೆಯೇ ?

ಹೌದು ಅಜ್ಜೀ ನೀನು ಒಪ್ಪಿ ಮದುವೆಮಾಡು-ಆಮೇಲೆ ಸೊಸೆ ಯಾಗುತ್ತಾಳೆ. ಕುಮಾರಾ ! ಇಷ್ಟೊಂದು ಸಂತೋಷವನ್ನು ದೇವರು ಒಟ್ಟಿಗೆ ನನಗೆ ಕರುಣಿಸಿಬಿಟ್ಟ, ನನಗೆ ತಡೆದುಕೊಳ್ಳುವ ಶಕ್ತಿ ಇಲ್ಲ ಕುಮಾರಾ ?

ಅಮ್ಮಾ ಇನ್ನು ಮೇಲೆ ನೀನೇ ನನ್ನ ಅಮ್ಮ ನನ್ನನ್ನು ಧರ್ಮಪಾಲಾ! ಎಂದೇ ಕರಿ, ಇವಳು ಸಿರಿ,,

ಕಾಳೀಪ್ರಸಾದನ ಹೆಸರು ಇನ್ನಿಲ್ಲ-ಧರ್ಮಪಾಲನು, ಧರ್ಮದರ್ಶಿ, ದೀನದಯಾಳುಶರ್ಮ ರ ಬಳಿ ಹೋಗಿ ತಾಂಬೂಲ ತಟ್ಟೆಯೊಂದಿಗೆ ಪುರ್ಯಾದೆಯಾಗಿ-ನಾನು ತಮ್ಮನ್ನು ಅನ್ಯಥಾ ಭಾವಿಸಿದ್ದೆ. ದೇವಿಯಿಂದ ಎಲ್ಲಾ ತಿಳಿಯಿತು. ನಿಮ್ಮ ತಂಗಿ ದೇವಿಯನ್ನು ನಾನು ಮದುವೆಯಾಗಲು ಇಷ್ಟಪಡುತ್ತೇನೆ, ದಯವಿಟ್ಟು ಒಪ್ಪಿಗೆ ಕೊಡಿ.

ಧರ್ಮದರ್ಶಿಗಳು ಅವನಿಗೆ ಹಸ್ತಲಾಘವ ಕೊಟ್ಟು ಈಗ ನೀವು ಈ ಊರಿನ ಜಹಗೀರ್‌ದಾರರು ರಾಜರಂತೆಯೇ ನಮ್ಮ ಅಪ್ಪಣೆಯನ್ನು ಕೇಳುವುದೇನಿದೆ ? ಅಷ್ಟಕ್ಕೂ ನೀವೂ ನನ್ನ ತಂಗಿಯೂ ಆಗಲೇ ಒಪ್ಪಿ ಅನ್ಯೋನ್ಯವಾಗಿದ್ದೀರಿ. ಸಂಭ್ರಮವಾಗಿ ಮದುವೆ ನಡೆಯಲಿ ಎಂದರು.

ನನ್ನದು ಮತ್ತೊಂದು ಬೇಡಿಕೆ, ನೀವು ಧರ್ಮದರ್ಶಿಗಳಾಗಿ ಅನೇಕ ಒಳ್ಳೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದೀರಿ. ನನಗೆ ಏನೂ ಗೊತ್ತಿಲ್ಲ. ಜಹಗೀರ್‌ದಾರರ ವಹಿವಾಟಿನಲ್ಲಿಯೂ ಕಾರ್ಯದರ್ಶಿಗಳಾಗಿ ನನಗೆ ಸಲಹೆ ನೀಡಬೇಕು. ಎಂದು ಕೈಮುಗಿದ.

ನಾನೇಕಪ್ಪಾ ! ನಿನ್ನ ಹೆಂಡತಿಯೇ ನಿನಗೆ ಮಾರ್ಗದರ್ಶಿನಿ, ಅವಳಿಗೆ ದೇವಿಯ ಅನುಗ್ರಹ ಅಪಾರ ಶಕ್ತಿಯಿದೆ ಅವಳೇ ಎಲ್ಲಾ ನಡೆಸಬಲ್ಲಳು.

ಸಿರಿ–ರಾಜಾ–ಅವರ ಮದುವೆ ವಿಜೃಂಭಣೆಯಿಂದ ನಡೆಯಿತು. ಊರಿಗೆಲ್ಲಾ ಭೂರಿ ಭೋಜನ ದಾನ–ದಕ್ಷಿಣೆ ಎಲ್ಲಾ ಧಾರಾಳವಾಗಿ ಮಾಡಿದರು. ಊರಿನ ಮುಖಂಡರೆಲ್ಲಾ ಬಂದು ಸಂತೋಷದಿಂದ ಉಡುಗೊರೆ ಗಳನ್ನು ಕೊಟ್ಟರು.

ಮದುವೆಯಾದ ಕೂಡಲೇ ಎಲ್ಲರೂ ಪರಶುರಾಮ ಬೆಟ್ಟಕ್ಕೆ ಹೋದರು ಅಜ್ಜಿಯಂತೂ ಸ್ವಾಮಿ ನಿನ್ನ ಕೃಪೆ ನಮ್ಮ ವಂಶ ಉಳಿಸಿದೆ. ಈ ದಂಪತಿಗಳನ್ನು ಚೆನ್ನಾಗಿ ಕಾಪಾಡು,, ಎಂದು ಹೇಳಿ ಸಹಸ್ರಾಭಿಷೇಕ–ಅರ್ಚನೆ ಪೂಜೆ, ಎಲ್ಲಾ ಮಾಡಿಸಿದಳು,

ಸಿರಿ–ರಾಜಾ, ಅವರ ಸಂತೋಷ ಅಪಾರ-ಜಹಗೀರ್‌ದಾರರ ಮನೆಯಲ್ಲಿ ಹಿಂದಿನಂತೆ ಆಳು ಕಾಳು ಮನೆ ತುಂಬಾ ಜನ. ಸಿರಿದೇವಿ ಆ ಮನೆ ಒಡತಿ. ಮಂಚ ಸುಪ್ಪತ್ತಿಗೆಯ ಮೇಲೆ ರಾಜನೊಂದಿಗೆ ಕುಳಿತು ಹಾಸ್ಯವಾಗಿ ಧರ್ಮಪಾಲ ಜಹಗೀರ್‌ದಾರರೇ ! ನನ್ನದೊಂದು ಪ್ರಾರ್ಥನೆ ನಡೆಸಿಕೊಡಬೇಕೆಂದು ಬೇಡುತ್ತೇನೆ.

ಇದೆಂತಹ ತಮಾಷೆ ಸಿರಿ ! ಬೇಡುವುದೇನು ಕೇಳು.

ರಾಜಾ, ಏನೇ ವೈಭವ ಬಂದರೂ ನನ್ನ ಕಂಗಾಲಿ ಜೀವನವನ್ನು ಮರೆಯಲಾರೆ. ನಮ್ಮಿಂದ ಇನ್ನೂ ಅನೇಕ ಧರ್ಮಕಾರ್ಯಗಳು ನಡೆಯಬೇಕಾಗಿದೆ, ಅದಕ್ಕೆ ನೀವೂ ಸಹ ಸಹಕರಿಸಬೇಕು.

ಓಹೋ ದೇವಿಯ ಅಪ್ಪಣೆ, ನನ್ನ ಬಳಿ ಅಪಾರ ಹಣವಿದೆ. ಅದೆಲ್ಲಾ ನಿನ್ನದೇ ಏನು ಬೇಕಾದರೂ ಮಾಡು.

ರಾಜಾ ; ಕಂಗಾಲಿಗಳಿಗೆ ಒಂದು ಅನಾಥಾಶ್ರಮ ಮಾಡಬೇಕು–ಭಿಕ್ಷೆ ಬೇಡುವ ಮಕ್ಕಳನ್ನು ಕಂಡರೆ ನನ್ನ ಕರುಳುಹಿಂಡಿದಂತಾಗುತ್ತೆ. ನಾನು ಹಿಂದಿನಂತೆಯೇ ರಾಜೇಶ್ವರೀ ಭವನದಲ್ಲಿ ಪ್ರವಚನ ಮಾಡಬೇಕು. ಬಡ ಬಗ್ಗರಿಗೆ ದಾನ ಮಾಡಬೇಕು. ನನ್ನ ಐಶ್ವರ್ಯ ಸಾರ್ಥಕವಾಗಬೇಕು, ದೇವಿಯ ಅಪ್ಪಣೆಯನ್ನೂ ನಾನು ಮರೆಯಲಾರೆ.

ಧರ್ಮಪಾಲ ಗಾಬರಿಯಿಂದ ಏನು ಸಿರೀ....ನೀನು ನನ್ನನ್ನು ಬಿಟ್ಟು ದೇವಿಯದಾಗಿಯೇ ಇರುತ್ತೀಯಾ ?

ಅಯ್ಯೋ ! ಪೆದ್ದು ರಾಜಾ ; ನಾನು ನಿನ್ನನ್ನು ಬಿಟ್ಟಿರ ಬಲ್ಲೆನೇ ! ಎಲ್ಲಾ ನಿನ್ನ ಜೊತೆ ಜೊತೆಯಲ್ಲಿಯೇ, ನೀನೆ ನನಗೆ ಸಹಾಯಕ.

ಸಿರೀ ನೀನು ನನ್ನ ಕಣ್‌ತೆರೆಸಿದ ಭಾಗ್ಯ ದೇವತೆ–ದರೋಡೆಕೋರನಾಗಿದ್ದವನನ್ನು ನಿನ್ನ ಒಳ್ಳೆಯ ಸಂಸ್ಕೃತಿಯಿಂದ ಪರಿವರ್ತಿಸಿದೆ.

ಹಾಗಲ್ಲ ರಾಜಾ-ಅದು ಹೆತ್ತ ತಂದೆ ತಾಯಿಯರ ಸಂಸ್ಕೃತಿ ರಕ್ತಗತವಾಗಿ ನಿನ್ನಲ್ಲಿ ಸುಪ್ತವಾಗಿತ್ತು, ಅದಕ್ಕೆ ಅವಕಾಶ ದೊರೆತಾಗ ಹೊರಹೊಮ್ಮಿತು "ಹುಟ್ಟುಗುಣ ಸುಟ್ಟರೂ ಹೋಗದು" ಎಂದು ಒಂದು ಗಾದೆ. ಅದರಂತೆ ನೀನು ಬೆಳೆದ ವಾತಾವರಣಕ್ಕಿಂತಲೂ ಹುಟ್ಟಿದ ಅನುವಂಶೀಯತೆಯೇ ಹೆಚ್ಚು ಪ್ರಭಾವ ಬೀರುತ್ತದೆ.

ಸಿರೀ... ನೀನು ಬಹಳ ಬುದ್ಧಿವಂತೆ-ನಿನ್ನಂತೆಯೇ ನನ್ನದೊಂದು ಕೋರಿಕೆ. ಬಡವರು ಹೊಟ್ಟೆಗಿಲ್ಲದೆ ಕಳ್ಳತನ ಮಾಡುತ್ತಾರೆ. ಅವರೂ ಸಹ ಉತ್ತಮ ಮಾರ್ಗದಲ್ಲಿ ಸಂಪಾದಿಸಬೇಕು. ನಾನು ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿ, ಬಡವರಿಗೆ ಉದ್ಯೋಗ ಅವಕಾಶ ಮಾಡಿಕೊಡಬೇಕೆಂದು ನನ್ನ ಜಹಗೀರ್ ಅಧಿಕಾರದಲ್ಲಿ ಮಾಡಬೇಕೆಂದಿದ್ದೇನೆ.

ಸಿರಿ ಖುಷಿಯಿಂದ ಅವನನ್ನು ಅಪ್ಪಿ ರಾಜಾ-ನನ್ನ ರಾಜಾ ನೀನು ಎಷ್ಟು ಒಳ್ಳೆಯವನಾಗಿದ್ದೀ... ಅದೂ ಆಗಬಹುದು ಮಾಡೋಣ.

ಈಗ ಪರಶುರಾಮ ಕ್ಷೇತ್ರವೆಂದು ಪ್ರಸಿದ್ಧಿಯಾದ ಸಿಂಧೂಪೂರ್-ಧರ್ಮಕ್ಷೇತ್ರ, ಕೈಗಾರಿಕಾ ಕೇಂದ್ರ, ಬಡವರ ಆಶ್ರಯಧಾಮ ಮುಂತಾದ ಅಭಿವೃದ್ಧಿ ಕಾರ್ಯಗಳಿಂದ ಆ ಪ್ರಾಂತ್ಯದಲ್ಲಿಯೇ ಪ್ರಸಿದ್ಧಿಯಾಯಿತು. ಪ್ರಜೆಗಳೂ ಸಹ ಧರ್ಮಪಾಲ ಜಹಗೀರ್‌ದಾರರನ್ನೂ ದೇವಿಯನ್ನೂ ಕೊಂಡಾಡುವವರೇ.

**ಲೇಖಕಿ-ಜಗ್ಗು ಪ್ರಿಯದರ್ಶಿನಿ**